ನಮ್ಮ ಮನಸ್ಸು

ಡಾ. ಸಿ.ಆರ್. ಚಂದ್ರಶೇಖರ್



ಮೈ-ಮನಸ್ಸು

ಡಾ॥ ಸಿ. ಆರ್. ಚಂದ್ರಶೇಖರ್

ಐಬಿಎಚ್ ಪ್ರಕಾಶನ
ಐದನೆಯ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು–560 009

MAI-MANASSU—A collection of short stories on common Sexual Problems written by Dr. C. R. Chandrashekar NIMHANS Bangalore Published by G. K. Ananthram for IBH Prakashana 5th Main Road Gandhinagar Bangalore-560 009

Pages : 188 + viii Price Rs. 20-00

ಬೆಲೆ ರೂ. 20-00

ಮುಖಚಿತ್ರ : ರಾ. ಸೂರಿ

ಮೊದಲನೆಯ ಮುದ್ರಣ : 1986 ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾ ಜಿ. ಕೆ. ಅನಂತರಾಮ್ ಐದನೆಯ ಮುಖ್ಯ ರಸ್ತೆ ಗಾಂಧಿನಗರ ಬೆಂಗಳೂರು 560 00 ಮುದ್ರಕರು : ಇಳಾ ಅಸೋಸಿಯೇಟ್ಸ್ 181/183 ಮೂರನೇ ಮುಖ್ಯ ರಸ್ತೆ ಚಾಮರಾಜಪೇ ಬೆಂಗಳೂರು 560 018

ಮುನ್ನುಡಿ

ಕಾಮ
ಮನುಷ್ಯನ ಹುಟ್ಟಾಸೆಗಳಲ್ಲಿ ಒಂದು.
ನಮ್ಮ ಹುಟ್ಟಿನೊಂದಿಗೇ ಹುಟ್ಟಿ
ಹರೆಯದಲ್ಲಿ ವಿಕಸಿತಗೊಂಡು
ಪ್ರೌಢತೆಯಲ್ಲಿ ಉತ್ತುಂಗಕ್ಕೇರಿ
ಇಳಿವಯಸ್ಸಿನಲ್ಲೂ ಹಿಂಬಾಲಿಸಿ,
ಸದಾ ಸಂಗಾತಿಯಾಗಿರುತ್ತದೆ.

ಸಂತಾನೋತ್ಪತ್ತಿ, ಸುಮಧುರ ಬಾಂಧವ್ಯ
ಸುಖಾನುಭವದ ಆನಂದ
ಎಲ್ಲರನ್ನೂ ಕೈ ಬೀಸಿ ಕರೆಯುತ್ತವೆ.

ಕಾಮ ಕತ್ತಲಲ್ಲಿ ಮಾಡಿ ಮುಗಿಸುವ ಕಾಯಕ,
ಪ್ರಾಶಸ್ತ್ಯ ಸಲ್ಲದ ಕೀಳು ಕೆಲಸ ಎಂದೋ,
ಪ್ರಕೃತಿ ಸಹಜ ಹಸ್ತಮೈಥುನ, ವೀರ್ಯಸ್ಖಲನ
"ದುರ್ಬಲತೆಗೆ ದಾರಿ, ಅನಾರೋಗ್ಯಕಾರಿ" ಎಂದೋ
"ಕಾಮ ಕ್ರಿಯೆಯಲ್ಲಿ ತಾನೊಬ್ಬ ಜಗದೇಕ ವೀರ
ಸುಖ ಕೊಡುವ–ಪಡೆವ ಉತ್ತುಂಗ ಶಿಖರ"
ಇತ್ಯಾದಿ ಉತ್ಪ್ರೇಕ್ಷಿತ ಕಲ್ಪನೆಗಳಿಂದ ವ್ಯಕ್ತಿ ಸೋಲುತ್ತಾನೆ.

ಹಿತವಾತಾವರಣ, ಮಾನಸಿಕ ಸಮತೋಲನ,
ಪೂರ್ವಸಿದ್ಧತೆ, ಪ್ರೀತಿ ಅನುರಾಗ
ಸಂಗಾತಿಯ ನೋಟ, ನುಡಿ, ಸ್ಪರ್ಶ
ಪ್ರೇಮಸಲ್ಲಾಪಗಳು ಉತ್ತೇಜಿತಗಳಾದರೆ,
ಆತಂಕ, ಅನುಮಾನ, ಖಿನ್ನತೆ ಕೀಳರಿಮೆಗಳು
ಲೈಂಗಿಕ ಅನಾಸಕ್ತಿ, ದುರ್ಬಲತೆಗೆ ದಾರಿ.
ಇದಕ್ಕೆ ಪರಿಹಾರ ? 'ಮೈ-ಮನಸ್ಸು' ಓದಿ

ಈ ಪುಸ್ತಕದ ಪ್ರಕಟಣೆಗೆ ನೆರವಾದ ಎಲ್ಲ ಮಹನೀಯರುಗಳಿಗೆ ನನ್ನ ನಮನ.

ಡಾ॥ ಸಿ. ಆರ್. ಚಂದ್ರಶೇಖರ್
ನಿಮ್ಹಾನ್ಸ್, ಬೆಂಗಳೂರು-29

ಸೆಪ್ಟಂಬರ್ 1986

ಪರಿವಿಡಿ

ಭಾಗ – ೧

ಭಾಗ – 2

ಭಾಗ-೧

ಗಂಡನ ಜತೆ ಮಲಗಲು ಯಾತನೆ ?

ಪ್ರಸಿದ್ಧ ಮನೋವೈದ್ಯ ಡಾ॥ ಮೂರ್ತಿ ಅಂದು ಕ್ಲಿನಿಕ್‌ಗೆ ಬರುತ್ತಲೇ ಮೂರು ಜನ ತಮ್ಮ ಬರುವಿಕೆಯ ಹಾದಿ ನೋಡುತ್ತ ಕುಳಿತಿರುವುದು ಕಂಡಿತು. ವೈದ್ಯರ ಮುಖ ಕಾಣುತ್ತಲೇ ಹಿರಿಯ ಮನುಷ್ಯನೊಬ್ಬ ದಡಬಡಿಸಿ ಎದ್ದು 'ಡಾಕ್ಟ್ರೆ... ಡಾಕ್ಟ್ರೆ ನವ್ ಮಗಳ್ನ ಉಳಿಸೋದು ನಿಮ್ಕೈಲಿದೆ... ಎಲ್ಲ ಚಿಕಿತ್ಸೇನೂ ಮಾಡ್ಸಿ, ಕೊನೇ ಪ್ರಯತ್ನಾಂತ ಇಲ್ಲಿಗ್ಬಂದಿದ್ದೀವಿ... ಎಂದು ಬಡಬಡಿಸಿದರು.

ಡಾ॥ ಮೂರ್ತಿ ಆತನನ್ನು ತಡೆಯುತ್ತ 'ಸ್ವಲ್ಪ ನಿಧಾನಿಸಿ ಸ್ವಾಮಿ, ಕೂತ್ಕೊಳ್ಳಿ. ನೀವು ಯಾರು ? ನಿಮ್ಮ ಮಗಳಿಗೆ ಏನಾಗಿದೆ ? ನಿಧಾನವಾಗಿ ಹೇಳಿ' ಎನ್ನುತ್ತ ಮಗಳ ಕಡೆ ನೋಡಿದರು. ಇನ್ನೂ ಹದಿನೆಂಟು–ಇಪ್ಪತ್ತರ ಬಾಲೆ. ಗೌರವರ್ಣ. ಸುಂದರಿ ಎನ್ನಲಾಗದಿದ್ದರೂ ಲಕ್ಷಣವಾದ ಮುಖ. ಆಡಂಬರದ ಅಲಂಕಾರವಿಲ್ಲ. ಮಧ್ಯಮ ವರ್ಗದ ಸಂಪ್ರದಾಯಸ್ಥ ಮನೆತನದ ಹುಡುಗಿ ಎಂದು ಯಾವ ಕಷ್ಟವೂ ಇಲ್ಲದೇ ಹೇಳಬಹುದಿತ್ತು. ಕೈಯಲ್ಲಿದ್ದ ಕರವಸ್ತ್ರವನ್ನು ಉಂಡೆ ಮಾಡುತ್ತಾ, ಮತ್ತೆ ಬಿಚ್ಚಿ ಉಂಡೆ ಮಾಡುತ್ತ ಕುಳಿತಿದ್ದ ಆಕೆ ನಿಧಾನವಾಗಿ ತಲೆಎತ್ತಿ ಡಾಕ್ಟರನ್ನು ನೋಡಿದಳು.

ದೃಷ್ಟಿ ಹಾಗೆಯೇ ನೆಲದ ಕಡೆ ಬಾಗಿತು. ಡಾಕ್ಟರು ತನ್ನನ್ನೇ ನೋಡುತ್ತಿದ್ದುದರ ಅರಿವಾಗಿ ಗಲಿಬಿಲಿಗೊಂಡಿದ್ದಳು ಆಕೆ. ಗಾಬರಿ, ನಾಚಿಕೆಗಳಿಂದ ತುಟಿಗಳು ಸಣ್ಣಗೆ ಅದುರಿದವು. ಕೈವಸ್ತ್ರವನ್ನು ಉಂಡೆ ಮಾಡುವ ಕೆಲಸ ತೀವ್ರವಾಯಿತು, ಆಕೆಯ ತಂದೆ ಕಥೆಯನ್ನು ಆಗಲೇ ಆರಂಭಿಸಿದ್ದರು :

ಇದ್ದಕ್ಕಿದಂತೆ...

"ಏನು ಹೇಳೋದು ಡಾಕ್ಟ್ರೆ, ಮಾತಾಡ್ತಾ ಇದ್ದೋಳು ಥಟ್ಟನೆ ಮಾತು ನಿಲ್ಲಿಸಿ ಬಿಡ್ತಾಳೆ. ಗರಬಡಿದ ಹಾಗೆ ಮುಖವೆಲ್ಲ ಮರಗಟ್ಟುತ್ತೆ. ಹಾಗೇ ಭೂತ ನೋಡಿದವಳಂತೆ ಹೆದರುತ್ತಾಳೆ. ಕಣ್ಣು ಗುಡ್ಡೆ ಎಲ್ಲ ಮೇಲೆ ಹೋಗಿ, ಶರೀರ ತೂರಾಡೋಕ್ಕೆ ಆರಂಭ ಆಗಿಬಿಡುತ್ತೆ. ಆಗ ಯಾರಾದ್ರೂ ಹಿಡೀದೇ ಇದ್ರೆ

ಬಿದ್ದೇ ಬಿಡ್ತಾಳೆ. ಹಿಡಿದು ಮಲಗಿಸಿದ್ರೆ, ಕೂಡ್ಲೆ ಪ್ರಜ್ಞೆ ತಪ್ಪಿ ಹೋಗುತ್ತೆ: ಎಚ್ಚರಾದ ಮೇಲೂ ಎಲ್ಲೋ ನೋಡ್ತಾ ಮಲಗಿರ್ತಾಳೆ. 'ಯಾಕಮ್ಮ ಏನಾಗ್ತಿದೆ?' ಅಂತ ಕೇಳಿದ್ರೆ ಉತ್ತರ ಇರೊಲ್ಲ. ಮತ್ತೆ ಮತ್ತೆ ಕೇಳಿದ್ರೆ 'ಭಯ, ಭಯ...' ಅಂತ ಕೂಗ್ತಾಳೆ. ಹೀಗಾಗಿದೆ ಡಾಕ್ಟ್ರೆ, ನನ್ ಮಗಳ ಪರಿಸ್ಥಿತಿ. ನೋಡಿ, ಹೇಗಿದ್ದೋಳು ಹೇಗಾಗ್ಬಿಟ್ಳು. ಹೇಳಿ ಕೇಳಿದ ಔಷಧಿ ಎಲ್ಲಾ ಮಾಡಾಯ್ತು, ಏನೂ ಪ್ರಯೋಜ್ನ ಕಂಡಿಲ್ಲ. ಕೊನೇ ಪ್ರಯತ್ನಾಂತ ಇಲ್ಲಿಗ್ಬಂದ್ವಿ' ಉತ್ತರೀಯ ವನ್ನು ಕಣ್ಣಿಗೊತ್ತಿದರು.

'ಯಾವಾಗ್ಲಿಂದ ಇದು ಪ್ರಾರಂಭ ಆಯ್ತು? ಎಷ್ಟು ದಿನಕ್ಕೊಮ್ಮೆ ಹೀಗೆ ಆಗ್ತಿದೆ?'

'ಮದುವೆ ಆದಾಗಿಂದ ಆರಂಭ ಆಯ್ತು ನೋಡಿ. ಪ್ರಸ್ತದ ಮಾರು ದಿನ ರಾತ್ರಿ ಪ್ರಜ್ಞೆ ತಪ್ಪಿ ಬಿದ್ದಿದ್ದೇ ಮೊದಲು. ಅದ್ಕೂ ಮೊದ್ಲು ಚೆನ್ನಾಗೇ ಇದ್ದೋಳು. ಈಗ್ಲೂ ಹಗಲೆಲ್ಲ ಸರಿಯಾಗಿರ್ತಾಳೆ. ನಮ್ಮನೆಗೆ ಬಂದ್ರೂ ತುಂಬಾ ಚೆನ್ನಾಗೇ ಇರ್ತಾಳೆ. ಗಂಡನ ಮನೆಯಲ್ಲಿ ರಾತ್ರಿ ಆಯಿತಂದ್ರೆ ಈ ಕಾಟ ನೋಡಿ ಡಾಕ್ಟ್ರೆ'

'ಹೀಗಾ ವಿಷಯ? ನಿಮ್ಮ ಮಗಳನ್ನು ಕೆಲದಿನ ಇಲ್ಲೇ ಬಿಟ್ಟಿರೋಕಾಗುತ್ತ? ಇದು ತುಂಬ ಸೂಕ್ಷ್ಮ ವಿಷಯ. ಕೆಲವು ಪರೀಕ್ಷೆಗಳನ್ನು ಮಾಡ್ಬೇಕು. ಹಾಗೇ ಆಕೆಯ ಗಂಡನಿಗೂ ಇಲ್ಲಿ ಬಂದು ನನ್ನ ಕಾಣೋದಿಕ್ಕೆ ಹೇಳಿ.' ಶಾರದಳನ್ನು ಆಸ್ಪತ್ರೆಗೆ ದಾಖಲು ಮಾಡಿಕೊಂಡರು ಡಾ॥ ಮೂರ್ತಿ.

ಆಸ್ಪತ್ರೆಯಲ್ಲಿ ಚೆನ್ನಾಗಿಯೇ ಹೊಂದಿಕೊಂಡಳು ಶಾರದ. ಒಂದೇ ದಿನದಲ್ಲಿ ಸಂಕೋಚದ ಪೊರೆ ಕಳಚಿ ಎಲ್ಲರೊಡನೆ ಆತ್ಮೀಯವಾಗಿ ಬೆರೆತಳು. ಡಾಕ್ಟರ ಬಳಿಯೂ ಚೆನ್ನಾಗಿಯೇ ಮಾತಾಡುತ್ತಿದ್ದಳು. ಮದುವೆ, ಗಂಡನ ವಿಷಯ ಎತ್ತು ತ್ತಲೇ ಅವಳ ಮುಖ ಮುದುಡುತ್ತಿತ್ತು.

'ಯಾಕಮ್ಮ ಶಾರ್ದಾ, ಮದುವೆ ನಿಂಗಿಷ್ಟ ಇರ್ಲಿಲ್ವ?'

'ಮದ್ವೆ ಅಂದ್ರೆ ಇಷ್ಟವೇನೋ ಇತ್ತು ಡಾಕ್ಟ್ರೇ. ಆದ್ರೆ ಅದು ಹೀಗಿರುತ್ತೆ ಅನ್ನೋ ಕಲ್ಪನೆ ನನಗಿರಲಿಲ್ಲ.'

'ಹೇಗಿರುತ್ತೆ ಅನ್ನೋ ಕಲ್ಪನೆ?'

'ಹೋಗೀಪ್ಪ ನಾ ಹೇಳಲ್ಲ'

'ಹೋಗ್ಲಿ ನಿನ್ನ ಗಂಡ ಹೇಗೆ?'

'ಒಳ್ಳೆಯವರೇ. ಆದ್ರೆ ತುಂಬಾ ಒರಟು ಸಾರ್. ನಾನು ಮದ್ವೇನೇ ಮಾಡ್ಕೋಬಾರದಿತ್ತು.' ಕಣ್ಣೀರು ಕಾಣಿಸಿಕೊಂಡಾಗ ಡಾ॥ ಮೂರ್ತಿಗೆ ಇಂದಿಗೆ ಅಷ್ಟು ಸಾಕು ಎನ್ನಿಸಿತು.

ಸಹೋದ್ಯೋಗಿ ಮನಶಾಸ್ತ್ರಜ್ಞೆ ಡಾ॥ ಮೈತ್ರೇಯಿ ಅವರ ನೆರವಿನಿಂದ ಡಾ॥ ಮೂರ್ತಿ ಸಾಕಷ್ಟು ಮಾಹಿತಿಯನ್ನು ಕಲೆಹಾಕಿದರು. ಹೆಣ್ಣಿನೊಡನೆ ಹೆಣ್ಣು ತನ್ನನ್ನು ಬಾಧಿಸುತ್ತಿದ್ದ ಮದುವೆಯ ವಿಷಯಗಳನ್ನು ವಿವರಿಸಿದಳು.

ಮದುವೆಗೆ ಯಾವ ರೀತಿಯಿಂದಲೂ ಸಜ್ಜಾಗಿರದಿದ್ದ ಆಕೆಗೆ ಮದುವೆ ಅನಿರೀಕ್ಷಿತವಾಗಿ ನಡೆದು ಹೋಯಿತು.

ನಿಷೇಕದ ದಿನ ಜೊತೆ ವಯಸ್ಸಿನ ಹೆಂಗಳೆಯರ ಕೀಟಲೆಗೆ ನಾಚಿ ನೀರಾಗಿದ್ದ ಅವಳ ಕಿವಿಯಲ್ಲಿ ಅವಳಮ್ಮ 'ಈ ರಾತ್ರಿ ನಿನ್ನ ಗಂಡ ಹೇಳಿದ ಹಾಗೆ ಕೇಳು. ವಿರೋಧಿಸೋಕೆ ಹೋಗಬೇಡ. ಅವನ ಮನಸ್ಸು ನೋಯಿಸಬೇಡ' ಎಂದು ಬುದ್ಧಿವಾದ ಹೇಳಿದ್ದರು. ಕೋಣೆಯಲ್ಲಿ ಅವಳು ಗಂಡನ ಬಳಿಗೆ ಹೋದಾಗ ನಾಚಿಕೆಯಿಂದ ಮೊದಲ ಬಾರಿಗೆ ಪುರುಷನೊಂದಿಗಿರಬೇಕಾದ ಆ ಸಮಯದಲ್ಲಿ ಭಯದಿಂದ ಬೆವರಿದ್ದಳು. ಶ್ರೀನಿವಾಸ ಅವಳನ್ನು ಪಕ್ಕದಲ್ಲಿ ಕೂರಿಸಿಕೊಂಡು ಅದೂ ಇದೂ ಮಾತಾಡಿ ಅವಳನ್ನು ತಬ್ಬಿಕೊಂಡು ಮುದ್ದಾಡಿದಾಗ ಸಂತೋಷ ಪಟ್ಟಳು. "ನೀನೆಷ್ಟು ಚೆನ್ನಾಗಿದ್ದೀಯಾ. ನಿನ್ನ ಕಂಡ್ರೆ ನನಗೆ ಇಷ್ಟ" ಎಂದಾಗ ಉಬ್ಬಿದಳು. ಸ್ವಲ್ಪ ಹೊತ್ತಿನ ನಂತರ ದೀಪವನ್ನಾರಿಸಿ, ಅವಳನ್ನು ತಬ್ಬಿಕೊಂಡು ಮಲಗಿ, ಅವಳ ಮೇಲೆ ಕೈಯಾಡಿಸುತ್ತಾ 'ಶಾರೀ ಬಟ್ಟೆ ಕಳಚಿಬಿಡು, ಚೆನ್ನಾಗಿರುತ್ತೆ' ಎಂದಾಗ ಗಾಬರಿಯಾದಳು. 'ಏನು ಬಟ್ಟೆ ಕಳಚಿ ಬೆತ್ತಲೆ ಮಲಗೋದೇ ? ಛೇ...ಬೇಡಪ್ಪಾ' ಎಂದಳು ಶ್ರೀನಿವಾಸ ಆತುರದಲ್ಲಿದ್ದ. ಅವನ ಕೈಗಳು ಚುರುಕಾಗಿ ಅವಳನ್ನು ವಿವಸ್ತ್ರಗೊಳಿಸಲು ಯತ್ನಿಸಿದವು. ಶಾರದೆ ಪ್ರತಿಭಟಿಸಿದಳು. ಅವಳ ಪ್ರತಿಭಟನೆ ಅವನ ತೋಳುಗಳ ಉಕ್ಕಿನ ಹಿಡಿತದಲ್ಲಿ ನುಚ್ಚು ನೂರಾಯಿತು. ಗಂಡನಿಂದ ನಲ್ಮೆಯ ಮಾತು, ಪ್ರೀತಿ, ಮೈಯನ್ನು ಪುಲಕಗೊಳಿಸುವ ಆಲಿಂಗನವನ್ನು ನಿರೀಕ್ಷಿಸಿದ್ದ ಆಕೆ ಆತನ ಒರಟು ವರ್ತನೆಯಿಂದ ನಿರಾಶೆಗೊಂಡಳು, ನೊಂದುಕೊಂಡಳು. ಶ್ರೀನಿವಾಸ ಮುಂದುವರೆದು ಬಲಾತ್ಕಾರ ನಡೆಸಿದಾಗ ಆಕೆ ನೋವಿನ ಪರಮಾವಧಿಯನ್ನು ಮುಟ್ಟಿದಳು.

ದೇಹಕ್ಕೆ ಪ್ರಾಶಸ್ತ್ಯ

ಗಂಡ ತನಗೆ ಬೆಲೆ ಕೊಡದೆ, ಕೇವಲ ತನ್ನ ದೇಹಕ್ಕೆ, ಅದನ್ನು ಮುಟ್ಟಿ ಸುಖಿಸಲು ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದು ಹಾಗೂ ತನ್ನ ವರ್ತನೆಯಿಂದ ಹೆಂಡತಿಗೆ ಕಷ್ಟವಾಗುತ್ತಿದೆ, ನೋವಾಗುತ್ತಿದೆ ಎಂಬುದನ್ನು ಲೆಕ್ಕಿಸದೆ, ತನ್ನ ದೈಹಿಕ ಹಸಿವನ್ನು ತೀರಿಸಿಕೊಂಡದ್ದನ್ನು ಕಂಡು ಆಕೆಗೆ ಅವನ ಬಗ್ಗೆ ಅಸಹ್ಯ ಹುಟ್ಟಿತು. ಆತನೊಂದಿಗೆ ಇನ್ನು ಇಡೀ ಜೀವನಪರ್ಯಂತ ಬಾಳು ನಡೆಸಬೇಕು,

ಈ ಬಗೆಯ ಹಿಂಸೆಯನ್ನು ನೋವನ್ನು ಬಹುಶಃ ಪ್ರತಿದಿನ ಅನುಭವಿಸಬೇಕಾದೀತು ಎಂಬ ಆಲೋಚನೆಯಿಂದ ಅವಳು ನಡುಗಿದಳು. ಸುಸ್ತಾಗಿದ್ದ ಶ್ರೀನಿವಾಸ ಮಲಗಿ ನಿದ್ರೆ ಹೋದ. ಆದರೆ ಶಾರದೆ ಇಡೀ ರಾತ್ರಿ ಕಣ್ಣು ಮುಚ್ಚಲಿಲ್ಲ. ದುಃಖ ಒತ್ತರಿಸಿಕೊಂಡು ಬಂದು ಅತ್ತಳು. ಸುರಿದ ಕಣ್ಣೀರು ತಲೆದಿಂಬನ್ನು ತೋಯಿಸಿತು.

ಮದುವೆ, ಸಂಸಾರ ಎಂದರೆ ಇಷ್ಟೇನೇ ? ಗಂಡನ ಲೈಂಗಿಕ ಹಸಿವಿಗೆ ತನ್ನ ದೇಹವನ್ನು ಉಣಬಡಿಸುತ್ತಾ, ತನ್ನ ನೋವಿನಲ್ಲಿ ಆತನ ತೃಪ್ತಿಯನ್ನು ಕಾಣುತ್ತಾ, ಮಕ್ಕಳನ್ನು ಹೆರುತ್ತಾ, ಕಡೆಗೊಂದು ದಿನ ಕಣ್ಣು ಮುಚ್ಚುವುದೇ ಹೆಂಡತಿಯಾದವಳ ಹಣೆಬರಹವೇ ?

ಇನ್ನು ಈ ಕೆಲಸಕ್ಕಾಗಿ ಈತ ಪ್ರತಿ ರಾತ್ರಿ ತನ್ನನ್ನು ಕಾಡುತ್ತಾನೆ. ತನ್ನ ಪ್ರತಿಭಟನೆಗೆ ಬೆಲೆ ಇಲ್ಲ. ಎಲ್ಲವನ್ನೂ ಅನುಭವಿಸಲೇಬೇಕು. ಇದರಿಂದ ಪಾರಾಗಲು ಸಾಧ್ಯವಿಲ್ಲವೇ ? ತಾನು ಮದುವೆಗೆ ಒಪ್ಪಬಾರದಿತ್ತು. ಆದರೆ ತನಗೇನು ಗೊತ್ತಿತ್ತು, ಮದುವೆಯಲ್ಲಿ ಇಂಥ ಅಸಹ್ಯ ಇರುತ್ತದೆ ಎಂಬುದು ?

ಈಗ ಆದದ್ದಾಯಿತು. ಇದರಿಂದ ಪಾರಾಗುವ ದಾರಿ ಇಲ್ಲವೇ ? 'ಈತ ನೊಂದಿಗೆ ನಾನಿರಲಾರೆ' ಎಂದು ಅಮ್ಮನ ಹಿಂದೆ ಓಡಿಹೋದರೆ ?... ಪಾಪ, ಅವರಿಗೆಷ್ಟು ಅಪಮಾನ, ನೋವು. ಎಲ್ಲರೂ ತನಗೆ ಬುದ್ಧಿ ಹೇಳಿ ವಾಪಸ್ಸು ಈ ಕೂಪಕ್ಕೆ ತಳ್ಳುತ್ತಾರೆ. ನೋಡಿದವರಿಗೆ ನಗಲು ಒಂದು ವಿಷಯವಾಗುತ್ತದೆ ಅಷ್ಟೇ. ಇನ್ನು ತಾನು ಪ್ರಾಣವನ್ನೇ ಕಳೆದು ಕೊಂಡರೆ ?... ನಡುಗಿದಳು ಶಾರದೆ. ಈ ಮದುವೆ ತನ್ನಿಂದ ಏನೆಲ್ಲ ಯೋಚನೆ ಮಾಡಿಸ್ತಿದೆ. ಚಿಂತಿಸುತ್ತಾ ಹೊರಳಾಡಿದಳು. ಮತ್ತೆ ಮತ್ತೆ ಯೋಚಿಸಿದಳು.

ಮತ್ತೆ ಅದೇ ಶಿಕ್ಷೆ

ಮಾರನೇ ದಿನ ಹಗಲು ಕಳೆದು ರಾತ್ರಿಯಾಗುತ್ತಿದ್ದಂತೆಯೇ ಅವಳಿಗೆ ಭಯ ಆಗತೊಡಗಿತು. ಮತ್ತೆ ಹಿಂದಿನ ರಾತ್ರಿಯ ಶಿಕ್ಷೆ ಅನುಭವಿಸಬೇಕು. ಊಟವೂ ರುಚಿಸಲಿಲ್ಲ. ಎಲ್ಲರೂ ಬೇಗ ಮಲಗುವ ತಯಾರಿಯಲ್ಲಿದ್ದರು. 'ಶಾರದಾ ಯಜಮಾನರಿಗೆ ಹಾಲು ತೆಗೆದುಕೊಂಡು ಹೋಗಮ್ಮಾ' ಒಳಗಡೆ ಅಡಿಗೆ ಮನೆಯಿಂದ ಅಕ್ಕನ ಧ್ವನಿ ಕೇಳಿಸಿತು. ಶಾರದೆಯ ಕೈಕಾಲು ಭಯದಿಂದ ನಡುಗ ತೊಡಗಿದವು. ಮುಖ ಕಪ್ಪಿಟ್ಟಿತು. ಅಕ್ಕ ಹಾಲಿನ ಲೋಟ ಕೈಯಲ್ಲಿಡುತ್ತಿರುವಂತೆಯೇ ಶಾರದಳ ಕಣ್ಣಿಗೆ ಕತ್ತಲಿಟ್ಟು ಬಂದು ಆಕೆ ನೆರಕ್ಕುರುಳಿದರು.

ಆ ರಾತ್ರಿ ಶುಶ್ರೂಷೆ ಆಯಿತು. ಶಾರದೆಗೆ ಗಂಡನ ಜೊತೆ ಮಲಗುವದು ತಪ್ಪಿತು. ಅಲ್ಲಿಂದೀಚೆಗೆ ಗಂಡನ ಜೊತೆ ಮಲಗಬೇಕಾದಾಗಲೆಲ್ಲ ಈ ರೀತಿ

ಅವಳಿಗೆ ಪ್ರಜ್ಞೆ ತಪ್ಪಲು ಆರಂಭವಾಯಿತು. ಸುಪ್ತ ಮನಸ್ಸೇ ದೇಹದ ನೆರವಿಗೆ ಬಂದಿತ್ತು.

o o o o

"ನಮಸ್ಕಾರ ಡಾಕ್ಟ್ರೆ. ನಾನು ಶ್ರೀನಿವಾಸ ಅಂತ. ಶಾರದಾಳ ಗಂಡ. ಬರೋಕೆ ಹೇಳಿದ್ರಂತೆ."

ಡಾ|| ಮೂರ್ತಿ ತಲೆ ಎತ್ತಿ ನೋಡಿದರು. ಕಟ್ಟುಮಸ್ತಾದ ಯುವಕ. ಮುಖದಲ್ಲಿ ಕಂಡೂ ಕಾಣದಂತಿದ್ದ ಒರಟುತನ.

"ಬನ್ನಿ, ಕೂತ್ಕೊಳ್ಳಿ ಮಿ|| ಶ್ರೀನಿವಾಸ್. ನಿಮ್ಮ ಹೆಂಡತಿ ಶಾರದಳ ತೊಂದರೆ ಬಗ್ಗೆ ನಿಮ್ಮಿಂದ ಏನಾದರೂ ಮಾಹಿತಿ ಸಿಗುತ್ತೇನೋ ಅಂತ ತಿಳ್ಕೊಳ್ಳೋದಕ್ಕೆ ನಿಮ್ಮನ್ನು ಕರೆಸಿದೆ. ಆಕೆ ತುಂಬ ಭಯಪಟ್ಟಂತೆ ಕಾಣ್ತಾಳೆ. ಕಾರಣ ಏನಿರಬಹುದು ಅಂತ ನಿಮ್ಮ ಅಭಿಪ್ರಾಯ ?"

"ನನಗೊಂದೂ ತಲೆಬುಡ ತಿಳೀತಾ ಇಲ್ಲ ಸಾರ್. ನನ್ನ ಜೊತೆ ಮಾತಾಡೋದಕ್ಕೆ, ನನ್ನ ಜೊತೆ ಓಡಾಡೋದಕ್ಕೆ, ಇರೋದಕ್ಕೆ ಭಯಪಡ್ತಾಳೆ. ನನ್ನಿಂದ ಆಕೆಗೆ ಬೇಜಾರಾಯ್ತೋ ಏನೋ ಗೊತ್ತಿಲ್ಲ. ಅವಳ ಮನಸ್ಸಿನಲ್ಲಿ ಏನಿದೆ ಅಂತ ನೀವೇ ಪತ್ತೆ ಮಾಡಬೇಕು ಸಾರ್."

"ಮದುವೆ ಆದ ಮೇಲೆ ನೀವು ಎಷ್ಟು ಸಾರಿ ಸೇರಿದಿರಿ ? ಲೈಂಗಿಕ ಸಂಪರ್ಕದಲ್ಲಿ ಏನಾದರೂ ತೊಂದರೆ ಆಯಿತೆ ?"

"ಒಂದೇ ಸಾರಿ ಸಾರ್. ಆಮೇಲೆ ಅಮೇಲೆ ಈ ಖಾಯಿಲೆ ಶುರುವಾಯ್ತು. ಮೊದಲ ದಿನದ ಅನುಭವದಿಂದ ಹೇಳೋದಾದರೆ ಅವಳಿಗೆ ಅದರಲ್ಲಿ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಬಲವಂತ ಮಾಡಬೇಕಾಯ್ತು. ಅದರಿಂದ ಅವಳಿಗೆ ಬೇಜಾರು, ಭಯ ಆಗಿದೆಯೋ ಏನೋ"

ವಿವರವಾದ ಸಂದರ್ಶನದಿಂದ ಇನ್ನಷ್ಟು ವಿವರಗಳು ದೊರೆತವು. ಶಾರದಳಂತೆ ಶ್ರೀನಿವಾಸನಿಗೂ ದಾಂಪತ್ಯ ಜೀವನದ ಬಗ್ಗೆ ಸಾಕಷ್ಟು ಅಜ್ಞಾನ, ತಪ್ಪು ನಂಬಿಕೆಗಳಿದ್ದುವು. ಲೈಂಗಿಕ ಕ್ರಿಯೆಯಲ್ಲಿ ಹೆಂಡತಿ ಸಕ್ರಿಯವಾಗಿ ಭಾಗವಹಿಸುವಂತೆ, ಸಹಕರಿಸುವಂತೆ, ಪರಸ್ಪರ ಹೊಂದಾಣಿಕೆಯಿಂದ ಸಂತೋಷ ಪಡುವಂತೆ ಮಾಡುವುದರ ಬಗ್ಗೆ ಆತನಿಗಿದ್ದ ತಿಳಿವಳಿಕೆ ಏನೇನೂ ಸಾಲದಿತ್ತು. ಮೊದಲ ರಾತ್ರಿಯಲ್ಲೇ ಸಂಭೋಗ ಮಾಡಿದರೇನೇ ತನ್ನ ಪುರುಷತ್ವವನ್ನು ಸಾಬೀತು ಮಾಡಲು ಸಾಧ್ಯ ಎಂದು ತಪ್ಪಾಗಿ ನಂಬಿದ್ದ. ಈ ತಪ್ಪು ನಂಬಿಕೆಗೆ ಅವನ ಕೆಲವು ಸ್ನೇಹಿತರು ಕಾರಣರಾಗಿದ್ದರು. ಅದನ್ನು ಸಾಧಿಸುವ ಆತುರದಲ್ಲಿ, ಶಾರದಳಿಗೆ ನೋವಾಗುತ್ತಿದೆ,

ಹಿಂಸೆಯಾಗುತ್ತಿದೆ ಎನ್ನುವುದನ್ನು ಲೆಕ್ಕಿಸದೆ ಬಲಾತ್ಕಾರ ಸಂಭೋಗ ನಡೆಸಿ, ಆವಳ ಮಾನಸಿಕ ಕ್ಲೇಶಕ್ಕೆ ಕಾರಣನಾಗಿದ್ದ.

ಲೈಂಗಿಕ ಕ್ರಿಯೆ ಒಂದು ಸಂಕೀರ್ಣ ಚಟುವಟಿಕೆ. ಸಂತಾನೋತ್ಪತ್ತಿ, ಬಾಂಧವ್ಯ ಮತ್ತು ಮನರಂಜನೆ ಈ ಚಟುವಟಿಕೆಯ ಗುರಿ. ಪ್ರಾಣಿಗಳಲ್ಲಿರುವಂತೆ ಮನುಷ್ಯನಲ್ಲಿ ಈ ಕ್ರಿಯೆ ಸರಳವಾಗಿ ಉಳಿದಿಲ್ಲ. ಅದು ನಾನಾ ಬಗೆಯ ಸಾಮಾಜಿಕ. ಧಾರ್ಮಿಕ, ನೈತಿಕ ಹಾಗೂ ಕಾನೂನಿನ ಕಟ್ಟಳೆಗಳ ಚೌಕಟ್ಟಿನೊಳಗೆ ನಡೆಯಬೇಕಾದಂತಹ ಚಟುವಟಿಕೆಯಾಗಿ ಮಾರ್ಪಾಟಾಗಿದೆ. ಈ ಎಲ್ಲ ನೀತಿ ನಿಯಮ ನಿಯಂತ್ರಣಗಳನ್ನು ಅನುಸರಿಸಿ, ಲೈಂಗಿಕ ಕ್ರಿಯೆಯನ್ನು ನಡೆಸಿ, ಅದರಿಂದ ತಾನು ಸುಖ ತೃಪ್ತಿ ಪಡೆಯುವುದಲ್ಲದೆ, ತನ್ನ ಸಂಗಾತಿಗೂ ಅದು ದೊರೆಯುವಂತೆ ಮಾಡುವ ಜವಾಬ್ದಾರಿ ಪ್ರತಿ ಗಂಡಿನದು ಹಾಗೂ ಹೆಣ್ಣಿನದು.

ವ್ಯಕ್ತಿಗೆ ಲೈಂಗಿಕ ಆಸೆ ಉಂಟಾದಾಗ ವ್ಯಕ್ತಿಯ ಶರೀರದಲ್ಲಿ ಲೈಂಗಿಕ ಚೋದನಿಕೆಗಳು ಉತ್ಪತ್ತಿಯಾಗಿ, ಶಾರೀರಕವಾಗಿ, ಮಾನಸಿಕವಾಗಿ ಲೈಂಗಿಕ ಕ್ರಿಯೆಗೆ ಸಜ್ಜಾಗುತ್ತಾನೆ. ಅದೇ ಸಮಯಕ್ಕೆ ಆತನ ಸಂಗಾತಿಯೂ ಈ ಕ್ರಿಯೆಗೆ ಸಜ್ಜಾಗಬೇಕಾದುದು ಅತ್ಯಾವಶ್ಯಕ.

ಸಂಗಾತಿಯನ್ನು ಲೈಂಗಿಕವಾಗಿ ಪ್ರಚೋದಿಸುವುದು ಹೇಗೆ ಎನ್ನುವ ಅರಿವು ಅನುಭವದಿಂದ ಬರುತ್ತದೆ. ಸಂಗಾತಿಯ ದೇಹದ ಯಾವ ಭಾಗದ ಸ್ಪರ್ಶ ಅಥವಾ ಪ್ರೀತಿಯಿಂದ ಉಸುರಿದ ಎಂತಹ ಮಾತುಗಳು ಈ ಪ್ರಚೋದನೆಯನ್ನು ತರುತ್ತವೆ ಎನ್ನುವುದನ್ನು ಸತತ ಪ್ರಯತ್ನದಿಂದ ಕಲಿಯಬೇಕಾಗುತ್ತದೆ. ಈ ಅರಿವು ಬರದ ತನಕ ಲೈಂಗಿಕಕ್ರಿಯೆ ಬಲವಂತ ಮಾಘಸ್ನಾನವಾಗಿ ದಂಪತಿಗಳಿಗೆ ಅದರಿಂದ ಸುಖ, ತೃಪ್ತಿ ದೊರೆಯುವುದಿಲ್ಲ. ಬದಲಾಗಿ ನೋವು ಹಿಂಸೆಯಾಗಿ, ಮಾನಸಿಕ ನೆಮ್ಮದಿ ಹಾಳಾಗುತ್ತದೆ. ಲೈಂಗಿಕ ಕ್ರಿಯೆ ಎಂದರೆ ಬೇಸರ, ಭಯ ಉಂಟಾಗಬಹುದು.

ಶಾರದ–ಶ್ರೀನಿವಾಸರಿಗೆ ಇದನ್ನು ಮನದಟ್ಟು ಮಾಡಿಕೊಡಲಾಯಿತು. ದಾಂಪತ್ಯ ಜೀವನದ ಬಗ್ಗೆ ಅವರಿಗಿದ್ದ ತಪ್ಪು ಭಾವನೆಗಳು, ನಂಬಿಕೆಗಳನ್ನು ಹೋಗಲಾಡಿಸಿ, ಸೂಕ್ತ ತಿಳಿವಳಿಕೆಯನ್ನು ನೀಡಲಾಯಿತು. ಪರಸ್ಪರ ಅರ್ಥ ಮಾಡಿಕೊಳ್ಳಲು, ಸಮಾನ ಅಭಿರುಚಿಯನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಲಾಯಿತು. ನಿಧಾನವಾಗಿ ಹಂತ ಹಂತವಾಗಿ ಲೈಂಗಿಕ ಕ್ರಿಯೆಯಲ್ಲಿ ಹೊಂದಾಣಿಕೆ ಸಾಧಿಸುವಂತೆ ಸಲಹೆ ನೀಡಲಾಯಿತು. ತೊಂದರೆಯ ಮೂಲ ಗಂಡ ಹೆಂಡತಿಯರಿಗೆ ಅರ್ಥವಾಗುತ್ತಿದ್ದಂತೆ, ಶಾರದ ಚೇತರಿಸಿಕೊಂಡಳು, ಪ್ರಜ್ಞೆ ತಪ್ಪುವುದು ನಿಂತಿತು. ಈಗ ಗಂಡನ ಮನೆಯಲ್ಲಿ ಸಂತೋಷವಾಗಿ ಸಂಸಾರ ಮಾಡಿಕೊಂಡಿರುವ ಶಾರದ ನಗು ಮುಖದ ಗೃಹಿಣಿ.

ನೀಲಿ ತಂದ ಪರಂಗಿ ರೋಗದ ಅಂಜಿಕೆ

"ಅಪ್ಪಾ, ಮರಿಸ್ವಾಮಿ ರಾತ್ರಿ ವಾಪಸ್ ಮನೆಗೇ ಬಂದಿಲ್ಲ, ಎಲ್ಲೂ ಕಾಣ್ತಾ ಇಲ್ಲ" ಶಿವರಾಜ ಆತಂಕದಿಂದ ಹೇಳಿದ. ಆಗ ತಾನೇ ಎದ್ದು ಕುಳಿತಿದ್ದ ಶ್ರೀಕಂಠೇ ಗೌಡರು ಆಕಳಿಸಲು ಬಾಯಿ ತೆಗೆದವರು ಹಾಗೇ ನಿಲ್ಲಿಸಿದರು. ಅವರ ಕಣ್ಣುಗಳು ದೊಡ್ಡವಾದವು.

"ಏನ್ಲಾ ಅಂಗಂದ್ರೆ ?"

"ಅಪ್ಪಾ ನಿನ್ನೆ ಸೆಕೆಂಡ್ ಶೋಗೆ ಪಿಕ್ಚರಿಗೆ ಹೋಗುವ ಬಾ ಅಂತ ನನ್ನ ಕರೆದ. ಈವೊತ್ತು ಯಾಕೋ ನಂಗೇ ಮೈಗೆ ಎಂಗೆಂಗೋ ಆಯ್ತಾ ಅದೆ. ನಿದ್ದೆ ಕೆಟ್ರೆ ತೊಂದ್ರೆ ಆಯ್ತದೆ, ನೀನೇ ಹೋಗಿ ಬಾ ಅಂದೆ. ಅವನು ಒಬ್ನೇ ಪಿಕ್ಚರಿಗೆ ಹೋದ. ಆಮೇಲೆ ವಾಪಸ್ ಬಂದೇ ಇಲ್ಲ. ಏನಾದ, ಎತ್ತ ಹೋದ ಅಂತ ತಿಳೀತಾ ಇಲ್ಲ."

"ಹೌದೇನ್ಲ. ಮರಿ ಇಂಗೆ ಯಾವೊತ್ತೂ ಮಾಡ್ದೋನಲ್ಲ. ಮನೇಲೆಲ್ಲಾ ಸರಿಯಾಗಿ ನೋಡ್ದಾ ? ಎಲ್ಲಾರ್ನೂ ಇಚಾರಿಸ್ದಾ ?"

ಶ್ರೀಕಂಠೇಗೌಡರದ್ದು ದೊಡ್ಡ ಛತ್ರದಂತಹ ಮನೆ. ಸರಿಯಾಗಿ ಇಪ್ಪತ್ತೈದು ಜನರಿರುವ ಅವಿಭಕ್ತ ಕುಟುಂಬ. ಶಿವರಾಜನಿಗೆ ತಿಳಿಯದಂತೆ ಮರಿ ಆ ಮನೆಯಲ್ಲಿ ಒಂದು ಕಡೆ ಇರಲು ಸಾಧ್ಯವಿತ್ತು.

"ಊಂಕಣಪ್ಪಾ, ಎಲ್ಲಾರ್ನೂ ವಿಚಾರಿಸ್ದೆ. ಇಲ್ಲಿಗೆ ಮರಿ ಬಂದ್ರೆ, ನನ್ನ ಜೊತೇಲೇ ಮಲಗಿಕೊಳ್ಳೋದು ನಿನಗೆ ಗೊತ್ತಿಲ್ಲವಾ ? ನಿನ್ನೆ ರಾತ್ರಿ ಊಟ ಮಾಡೋತನಕ ನನ್ನ ಜೊತೇಲೇ ಇದ್ದ. ಇನ್ನಾ ಎರಡು ಮೂರು ದಿವ್ಸ ಇರ್ತೀನಿ ಅಂತಿದ್ದ. ಆದರೆ ಯಾಕೋ ಒಂತರಾ ಮಂಕಾಗಿದ್ದ. ಯಾಕೋ ಹಿಂಗಿದ್ದೀ ಅಂದದ್ದಕ್ಕೆ ಮನಸ್ಗೆ ಬೇಜಾರು ಕಣೋ ಶಿವು, ಬಾ ಸಿನೇಮಾ ನೋಡ್ಕೊಂಡು ಬರುವ ಅಂದ. ನಾನೂ ಜೊತೇಲೇ ಹೋಗಿದ್ರೆ ಚಂದಾಕಿತ್ತು" ಶಿವಸ್ವಾಮಿ ಪೇಚಾಡಿದ.

"ಯಾಕ್ಲೇ ಪೇಚಾಡೋದು. ಎಲ್ಲಿಗೆ ಹೋದಾನು ? ದಾಸೇಗೌಡ್ನ ಮನೆಗೆ

ಹೇಳಿ ಕಳಿಸು. ಸಿನೇಮಾ ನೋಡ್ಕೊಂಡು ಅಲ್ಲೇನಾದ್ರೂ ಓಗವ್ನೊ ಏನೋ. ಅಂಗೇ ಟೆಂಟ್ ತಾವ್ಕೆ ಆಳು ಕಳಿಸು. ಮರೀನಾ ಯಾರಾದ್ರೂ ನೋಡುದ್ರಾ ಇಚಾರಿಸು. ಇಲ್ಲೇ ಇದ್ರೆ ಇನ್ನೇನು ಅವನೇ ಬಂದಾನು" ಎಂದು ಆಣತಿ ಇತ್ತರು.

ಹತ್ತು ಗಂಟೆಯಾಯಿತು. ಎಲ್ಲೂ ಮರಿಸ್ವಾಮಿಯ ಸುಳಿವಿರಲಿಲ್ಲ. ನೋಡಲು ಹೋದವರೆಲ್ಲಾ ಬರಿಗೈಲಿ ವಾಪಸ್ ಬಂದರು. ಮರಿಸ್ವಾಮಿ ಶ್ರೀಕಂಠೇ ಗೌಡರ ತಂಗಿಯ ಮಗ. ಅಲ್ಲಿಂದ ಹತ್ತು ಮೈಲು ದೂರದಲ್ಲಿದ್ದ ಸಿದ್ದೇಗೌಡನ ದೊಡ್ಡಿಯಲ್ಲಿ ತಂದೆ ತಾಯಿಯೊಂದಿಗೆ ವಾಸವಾಗಿದ್ದ. ಅವನಿಗೀಗ ಇಪ್ಪತ್ತು ವರ್ಷ ತುಂಬಿದೆ. ಭೀಮಪ್ಪನ ಗರಡಿಗೆ ಹೋಗಿ ದಿನಾ ಕಸರತ್ತು ಮಾಡುವ ಅವನು, ಕೆಲಸ ಮಾಡುವುದರಲ್ಲಿ ಗಟ್ಟಿಗ. ನಾಲ್ಕು ಜನ ಮಾಡುವಷ್ಟು ಕೆಲಸವನ್ನು ಒಬ್ಬನೇ ಮಾಡಬಲ್ಲ. ಒಳ್ಳೆಯ ಸ್ವಭಾವದ ಮರಿಸ್ವಾಮಿ ಒಬ್ಬರೊಂದಿಗೆ ಜಗಳ ಮಾಡಿದವ ನಲ್ಲ. ದುರಭ್ಯಾಸ ಹಚ್ಚಿಕೊಂಡವನಲ್ಲ.

ಮರಿಸ್ವಾಮಿ-ಶಿವರಾಜ ಓರಗೆಯವರು. ಆತ್ಮೀಯ ಸ್ನೇಹಿತರು. ಬೇರೆ ಬೇರೆ ಊರಲ್ಲಿದ್ದರೂ ಸ್ನೇಹಕ್ಕೆ ಕೊರತೆ ಇರಲಿಲ್ಲ. ಶ್ರೀಕಂಠೇಗೌಡರಿಗೂ ತಂಗಿಯ ಮಗನೆಂದರೆ ತುಂಬ ಪ್ರೀತಿ. ಮಗನ ಮದುವೆ ಜವಾಬ್ದಾರಿಯನ್ನು ತಂಗಿ ಅಣ್ಣನ ಹೆಗಲಿಗೇ ಹಾಕಿ ನಿಶ್ಚಿಂತೆಯಿಂದಿದ್ದಳು.

ಪಕ್ಕದ ಹಳ್ಳಿಯ ತಿಪ್ಪೇಗೌಡನ ಕೊನೇ ಮಗಳೊಂದಿಗೆ ಮರಿಸ್ವಾಮಿಯ ಮದುವೆ ನಿಶ್ಚಯವಾಗಿತ್ತು. ಎರಡೂ ಮನೆಗಳಲ್ಲಿ ಸಂಭ್ರಮದ ವಾತಾವರಣ, ಸಡಗರದ ತಯಾರಿ ನಡೆದಿರುವಾಗ ಮರಿಸ್ವಾಮಿ ಮರೆಯಾಗಿದ್ದ.

ಸಿದ್ದೇಗೌಡನ ದೊಡ್ಡಿಗೆ ಹೋದ ಆಳು ಹಾಗೆಯೇ ಹಿಂದಿರುಗಿದ. ಅಲ್ಲಿಯೂ ಇಲ್ಲ ಎಂಬ ಸುದ್ದಿ ಕೇಳಿದ ಗೌಡರು ದಿಗಿಲುಗೊಂಡರು. ಹಾಗೆ ಹೇಳದೇ ಕೇಳದೇ ಎಲ್ಲೂ ಹೋಗುವವನಲ್ಲ. ಸಿನಿಮಾ ನೋಡಲು ಹೋದವನು ವಾಪಸ್ಸಾಗಲಿಲ್ಲ ವೆಂದರೆ ಏನೋ ಅಚಾತುರ್ಯವೇ ಆಗಿರಬೇಕು. ದಾರಿಯಲ್ಲಿ ಕಳ್ಳಕಾಕರು ಸಿಕ್ಕಿ ಏನಾದ್ರೂ ಮಾಡಿದರೆ ? ಏನಾಯಿತು ?

ದೇವರನ್ನು ನೆನೆದು ಗೌಡರು ಸುತ್ತಮುತ್ತಲಿನ ಊರಿಗೆಲ್ಲ ಜನರನ್ನು ಕಳಿಸಿದರು. ಪತ್ತೆಯಾದ ಕೂಡಲೇ ತಿಳಿಸುವಂತೆ ನೆಂಟರಿಷ್ಟರನ್ನೆಲ್ಲ ಕೇಳಿಕೊಂಡರು. ಊರ ಹೊರಗಿನ ಹಾಳು ಮಂಟಪ, ಕೆರೆ ಬಾವಿಗಳನ್ನೆಲ್ಲ ಶೋಧಿಸಲಾಯಿತು. ಪ್ರಯೋಜನವಾಗಲಿಲ್ಲ. ಮದುವೆ ಆಗಬೇಕಾದ ಹುಡುಗನ ಹೆಸರು ಕೆಟ್ಟೀತೆಂದು ಪೊಲೀಸರಿಗೆ ದೂರು ಕೊಡಲಿಲ್ಲ.

ವಿಷಯ ತಿಳಿದ ಲಕ್ಕವ್ವ ಎದೆಬಡಿದುಕೊಂಡು ಓಡಿ ಬಂದಳು. ತನ್ನ ಮಗನಿಗೆ ಯಾರಾದರೂ ಮಾಟ ಮಾಡಿಸಿರಬೇಕು. ಮಾಂತ್ರಿಕರನ್ನು ಕರೆಸು ಎಂದು ಅಣ್ಣನಿಗೆ

ಹೇಳಿದಳು. ಅದರಂತೆ ಮಾಡಲಾಯಿತು. 'ಮೂರು ದಿನಕ್ಕೆ ನಿಮ್ಮಗ ಬತ್ತಾನೆ' ಎಂದು ಆತ ಮುನ್ನೂರು ರೂಪಾಯಿ ಹೊಡೆದ. ಸುದ್ದಿ ಕೇಳಿದ ಭಾವೀ ಬೀಗರೂ ಧಾವಿಸಿದರು. ಪೊಲೀಸು ಕಂಪ್ಲೇಂಟು ಕೊಡಲಾಯಿತು. ಹೆಚ್ಚು ಪ್ರಚಾರ ಮಾಡದೆ ಮರಿಸ್ವಾಮಿಯನ್ನು ಹುಡುಕಿಕೊಡಲು ಕೇಳಿ ಕೊಳ್ಳಲಾಯಿತು.

ತಮ್ಮ ಕೈಲಾದ ಪ್ರಯತ್ನ ಮಾಡುವುದಾಗಿ ಪೊಲೀಸರು ಭರವಸೆ ಕೊಟ್ಟರು. ಮತ್ತೂ ಒಂದು ವಾರ ಕಳೆಯಿತು. ಯಾವ ಸುದ್ದಿಯೂ ಬರಲಿಲ್ಲ. ಲಕ್ಕವ್ವ ಅನ್ನ ನೀರು ಮುಟ್ಟದೆ ಹಾಸಿಗೆ ಹಿಡಿದಳು. ನಗು ನಗುತ್ತಿದ್ದ ಮನೆಯಲ್ಲಿ ಚಿಂತೆ, ದುಃಖದ ಕತ್ತಲು ಕವಿಯಿತು. ಎಲ್ಲರೂ ತಲೆಯ ಮೇಲೆ ಕೈಹೊತ್ತು ಕುಳಿತರು. ಎಲ್ಲ ದೇವರುಗಳಿಗೂ ಹರಕೆ ಕಟ್ಟಿದರು.

ಯಾರು ನೀವು?

"ಮೈಸೂರಿನ ಬಳಿ ಗ್ರಾಮ ಒಂದರಲ್ಲಿ ಒಬ್ಬ ಅಪರಿಚಿತ ಯುವಕನಿದ್ದಾನೆ. ತಾನು ಯಾರು ಎಲ್ಲಿಂದ ಬಂದೆ ಏನೂ ಹೇಳಲಾರ. ಸುಮ್ಮನೆ ಊರ ಮುಂದಿನ ಮಂಟಪದಲ್ಲಿ ಕುಳಿತುಕೊಂಡಿರುತ್ತಾನೆ. ಏನೂ ಕೇಳುವುದಿಲ್ಲ. ಯಾರಾದರೂ ಏನಾದರೂ ತಿಂಡಿ ಕೊಟ್ಟರೆ, ಮನಸ್ಸು ಬಂದರೆ ತಿನ್ನುತ್ತಾನೆ. ಇಲ್ಲದಿದ್ದರೆ ಇಲ್ಲ. ಯಾರಿಗೂ ಯಾವ ತೊಂದರೆಯನ್ನೂ ಕೊಡುವುದಿಲ್ಲ ಎಂದು ಸುದ್ದಿ ಬಂದಿದೆ ಗೌಡರೇ. ಅವನೂ ನಿಮ್ಮ ಹುಡುಗನೇ ಏನು ಎಂದು ಹೋಗಿ ನೋಡಿಬನ್ನಿ" ಎಂದರು ಸಬ್‌ಇನ್‌ಸ್ಪೆಕ್ಟರು.

"ಮೈಸೂರು... ಅಷ್ಟು ದೂರ ಹೇಗೆ ಹೋದಾನು ನಮ್ಮ ಮರಿಸ್ವಾಮಿ ಇನ್ಸ್‌ಪೆಕ್ಟರೇ. ಅವನು ನಮ್ಮ ಹುಡುಗ ಆಗಿರಲಾರ ಬಿಡಿ" ನಿರಾಶೆಯಿಂದ ನುಡಿದರು ಶ್ರೀಕಂಠೇಗೌಡರು.

"ಇಲ್ಲ ಗೌಡರೆ, ಅವನ ಚಹರೆ ನಿಮ್ಮ ಮರಿಸ್ವಾಮಿಯನ್ನೇ ಹೋಲುತ್ತೆ. ಹತ್ತಿರದ ಊರುಗಳಲ್ಲೆಲ್ಲಾ ನೋಡಿ ಆಯಿತಲ್ಲ. ಇಲ್ಲೆಲ್ಲೂ ಅವನ ಸುಳಿವಿಲ್ಲ. ನನ್ನ ಮಾತು ಕೇಳಿ ಹೋಗಿ ನೋಡಿ" ಎಂದಾಗ ಅರೆ ಮನಸ್ಸಿನಿಂದ, ಮರಿಸ್ವಾಮಿಯ ತಂದೆಯೊಂದಿಗೆ ಹೊರಟರು.

ಆ ಗ್ರಾಮವನ್ನು ಸೇರಿದಾಗ ಮಧ್ಯಾಹ್ನವಾಗಿತ್ತು. ಅವರಿವರನ್ನು ಕೇಳಿ ಹಾಳು ಮಂಟಪ ಸೇರಿ ದೂರದಿಂದಲೇ ಅವನೇ ಮರಿಸ್ವಾಮಿ ಎಂದು ಗೊತ್ತಾಗಿ ಸಂತೋಷಪಟ್ಟರು. ಆದರೆ ಅವನ ಸ್ಥಿತಿಯನ್ನು ಕಂಡು ಕಣ್ಣೀರಿಟ್ಟರು. ಹರಿದು ಹೋದ ಬಟ್ಟೆ, ಕೆದರಿದ ತಲೆ, ಬೆಳೆದ ಗಡ್ಡಮೀಸೆ, ಸ್ನಾನ ಕಾಣದೆ ಕೊಳಕಾಗಿ

ನಾತ ಹೊಡೆಯುತ್ತಿದ್ದ ಶರೀರ, ಗುಳಿಬಿದ್ದ ಕಣ್ಣುಗಳು. ಅವನ ಪಕ್ಕದಲ್ಲಿ ಯಾರೋ ತಂದಿತ್ತ ಅನ್ನಕ್ಕೆ ನೊಣ ಇರುವೆ ಮುತ್ತಿದ್ದುವು.

ಆತನನ್ನು ಸಮೀಪಿಸಿ, "ಮರೀ...... ಮರಿಸ್ವಾಮಿ. ಯಾಕಪ್ಪಾ ಹಿಂಗೆ ಮಾಡಿಬಿಟ್ಟೆ" ಎಂದು ಮಾತನಾಡಿಸಿದರು ಅವನ ತಂದೆ. ಮರಿಸ್ವಾಮಿ ನಿಧಾನವಾಗಿ ತಿರುಗಿ ಅವರತ್ತ ನೋಡಿದ. ನಿರ್ಜೀವ ಕಣ್ಣುಗಳು, ನಿಸ್ತೇಜ ಮುಖ. ಯಾವ ಭಾವನೆಯನ್ನೂ ತೋರದೆ 'ಯಾರು ನೀವು' ಎಂದ!

"ಯಾಕೋ ನಮ್ಮ ಗುರುತು ಸಿಕ್ಕಲಿಲ್ಲಪೇನೋ. ನಡೀ. ನಮ್ಮೂರಿಗೆ ಹೋಗುವ' ಎಂದರು ಶ್ರೀಕಂಠೇಗೌಡರು."

"ನೀವು ಯಾರು ಎಂದು ನನಗೆ ಗೊತ್ತಿಲ್ಲ, ನನಗೂ ನಿಮಗೂ ಯಾವ ಸಂಬಂಧವೂ ಇಲ್ಲ. ನಿಮ್ಮ ಪಾಡಿಗೆ ನೀವು ಹೋಗಿ" ಎಂದ ನಿರ್ವಿಕಾರವಾಗಿ,

"ನಾನು ಕಣೊ ನಿನ್ನ ಅಪ್ಪ, ಜ್ಞಾಪಿಸ್ಕೊಪ್ಪಾ, ನಿನಗಾಗಿ ಈ ಹದಿನೈದು ದಿವಸಗಳಲ್ಲಿ ಎಲ್ಲೆಲ್ಲಿ ಹುಡುಕಾಡಿದ್ವಿ, ನಡೆಯಪ್ಪಾ ಹೋಗುವ" ಎಂದು ಅವನ ಕೈಹಿಡಿದುಕೊಂಡರು.

ಅವನು ತಕ್ಷಣ ಕೈ ಕೊಸರಿಕೊಂಡು "ಏಯ್ ಮುದುಕಾ. ನನ್ನ ಕೈ ಮುಟ್ಟ ಬೇಡ. ನನಗೆ ಕೋಪ ಬಂದರೆ ಸುಮ್ನಿರೋಕಿಲ್ಲ ನೋಡು, ಹೋಗುತ್ತ" ಎಂದ.

"ನಿನ್ನ ಹೆಸರೇನಪ್ಪಾ...?" ಶ್ರೀಕಂಠೇಗೌಡರು ಪ್ರಶ್ನಿಸಿದರು.

"ನನ್ನ ಹೆಸರು ಕಟ್ಕೊಂಡು ನಿನಗೇನು? ನನ್ನ ಹೆಸರು ನನಗೇ ಗೊತ್ತಿಲ್ಲ ಹೋಗು."

ಮರಿಸ್ವಾಮಿ ನಮ್ಮನ್ನೆಲ್ಲಾ ಮರೆತಂಬಿಟ್ಟಿದ್ದಾನೆ, ಅಲ್ಲದೆ ಅವನಾರು ಎಂಬ ನೆನಪೂ ಅನಿಗಿವಲ್ಲ, ದೇವರೇ ಎಂಥಾ ದುಃಸ್ಥಿತಿ ತಂದಿಟ್ಟೆಯಪ್ಪಾ ಇವನಿಗೆ, ಎಂದು ದುಃಖಪಟ್ಟರು. 'ಭಾವ ನೀನು ಇಲ್ಲೇ ಇದ್ದು ಇವನೆಲ್ಲೂ ಹೋಗದಂಗೆ ನೋಡಿಕೋ, ಅವನ ಜೊತೇಲಿ ನೀನೇನೂ ಮಾತಾಡೋಕೆ ಹೋಗಬೇಡ, ಆ ಗ್ರಾಮಕ್ಕೆ ಹೋಗಿ ಡಾಕ್ಟರನ್ನು ಕರ್ಕಂಡು ಬರ್ತೀನಿ, ನಿದ್ರೆ ಔಷಧ ಕೊಡಿಸ್ಬುಟ್ಟು ಬಸ್ಸಿನಲ್ಲಿ ಕೂರಿಸ್ಕೊಂಡು ಮೈಸೂರಾಸ್ಪತ್ರೆಗೆ ತಗೊಂಡೋಗ್ಬಿಡಾನ. ಮರಿ ಸ್ವಾಮಿಗೆ ಬುದ್ಧಿ ಕೆಟ್ಟೋಗಿದೆ, ದೊಡ್ಡಾಸ್ಪತ್ರೇಲಿ ಔಷಧಿ ಕೊಟ್ಟು, ನಮ್ಮ ಜ್ಞಾಪಕ ಬರೋ ಹಂಗೆ ಮಾಡ್ತಾರೆ' ಎಂದು ಊರತ್ತ ಹೆಜ್ಜೆ ಹಾಕಿದರು,

ಕೊನೆಯ ಪ್ರಯತ್ನ

"ಮರಿಸ್ವಾಮಿಗೆ ಯಾಕೆ ಇಂಗಾಯ್ತು ಅಂತ ಯಾರಿಗೂ ತಿಳೀವಲ್ದು ಸ್ವಾಮಿ. ಅವನ್ನ ಅಲ್ಲಿಂದ ಮೈಸೂರಿಗೆ ಸಾಗಿಸಬೇಕಾದರೆ ಸಾಕುಬೇಕಾಯ್ತು, ಪಾಪ ಆ

ಊರಿನ ಜನ, ಅಲ್ಲಿಯ ಡಾಕ್ಟರು. ಭಾಳ ಸಹಾಯ ಮಾಡಿದರು. ಮೈಸೂರಿನ ದೊಡ್ಡಾಸ್ಪತ್ರೆಗೆ ಬಂದು ಅಲ್ಲಿ ಎರಡು ದಿವಸ ಇದ್ವು. ಆಸ್ಪತ್ರೆಗೆ ಬಂದು ಮೂರನೇ ದಿವಸಕ್ಕೆ ಮರಿಸ್ವಾಮಿಗೆ ನಮ್ ಮೇಲೆ ಗ್ಯಾನ ಬಂತು. ನಮ್ಮನ್ನು ಗುರುತು ಹಿಡಿದ. ನಾನು ಇಲ್ಯಾಕೆ ಇದ್ದೀನಿ, ನನಗೇನಾಗಿದೆ ಅಂತ ಕೇಳ್ದ. ಹದಿನೈದು ದಿವಸ ಏನೇನಾಯ್ತು, ಎಲ್ಲೆಲ್ಲಿಗೆ ಹೋಗಿದ್ದ, ಆ ಊರ್ನಲ್ಲಿ ನಾವು ಅವನ್ನ ಕಂಡು ಮಾತನಾಡ್ಸಿದ್ದು, ಒಂದೂ ಗ್ಯಾಪಕ ಇಲ್ಲ ಅಂದ. ತಲೆನೋವು, ಭಾರ, ಒಂಥರಾ ಎಂಗೆಂಗೋ ಆಯ್ತದೆ ಅಂದ. ದೊಡ್ಡ ಡಾಕ್ಟರು ಇದು ಅವನ ಮನಸ್ಸಿಗೆ ಸಂಬಂಧಪಟ್ಟ ವಿಚಾರ. ನೀವು ಬೆಂಗಳೂರಿನ ಮೆಂಟಲ್ ಆಸ್ಪತ್ರೆಗೆ ಹೋಗಿ, ಅಲ್ಲಿನ ಡಾಕ್ಟರುಗಳಿಗೆ ತೋರಿಸಿ, ಅವರು ನಿಮಗೆ ಸಹಾಯ ಮಾಡ್ತಾರೆ ಅಂದ್ರು. ನಾವು ನೇರವಾಗಿ ನಿಮ್ಮ ಹತ್ರ ಬಂದ್ವು. ಒಳ್ಳೇ ಹುಡುಗ ಸ್ವಾಮಿ. ಇನ್ನೊಂದೂವರೆ ತಿಂಗಳಿಗೆ ಲಗ್ನ ನಿಶ್ಚಯ ಮಾಡಿದೆ. ಬೇಗ ವಾಸಿ ಮಾಡಿಕೊಡ ಬೇಕು" ಎಂದು ಕೈಮುಗಿದರು ಶ್ರೀಕಂಠೇಗೌಡರು.

"ಏನು ಮರಿಸ್ವಾಮಿ ನಿನಗೇನಾಯಿತು ಎಂಬುದರ ಬಗ್ಗೆ ನಿನಗೆಷ್ಟು ನೆನಪಿದೆಯೋ ಅಷ್ಟನ್ನು ಹೇಳು" ಡಾ॥ ಮೂರ್ತಿ ನುಡಿದರು.

"ಇಲ್ಲ ಸ್ವಾಮಿ, ನನಗೇನೂ ಗೊತ್ತಿಲ್ಲ. ಯಾವುದೂ ನೆನಪಿಲ್ಲ. ಆ ದಿನ ಸೆಕೆಂಡ್ ಶೋ ಪಿಕ್ಚರಿಗೆ ಹೋದೆ. ಶಿವರಾಜ ಬರೋದಿಲ್ಲ ಅಂದಿದ್ದರಿಂದ ನಾನೊಬ್ಬನೇ ಹೋಗಬೇಕಾಯ್ತು. ಪಿಕ್ಚರ್ ಶುರುವಾಗಿ ಒಂದರ್ಧ ಗಂಟೆ ಆಗಿರ ಬೇಕು. ತಲೆನೋಯಲು ಶುರುವಾಯ್ತು. ಕ್ಷಣಕ್ಷಣಕ್ಕೆ ನೋವು ಜಾಸ್ತಿ ಆಗ್ತಾ ಹೋಯ್ತು. ಕಣ್ಣು ಮಂಜಾಗಿ ಚಿತ್ರ ಕಲಸಿಕೊಂಡ್ತು. ಏನೂ ಕಾಣದಂಗಾಯ್ತು. ನಾನು ಇದೇನಪ್ಪಾ ಗ್ರಾಚಾರಾ, ಯಾವೊತ್ತು ಹಿಂಗಾಗಿರಲಿಲ್ಲವಲ್ಲ ಅಂತ ಗಾಬರಿಪಟ್ಟೆ. ಎದ್ದು ಹೊರಗಡೆ ಬಂದೆ. ಅಷ್ಟೆ.... ಆಮೇಲೆ ಏನಾಯ್ತು ನನಗೆ ನೆನಪಿಲ್ಲ. ಮತ್ತೆ ಗ್ಯಾನ ಬಂದಾಗ ನಾನು ಮೈಸೂರು ಆಸ್ಪತ್ರೇಲಿದ್ದೀನಿ ಅಂತ ತಿಳೀತು. ನನ್ನ ತಂದೆ. ಮಾವ ಜೊತೇಲಿದ್ರು. ಇದ್ನೇನೂ ನನಗೆ ತಿಳೀದು,"

"ಹೌದೇ, ಹೋಗಲಿ ಬಿಡು. ನಿನ್ನ ಮನಸ್ಸಿಗೆ ಬೇಜಾರಾಗುವಂತಹ ವಿಚಾರ ಅಥವಾ ತಡೆಯುವುದಕ್ಕೆ ಆಗದೇ ಇರುವಂತಹ ಕಷ್ಟ, ಸಮಸ್ಯೆ ಏನಾದರೂ ಇದೆಯಾ ಯೋಚನೆಮಾಡಿ ಹೇಳು."

"ಇಲ್ಲ ಸ್ವಾಮಿ, ಹಂಗೇನಾದರೂ ಇದ್ರೆ, ನೀವು ಕೇಳಬೇಕಿತ್ತಾ. ನಾನೇ ಹೇಳ್ತಿದ್ದೆ. ನನ್ನ ಅಪ್ಪ ಅಮ್ಮ ನನ್ನ ಬಹಳ ಚೆನ್ನಾಗಿ ನೋಡ್ಕೊಳ್ತಾರೆ. ಜೊತೆಗೆ ಅವರಿಗಿಂತಾ ಹೆಚ್ಚಾಗಿ ಪ್ರೀತಿಸೋ ಮಾವ ಇದ್ದಾರೆ. ನಂಗೆ ಯಾವ ಕಷ್ಟವೂ

ಇಲ್ಲ. ಅಲ್ಲದೆ ನನ್ನ ಮದುವೆ ನಿಶ್ಚಯ ಮಾಡಿದ್ದಾರೆ. ಒಳ್ಳೇ ಹುಡುಗಿಯನ್ನು ಆರಿಸಿದ್ದಾರೆ."

"ಈ ಮದುವೆ ನಿನಗಿಷ್ಟವೇ ? ಹುಡುಗಿಯನ್ನು ನೀನು ಒಪ್ಪಿದ್ದೀಯಾ ?"

"ನಮ್ಮ ಮನೆಯವರೆಲ್ಲಾ ಒಪ್ಪಿಕೊಂಡಿದ್ದಾರೆ. ಹುಡುಗಿ ಚೆನ್ನಾಗಿದ್ದಾಳೆ. ಏನು ಮಾಡ್ಬೇಕು ಅನ್ನೋದು ನನಗಿಂತ ದೊಡ್ಡವರಿಗೆ ಚೆನ್ನಾಗಿ ಗೊತ್ತು."

ಅವನ ತೊಂದರೆಗಳು ಶುರುವಾದ ಮತ್ತು ಕೊನೆಗೊಂಡ ರೀತಿ, ಮನೆಯವರ ಮತ್ತು ಅವನ ಹೇಳಿಕೆಗಳನ್ನು ಅಧ್ಯಯನ ಮಾಡಿದ ಡಾ॥ ಮೂರ್ತಿ ಇದು 'ಉನ್ಮಾದದ ಅಲೆತ ಸ್ಥಿತಿ' (Hysterical Fugue State) ಎಂಬ ನಿರ್ಧಾರಕ್ಕೆ ಬಂದರು. ಯಾವುದೋ ಕಠಿಣವಾದ ಸಮಸ್ಯೆ ಮರಿಸ್ವಾಮಿಯನ್ನು ಕಾಡುತ್ತಿದೆ. ಅದರಿಂದ ತಪ್ಪಿಸಿಕೊಳ್ಳುವುದು ಹೇಗೆಂದು ಅವನ ಜಾಗೃತ ಮನಸ್ಸಿಗೆ ಗೊತ್ತಾಗಿಲ್ಲ. ಹೀಗಾಗಿ ಸುಪ್ತ ಮನಸ್ಸು ಈ ಉನ್ಮಾದದ ಅಲೆತ ಸ್ಥಿತಿಗೆ ಕಾರಣವಾಗಿದೆ ಎಂದು ಯೋಚಿಸಿದರು. ಅವನ ಸುಪ್ತ ಮನಸ್ಸಿನಲ್ಲಿರಬಹುದಾದ ವಿಚಾರವನ್ನು ಕೆದಕಲು, ಅರ್ಥಮಾಡಿಕೊಳ್ಳಲು ಹಾಗೂ ಅದು ಹೊರಬರುವಂತೆ ಮಾಡಲು ನಿರ್ಧರಿಸಿದರು. ಔಷಧದ ನೆರವಿನಿಂದ ಅವನನ್ನು ಸುಪ್ತಾವಸ್ಥೆಗೆ ಒಯ್ದರು. ತುಣುಕು ತುಣುಕಾಗಿ ಅವನನ್ನು ಕಾಡುತ್ತಿದ್ದ ವಿಚಾರ ಹೊರಬಂದಿತು.

ಮರಿಸ್ವಾಮಿಗೆ ತಿಪ್ಪೇಗೌಡರ ಮಗಳು ಸರಸ್ವತಿಯನ್ನು ಮದುವೆಯಾಗಲು ಆಸೆ ಇತ್ತು. ಆದರೆ ತಾನು ಆಕೆಯನ್ನು ಮದುವೆಯಾಗಲು ಅರ್ಹನೇ, ಮದುವೆ ಯಾಗಿ ಅವಳನ್ನು ಸಂತೋಷವಾಗಿಡಬಲ್ಲೆನೇ, ಎಂಬುದರ ಬಗ್ಗೆ ಅತೀವ ಅನುಮಾನ ವಾಗಿತ್ತು. ತನಗೆ ಲೈಂಗಿಕ ದೌರ್ಬಲ್ಯ ಅಥವಾ ಲೈಂಗಿಕ ಖಾಯಿಲೆ ಇರಬೇಕೆಂಬ ಸಂಶಯ ಅವನ ಮನಸ್ಸನ್ನು ಜಿಗಣೆಯಂತೆ ಹಿಡಿದಿತ್ತು. ಈ ಸಂಶಯ ಬರಲು ಕಾರಣವೂ ಇತ್ತು.

ಒಂದು ವರ್ಷದ ಹಿಂದೆ ಸುಗ್ಗಿಯ ಕಾಲದಲ್ಲಿ, ಇನ್ನೂ ಫಸಲು ಕೊಯ್ದಿರದ ಅವಧಿಯಲ್ಲಿ, ಗದ್ದೆಯಲ್ಲಿ ರಾತ್ರಿ ಹೊತ್ತು ಕಾವಲು ಕಾಯಲು ಮರಿಸ್ವಾಮಿ ಹೋಗುತ್ತಿದ್ದ. ಕಾವಲು ಕಾಯಲು ಕಟ್ಟಿದ್ದ ಗುಡಿಸಲಿನಲ್ಲಿ ಮಲಗುತ್ತಿದ್ದ.

ಈ ಸಮಯದಲ್ಲಿ ಪಕ್ಕದ ಗದ್ದೆಯ ಒಡತಿ ನೀಲಿಯ ಪರಿಚಯವಾಯಿತು. ನೀಲಿ ಗಂಡ ಸತ್ತ ತರುಣ ವಿಧವೆ. ಗಂಡುಗಳ ಎದೆಯಲ್ಲಿ ಬಯಕೆಯ ಕಿಚ್ಚನ್ನು ಹಚ್ಚುವ ದೇಹ ಅವಳದು. ಗಂಡನಿದ್ದಾಗಲೂ ಅವನಿಗೆ ನಿಷ್ಠೆಯಿಂದಿರದ ಚಂಚಲ ಹೆಣ್ಣು ಅವಳು. 'ಕಟ್ಟುಮಸ್ತಾದ ಗಂಡನ್ನು ಕಂಡರೆ, ಸೆರಗು ಜಾರಿಸಿ ಕರೆಯುವ ಲಜ್ಜೆಗೆಟ್ಟ ಹೆಂಗಸು' ಎನ್ನುತ್ತಾರೆ ಅವಳ ಬಗ್ಗೆ ತಿಳಿದವರು. ಗರಡಿ ಮನೆಯಲ್ಲಿ ಕಸರತ್ತು ಮಾಡಿ ನೋಡುವವರ ಕಣ್ಣಿಗೆ ಹಬ್ಬವಾಗಿದ್ದ ಮರಿಸ್ವಾಮಿ ಮತ್ತು

ಅಂತಹ ಗಂಡನ್ನು ಮೋಹಿಸುವ ನೀಲಿ–ಇಬ್ಬರೂ ಪರಸ್ಪರ ಆಕರ್ಷಿತರಾದರು. ತೀಡುವ ತಂಗಾಳಿಯಲ್ಲಿ ಮೈಗೆ ಮೈ ಬೆಸೆದು ಬೆಚ್ಚಗೆ ಮಾಡಿಕೊಂಡರು. ಒಂದು ತಿಂಗಳ ಕಾಲ ಅವಕಾಶ ಸಿಕ್ಕಾಗಲೆಲ್ಲಾ ಕೂಡಿದರು. ಮರಿಸ್ವಾಮಿ ತನ್ನನ್ನು ಹೆಚ್ಚೆಚ್ಚು ಬಯಸುವುದನ್ನು ಕಂಡು, ಅದು ಅಪಾಯದ ಸೂಚನೆ ಎಂದರಿತ ನೀಲಿ ಅವನಿಂದ ದೂರವಾದಳು. ಹೊಸ ಗೆಳೆಯನನ್ನು ಹುಡುಕಿಕೊಂಡಳು.

ಈ ಮಧ್ಯೆ ಮರಿಸ್ವಾಮಿಗೆ ಮೂತ್ರ ಹೋಗುವ ಜಾಗದಲ್ಲಿ ಗಾಯ ಕಾಣಿಸಿಕೊಂಡಿತು. ಮೂತ್ರ ಹೋಗಲು ಉರಿ, ತೊಂದರೆಯಾದಾಗ ಹೌಹಾರಿದ. ಡಾಕ್ಟರ್ ಹತ್ತಿರ ಹೋದಾಗ ಅವರು, "ನಿನಗೆ 'ಹೆಂಗಸರ ಕಾಯಿಲೆ' ಅಂಟಿದೆ. ಯಾರೋದಿಗೋ ಸೇರಿ ಬರಿಸಿಕೊಂಡಿದ್ದೀಯಾ. ನಾಚಿಕೆಯಾಗುವುದಿಲ್ಲವಾ" ಎಂದು ಬೈದರು. ದಿನವೂ ಬಂದು ಇನ್‌ಜೆಕ್ಷನ್ ತೆಗೆದುಕೊಳ್ಳಲು ಹೇಳಿದರು.

ಚಿಕಿತ್ಸೆ ಪಡೆದು ಗಾಯ ವಾಸಿಯಾದ್ದರೂ, ತಪ್ಪಿತಸ್ಥ ಭಾವನೆ ಮರಿಸ್ವಾಮಿಯ ಮನಸ್ಸಿನಿಂದ ಹೋಗಲಿಲ್ಲ. ಕೊರಗತೊಡಗಿದ. ತನ್ನ ಶಕ್ತಿ ಕಡಿಮೆಯಾಗಿದೆ. ಅಂಟಿಕೊಂಡ ಕಾಯಿಲೆ ಪೂರ್ಣವಾಗಿ ವಾಸಿಯಾಯಿತೋ ಇಲ್ಲವೋ ಎಂದು ಯೋಚಿಸಿದ, ಆದರೆ ಯಾರಲ್ಲಿ ಹೇಳಿಕೊಳ್ಳುವುದು. ಮನೆಯವರು ಒಳ್ಳೆಯ ಹುಡುಗಿಯನ್ನು ಆರಿಸಿ ಮದುವೆ ನಿಶ್ಚಯ ಮಾಡಿದಾಗ, ಅವನಿಗೆ ಏನು ಮಾಡುವುದೆಂದು ತೋರಲಿಲ್ಲ, ಮದುವೆಯಾಗಿ ಹೆಂಡತಿಯ ಮುಂದೆ ತನ್ನ ದುರ್ಬಲತೆ ಪ್ರಕಟವಾದರೆ ಎಷ್ಟು ಅವಮಾನ. ಅವಳು ಏನೆಂದಾಳು. ತನ್ನ ಈ ಸಮಸ್ಯೆಯನ್ನು ಯಾರಿಗೆ ಹೇಳುವುದು, ಅದಕ್ಕೆ ಪರಿಹಾರವಿದೆಯೋ ?

ಈ ತಾಕಲಾಟದಲ್ಲಿ ಅವನ ಮನಸ್ಸು ಸುಸ್ತಾಗಿ ಹೋಯಿತು. ಸಮಸ್ಯೆಯನ್ನು ಎದುರಿಸಿ, ಪರಿಹರಿಸಲು ಶಕ್ತನಾಗದಿದ್ದಾಗ, ಸುಪ್ತ ಮನಸ್ಸು ಪಲಾಯನವಾದವನ್ನು ಸೂಚಿಸಿತು. ಎಲ್ಲವನ್ನೂ ಮರೆತು, ಎಲ್ಲಿಯಾದರೂ ದೂರ ಓಡಿಹೋಗಲು ದೇಹವನ್ನು ಸಜ್ಜುಗೊಳಿಸಿತು. ಮರಿಸ್ವಾಮಿ ಉನ್ಮಾದ ಸ್ಥಿತಿಯಲ್ಲಿ ತನ್ನ ಗುರುತು, ತನ್ನತನವನ್ನು ಮರೆತು ಅಲೆದಾಡತೊಡಗಿದ. ಸಿನಿಮಾ ಮಂದಿರದಿಂದ ಹೊರ ನಡೆದು ಬಸ್‌ಸ್ಟಾಂಡಿಗೆ ಹೋದ. ಅಲ್ಲಿಂದ ಮಂಡ್ಯಕ್ಕೆ ಹೊರಟಿದ್ದ ಬಸ್ಸಿನಲ್ಲಿ ಕುಳಿತುಕೊಂಡ. ಮಂಡ್ಯದಲ್ಲಿ ಅಂಗಡಿಯ ಜಗಲಿಯ ಮೇಲೆ ಮಲಗಿಕೊಂಡ. ಮಾರನೇ ದಿನ ಅಲ್ಲಿಂದ ಹೊರಟು ಶ್ರೀರಂಗಪಟ್ಟಣ ಸೇರಿದ. ಅಲ್ಲಿ ನಾಲ್ಕೈದು ದಿವಸ ದೇವಸ್ಥಾನದಲ್ಲಿ ಕಳೆದ. ಜೇಬಿನಲ್ಲಿದ್ದ ದುಡ್ಡೆಲ್ಲ ಖರ್ಚಾಯಿತು. ಯಾರಾದರೂ ಯಾರು ನೀನು, ಯಾವ ಊರು, ಎಂದರೆ ಏನು ಉತ್ತರ ಕೊಡುವುದೆಂದು ತಿಳಿಯದೆ ಅವರನ್ನು ಪಿಳಪಿಳನೆ ನೋಡುತ್ತಿದ್ದ. ಇವನು ಮೂಗನೋ, ತಲೆ ಕೆಟ್ಟವನೋ ಇರಬಹುದೆಂದು ತಿಳಿದು ತಿನ್ನಲು ಏನಾದರೂ ಕೊಡುತ್ತಿದ್ದರು.

ಅಲ್ಲಿಂದ ಮೈಸೂರಿಗೆ ನಡೆದೇ ಹೋದ. ಹೀಗೆ ಭ್ರಮಾವೃತನಾಗಿ ಕಾಲೆಳೆದೆಡೆ ಹೋದ. ಅಯ್ಯೋ ಪಾಪ ಎಂದು ಯಾರಾದರೂ ಏನಾದರೂ ಕೊಟ್ಟರೆ, ಕೊಟ್ಟಿದ್ದನ್ನು ತಿನ್ನುತ್ತಿದ್ದ. ನಿರ್ಲಿಪ್ತನಾಗಿ, ನಿಶ್ಚಿಂತೆಯಿಂದ ಕಾಲ ಕಳೆದ. ಮನದ ತಾಕಲಾಟಗಳಿಗೆಲ್ಲಾ ತಾತ್ಕಾಲಿಕವಾಗಿ ತೆರೆ ಬಿದ್ದಿತ್ತು.

O O O O

ರಕ್ತ ಪರೀಕ್ಷೆ ಮಾಡಿ, ಅವನಲ್ಲಿ ಲೈಂಗಿಕ ಖಾಯಿಲೆಯ ಸೋಂಕು ಉಳಿದಿಲ್ಲ ಎನ್ನುವುದನ್ನು ಡಾ॥ ಮೂರ್ತಿ ಖಾತ್ರಿ ಮಾಡಿಕೊಂಡರು. ಅವನಿಗೂ ಅದನ್ನು ತಿಳಿಸಿದರು. ಲೈಂಗಿಕ ದುರ್ಬಲತೆಯ ಬಗ್ಗೆ ಅವನಿಗಿದ್ದ ಅನುಮಾನ, ತಪ್ಪು ನಂಬಿಕೆಗಳನ್ನು ನಿವಾರಿಸಲಾಯಿತು. ಎಲ್ಲ ಹೆಂಗಸರೂ ನೀಲಿಯಂತೆ ಸ್ವಾರ್ಥಿಗಳಾಗಿರುವುದಿಲ್ಲ, ಕಾಮ ಪಿಪಾಸಿಗಳಲ್ಲ. ಗಂಡಸರನ್ನು ಉಪಯೋಗಿಸಿ, ನಂತರ ಬಿಟ್ಟುಬಿಡುವವರಲ್ಲ ಎಂದು ಮನವರಿಕೆ ಮಾಡಿಕೊಡಲಾಯಿತು. ದಾಂಪತ್ಯ ಜೀವನದಲ್ಲಿ ಪ್ರೀತಿ ಮಮತೆ ಮತ್ತು ಪರಸ್ಪರ ಪೂರಕವಾದ ಲೈಂಗಿಕ ಚಟುವಟಿಕೆಯಿಂದ ತೃಪ್ತಿ, ಆನಂದವನ್ನು ಪಡೆಯಬಹುದು ಹಾಗೂ ಸಂಗಾತಿಗೆ ಕೊಡಬಹುದು ಎನ್ನುವ ಅಂಶವನ್ನು ಅವನಿಗೆ ಅರ್ಥಮಾಡಿಕೊಡಲಾಯಿತು. ಸಂಗಾತಿಯೊಂದಿಗೆ ಲೈಂಗಿಕಕ್ರಿಯೆಯಿಂದ ಗಂಡಿನ ಶಕ್ತಿ ಕಡಿಮೆಯಾಗುತ್ತದೆ ಎನ್ನುವುದು ತಪ್ಪು ನಂಬಿಕೆ ಎಂದು ತಿಳಿಸಲಾಯಿತು. ಕೆಲವು ದಿವಸಗಳಲ್ಲೇ ಆತ ಚೇತರಿಸಿಕೊಂಡ.

ಪಾಪದ ನೆರಳಲ್ಲಿ ಸಲಿಂಗಕಾಮಿ

"ಡಾ॥ ಮೂರ್ತಿಯವರಿಗೆ ನನ್ನ ನಮಸ್ಕಾರಗಳು, ನೀವು 'ಅಮೃತ' ಪತ್ರಿಕೆಯಲ್ಲಿ ಬರೆದ 'ನಮ್ಮ ಹುಟ್ಟು' ಲೇಖನವನ್ನು ಓದಿ ನಿಮಗೆ ಈ ಪತ್ರ ಬರೆಯುತ್ತಿದ್ದೇನೆ. ನನ್ನಂತಹ ಹತಭಾಗ್ಯನಿಗೆ ನೀವು ಖಂಡಿತ ಸಹಾಯ ಮಾಡುತ್ತೀರಿ, ಸೂಕ್ತ ಸಲಹೆ ನೀಡಿ, ಒಂದು ದಾರಿ ತೋರಿಸುತ್ತೀರಿ ಎಂಬ ಆಸೆಯಿಂದ ಬೇರೆ ಯಾರಿಗೂ ಹೇಳಿಕೊಳ್ಳಲಾಗದಂತಹ ನನ್ನ ಸಮಸ್ಯೆಯನ್ನು ನಿಮ್ಮೊಂದಿಗೆ ಹೇಳಿಕೊಳ್ಳಲು ಇಷ್ಟ ಪಡುತ್ತೇನೆ. ವೈದ್ಯರಾಗಿರುವ ನಿಮಗೆ ಬಿಡುವು ದೊರೆಯುವುದು ಅಪರೂಪ. ನನ್ನ ಕಥೆ ಸಾಕಷ್ಟು ದೊಡ್ಡದು. ಎಷ್ಟೇ ಸಂಕ್ಷಿಪ್ತವಾಗಿ ಬರೆದರೂ ಈ ಪತ್ರ ಸಾಕಷ್ಟು ದೊಡ್ಡದಾಗುತ್ತದೆ. ಅದನ್ನು ಓದುವ ತೊಂದರೆಯನ್ನು ನಿಮಗೆ ಕೊಡುತ್ತಿದ್ದೇನೆ, ದಯಮಾಡಿ ಕ್ಷಮಿಸಬೇಕು.

ತೊಳಲಾಟ, ಯಾತನೆ

ಹಲವು ವರ್ಷಗಳಿಂದ ಪ್ರತಿಕ್ಷಣ ನನ್ನ ಮನಸ್ಸನ್ನು ಕುಕ್ಕಿ ನೋಯಿಸುತ್ತಿರುವ ಕೆಲವು ವಿಷಯಗಳನ್ನು ನಾನು ಇದುವರೆಗೆ ಯಾರೊಂದಿಗೂ ಹೇಳಿಕೊಂಡಿಲ್ಲ. ಏಕೆಂದರೆ ಅವು ಹೇಳಿಕೊಳ್ಳುವಂತಹ ವಿಷಯಗಳಲ್ಲ. ಅವು ನನ್ನ ಮನಸ್ಸಿನಲ್ಲಿ ಮಾಯದ ಹುಣ್ಣುಗಳಾಗಿ ಬಿಟ್ಟಿವೆ. ಅವು ಕೊಡುವ ಹಿಂಸೆಯಿಂದ ದಿನದಿನಕ್ಕೆ ನಾನು ಕುಗ್ಗಿ ಹೋಗುತ್ತಿದ್ದೇನೆ. ನಾನೊಂದು ಹುಳು ಡಾಕ್ಟರೇ, ನನ್ನಂಥವರು ಏಕೆ ಬದುಕಿರಬೇಕು ? ಏನಾದರೂ ಮಾಡಿಕೊಂಡು ಪ್ರಾಣ ತೆಗೆದುಕೊಂಡು ಬಿಡಬೇಕು ಎನ್ನಿಸುತ್ತದೆ. ಹಲವಾರು ಬಾರಿ ಟಿಕ್–20 ಶೀಶೆಯನ್ನೂ ಕೊಂಡು ತಂದಿದ್ದುಂಟು. ಆದರೆ ಸಾಯುವ ಧೈರ್ಯವೂ ಇಲ್ಲದ ಹೇಡಿ ನಾನು.

ಮಾದರಿ ಮಗ

ನಾನೊಬ್ಬ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವನು, ತಂದೆ ರೆವಿನ್ಯೂ ಇಲಾಖೆಯಲ್ಲಿ ನೌಕರರು. ತಾಯಿ ಗೃಹಿಣಿ. ಇಬ್ಬರೂ ಸಂಪ್ರದಾಯಸ್ಥರು.

ತಿಥಿ, ವಾರ, ನಕ್ಷತ್ರಗಳನ್ನು ಎಣಿಸುತ್ತಾರೆ. ಪೂಜೆ ನೇಮ ವ್ರತ ಜಪತಪಗಳನ್ನು ಮಾಡುತ್ತಾ ಪುಣ್ಯವನ್ನು ಸಂಪಾದಿಸಿ ಗಂಟು ಕಟ್ಟುತ್ತಲೇ ಇದ್ದಾರೆ.

ಸಂಪ್ರದಾಯದ ಕಟ್ಟುನಿಟ್ಟಿನಲ್ಲಿ ಬೆಳೆದ ನಾನು ನನ್ನ ಪ್ರೌಢಶಾಲೆಯ ಶಿಕ್ಷಣ ಮುಗಿಯುವತನಕ ಅಪ್ಪ ಅಮ್ಮನ ಹೆಮ್ಮೆಯ ಹುಡುಗನಾಗಿದ್ದೆ. ಮಾದರಿ ಮಗನಾಗಿದ್ದೆ. ಶಿಸ್ತಿನ ಸಿಪಾಯಿ ಆಗಿದ್ದೆ. "ನೀತಿ ನಿಯಮಗಳ ಉಲ್ಲಂಘನೆ ಮಹಾಪಾಪ. ಆಸೆಗಳನ್ನು ಗೆಲ್ಲುವುದೇ ಧೀರನ ಲಕ್ಷಣ. ಶಾರೀರಕ ಬಯಕೆಗಳನ್ನು ಈಡೇರಿಸಿಕೊಳುವುದು ಹೀನಾಯ. ಇಂದ್ರಿಯಗಳು ಅನುಭವಿಸಲಿಚ್ಛಿಸುವ ವಿಕಾರ ವಸ್ತುಗಳಿಗೆ ಮನಸೋಲುವುದು ಮನುಷ್ಯನ ಅಧಃ ಪತನದ ಲಕ್ಷಣ. ಲೈಂಗಿಕ ಭಾವನೆಗಳಿಗೆ ಎಡಕೊಡುವುದು. ಪ್ರೋತ್ಸಾಹಿಸುವುದು, ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು ತುಚ್ಛವಾದ ಕೆಲಸ, ಮನುಷ್ಯನ ಉನ್ನತಿಗೆ ಅಡ್ಡ ಬರುವ ಕಂಟಕಗಳು" ಇತ್ಯಾದಿ ನಂಬಿಕೆ ನಿಲುವುಗಳನ್ನು ಬೆಳೆಸಿಕೊಳ್ಳಲು ನಾನು ಬೆಳೆದ ಆ ವಾತಾವರಣ ಪ್ರಚೋದಿಸಿತು. ಈ ನೈತಿಕ ನಂಬಿಕೆಗಳು ಮೂಟೆ ಹೊತ್ತುಕೊಂಡು ನಾನು ನನ್ನ ಹದಿಹರೆಯದ ವರ್ಷಗಳನ್ನು ಕಳೆದೆ.

ಈ ಅವಧಿಯಲ್ಲಿ ನನ್ನ ದೇಹ ಬೆಳೆಯಿತು. ಬಾಲ್ಯದ ಎಳಸುತನ ಹೋಗಿ ಯೌವನದ ಒರಟುತನ, ಕಸುವು ಕಾಲಿರಿಸಿತು. ಎತ್ತರವಾಗಿ ಬೆಳೆದೆ. ಪಾಠದಲ್ಲಿ ಮುಂದಿದ್ದಂತೆ ಆಟದಲ್ಲೂ ನನಗೆ ಆಸಕ್ತಿ. ಇದರ ಫಲವಾಗಿ ಮಾಂಸಖಂಡಗಳು ಹುರಿಗೊಂಡವು.

ಜೊತೆಗೆ ಲೈಂಗಿಕಾಸಕ್ತಿಯೂ ಬೆಳೆಯತೊಡಗಿತು. ಜನನಾಂಗವು ಆಗಾಗ್ಗೆ ಉದ್ರೇಕಗೊಳ್ಳತೊಡಗಿತು. ತಿಂಗಳಿಗೊಮ್ಮೆ ಅಥವಾ ಎರಡು ಸಾರಿ ವೀರ್ಯ ಸ್ಖಲನವೂ ಆಗತೊಡಗಿತು. ಜನನಾಂಗವನ್ನು ಅದು ಉದ್ರೇಕಗೊಂಡಿದ್ದಾಗ ಮುಟ್ಟಿಕೊಂಡರೆ ಹಿತ, ಸುಖವಿರುತ್ತಿತ್ತು. ಆದರೆ ಹಾಗೆ ಮಾಡುವುದು ತಪ್ಪು ಎಂಬ ಭಾವನೆ ನನ್ನ ಮನಸ್ಸಿಗೆ ಬಂದಿತು. 'ಇದು ಶರೀರದ ಬಯಕೆ ಅಲ್ಲವೆ. ಆದ್ದರಿಂದ ಅದಕ್ಕೆ ಮನಸೋಲುವುದು ಕೆಟ್ಟದ್ದು' ಎಂಬ ನಿರ್ಧಾರಕ್ಕೆ ಬಂದೆ. ಈ ಬಯಕೆಗೆ ಎಷ್ಟೇ ಕಡಿವಾಣ ಹಾಕದರೂ ಕೆಲವೊಮ್ಮೆ ಅದರಲ್ಲಿ ವಿಫಲನಾಗುತ್ತಿದ್ದೆ. ಹಸ್ತಮೈಥುನ ಮಾಡಿಕೊಂಡು ತೃಪ್ತಿಪಟ್ಟ ನಂತರ, ನನ್ನ ಬಗ್ಗೆ ನನಗೇ ಜುಗುಪ್ಸೆ ಬರುತ್ತಿತ್ತು. ಆಸೆಯನ್ನು ಗೆಲ್ಲಲಾರದ ಹೇಡಿ. ಗೊತ್ತಿದ್ದೂ ತಪ್ಪು ಮಾಡುವ ದುರ್ಬಲ ಎನಿಸುತ್ತಿತ್ತು. ಮತ್ತೊಮ್ಮೆ ಹೀಗೆ ಸೋಲಬಾರದೆಂದು ಪ್ರತಿಜ್ಞೆ ಮಾಡುತ್ತಿದ್ದೆ. ಆದರೆ ಅಂತಹ ಪ್ರತಿಜ್ಞೆಗಳು ಎಷ್ಟಾಗಿಹೋದವೋ.

ಪಿ.ಯು.ಸಿ. ಮುಗಿಸಿ ಕಾಲೇಜಿಗೆ ಸೇರಲು ಮೈಸೂರಿಗೆ ಹೋದೆ. ಅಲ್ಲಿ ಹಾಸ್ಟಲಿನಲ್ಲಿ ಇರತೊಡಗಿದಾಗ ಜೈಲಿಂದ ಬಿಡುಗಡೆ ಹೊಂದಿದ ಹಕ್ಕಿಯಂತಾದೆ.

ನನ್ನ ಪ್ರತಿಯೊಂದು ಚಲನವಲನವನ್ನೂ ಚಟುವಟಿಕೆಯನ್ನೂ ಪ್ರಶ್ನಿಸುವವರು ಈಗ ಯಾರೂ ಇರಲಿಲ್ಲ. ಆದರೆ ನನ್ನ ಮನಸ್ಸನ್ನು ಗಟ್ಟಿಯಾಗಿ ಹಿಡಿದಿದ್ದ ನೈತಿಕ ಮೌಲ್ಯಗಳು ನನ್ನನ್ನು ಹೆಚ್ಚು ದಾರಿ ತಪ್ಪಲು ಬಿಡಲಿಲ್ಲವಾದರೂ, ನಾನು ಕೆಲವು ಹುಚ್ಚು ಪ್ರಯೋಗಗಳನ್ನು ಮಾಡುವುದನ್ನು ತಡೆಯುವುದರಲ್ಲಿ ಯಶಸ್ವಿಯಾಗಲಿಲ್ಲ.

ಕಾಲೇಜು, ಹಾಸ್ಟೆಲಿನ ಜೀವನ ವೈಖರಿ ನಿಮಗೆ ಗೊತ್ತಲ್ಲ ಡಾಕ್ಟರೇ. ನಿಯಮಗಳನ್ನು ಮುರಿಯುವುದೇ ಒಂದು ಮೋಜು.

ಮೊದಮೊದಲು ಭಯಪಟ್ಟರೂ ಕ್ರಮೇಣ ಈ ಜೀವನ ಇರುವುದು ಮಜಾ ಮಾಡುವುದಕ್ಕೆ, ನೀತಿ ನಿಯಮಗಳ ಹಗ್ಗದಿಂದ ಬಂಧಿಸಿಕೊಂಡು ಕೊರಗುವುದಕ್ಕಲ್ಲ ಎಂಬ ಗುಂಪಿನ ಧ್ಯೇಯಕ್ಕೆ ನಾನು ಒಪ್ಪಿದ್ದೆ. ಆದರೆ ಗುಂಪಿನಲ್ಲಿಲ್ಲದೆ ಒಂಟಿಯಾಗಿದ್ದಾಗ ನನ್ನ ತಲೆಯನ್ನು ಹತ್ತಾರು ಹದ್ದುಗಳು ಕುಕ್ಕುತ್ತಿದ್ದುವು. ನೀನೊಬ್ಬ ನೀತಿಬಾಹಿರ, ದುರ್ಮಾರ್ಗಿ, ಶರೀರದ ಕಾಮನೆಗಳಿಗೆ ಸೋತ ಹೇಡಿ, ನೀನು ಉದ್ಧಾರವಾಗುವುದಿಲ್ಲ ಇತ್ಯಾದಿ. ನಾನು ನರಕಯಾತನೆಯನ್ನು ಅನುಭವಿಸುತ್ತಿದ್ದೆ. ನಾಳೆಯಿಂದ ನಾನು ಗುಂಪನ್ನು ಸೇರಬಾರದು. ಜಿತೇಂದ್ರಿಯನಾಗಬೇಕು ಎಂದು ನಿರ್ಧಾರ ಮಾಡಿ ಮಲಗುತ್ತಿದ್ದೆ. ಆದರೆ ಬೆಳಿಗ್ಗೆ ಎದ್ದು ರೆಡಿಯಾಗುವ ಹೊತ್ತಿಗೆ ಸ್ನೇಹಿತರು ಬಂದು, 'ಏನಪ್ಪಾ ಗುರು, ಈ ಹೊತ್ತು ಹೋಟೆಲ್ ಬ್ಲ್ಯೂಟಿನಲ್ಲಿ ಒಳ್ಳೇ ಪ್ರೋಗ್ರಾಂ ಇದೆ. ನಿನಗೆ ಟಿಕೆಟ್ ತೆಗೆದುಕೊಂಡಿದ್ದೇವೆ. ಎಂಟು ಘಂಟೆಗೆ ಸಿದ್ಧವಾಗಿರು' ಎಂದಾಗ ರಾತ್ರಿ ಮಾಡಿದ ನಿರ್ಧಾರ ಸೂತ್ರಕಿತ್ತ ಗಾಳಿಪಟವಾಗಿ ಬಿಡುತ್ತಿತ್ತು.

ಆ ದಿನ ತನ್ನ ಪಾಪದ ಕೊಡ ತುಂಬಿದ ದಿನ. ಆ ದಿನ ನಾನು ಅಧಃಪತನಕ್ಕೆ ಇಳಿದ ದಿನ. ನಾನು ಮತ್ತು ನನ್ನ ಸ್ನೇಹಿತ ಇಬ್ಬರೂ ಸೇರಿ ಬ್ಲೂಫಿಲ್ಮ್ ನೋಡಲು ಹೋದೆವು. ಅದರಲ್ಲಿ ಹೆಣ್ಣು ಗಂಡಿನ ದೈಹಿಕ ಸಂಬಂಧವನ್ನು ತೋರಿಸುವುದರ ಜೊತೆಗೆ ಎರಡು ಗಂಡುಗಳ ನಡುವೆ ನಡೆಯುವ ಸಲಿಂಗ ಕಾಮವನ್ನು ವಿವರಿಸಲಾಗಿತ್ತು. ಅದನ್ನು ನೋಡಿ ವಾಪಸಾಗುತ್ತಿದ್ದೆವು. ನನ್ನಂತೆ ನನ್ನ ಸ್ನೇಹಿತನೂ ಉದ್ರೇಕಗೊಂಡಿದ್ದ. ಆತ ನನ್ನ ಕೈಹಿಡಿದು ನನ್ನ ಕಿವಿಯಲ್ಲಿ 'ನಾವೂ ಆ ರೀತಿ ಮಾಡೋಣವೇ' ಎಂದ. 'ಊಂ' ಎಂದೆ. ಅಲ್ಲಿಂದ ಒಂದು ವರ್ಷದವರೆಗೆ ನನ್ನ ಮತ್ತು ಅವನ ನಡುವೆ ಈ ಅನೈತಿಕ ಸಂಬಂಧ ತಿಂಗಳಿಗೊಮ್ಮೆ ಅಥವಾ ಎರಡು ಸಾರಿ ಮುಂದುವರಿಯಿತು. ಕೋರ್ಸ್ ಮುಗಿಯಿತು, ಈ ಸಂಬಂಧಕ್ಕೂ ಕೊನೆಯಾಯಿತು.

ಪಾಪದ ನೆರಳಲ್ಲಿ

ಆಮೇಲೆ ನನಗೆ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತು. ಒಳ್ಳೆಯ ನೌಕರಿ, ಒಳ್ಳೆಯ ಸಂಬಳ, ಬೇರೆಯವರ ದೃಷ್ಟಿಯಲ್ಲಿ ನಾನು ಸಂತೋಷದಿಂದ ಇದ್ದೇನೆ. ನನಗೇನೂ ಕಡಿಮೆ ಇಲ್ಲ. ಆದರೆ ನಾನು ಅನುಭವಿಸುತ್ತಿರುವ ನರಕ ಯಾತನೆಯ ಅರಿವು ಯಾರಿಗೂ ಇಲ್ಲ. ಕೆಲಸ ಮುಗಿಸಿ ಹೊರ ಬಂದ ಮೇಲೆ ಪ್ರತಿಯೊಂದು ಕ್ಷಣದಲ್ಲೂ, ನಾನು ಮಾಡಿದ ಅನೈತಿಕ ಚಟುವಟಿಕೆಗಳು ನನ್ನನ್ನು ಕಾಡಿ ಹಿಂಸಿಸುತ್ತಿವೆ. ನೆಮ್ಮದಿ ಎನ್ನುವುದು ಗಗನ ಕುಸುಮವಾಗಿದೆ. ಹಿಂದಿನದನ್ನು ಮರೆಯಲು ಪ್ರಯತ್ನಪಟ್ಟಷ್ಟೂ ಅದು ಮತ್ತಷ್ಟೂ ಕೆದರಿ ನನ್ನನ್ನು ಚುಚ್ಚಿ ನೋಯಿಸುತ್ತಿದೆ. ಹಿಂದಿನ ಎಲ್ಲ ದುರಭ್ಯಾಸಗಳನ್ನೂ ಬಿಟ್ಟಿದ್ದರೂ, ಹಿಂದೆ ಅದಕ್ಕೆ ಸೋತ ನನ್ನ ದೌರ್ಬಲ್ಯದ ಬೇತಾಳ ನನ್ನ ಬೆನ್ನು ಬಿದ್ದಿದೆ.

ಇತ್ತೀಚೆಗೆ ನನ್ನ ದೂರದ ಸಂಬಂಧಿಯೊಬ್ಬರ ಮಗಳು ಲಲಿತ ಎನ್ನುವ ಹುಡುಗಿಯನ್ನು ನನ್ನ ತಂದೆ ತಾಯಿಗಳು ಆಯ್ಕೆ ಮಾಡಿದ್ದಾರೆ. ಹುಡುಗಿ ಪದವೀಧರೆ, ಲಕ್ಷಣವಾಗಿದ್ದಾಳೆ. ನಾನೂ ಅವಳನ್ನು ನೋಡಿ ಮಾತಾಡಿದ್ದೇನೆ. ಅವಳ ಕೈ ಹಿಡಿಯುವುದಾದರೆ ನಾನೇ ಪುಣ್ಯವಂತ ಎಂದುಕೊಂಡಿದ್ದೇನೆ. ಶಾಸ್ತ್ರೋಕ್ತ ವಾಗಿ ನಿಶ್ಚಿತಾರ್ಥವಾಗದಿದ್ದರೂ, ಎರಡು ಮನೆಯವರು ಒಪ್ಪಿರುವುದರಿಂದ ಆಗಾಗ್ಗೆ ಭೇಟಿಯಾಗುತ್ತೇವೆ. ಪತ್ರ ಬರೆಯುತ್ತೇವೆ. ಆಕೆಯೊಂದಿಗೆ ಕಳೆದ ಕ್ಷಣಗಳು ನನ್ನ ಪಾಲಿಗೆ ವರ್ಣಿಸಲಾಗದ ಸಂತೋಷ, ನೆಮ್ಮದಿಯನ್ನು ಕೊಡುತ್ತವೆ. ಆಕೆಯ ಸಾನ್ನಿಧ್ಯದಲ್ಲಿ ನೆನಪಿನಲ್ಲಿ ನನ್ನ ಬದುಕಿಗೆ ಹೊಸ ಅರ್ಥವನ್ನು ಕಾಣುತ್ತಿದ್ದೇನೆ. ಆದರೆ ನನ್ನ ಪಾಪ ಕೃತ್ಯಗಳಿಂದ ಅವಳನ್ನು ಪಡೆಯುವ ಯೋಗ್ಯತೆ ನನಗಿಲ್ಲ ಎನಿಸು ತ್ತದೆ. ನಾನು ಮಾಡಿದ ಅನೈತಿಕ ಕೆಲಸಗಳು ಆಕೆಗೆ ಗೊತ್ತಾದರೆ, ನನ್ನ ಬಗ್ಗೆ ಆಕೆಯ ಮನಸ್ಸಿನೊಳಗೆ ಎಂತಹ ಅಭಿಪ್ರಾಯ, ಪ್ರತಿಕ್ರಿಯೆ ಉಂಟಾಗುತ್ತದೆ ಎಂಬುದನ್ನು ನೆನೆಸಿಕೊಂಡರೆ ನನ್ನ ಹೃದಯಕ್ಕೆ ಕೊಳ್ಳಿ ಇಟ್ಟಂತಾಗುತ್ತದೆ. ಇದೆಲ್ಲಾ ಆಕೆಗೆ ಗೊತ್ತಾಗುವ ಸಂಭವ ಇಲ್ಲದಿದ್ದರೂ, ಈ ಕಲುಷಿತ ಮೈ ಮನಸ್ಸುಗಳನ್ನು ಆಕೆಗೆ ಅರ್ಪಿಸುವುದು ಹೇಗೆ ? ಆಕೆ ನನಗೆ ಬೇಕು, ಅವಳಿಂದ ನನಗೆ ಹೊಸ ಬಾಳು. ಆದರೆ ನಾನು ಅವಳಿಗೆ ತಕ್ಕವನಲ್ಲ. ಈ ದ್ವಂದ್ವದಲ್ಲಿ ನಾನು ನಜ್ಜುಗುಜ್ಜಾಗಿದ್ದೇನೆ. ಏನು ಮಾಡಬೇಕೆಂದು ತೋರುತ್ತಿಲ್ಲ.

ಈ ನನ್ನ ಸಮಸ್ಯೆಯನ್ನು ಯಾರೊಂದಿಗೆ ಹೇಳಿ ಕೊಳ್ಳುವುದು ಎಂದು ಎಂದು ತಿಳಿಯದೆ ನಿಮಗೆ ಈ ಸುದೀರ್ಘ ಪತ್ರ ಬರೆದು ತೊಂದರೆ ಕೊಡುತ್ತಿದ್ದೇನೆ. ನಾನು ನಿಮ್ಮನ್ನು ಎಂದೂ ನೋಡಿಲ್ಲ. ಆದರೆ ನಿಮ್ಮ ಲೇಖನಗಳು, ಪುಸ್ತಕ ಗಳನ್ನು ಓದಿದ್ದೇನೆ. ನಿಮ್ಮಿಂದ ನನಗೆ ದಾರಿ ಕಾಣುತ್ತದೆ ; ನನ್ನ ಜೀವನದ ಈ

ಟ್ಟದಲ್ಲಿ ಸರಿಯಾದ ಮಾರ್ಗದರ್ಶನ ದೊರೆಯುತ್ತದೆ ಎಂದು ನಂಬಿ ಈ ಪತ್ರ
ರೆದಿದ್ದೇನೆ. ನಿಮ್ಮ ಉತ್ತರಕ್ಕಾಗಿ ಕಾಯುತ್ತಿರುವ,

ತಮ್ಮ ವಿಶ್ವಾಸಿ,
ಪ್ರಸನ್ನ ಕುಮಾರ್

o o o o

ೀ ಪ್ರಸನ್ನ ಕುಮಾರ್

ನಿನ್ನ ಪತ್ರ ತಲುಪಿತು. ನಿನ್ನ ಸಮಸ್ಯೆಯ ಸ್ವರೂಪ ಸಾಕಷ್ಟು ಅರ್ಥ ಾಯಿತು. ನಿನ್ನ ಕಷ್ಟ, ನೋವು, ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ಕಷ್ಟ ನೋವುಗಳೆಲ್ಲಾ ತಾತ್ಕಾಲಿಕ. ಅವಕ್ಕೆ ಸೂಕ್ತ ಪರಿಹಾರ ಸಿಕ್ಕೇ ಸಿಗುತ್ತದೆ. ವು ನಿನ್ನ ಸಮಸ್ಯೆಗೆ ಉತ್ತರವಾಗಬೇಕಾದ್ದಿಲ್ಲ. ಸಂಪ್ರದಾಯಸ್ಥರ ಕುಟುಂಬದಲ್ಲಿ ್ಟಿನಿಂದ ಬೆಳೆದು, ಧಾರ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡ ೀನು ಕೆಲವು ತಪ್ಪು ಚಟುವಟಿಕೆಗಳನ್ನು ಮಾಡಿ ತಪ್ಪಿತಸ್ಥ ಮನೋಭಾವನೆ ುನ್ನು ಬೆಳೆಸಿಕೊಂಡು ಹಿಂಸೆ ಪಡುತ್ತಿದ್ದೀಯೆ.

ನಿನ್ನನ್ನು ಸದ್ಯಕ್ಕೆ ಬಹಳವಾಗಿ ಬಾಧಿಸುತ್ತಿರುವ ಮುಖ್ಯ ಸಮಸ್ಯೆ–ನಿನ್ನ ುತ್ತು ನಿನ್ನ ಸ್ನೇಹಿತನ ನಡುವೆ ಸ್ವಲ್ಪ ಕಾಲ ನಡೆದ ದೈಹಿಕ ಸಂಬಂಧ. ಅದು ನೈತಿಕ, ಪಾಪಕೃತ್ಯ ಎಂದು ತಿಳಿದ ನೀನು ಅಂತಹ ಕೃತ್ಯ ಎಸಗಿದ್ದಕ್ಕಾಗಿ ನೋವು ಡುತ್ತಿದ್ದೀಯೆ. ನಿನ್ನ ಬಗ್ಗೆ ನೀನೇ ಅಸಹ್ಯ ಪಡುತ್ತೀದ್ದೀಯೆ, ಇದು ಸಹಜ.

ಏಕೆಂದರೆ ಪ್ರಪಂಚದಾದ್ಯಂತ ಬಹುತೇಕ ಸಮಾಜಗಳಲ್ಲಿ ಸಲಿಂಗಕಾಮವನ್ನು ಹಳ ಜನ ಒಪ್ಪುವುದಿಲ್ಲ. ಅದೊಂದು ಕೆಟ್ಟ, ಅನಿಷ್ಟ ನಡವಳಿಕೆ ಎಂದು ನಂಬಿ, ದನ್ನು ಮಾಡಬಾರದು ಎಂಬ ನಿಯಮ ಮಾಡಿಕೊಂಡಿದ್ದಾರೆ. ಸಲಿಂಗಕಾಮ ಂಬಂಧದಲ್ಲಿ ತೊಡಗುವವರನ್ನು ತುಚ್ಛೀಕರಿಸಲಾಗುತ್ತದೆಯಲ್ಲದೆ ಕಾನೂನು ಪ್ರಕಾರ ಕ್ಷಿಸಲಾಗುತ್ತದೆ. ಗಂಡು ಮತ್ತು ಹೆಣ್ಣಿನ ನಡುವೆ ಕಾಮ, ಪ್ರಕೃತಿ ಸಹಜ ದದ್ದು. ಆದರೆ ಗಂಡು ಗಂಡಿನ ನಡುವೆ, ಹೆಣ್ಣು–ಹೆಣ್ಣಿನ ನಡುವೆ ಈ ಲೈಂಗಿಕ ಕರ್ಷಣೆ ಮತ್ತು ಸಂಬಂಧ ಅಸಹಜ. ಕೇವಲ ಸ್ಪರ್ಶಸುಖ, ಲೈಂಗಿಕ ರಂಜನೆ ಗಿ ನಡೆಸುವ ಸಲಿಂಗಕಾಮ, ಪ್ರಕೃತಿಯ ನಿಯಮಕ್ಕೆ ಹೊಂದಿಕೊಳ್ಳುವುದಿಲ್ಲ. ಚ್ಚು ಜನ ಅದನ್ನು ಒಪ್ಪದಿರುವುದರಿಂದ ಅದು ಅಪೇಕ್ಷಣೀಯವಲ್ಲವೆಂಬುದು ಂದು ವೈಜ್ಞಾನಿಕ ನಿಲುವು.

ಆದರೆ ಅಮೆರಿಕೆಯಂತಹ ಪಾಶ್ಚಿಮಾತ್ಯ ಸಮಾಜದಲ್ಲಿ ಸಲಿಂಗಕಾಮದ ಬಗ್ಗೆ ಜನರ ಧೋರಣೆ ಬದಲಾಗುತ್ತಿದೆ. ಬೇರೆಯವರಿಗೆ ತೊಂದರೆ ಕೊಡದೆ ಇಬ್ಬರು ವ್ಯಕ್ತಿಗಳು ಪರಸ್ಪರ ಒಪ್ಪಿಗೆಯಿಂದ ಸಲಿಂಗಕಾಮದಲ್ಲಿ ತೊಡಗಿ ಸಂತೋಷ ಪಡುವುದಾದರೆ ಸಮಾಜ ಅದಕ್ಕೆ ಅಡ್ಡಿ ಮಾಡಬೇಕೇಕೆ? ಈ ಬಗೆಯ ಸಂಬಂಧದಿಂದ ಸಂತಾನೋತ್ಪತ್ತಿ ಸಾಧ್ಯವಿಲ್ಲವೆಂದು ಗೊತ್ತಿದ್ದು, ಬರೀ ಮನರಂಜನೆ ಮತ್ತು ಬಾಂಧವ್ಯಕೋಸ್ಕರ ಅವರು ಇಷ್ಟಪಟ್ಟರೆ ಅದರಲ್ಲಿ ತಪ್ಪೇನಿದೆ ಎನ್ನುವ ತರ್ಕಕ್ಕೆ ಪುಷ್ಟಿದೊರೆತು ಅಮೆರಿಕೆಯ ಕೆಲವು ಸಂಸ್ಥಾನಗಳಲ್ಲಿ ಕಾನೂನು ಪ್ರಕಾರವೇ ಸಲಿಂಗಕಾಮಿಗಳು 'ಮದುವೆ' ಯಾಗುತ್ತಿದ್ದಾರೆ. ಇಬ್ಬರು ಗಂಡಸರು ಅಥವಾ ಇಬ್ಬರು ಹೆಂಗಸರು ಜೊತೆಯಾಗಿ ಬಾಳುತ್ತಿದ್ದಾರೆ.

ಸಲಿಂಗಕಾಮಿಗಳಲ್ಲಿ ಮೂರು ಬಗೆಯ ಜನರಿದ್ದಾರೆ. ಒಂದು ವಿಧ: ಇವರಿಗೆ ಸಲಿಂಗಕಾಮವೇ ಪ್ರಿಯ. ಅವಕಾಶ, ಅನುಕೂಲವಿದ್ದರೂ ಇತರ ಲಿಂಗದವರೊಂದಿಗೆ ಲೈಂಗಿಕ ಸಂಪರ್ಕ ಮಾಡಬಯಸುವುದಿಲ್ಲ. ಸಲಿಂಗಕಾಮವನ್ನು ಬಿಡಲು ಒಪ್ಪುವುದಿಲ್ಲ. ಏಕೆಂದರೆ ಅವರ ಲೈಂಗಿಕ ಸುಖ, ತೃಪ್ತಿಗೆ ಅವರಿಗೆ ಇರುವುದು ಇದೊಂದೇ ಮಾರ್ಗ. ಎರಡನೇ ವಿಧ: ಇವರಿಗೆ ಸಲಿಂಗಕಾಮದಲ್ಲಿ ಅಭಿರುಚಿ ಇರುವಂತೆ, ಇತರ ಲಿಂಗದವರೊಂದಿಗೂ ಲೈಂಗಿಕ ಸಂಪರ್ಕ ಮಾಡುತ್ತಾರೆ. ಎರಡರಿಂದಲೂ ಸಂತೋಷ ಪಡುತ್ತಾರೆ. ಮದುವೆಯಾಗಿ ಮಕ್ಕಳನ್ನು ಪಡೆದು ಸಂಸಾರ ಮಾಡುತ್ತಾರೆ. ಅವಕಾಶ ಸಿಕ್ಕಾಗಲೆಲ್ಲಾ ಸಲಿಂಗಕಾಮದಲ್ಲಿ ತೊಡಗುತ್ತಾರೆ. ಮೂರನೇ ವಿಧ: ಇವರಿಗೆ ಮೂಲತಃ ಸಲಿಂಗಕಾಮದಲ್ಲಿ ಆಸಕ್ತಿ ಇರುವುದಿಲ್ಲ. ಆದರೆ ಸನ್ನಿವೇಶ-ಸಂದರ್ಭಕ್ಕೆ ಸೋತು ಅಥವಾ ಲೈಂಗಿಕ ಬಯಕೆ ಮೂಡಿದಾಗ ಸಂಗಾತಿ ಇಲ್ಲದಿದ್ದಾಗ, ಅನಿವಾರ್ಯವಾಗಿ ಸಲಿಂಗಕಾಮದಲ್ಲಿ ತೊಡಗುತ್ತಾರೆ. ಮದುವೆಯಾಗಿ ಲೈಂಗಿಕ ಚಟುವಟಿಕೆಗೆ ಸಂಗಾತಿ ದೊರೆಯುತ್ತಿದ್ದಂತೆ, ಅವರಿಗೆ ಸಲಿಂಗ ಕಾಮದಲ್ಲಿ ಆಸಕ್ತಿ ಇಲ್ಲವಾಗುತ್ತದೆ. ಇದು ಒಂಟಿಯಾಗಿ ಜೀವಿಸುವವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹಾಸ್ಟೆಲ್ ಅಥವಾ ವಸತಿ ಗೃಹದ ಜೀವನ ಇದಕ್ಕೆ ಕುಮ್ಮಕ್ಕು ಕೊಡುತ್ತದೆ.

ನಿನ್ನ ಅನುಭವ, ಅಭಿಪ್ರಾಯ ಪ್ರತಿಕ್ರಿಯೆಗಳನ್ನು ಗಮನಿಸಿದಾಗ ನೀನು ಈ ಮೂರನೇ ಗುಂಪಿಗೆ ಸೇರಿದವನಂತೆ ಕಾಣುತ್ತದೆ. ಹದಿವಯಸ್ಸಿನಲ್ಲಿ ಲೈಂಗಿಕ ಆಸಕ್ತಿ ಮೂಡಿ, ಲೈಂಗಿಕ ಕ್ರಿಯೆಗೆ ನಮ್ಮ ಶರೀರ ಸಜ್ಜಾಗುತ್ತದೆ. ಇದಕ್ಕೆ ನಮ್ಮ ಶರೀರದಲ್ಲಿರುವ ಲೈಂಗಿಕ ಗ್ರಂಥಿಗಳು, ಈ ಹಂತದಲ್ಲಿ ಚುರುಕಾಗಿ ಲೈಂಗಿಕ ಚೋದನಿಕೆಗಳನ್ನು ಸ್ರವಿಸುವುದೇ ಕಾರಣ. ಲೈಂಗಿಕ ಭಾವನೆ, ಆಸಕ್ತಿಯ ಸಹಜ ಪ್ರಕಟಣೆಗೆ ನಮ್ಮ ಸಮಾಜದಲ್ಲಿ ಅವಕಾಶ, ಮಾರ್ಗಗಳು ಬಹಳ ಕಡಿಮೆ

ರುವುದರಿಂದ ನಿನ್ನಂತಹ ಯುವಕರು ಲೈಂಗಿಕ ದುಸ್ಸಾಹಸಗಳಲ್ಲಿ ತೊಡಗುತ್ತಾರೆ. ಡುಗಿಯರನ್ನು ಚುಡಾಯಿಸಿ ಸಂತೋಷಪಡುವುದು, ಉತ್ಪ್ರೇಕ್ಷಿತವಾದ ಲೈಂಗಿಕ ೋಕುಗಳನ್ನು ಹೇಳುವುದು, ಹಸ್ತ ಮೈಥುನ ಮಾಡಿಕೊಂಡು ಸಂಭೋಗ ಮಾಡಿ ಂತೆ ಕಲ್ಪನೆ ಮಾಡಿಕೊಳ್ಳುವುದು. ಲೈಂಗಿಕ ಕ್ರಿಯೆ ನಡೆಸಿದಂತೆ ಹಗಲುಗನಸು ಣುವುದು, ಅರೆನಗ್ನ ನೃತ್ಯಗಳಿಗೆ ಹೋಗುವುದು, ಕದ್ದು ಮುಚ್ಚಿ ಲೈಂಗಿಕ ಪರ್ಕ ಮಾಡುವುದು, ವೇಶ್ಯಾಗೃಹಗಳಿಗೆ ಹೋಗುವುದು, ಸಲಿಂಗಕಾಮದಲ್ಲಿ ಡಗುವುದು ಇತ್ಯಾದಿ. ಇದರ ಜೊತೆಗೆ ಇನ್ನಿತರ ಕಾರಣಗಳಿಂದ ಬಲಾತ್ಕಾರ ಭೋಗ ಇತ್ಯಾದಿ ಲೈಂಗಿಕ ಅಪರಾಧ ಮಾಡುವುದನ್ನೂ ಕಾಣುತ್ತೇವೆ. ಈ ಗೆಯ ಲೈಂಗಿಕ ದುಸ್ಸಾಹಸಗಳಿಂದ ಅವರು ತಾವು ಅನೇಕ ಬಗೆಯ ಅಪಾಯ, ಷ್ಟ-ನಷ್ಟಗಳಿಗೆ ತುತ್ತಾಗುವುದಲ್ಲದೆ ಇತರರನ್ನೂ ಕಷ್ಟಕ್ಕೆ ಈಡುಮಾಡುತ್ತಾರೆ.

ಚ್ಚರಿಕೆ

ನಿನ್ನ ಜೀವನದಲ್ಲಿ ನಡೆದುಹೋದ ಸಲಿಂಗಕಾಮದ ಘಟನೆಯ ಬಗ್ಗೆ ನೀನು ಂತಿಸುತ್ತಾ, ದುಃಖಿಸುವುದರಲ್ಲಿ ಅರ್ಥವಿಲ್ಲ. ಸರಿತಪ್ಪುಗಳ, ಪಾಪಪುಣ್ಯಗಳ ಕ್ಕ ಹಾಕುವುದರಿಂದ ಪ್ರಯೋಜನವಿಲ್ಲ. ಆಸೆಯನ್ನು ಹತೋಟಿಯಲ್ಲಿಟ್ಟು ಳ್ಳಲಾಗದ ದುರ್ಬಲ ಎಂದು ಹಂಗಿಸಿಕೊಳ್ಳುವುದರಿಂದ ಲಾಭವಿಲ್ಲ. ಆದರ ಗ್ಗೆ ತೀವ್ರವಾದ ಭಾವನೆಗಳನ್ನು ತೋರಿಸುವುದನ್ನು ಬಿಟ್ಟು ಬಿಡು. ಸಹಜ ಲ್ಲದ್ದನ್ನು, ಸಮಾಜ ಒಪ್ಪದ್ದನ್ನು ನಾವು ಮಾಡಿದಾಗ ಅದನ್ನು ಅರ್ಥಮಾಡಿ ಂಡು, ಮುಂದೆ ಅದೇ ಬಗೆಯ ನಡವಳಿಕೆ ನಮ್ಮಿಂದ ಜರುಗದಂತೆ ಎಚ್ಚರ ಹಿಸುವುದೇ ಜಾಣತನ. ಆದ್ದರಿಂದ ಇನ್ನು ನಿನ್ನ ಮುಂದಿನ ಜೀವನದ ಬಗ್ಗೆ ಲೋಚಿಸು. ನೀನು ಅದೃಷ್ಟವಂತ. ನಿನ್ನನ್ನು ಪ್ರೀತಿಸುವ ಸಂಗಾತಿಯೊಬ್ಬಳು ಗಲೇ ನಿನಗೆ ದೊರಕಿದ್ದಾಳೆ. ಯಾವ ಅನುಮಾನ ಸಂಕೋಚ, ನಿರ್ಬಂಧಗಳಿಲ್ಲದೆ ಕೆಯನ್ನು ಒಪ್ಪಿಕೋ. ಸಂತೋಷದಿಂದ ಆಕೆಯನ್ನು ಸ್ವೀಕರಿಸು. ಸಂತೋಷ ದ ಹೊಸ ಜೀವನ ಮಾಡಲು ನಿರ್ಧಾರ ಮಾಡು. ನಿನಗೆ ಶುಭವಾಗಲಿ. ನ್ನೇನಾದರೂ ಕೇಳಬೇಕೆನಿಸಿದರೆ, ಅನುಮಾನಗಳಿದ್ದರೆ ಕೇಳು. ಅಥವಾ ಆಸ್ಪತ್ರೆ ಲ್ಲಿ ಬಂದು ನನ್ನನ್ನು ಕಾಣು.

ನ್ಯವಾದಗಳು **ಡಾ॥ ಮೂರ್ತಿ**

"ನಮಸ್ಕಾರ ಸಾರ್. ಒಳಗೆ ಬರಬಹುದೇ ?"

ಡಾ॥ ಮೂರ್ತಿ ತಲೆ ಎತ್ತಿ ನೋಡಿದರು. ಒಬ್ಬ ಯುವಕ ಮತ್ತು ಯುವತಿ

ನಿಂತಿರುವುದನ್ನು ಕಂಡು "ಬನ್ನಿ ಕುಳಿತುಕೊಳ್ಳಿ. ನನ್ನಿಂದೇನಾಗಬೇಕು" ಎಂದರು. ಬಂದವರು ಕುಳಿತುಕೊಂಡರು. ಈ ಮೊದಲು ನಾನು ಇವರನ್ನು ನೋಡಿಲ್ಲ. ಬಹುಶಃ ಈಹೊತ್ತೇ ಹೊಸದಾಗಿ ಬಂದಿರಬಹುದು ಎಂದುಕೊಂಡರು ಡಾ॥ ಮೂರ್ತಿ.

"ಸರ್, ನಾನು ಪ್ರಸನ್ನಕುಮಾರ ಅಂತ. ನಿಮಗೆ ನೆನಪಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆರು ತಿಂಗಳ ಹಿಂದೆ ನಾನು ನಿಮಗೆ ಒಂದು ಪತ್ರ ಬರೆದಿದ್ದೆ. ನನ್ನ ಕೆಲವು ವೈಯಕ್ತಿಕ ಸಮಸ್ಯೆಗಳಿಗೆ ನಿಮ್ಮ ಸಲಹೆ, ಮಾರ್ಗದರ್ಶನವನ್ನು ಕೋರಿದ್ದೆ. ಅದಕ್ಕೆ ನೀವು ತಕ್ಷಣ ಉತ್ತರವನ್ನೂ ಬರೆದಿದ್ದಿರಿ..."

"ಒಂದು ನಿಮಿಷ ತಾಳಿ" ಎಂದು ಡಾ॥ ಮೂರ್ತಿ ಪತ್ರ ವ್ಯವಹಾರದ ಫೈಲ್ ತೆಗೆದು ಹಾಳೆಗಳನ್ನು ತಿರುವಿ ಹಾಕಿದರು "ಹಾಂ... ಹೌದು, ನಿಮ್ಮ ಪತ್ರ ಇಲ್ಲಿದೆ. ಹೇಗಿದ್ದೀರಿ ? ಏನು ವಿಷಯ ? ಈಕೆ ಯಾರು ?" ಎಂದು ವಿಚಾರಿಸಿದರು.

"ಸರ್, ಈಕೆ ನನ್ನ ಹೆಂಡತಿ ಲಲಿತ..."

"ಓಹೋ ನೀವು ಮೆಚ್ಚಿದಾಕೆಯನ್ನೇ ಮದುವೆಯಾಗಿದ್ದೀರಿ, ಲಕ್ಕಿ ಫೆಲೋ. ಕಂಗ್ರಾಚುಲೇಶನ್ಸ್."

"ಥ್ಯಾಂಕ್ಯೂ ಸರ್, ನಾವು ಮದುವೆಯಾಗಿ ಸಂತೋಷವಾಗಿರಲು ನೀವು ನನಗಿತ್ತ ಬುದ್ಧಿವಾದ, ಪ್ರೋತ್ಸಾಹಗಳೇ ಕಾರಣ. ಇಲ್ಲದಿದ್ದರೆ ನಾನು ಬಹುಶಃ ಜೀವಂತವಾಗಿರುತ್ತಿರಲಿಲ್ಲ. ನಿಮಗೆ ಹೇಗೆ ನನ್ನ ಧನ್ಯವಾದಗಳನ್ನು ಹೇಳಬೇಕೆಂದು ನನಗೆ ತೋಚುತ್ತಿಲ್ಲ."

ಇಲ್ಲಿಗೆ ಬಂದು 'ನಾನು ಚೆನ್ನಾಗಿದ್ದೇನೆ, ಸಂತೋಷವಾಗಿದ್ದೇನೆ' ಎಂದು ಹೇಳಿದಿರಲ್ಲಾ. ಅದಕ್ಕಿಂತ ಬೇರೆ ಬಗೆಯ ಧನ್ಯವಾದಗಳು ಅನವಶ್ಯಕ ಪ್ರಸನ್ನ ಕುಮಾರ್"

"ಇವರ ಬಿಚ್ಚುಮನಸ್ಸಿಗೆ ಮೆಚ್ಚಿ ನಾನು ಮದುವೆಗೆ ಮನಃಪೂರ್ವಕವಾಗಿ ಒಪ್ಪಿಗೆಕೊಟ್ಟೆ. ಈಗ ನಾವು ಬಹಳ ಸಂತೋಷವಾಗಿದ್ದೇವೆ. ಇವರಿಗೆ ಹೊಸ ಜೀವನ ಕೊಟ್ಟ ನಿಮಗೆ ಎಷ್ಟು ವಂದಿಸಿದರೂ ಸಾಲದು ಸಾರ್" ಲಲಿತ ನುಡಿದಳು. ಅವಳ ಕಣ್ಣುಗಳಲ್ಲಿ ಕೃತಜ್ಞತೆ ತುಂಬಿತ್ತು.

"ನಿಮ್ಮ ಹೊಸ ಜೀವನದ ಸಂತೋಷ, ಸಾಫಲ್ಯಕ್ಕೆ ನೀವಿಬ್ಬರೂ ಕಾರಣ. ಒಳ್ಳೆಯ ಮನಸ್ಸಿನಿಂದ ಆಲೋಚಿಸಿ ಸರಿಯಾದ ನಿರ್ಧಾರ ಮಾಡಿದಿರಿ, ಸಫಲರಾದಿರಿ. ನಿಮಗೆ ಒಳ್ಳೆಯದಾಗಲಿ" ಎಂದರು ಡಾ॥ ಮೂರ್ತಿ.

ಹೆಂಡತಿ ಗರ್ಭಿಣಿಯಾದರೆ ಗಂಡನಿಗೆ ಭಯ

ಸಾಲುಸಾಲಾಗಿ ಗರ್ಭಪಾತ. ಒಂದಲ್ಲ. ಎರಡಲ್ಲ. ಒಟ್ಟು ಆರು ಬಾರಿ ಗರ್ಭಧಾರಣೆ ಮಾಡಿದರೂ, ಒಂದು ಗರ್ಭವೂ ಪೂರ್ಣವಾಗಿ ಬೆಳೆಯದೆ, ಸಾವಿತ್ರಿಗೆ ತಾಯಿಯಾಗುವ ಕನಸು ಇದುವರೆಗೆ ಕನಸಾಗಿಯೆ ಉಳಿದಿದೆ.

ತನ್ನ ದುರದೃಷ್ಟವನ್ನು ನೆನೆದು ಪರಿತಪಿಸುತ್ತಾಳೆ. ನಿಟ್ಟುಸಿರು ಬಿಡುತ್ತಾಳೆ. ಕೈತುಂಬ ಸಂಪಾದಿಸುವ ಗಂಡ, ಅರಮನೆಯಂತಹ ಮನೆ, ಬಯಸಿದ ಭೋಗ ವಸ್ತುಗಳು. ಸ್ಥಾನಮಾನ ಎಲ್ಲ ಇದ್ದರೂ ಅವಳಿಗೆ ಸುಖವಿಲ್ಲ, ತೃಪ್ತಿ ಇಲ್ಲ.

ನಿರ್ಲಿಪ್ತ ಪತಿ

ತನಗೆ ಒಂದು ಮಗುವಾಗಿದ್ದರೆ ಚೆನ್ನಾಗಿತ್ತು ಎಂದು ಸಾವಿತ್ರಿ ಹೇಳಿಕೊಂಡರೂ ಆಕೆಗೆ ನಿಜವಾದ ಚಿಂತೆ ಇರುವುದು ಗಂಡನ ಬಗ್ಗೆಯೇ. ಗಂಡ ತನ್ನ ಬಗ್ಗೆ ಸಾಕಷ್ಟು ಆಸಕ್ತಿ ವಹಿಸುತ್ತಿಲ್ಲ. ತನ್ನ ಜೊತೆ ಕಾಲ ಕಳೆಯುವುದಿಲ್ಲ· ತನ್ನನ್ನು ಎಲ್ಲಿಗೂ ಜೊತೆಯಲ್ಲಿ ಕರೆದುಕೊಂಡು ಹೋಗುವುದಿಲ್ಲ, ಆತನಿಗೆ ತನ್ನ ವ್ಯಾಪಾರ ವಾಯಿತು, ವ್ಯವಹಾರವಾಯಿತು, ಇನ್ನೇನೂ ಬೇಕಾಗಿಲ್ಲ. ಆತ ನಿರ್ದಿಷ್ಟ ವೇಳೆಗೆ ಮನೆಗೆ ಎಂದೂ ಬಂದವನಲ್ಲ. ಸಂಜೆಯ ಆರು ಘಂಟೆಯ ನಂತರ ಆತ ಫೋನ್ ಮಾಡಿದರೆ, "ಸಾವಿತ್ರಿ, ಈ ಹೊತ್ತು ಇಂತಹ ಪಾರ್ಟಿ ಇದೆ. ನಾನು ತಡವಾಗಿ ಬರುತ್ತೇನೆ. ಊಟಕ್ಕೆ ಕಾಯಬೇಡ" ಎಂದು ಹೇಳಲು! ನಂತರ ಆತ್ರ ಬರುವುದು ಹನ್ನೊಂದು ಘಂಟೆಗೋ, ಹನ್ನೆರಡು ಘಂಟೆಗೋ. ಬಂದಾಗ ಮತ್ತೇರಿದ ಕಣ್ಣುಗಳು. ಹಾಸಿಗೆಯಲ್ಲಿ ಒರಗಿದ ತಕ್ಷಣ ಮಗುವಿನಂತೆ ಮುದುಡಿ ಮಲಗಿ ಗೊರಕೆ ಹೊಡೆಯಲಾರಂಭಿಸುತ್ತಾನೆ. ಬೆಳಿಗ್ಗೆ ಒಂಭತ್ತರ ತನಕ ಮಲಗಿ, ಎದ್ದ ಕೂಡಲೇ ತಲೆ ಸಿಡಿಯುತ್ತಿದೆ ಎಂದು ಎರಡು ಮೂರು ಆಸ್ಪಿರಿನ್ ಮಾತ್ರೆ ಗಳನ್ನು ನುಂಗುತ್ತಾನೆ.

ಅಪರಿಚಿತ

"ಏಕೆ ಹೀಗೆ ಮಾಡುತ್ತೀರಾ ? ಪಾರ್ಟಿಗೆ ಹೋಗುವುದೇಕೆ ? ನಿದ್ದೆಗೆಟ್ಟು

ಈ ರೀತಿ ನೋವು ಪಡುವುದೇಕೆ" ಎಂದು ಕೇಳುವ ಧೈರ್ಯ ಅವಳಿಗಿಲ್ಲ. ಮದುವೆಯಾಗಿ ಇಷ್ಟೊಂದು ವರ್ಷವಾದರೂ ಗಂಡನೊಂದಿಗೆ ಸರಾಗವಾಗಿ ಮಾತನಾಡುವ ಚೈತನ್ಯ ಅವಳಿಗಿಲ್ಲ. ಅವನನ್ನು ಕಂಡರೆ ಏನೋ ಒಂದು ಭಯ. ಬಾಯಿ ಒಣಗಿ ಮಾತುಗಳು ಗಂಟಲಲ್ಲೇ ಸಿಕ್ಕಿಹಾಕಿಕೊಳ್ಳುತ್ತವೆ. ಈ ದೀರ್ಘ ಅವಧಿಯಲ್ಲಿ ಆತನೊಂದಿಗೆ ಸಂಸಾರ ಮಾಡಿದರೂ ಇಂದಿಗೂ ಆತ ಅವಳ ಪಾಲಿಗೆ ಅಪರಿಚಿತನೇ. ಅವಳ ಭಾವನೆಗಳಿಗೆ ಆತನೆಂದೂ ಸ್ಪಂದಿಸಿದವನಲ್ಲ. ನಿನ್ನ ಅನಿಸಿಕೆ ಏನು, ಅಭಿಪ್ರಾಯವೇನು ? ಎಂದು ಎಂದೂ ಕೇಳಿದವನಲ್ಲ.

ಅಂದಹಾಗೆ ಸಾವಿತ್ರಿ ನಿರಕ್ಷರಕುಕ್ಷಿ ಏನಲ್ಲಿ. ಏನೂ ಗೊತ್ತಿಲ್ಲದ ಗೌರಮ್ಮನಲ್ಲ. ವಿಜ್ಞಾನ ಪದವೀಧರೆ. ಯಾವ ಹಂತದಲ್ಲೂ ಫೇಲಾದವಳಲ್ಲ. ಹಾಗೆಂದು ಪುಸ್ತಕ ಹುಳುವಲ್ಲ. ಚೆನ್ನಾಗಿ ಹಾಡಬಲ್ಲವಳಾಗಿದ್ದಳು.

ಅನಂತಕೃಷ್ಣ ಅವನ ತಂದೆ ತಾಯಿಗಳ ಏಕಮಾತ್ರ ಪುತ್ರ. ಅವನ ತಂದೆ ಧಾನ್ಯಗಳ ಸಗಟು ವ್ಯಾಪಾರಿ. ಮಾಲನ್ನು ಮುಚ್ಚಿಟ್ಟು, ಚಕಮಕಿ ಮಾಡುತ್ತಾ, ಕೃತಕ ಅಭಾವವನ್ನು ಸೃಷ್ಟಿಸಿ, ಬೆಲೆ ಏರಿಸಿ, ಕಣ್ಣು ಮುಚ್ಚಾಲೆ ವ್ಯವಹಾರ ಮಾಡುತ್ತಾ ಸಾಕಷ್ಟು ಸಂಪತ್ತನ್ನು ಸಂಪಾದಿಸಿ, ಸಕ್ಕರೆ ಖಾಯಿಲೆಯಿಂದ ನರಳಿ ಕೊನೆಗೆ ಒಂದು ದಿನ ಕಣ್ಣುಮುಚ್ಚಿದರು. ಮಗನಿಗೆ ಮಂಡಿ, ಕಬ್ಬಿಣಪೆಟ್ಟಿಗೆಯಲ್ಲಿ ಸಾಕಷ್ಟು ಹಣ, ನಾಲ್ಕು ಮನೆಗಳು, ಹತ್ತು ಎಕರೆ ತೆಂಗಿನ ತೋಟ ಇತ್ಯಾದಿ ಆಸ್ತಿಯನ್ನು ಬಿಟ್ಟು ನಡೆದರು. ಅನಂತಕೃಷ್ಣನ ತಾಯಿ ಲಕ್ಷ್ಮಮ್ಮನಿಗೆ ಮಗನಿಗಿಂತಲೂ, ಮಗಳು ಸುಮಿತ್ರೆಯೇ ಹೆಚ್ಚು ಪ್ರೀತಿಪಾತ್ರಳು. ಮಗನಿಗೆ ಮದುವೆ ಮಾಡಿ, ಸೊಸೆ ಬಂದ ಮೇಲೆ ಮಗಳ ಮನೆ ಸೇರಿಬಿಟ್ಟರು.

ಗಾಳಿಗೋಪುರ

ಶ್ರೀಮಂತ ಹುಡುಗನೊಬ್ಬನನ್ನು ವರಿಸಿದ ಸಾವಿತ್ರಿ ಮೊದಲಲ್ಲಿ ಬಹಳ ಸಂಭ್ರಮ ಪಟ್ಟಿದ್ದಳು. ತನ್ನ ಜೊತೆ ಹುಡುಗಿಯರಂತೆ ಉಟ್ಟು ತೊಟ್ಟು ಮೆರೆಯಬೇಕು. ಗಂಡನೊಂದಿಗೆ ಸಿನೇಮಾ, ವಾಕಿಂಗ್, ಪ್ರವಾಸ ಮಾಡುತ್ತಾ ಅವನಿಂದ ಪ್ರೀತಿಯನ್ನು ಪಡೆಯುತ್ತಾ ಸುಖಿಸಬೇಕೆಂದು ಕನಸುಗಳನ್ನು ಕಟ್ಟಿದ್ದಳು. ಅವನ ಪ್ರೀತಿಗೆ ಏಕಮಾತ್ರ ಒಡತಿಯಾಗಿ, ಅವನ ಸರ್ವಸ್ವವಾಗಿ ಬಾಳಬೇಕೆಂದು ಬಯಸಿದ್ದಳು. ಮದುವೆಯಾದ ಮೇಲೆ ಈ ಕನಸು, ಬಯಕೆಗಳು ಹಾಗೆಯೇ ಉಳಿದುಕೊಂಡಿದ್ದವು.

ಗಂಡನ ವಿಚಿತ್ರ ವರ್ತನೆ

ಆದರೆ ಗಂಡ ಅವಳ ಕೈಗೆ ಸಿಕ್ಕುತ್ತಲೇ ಇರಲಿಲ್ಲ. ಬೆಳಿಗ್ಗೆ ಎಂಟು ಘಂಟೆಗೆ

ಮನೆಬಿಟ್ಟರೆ, ಅಂಗಡಿಗೆ ಹೋದವನು ಮತ್ತೆ ಬರುವುದು ಮಧ್ಯರಾತ್ರಿಗೇ. ಭಾನುವಾರ ಬಂದರೆ ದೊಡ್ಡ ಸ್ನೇಹಿತರ ಗುಂಪು ಅವನನ್ನು ಅಪಹರಿಸಿಕೊಂಡು ಹೋಗಿಬಿಡುತ್ತದೆ. "ನೋಡು ನನ್ನನ್ನು ಕಾಯಬೇಡ. ಅಕ್ಕಪಕ್ಕದ ಹೆಂಗಸರನ್ನು ಪರಿಚಯ ಮಾಡಿಕೋ. ಅವರೊಂದಿಗೆ ಸಿನೇಮಾಕ್ಕೆ ಹೋಗು. ನಮ್ಮ ಬೀದಿಯ ಮನೆಯಲ್ಲಿ ಮಹಿಳಾ ಸಂಘವಿದೆ, ಅದಕ್ಕೆ ಸದಸ್ಯಳಾಗು. ಟೀವಿ ನೋಡು, ಸಂಗೀತ ಕೇಳು... ಇನ್ನೂ ಏನೇನೂ ಹೇಳುತ್ತಿದ್ದ ಅವನನ್ನು ತಡೆದು 'ನನಗೆ ನೀವು ಬೇಕು. ನಿಮ್ಮೊಂದಿಗೆ ವಾಕಿಂಗ್ ಹೋಗಲು, ಸಿನೇಮಾ ನೋಡಲು ನನಗೆಷ್ಟು ಇಷ್ಟ ಗೊತ್ತಾ' ಎಂದಾಗ ಆತ ನಕ್ಕುಬಿಟ್ಟಿದ್ದ. "ಈ ಬಗೆಯ ಅವಲಂಬನೆಯಿಂದಲೇ ನಮ್ಮ ಹೆಂಗಸರು ಅಡುಗೆ ಮನೆಯಲ್ಲೇ ಉಳಿದು ಕೊಂಡಿರುವುದು. ಕೆಲಸಕ್ಕೆ ಬಾರದವರಾಗಿರುವುದು. ನಿನ್ನ ಪಾಡಿಗೆ ನೀನಿರು. ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡು. ನಿನ್ನೊಂದಿಗೆ ಕಾಲಕಳೆಯುವಷ್ಟು ಪುರುಸೊತ್ತು ನನಗಿಲ್ಲ. ಮನೆಯನ್ನು ಚೆನ್ನಾಗಿಟ್ಟುಕೋ. ಹಣಕ್ಕೆ ಯೋಚನೆ ಮಾಡಬೇಡ" ಎಂದು ಒರಟಾಗಿ ನುಡಿದು ಹೊರಟೇ ಹೋಗುತ್ತಿದ್ದ.

ಮದುವೆಯಾಗಿ ಎರಡು ವರ್ಷದ ನಂತರ ಸಾವಿತ್ರಿ ಗರ್ಭ ಧರಿಸಿದಳು. ಸಾವಿತ್ರಿಯ ಮನಸ್ಸು ಗರಿಕೆದರಿ ಆಗಸದಲ್ಲಿ ಹಾರಾಡಿತು. ತಾನು ತಾಯಿಯಾಗಲಿದ್ದೇನೆ. ಪುಟ್ಟ ಕಂದ ತನ್ನ ಮಡಿಲನ್ನು ಇನ್ನು ಕೆಲವೇ ತಿಂಗಳುಗಳಲ್ಲಿ ತುಂಬಲಿದೆ. ಊಂ... ಊಂ... ಎಂದು ಅಳುತ್ತಾ, ತನ್ನ ಎದೆಹಾಲು ಕುಡಿದು, ಅಂಬೆಗಾಲಿಡುತ್ತಾ, ಮನೆಯ ತುಂಬಾ ಅಡ್ಡಾಡುವ, ಪುಟ್ಟ ಕೈಗಳಿಂದ ತನ್ನನ್ನು ತಬ್ಬಿ ಉಪ್ಪ ಕೊಡುವ ಓಡುವ ತುಂಟನೋ ತುಂಟಿನೋ ಬರುತ್ತದೆ ಎಂದು ತಿಳಿದು, ಅವಳ ಸಂಭ್ರಮಕ್ಕೆ ಮಿತಿ ಇರಲಿಲ್ಲ. ಸಡಗರದಿಂದ ತಂದೆತಾಯಿಗೆ ಈ ವಿಚಾರವನ್ನು ತಿಳಿಸಿ ಪತ್ರ ಬರೆದಳು.

ನಾಚುತ್ತ ಅಳುಕುತ್ತ ಹೇಳಲೋ ಬೇಡವೋ ಎಂದುಕೊಳ್ಳುತ್ತ ವಿಷಯವನ್ನು ಅವನಿಗೆ ತಿಳಿಸಿದಳು. ಕಾತರದಿಂದ ಅವನ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದಳು. ಅವನು ಏನೂ ಹೇಳದೆ ತಲೆತಗ್ಗಿಸಿ ಊಟ ಮಾಡತೊಡಗಿದ. ಸಾವಿತ್ರಿ ಕಲಿಬಿಲಿಗೊಂಡಳು. "ನಾನು ಹೇಳಿದ್ದು ಕೇಳಿಸಿತೇ ? ನಮಗೆ ಮಗುವಾಗಲಿದೆ. ನೀವು ತಂದೆಯಾಗಲಿದ್ದೀರಿ" ಎಂದಳು, "ಸರಿ ಅದಕ್ಕೇನು ಮಾಡಬೇಕು ?" ಹರಿತವಾದ ಬಾಣದಂತೆ ಬಂದಿತು ಅವನ ಪ್ರಶ್ನೆ.

ಸಾವಿತ್ರಿ ಅವಾಕ್ಕಾದಳು. ತಾನು ಮಗುವಿನ ತಂದೆಯಾಗಲಿರುವುದನ್ನು ಕೇಳಿಯೂ ಇವರಿಗೆ ಸಂತೋಷವಾಗಲಿಲ್ಲವೇ ? ಮದುವೆಯಾದ ಯಾರಿಗಾದರೂ ಮೊದಲ ಮಗು ಎಂದರೆ ಎಷ್ಟೊಂದು ಸಂಭ್ರಮ ಸಂತೋಷವಾಗುತ್ತದೆ. ಇವರಿಗೇನಾಗಿದೆ ಎಂದುಕೊಂಡಳು. ತಡೆಯಲಾರದೆ ಕೇಳಿಯೇಬಿಟ್ಟಳು, "ನಿಮಗೆ

ಏನೂ ಅನಿಸುವುದಿಲ್ಲವೇ ? ಇನ್ನು ಕೆಲವೇ ತಿಂಗಳುಗಳಲ್ಲಿ ನಮಗೊಂದು ಚಿನ್ನಾರಿ ಕಂದ ಬರುತ್ತದೆ ಎಂದು ತಿಳಿದ ಮೇಲೂ ನಿಮಗೆ ಸಂತೋಷವಿಲ್ಲವೇ ? ನಮಗೆ ಮಗು ಬೇಡವೆಂದು ನಿಮ್ಮ ಅಭಿಪ್ರಾಯವೇ."

"ಇದರಲ್ಲಿ ಸಂಭ್ರಮ ಪಡುವುದೇನಿದೆ. ಮದುವೆಯಾದವರಿಗೆ, ದೈಹಿಕ ಸಂಪರ್ಕ ಮಾಡಿದ ಗಂಡು-ಹೆಣ್ಣಿಗೆ ಮಕ್ಕಳಾಗುತ್ತವೆ. ನಮಗೂ ಆಗುತ್ತವೆ. ಅದರ ಬಗ್ಗೆ ಕುಣಿದಾಡಬೇಕೆ" ಎಂದ,

ಏಕೆ ಹೇಗೆ ?

ಅವನಿಗೆ ಏನು ಹೇಳಬೇಕೆಂದು ತಿಳಿಯದೆ ಸಾವಿತ್ರಿ ಮೂಕಳಾದಳು. ಇವರಿಗೆ ಮಕ್ಕಳೆಂದರೆ ಇಷ್ಟವಿಲ್ಲವೆಂದು ತೋರುತ್ತದೆ ಎಂದುಕೊಂಡಳು. ಎಂತಹ ವಿಚಿತ್ರ ವ್ಯಕ್ತಿಯಪ್ಪ ಎಂದು ಯೋಚಿಸಿದಳು.

ಈ ಪ್ರಪಂಚದಲ್ಲಿ ಅತ್ಯಂತ ಸುಂದರ ವಸ್ತುವೆಂದರೆ, ಅಂಬೆಗಾಲಿಕ್ಕುತ್ತಾ ತೊದಲುವ ಪುಟ್ಟಕಂದ. ಅದನ್ನು ಅರಿಯದ ಈತ ಎಂತಹ ಮನುಷ್ಯ. ತನ್ನ ಮಗು ಇವರಿಗೆ ಬೇಡದ ಮಗುವಾಗಿಬಿಟ್ಟರೆ ಎಂದು ಹೆದರಿದಳು. ಚಿಂತೆಯ ಕಾರ್ಮೋಡಗಳು ಅವಳನ್ನು ಮುತ್ತಿಕೊಂಡವು. ವಿಷಯ ತಿಳಿದ ಅವಳ ತಂದೆ, ತಾಯಿ, ಅತ್ತೆ ಬಂದು ಸಂತೋಷ ವ್ಯಕ್ತಪಡಿಸಿದರು. ಅವರ ಜೊತೆಯಲ್ಲಿ ನಕ್ಕು ಮಾತಾಡಿದರೂ, ಗಂಡನ ಹಿಮದಂತಹ ಪ್ರತಿಕ್ರಿಯೆ ಅವಳನ್ನು ಕೀಟದಂತೆ ಕೊರೆಯ ತೊಡಗಿತು.

ಒಂದು ತಿಂಗಳ ನಂತರ, ಒಂದು ಸಂಜೆ ಉಟ್ಟ ಸೀರೆ ಕೆಂಪಗಾದಾಗ ಸಾವಿತ್ರಿ ಗಾಬರಿಗೊಂಡಳು. ವೈದ್ಯರಲ್ಲಿಗೆ ಧಾವಿಸಿದಳು. ಆಕೆಯನ್ನು ಪರೀಕ್ಷಿಸಿದ ವೈದ್ಯರು ಆಸ್ಪತ್ರೆಯಲ್ಲೇ ಉಳಿಯಲು ಸೂಚಿಸಿದರು. 'ಗರ್ಭಪಾತದ ಸೂಚನೆ' (Threatened Abortion) ಎಂದು ಚಿಕಿತ್ಸೆ ಶುರುಮಾಡಿದರು, ಸುದ್ದಿ ತಿಳಿದ ಅನಂತಕೃಷ್ಣ ಓಡಿ ಬಂದ. ವೈದ್ಯರು ಇತ್ತ ಚಿಕಿತ್ಸೆ ಫಲಕಾರಿ ಆಗದೆ, ಗರ್ಭ ನಿಲ್ಲದೇ ಹೋಯಿತು.

ಅತಿಯಾದ ರಕ್ತಸ್ರಾವದಿಂದ ಸಾವಿತ್ರಿ ನಿತ್ರಾಣವಾದಳು. ಎರಡು ಶೀಸೆ ರಕ್ತಕ್ಕಾಗಿ, ಊರಿನ ಎರಡು ಮೂರು ರಕ್ತದಾನಿಗಳನ್ನು ಹುಡುಕಿ ಕರೆತಂದು ನೆರವಾದ. ಇಡೀ ರಾತ್ರಿ ಒಂದು ನಿಮಿಷ ಕಣ್ಣು ಮುಚ್ಚದೆ ಸಾವಿತ್ರಿಯ ಪಕ್ಕದಲ್ಲಿ ಕುಳಿತು ನೋಡಿಕೊಂಡ. ಅವಳನ್ನು ಪ್ರೀತಿಯ ಮಾತುಗಳಿಂದ ರಮಿಸಿದ.

ಪ್ರೀತಿಯ ಮಹಾಪೂರ

ಮೊದಲಬಾರಿಗೆ ಅವನಿಂದ ಹರಿದ ಈ ಪ್ರೀತಿಯ ಮಹಾಪೂರದಲ್ಲಿ ಸಾವಿತ್ರಿ ತೇಲಿಹೋದಳು. ಅವಳ ಹೃದಯ ತುಂಬಿ ಬಂದಿತು. "ಇವರು ನನ್ನನ್ನು ಎಷ್ಟೊಂದು ಪ್ರೀತಿಸುತ್ತಾರೆ! ಇದುವರೆಗೆ ಇದು ನನಗೆ ಗೊತ್ತಾಗಲಿಲ್ಲವಲ್ಲ! ನಾನೇ ಭಾಗ್ಯಶಾಲಿ, ಚಿಪ್ಪಿನೊಳಗಿನ ಮುತ್ತಿನಂತೆ ಇವರ ಪ್ರೀತಿ. ಬಾಯಿ ಬಿಟ್ಟು ಹೇಳುವುದಿಲ್ಲ. ನೇರವಾಗಿ ಪ್ರಕಟಿಸುವುದಿಲ್ಲ. ಇದು ಇವರ ಸ್ವಭಾವವೆಂದು ತೋರುತ್ತದೆ. ನನಗೆ ಗಂಡಾಂತರ ಬಂದಾಗ ಎಷ್ಟು ಕಾಳಜಿ ತೋರಿಸ್ತಿದ್ದಾರೆ. ಇವರು ಮಸಿ ಹಿಡಿದ ವಜ್ರ ಎಂದು ಕೊಂಡಳು.

ಆಕೆ ಚೇತರಿಸಿಕೊಳ್ಳಲು ಎರಡು ವಾರವಾಯಿತು. ಅನಂತಕೃಷ್ಣ ಅವಳನ್ನು ಬಿಟ್ಟು ಹೊರಗೆ ಔಷಧ ಕೊಡುವುದು, ಊಟ ತಿಂಡಿ ಮಾಡಿಸುವುದು, ಬೇಸರವಾಗ ದಂತೆ ತನ್ನ ಮತ್ತು ಸ್ನೇಹಿತರ ವಿವಿಧ ಅನುಭವಗಳನ್ನು ಹೇಳುವುದು, ಕಥೆ ಕಾದಂಬರಿಯನ್ನು ಓದುವುದು ಇತ್ಯಾದಿಯಾಗಿ ಶುಶ್ರೂಷೆ ಮಾಡಿದ. ಸಾವಿತ್ರಿಯ ತಾಯಿ ತನ್ನ ತಾಯಿ ಅವಳಿಗೆ ನೆರವಾಗಲು ಬಂದರೂ ತಾನೇ ಖುದ್ದು ಕುಳಿತು ಅವಳನ್ನು ನೋಡಿಕೊಂಡ. ಒಂದು ತಿಂಗಳಲ್ಲಿ ಸಾವಿತ್ರಿ ಮೊದಲಿನಂತಾದಳು. ಅನಂತಕೃಷ್ಣನೂ ತನ್ನ ಎಂದಿನ ದಿನಚರಿಯನ್ನು ಪ್ರಾರಂಭಿಸಿದ.

o o o o

"ಗೈನಕಾಲಜಿಸ್ಟ್ ಇಂದಿರಾಬಾಯಿಯವರು ತಮ್ಮನ್ನು ಕಾಣಲು ಹೇಳಿದರು ಡಾಕ್ಟರೇ. ಇದುವರೆಗೆ ಇವಳಿಗೆ ಆರುಬಾರಿ ಗರ್ಭಪಾತವಾಯಿತು. ಎಲ್ಲ ಪರೀಕ್ಷೆಗಳು, ಚಿಕಿತ್ಸೆ ಆಯಿತು. ಏನೂ ಪ್ರಯೋಜನವಾಗಲಿಲ್ಲ. ಒಂದು ಮಗುವಾದರೂ ನನ್ನ ಗರ್ಭದಲ್ಲಿ ಉಳಿದು ಬೆಳೆಯಲಿಲ್ಲವೆ ಎಂದು ಕೊರಗುತ್ತಾಳೆ" ಅನಂತಕೃಷ್ಣ ಡಾ॥ ಮೂರ್ತಿಯವರಿಗೆ ಹೇಳಿದ.

"ಮಗುವಾಗಲಿಲ್ಲ ಎಂದು ನಿಮ್ಮ ಹೆಂಡತಿ ಕೊರಗುತ್ತಿದ್ದಾಳೆ ಎಂದಿರಿ. ಅದರ ಬಗ್ಗೆ ನಿಮಗೇನನ್ನಿಸುತ್ತದೆ?"

"ಅದರ ಬಗ್ಗೆ ನಾನು ಯೋಚನೆ ಹಚ್ಚಿಕೊಂಡಿಲ್ಲ ಡಾಕ್ಟರೇ. ಅದರ ಬಗ್ಗೆ ಯೋಚಿಸಲು ನನಗೆ ಪುರುಸೊತ್ತು ಇಲ್ಲ. ಮಕ್ಕಳ ಬಗ್ಗೆ ನನಗೆ ಅಂತಹ ಆಸಕ್ತಿ ಇಲ್ಲ."

"ಏಕೆ?"

"ಕೆಲವು ಸಾರಿ ಈ ಪ್ರಶ್ನೆಯನ್ನು ನನಗೆ ನಾನೇ ಹಾಕಿಕೊಂಡಿದ್ದೇನೆ ಸಾರ್.

ಸಮಂಜಸ ಉತ್ತರ ಸಿಕ್ಕಿಲ್ಲ. ಬಹುಶಃ ನನ್ನ ಅಕ್ಕನ ಅನುಭವ, ಅವಳು ಪಟ್ಟಕಷ್ಟ ಈ ನನ್ನ ಧೋರಣೆಗೆ ಕಾರಣವಿರಬಹುದು."

"ಹೇಗೆ ?"

ಮರಿ ರಾಕ್ಷಸರು

"ನನ್ನ ಅಕ್ಕನಿಗೆ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡಿಬಿಟ್ಟರು. ಆಕೆಗೆ ಆಗ ಹದಿನೈದು ವರ್ಷ ವಯಸ್ಸಿರಬೇಕು. ಇನ್ನೂ ಆಡುವ ವಯಸ್ಸು. ವರ್ಷಕ್ಕೆ ಒಂದು, ಎರಡು ವರ್ಷಕ್ಕೆ ಒಂದರಂತೆ ಸಾಲಿಗೆ ಏಳು ಮಕ್ಕಳಾದುವು. ಎರಡು ಹೋದವು. ಕೈಯಲ್ಲಿ ಒಂದು, ಸೊಂಟದ ಮೇಲೊಂದು, ಹೊಟ್ಟೆಯೊಳಗೆ ಒಂದು ಎನ್ನುತ್ತಾರಲ್ಲ ಹಾಗೆ. ಮಕ್ಕಳನ್ನು ಹೆತ್ತು ಇಪ್ಪತ್ತಾರು ವರ್ಷ ತುಂಬುವುದರೊಳಗೇ ಕೇವಲ ಮೂಳೆ ಚರ್ಮವಾದಳು. ಮದುವೆಯಾದಾಗ ದೃಷ್ಟಿಯಾಗುವಷ್ಟು ಸುಂದರವಾಗಿದ್ದ ಅವಳು ರಸ ಹಿಂಡಿ ತೆಗೆದ ಕಬ್ಬಿನ ಸಿಪ್ಪೆಯಂತಾದಳು. ಒಂದೊಂದು ಹೆರಿಗೆಯಲ್ಲೂ ಸತ್ತು ಮತ್ತೆ ಹುಟ್ಟಿದ್ದಳು. ಅಕ್ಕ ಅನುಭವಿಸುವುದನ್ನು ನೋಡಿದ್ದ ನನಗೆ ಮಕ್ಕಳೆಂದರೆ ಮರಿರಾಕ್ಷಸರು ಎನಿಸುತ್ತದೆ.

ನಿಜ ಹೇಳಬೇಕೆಂದರೆ ಸಾವಿತ್ರಿ ಗರ್ಭ ಧರಿಸಿದಾಗ ನನಗೆ ಗಾಬರಿಯಾಗುತ್ತದೆ, ಭಯವಾಗುತ್ತದೆ. ಅವಳ ಜೀವಹಿಂಡುವ ಮರಿರಾಕ್ಷಸ ಹೊಟ್ಟೆಯಲ್ಲಿ ಬೆಳೆಯುತ್ತಿದೆ ಎನಿಸುತ್ತದೆ. ಗರ್ಭಪಾತವಾದಾಗ ಅನಿಷ್ಟ ತೊಲಗಿತು ಎಂದುಕೊಳ್ಳುತ್ತೇನೆ. ಸಮಾಧಾನಪಡುತ್ತೇನೆ. ನಿತ್ರಾಣೆಯಾದ ಅವಳನ್ನು ನೋಡಿ, ಅಯ್ಯೋಪಾಪ ಎನಿಸುತ್ತದೆ. ಕೆಲಸ ಕಾರ್ಯ ಬಿಟ್ಟು ಅವಳ ಆರೈಕೆ ಮಾಡುತ್ತೇನೆ. ಅವಳು ಒಂದು ಮಗುವಾದರೂ ಬೇಕೇ ಬೇಕು ಎನ್ನುತ್ತಾಳೆ. ಅವಳ ಆಸೆ ನೆರವೇರುವಂತೆ ಚಿಕಿತ್ಸೆ ಮಾಡಿ. ಆಮೇಲೆ ಮಕ್ಕಳಾಗದಂತೆ ನಾನೇ ಆಪರೇಶನ್ ಮಾಡಿಸಿಕೊಂಡು ಬಿಡುತ್ತೇನೆ."

○ ○ ○ ○

ಔಷಧ ಪ್ರಭಾವದಿಂದ ಸುಪ್ತಾವಸ್ಥೆಗೆ ಇಳಿದ ಸಾವಿತ್ರಿ ಮಾತನಾಡಲಾರಂಭಿಸಿದಳು. "ಡಾಕ್ಟರೇ... ಹೆಣ್ಣಾದ ನನಗೆ ತಾಯಿಯಾಗಬೇಕೆಂಬ ಹಂಬಲ. ನನ್ನ ಮಡಿಲನ್ನು ತುಂಬುವ ಮುದ್ದು ಮಗುವಿಗಾಗಿ ನಾನು ಹಾತೊರೆಯುತ್ತಿದ್ದೇನೆ. ಆದರೆ ನನ್ನ ಯಜಮಾನರಿಗೆ ಮಗು ಬೇಕಿಲ್ಲ. ಅವರ ಈ ವಿಚಿತ್ರಕ್ಕೆ ಏನು ಕಾರಣವೋ ನನಗೆ ತಿಳಿಯದು. ನಾನು ಚೆನ್ನಾಗಿದ್ದಾಗ ನನ್ನ ಬಗ್ಗೆ ಅವರು ತೀರಾ ಉದಾಸೀನ ಮಾಡುತ್ತಾರೆ. ಆದರೆ ನನ್ನನ್ನು ಕಂಡರೆ ಅವರಿಗೆ ಪ್ರೀತಿ ಇದೆ. ನನಗೆ ಗರ್ಭಪಾತವಾದಾಗ ಒಂದು ವಾರ. ಒಂದು ನಿಮಿಷಕೂಡ ನನ್ನಿಂದ ದೂರವಾಗದೇ,

ತಮ್ಮ ಕೆಲಸ, ಸ್ನೇಹಿತರನ್ನು ಮರೆತು ಆರೈಕೆ ಮಾಡಿದರು. ಆಮೇಲೆ ಕೂಡ ಎರಡು ತಿಂಗಳುಗಳ ಕಾಲ ಬೇಗ ಬರುತ್ತಿದ್ದರು. ಹೂವು ಹಣ್ಣು ತರುತ್ತಿದ್ದರು. ಹೇಗಿದ್ದೀಯಾ ಎಂದು ವಿಚಾರಿಸುತ್ತಿದ್ದರು. ಬಳಿಕ ಏನು ಎತ್ತ ಎಂದು ಕೇಳುತ್ತಿರಲಿಲ್ಲ. ಗರ್ಭಪಾತ ಒಂದು ರೀತಿಯಲ್ಲಿ ನನ್ನ ಪಾಲಿಗೆ ವರವಾಯಿತು. ನನ್ನವರ ಪ್ರೀತಿ, ಮಮತೆ, ಸಾಮೀಪ್ಯವನ್ನು ತಂದುಕೊಟ್ಟಿತು. ಆದರೆ ಇದು ಮತ್ತೆ ಮತ್ತೆ ನಡೆದರೆ ಏನು ಚಂದ. ನನಗೊಂದು ಮಗುವಾಗುವುದಾದರೆ ಅದಕ್ಕಿಂತ ಬೇರೊಂದು ಭಾಗ್ಯ ನನಗೆ ಬೇಕಿಲ್ಲ. ಅದಕ್ಕೆ ಒಪ್ಪುವಂತೆ ಅವರಿಗೆ ನೀವು ಹೇಳಬೇಕು. ಈ ದ್ವಂದ್ವದಿಂದ ನನ್ನನ್ನು ಬಿಡುಗಡೆ ಮಾಡಬೇಕು. ಗರ್ಭಿಣಿಯಾದಾಗ ಅವರು ನನ್ನತ್ತ ತಿರುಗಿ ನೋಡದಿದ್ದಾಗ, ಗರ್ಭಪಾತವಾಗಬಾರದೆ ಎಂದು ಅಂದುಕೊಳ್ಳುತ್ತಿರುತ್ತೇನೆ..."

○ ○ ○ ○

ಸುಪ್ತ ಬಯಕೆ

ಚೆನ್ನಾಗಿ, ಆರೋಗ್ಯವಾಗಿದ್ದಾಗ, ಗರ್ಭ ಧರಿಸಿ ತಾಯಿಯಾಗುವ ಸಿದ್ಧತೆ ತೋರಿದಾಗ, ಗಂಡನ ಉಪೇಕ್ಷೆಗೆ ಉದಾಸೀನಕ್ಕೆ ಒಳಗಾದ ಸಾವಿತ್ರಿ, ಅದೇ ಗರ್ಭಪಾತಕ್ಕೀಡಾದಾಗ ಅವನ ಪೂರ್ಣ ಆಸರೆ, ಪ್ರೀತಿಯನ್ನು ಪಡೆದಿದ್ದಳು. ಇದನ್ನು ಗಮನಿಸಿದ ಆಕೆಯ ಸುಪ್ತಮನಸ್ಸು ಪ್ರತಿಬಾರಿ ಗರ್ಭಧಾರಣೆಯಾದಾಗ, ಅದಕ್ಕೆ ವ್ಯತಿರಿಕ್ತವಾಗಿ ಕೆಲಸ ಮಾಡಿ, ದೇಹದ ಮೇಲೆ ಅಹಿತ ಪರಿಣಾಮವನ್ನುಂಟು ಮಾಡಿ ಗರ್ಭಪಾತಕ್ಕೆ ಅನುವು ಮಾಡಿಕೊಟ್ಟಿತ್ತು. ಗರ್ಭಪಾತ ಮಾಡಿಕೊಂಡು ಗಂಡನ ಪ್ರೀತಿ, ಆರೈಕೆಯನ್ನು ಪಡೆದು ತೃಪ್ತಿಪಟ್ಟಿತ್ತು.

ವಿವರವಾದ ಸಂದರ್ಶನಗಳಿಂದ ಅನಂತಕೃಷ್ಣನ ಮನಸ್ಸಿನಲ್ಲಿ ದಾಂಪತ್ಯಜೀವನ ಮತ್ತು ಮಕ್ಕಳಾಗುವುದರ ಬಗ್ಗೆ ಇದ್ದ ಅನೇಕ ಅಸಹಜ, ಅಹಿತ ಧೋರಣೆಗಳನ್ನು ಅರ್ಥ ಮಾಡಿಕೊಡಲಾಯಿತು. ಲೈಂಗಿಕ ಆಸೆಗಳನ್ನು ಅದುಮಿಡಲು, ಮಕ್ಕಳಾಗದಂತೆ ಎಚ್ಚರ ವಹಿಸಲು, ಹೆಂಡತಿಯ ಸಾಮೀಪ್ಯದಲ್ಲಿ ತನ್ನ ನಿರ್ಧಾರಗಳು ಸಡಿಲವಾಗಬಹುದೆಂಬ ಭಯದಿಂದ ಆದಷ್ಟು ಹೆಚ್ಚು ಕಾಲವನ್ನು ಮನೆಯ ಹೊರಗಡೆ ಸ್ನೇಹಿತರೊಂದಿಗೆ ಕಳೆಯುತ್ತಿದ್ದ.

ತನ್ನ ಅಕ್ಕ ಭಾವನ ಸಂಸಾರ ವೈಖರಿಯನ್ನು ಬಹು ಹತ್ತಿರದಿಂದ ಕಂಡ ಅವನಿಗೆ ಲೈಂಗಿಕ ಕ್ರಿಯೆ ಮತ್ತು ಮಕ್ಕಳನ್ನು ಪಡೆಯುವುದರ ಬಗ್ಗೆ ಜುಗುಪ್ಸೆ ಬೆಳೆದಿತ್ತು.

ಮನೋಚಿಕಿತ್ಸೆಯಲ್ಲಿ ಭಾವನೆಗಳನ್ನು ಬದಲಿಸಿಕೊಳ್ಳಲು ಹಾಗೂ ದಾಂಪತ್ಯ ಜೀವನದ ಬಗ್ಗೆ ಸದಭಿಪ್ರಾಯ ಹಾಗೂ ಆರೋಗ್ಯಕರ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ನೆರವು ನೀಡಲಾಯಿತು. ಸಾವಿತ್ರಿಯೊಂದಿಗೆ ಸಾಧ್ಯವಾದಷ್ಟು ಸಮಯ ಜೊತೆಯಾಗಿರಲು, ಪ್ರೀತಿ ತೋರಿಸಲು, ಒಡನಾಡಲು ಪ್ರೋತ್ಸಾಹಿಸಲಾಯಿತು. ಯೋಜಿತ ರೀತಿಯಲ್ಲಿ ಒಂದೆರಡು ಮಕ್ಕಳನ್ನು ಪಡೆಯುವುದರಿಂದ ಹೇಗೆ ಸುಖ ಸಂತೋಷಗಳನ್ನು ಪಡೆಯಬಹುದೆಂದು ಮನದಟ್ಟು ಮಾಡಿಕೊಡಲಾಯಿತು. ಗಂಡ ಹೆಂಡತಿ ಹೊಂದಾಣಿಕೆಯಿಂದ, ಸದಭಿರುಚಿಯಿಂದ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದರಿಂದ ಮನಸ್ಸಿಗೆ ಅದೆಷ್ಟು ಆನಂದ, ತೃಪ್ತಿ ಬರಲು ಸಾಧ್ಯವಿದೆ ಎಂದು ತಿಳಿಸಿಕೊಡಲಾಯಿತು.

o o o o

ಒಂದು ವರ್ಷದ ನಂತರ. ಸಾವಿತ್ರಿ ಯಾವ ತೊಂದರೆಯೂ ಇಲ್ಲದೆ ಒಂದು ಮಗುವಿನ ತಾಯಿಯಾದಳು. ಈಗ ಅವಳ ಸಂತೋಷಕ್ಕೆ, ತೃಪ್ತಿಗೆ ಮೇರೆ ಇಲ್ಲ.

ಮೊದಲ ರಾತ್ರಿ–ದಂಪತಿಗಳಿಗೆ ನಿರಾಸೆ

"ರೀ... ಎಲ್ಲಿದ್ದೀರಾ ?...ಅಲ್ಲಿ ನಿಂತು ಏನು ನೋಡ್ತಿದ್ದೀರಿ ? ಆಗಲೇ ಗಂಟೆ ಎಂಟಾಯಿತು. ಸ್ನಾನ ಮಾಡೋದಿಲ್ಲವೆ ?" ಒದ್ದೆಯಾದ ಕೂದಲನ್ನು ಒರೆಸಿಕೊಳ್ಳುತ್ತಾ ಅನುರಾಧಾ ಗಂಡನ ಪಕ್ಕದಲ್ಲಿ ನಿಂತು ಅವನು ನೋಡುತ್ತಿದ್ದ ದಿಕ್ಕಿನತ್ತ ನೋಡಿದಳು. ಯಾವ ವಿಶೇಷವೂ ಕಾಣಲಿಲ್ಲ. ಅದೇ ಹಸಿರು, ಗಿಡ ಮರ, ದೂರದ ರಸ್ತೆ, ಓಡಾಡುತ್ತಿರುವ ಜನ, ಎಲ್ಲವೂ ಎಂದಿನಂತೆಯೇ ಇದೆ. ಆಕೆ ತಲೆ ಎತ್ತಿ ಗಂಡನ ಮುಖ ನೋಡಿದಳು. ಉತ್ಸಾಹವಿಲ್ಲದ ಮಂಕಾದ ಮುಖ. ಆಕೆ ಹತ್ತಿರ ಬಂದು ನಿಂತು ಮಾತನಾಡುತ್ತಿದ್ದರೂ, ಆಕೆಯತ್ತ ನೋಡದೇ ಕಿಟಕಿಯ ಮೂಲಕ ದೂರದಲ್ಲೆಲ್ಲೋ ಅವನ ದೃಷ್ಟಿ ನೆಟ್ಟಿದೆ. ಕಣ್ಣಿನ ರೆಪ್ಪೆ ಬಡಿಯುವುದನ್ನು ಬಿಟ್ಟರೆ ಬೇರಾವ ಚಲನೆ ಇಲ್ಲ.

"ರ್ರೀ...ಏನಾಗಿದೆ ನಿಮಗೆ ? ಮೈಗೆ ಹುಶಾರಿಲ್ಲದೇ ? ಏಕೆ ಹೀಗಿದ್ದೀರಾ ? ನನ್ನ ಕಡೆ ನೋಡಿ. ಮಾತಾಡಿ" ಎಂದು ಅವನ ಕೈಗಳನ್ನು, ಕೆನ್ನೆಯನ್ನು, ಮುಟ್ಟಿ ನೋಡಿ, ಜ್ವರವೇನೂ ಇಲ್ಲ ಎಂದು ಸಮಾಧಾನಪಟ್ಟುಕೊಂಡಳು.

ಅವಳ ಸೊಂಟದ ಸುತ್ತ ಕೈಹಾಕಿ ಅವಳನ್ನು ನೋಡತೊಡಗಿದ ಶ್ರೀಪಾದ. ಗೌರವರ್ಣವಾದರೂ ಸುಂದರ ಮುಖ. ನೀಳ ನಾಸಿಕ. ಅರೆತೆರೆದ ಪುಟ್ಟ ತುಟಿಗಳು. ತುಂಬಿದ ಕೆನ್ನೆಗಳು. ಒದ್ದೆಯಾದ ಕಪ್ಪು ಕೂದಲು ಅವಳ ಹಣೆ, ಕುತ್ತಿಗೆಗೆ ಅಂಟಿಕೊಂಡಿದ್ದುವು. ಉಪಯೋಗಿಸಿದ ಶಾಂಪೂವಿನ ನವಿರಾದ ಕಂಪು ಅವನ ನಿಸ್ತೇಜ ಮುಖದಲ್ಲಿ ಜೀವ ತುಂಬುವುದರಲ್ಲಿ ಯಶಸ್ವಿಯಾಯಿತು. ಕಣ್ಣುಗಳು ತುಂಟತನದಿಂದ ಮಿನುಗಿದುವು. ಈ ಚೆಲುವಿಗೆ ತಾನೇ ತಾನು ಮನಸೋತು. ಮನೆಯವರ ವಿರೋಧವನ್ನೂ ಲೆಕ್ಕಿಸದೆ, ಮದುವೆಯಾದದ್ದು. ಸ್ನೇಹಿತರ ಈರ್ಷ್ಯೆಗೆ ಕಾರಣವಾದದ್ದು. "ಅನೂ, ಈಗ ನೀನೆಷ್ಟು ಚೆನ್ನಾಗಿ ಕಾಣ್ತಾ ಇದೀಯ ಗೊತ್ತಾ ?" ಎಂದ.

"ಹೌದಾ. ಎಷ್ಟು ಚೆಂದ ಹೇಳಿ" ಅನುರಾಧಾ ಕೆನ್ನೆಯುಬ್ಬಿಸಿದಳು. ಗಂಡನಿಂದ ತನ್ನ ಪ್ರಶಂಸೆಯನ್ನು ಎಷ್ಟು ಬಾರಿ ಕೇಳಿದರೂ ಹೆಣ್ಣಿಗೆ ತೃಪ್ತಿಯಾಗುವುದಿಲ್ಲ.

"ಈ ಬ್ರಹ್ಮಾಂಡದಷ್ಟು ! ಅದಕ್ಕೂ ಮೀರಿ...! ಹೇಗೆ ನಿನ್ನನ್ನು ನೋಡುತ್ತಾ ನಿಂತು ಬಿಡುತ್ತೇನೆ. ನನಗಿನ್ನೇನೂ ಬೇಡ"

"ನನ್ನನ್ನು ನೋಡ್ತಾ ನಿಂತರೆ ನಿಮ್ಮ ಹೊಟ್ಟೆ ತುಂಬೋದಿಲ್ಲ. ಬಿಡಿ, ಅಡಿಗೆ ಮನೆಯಲ್ಲಿ ಕೆಲಸ ಇದೆ. ನೀವು ಸ್ನಾನ ಮಾಡಿ ಬರೋದರೊಳಗೆ ತಿಂಡಿ ಮಾಡ್ತೇನೆ"

"ನಾವು ಮದುವೆ ಮಾಡಿಕೊಳ್ಳಲೇಬಾರದಾಗಿತ್ತು ಅನು..." ಅವನ ಧ್ವನಿಯಲ್ಲಿನ ತೀವ್ರತೆಯಿಂದ ಅನುರಾಧ ಚಕಿತಗೊಂಡಳು.

"ಯಾಕ್ರೀ ಇದ್ದಕ್ಕಿದ್ದಂತೆ ಈ ಮಾತು ? ಏನಾಯ್ತು ?"

"ಮದ್ವೆ ಆಗೋಕ್ಮುಂಚೆ ಅದೆಷ್ಟು ಫ್ರೀ ಆಗಿದ್ವಲ್ಲ. ಒಬ್ಬರನ್ನೊಬ್ರು ನೋಡ್ತಾ ಕೂತ್ರೆ ಹೊತ್ತು ಹೋಗಿದ್ದೇ ತಿಳೀತಿರಲಿಲ್ಲ. ಈಗ ನೋಡು... ಆ ಸುಖವೇ ಇಲ್ಲ. ಏನಂದ್ರೂ ನಾವು ಮದ್ವೆ ಆಗ್ಲೇಬಾರದಾಗಿತ್ತು."

ಶ್ರೀಪಾದ ಯಾವ ವಿಷಯದ ಬಗ್ಗೆ ಹೇಳುತ್ತಿದ್ದಾನೆಂಬುದನ್ನು ಅರಿತ ಅನು ಮೌನಿಯಾದಳು. ಮುಖ ಸಪ್ಪಗಾದರೂ ಸುಧಾರಿಸಿಕೊಂಡು ಹೇಳಿದಳು "ಅದಕ್ಕೆ ಯಾಕಿಷ್ಟು ಯೋಚ್ನೆ ಮಾಡ್ತಿದ್ದೀರಿ ? ನನಗೇನೂ ಬೇಸರವಿಲ್ಲ. ಸ್ವಲ್ಪ ದಿನ ಕಳೆದರೆ ಎಲ್ಲಾ ಸರಿ ಹೋಗುತ್ತೆ ಬಿಡಿ. ನೋಡಿ ಈಗ ಆ ಮಾತು ಬೇಡ. ಬೇಗ ಸ್ನಾನ ಮಾಡಿ, ತಿಂಡಿ ರೆಡಿ ಮಾಡ್ತೀನಿ. ಹೇಗೂ ರಜ. ಎಲ್ಲಿಯಾದ್ರೂ ಸುತ್ತೋಕೆ ಹೋಗೋಣ. ಆಯ್ತಾ ?" ಮಾತಿಗೆ ಮುಕ್ತಾಯ ಹಾಕಿ ಅನು ಒಳಗೆ ಹೋದಳು. ಶ್ರೀಪಾದ ಯಾಂತ್ರಿಕವಾಗಿ ಬಚ್ಚಲು ಮನೆಯತ್ತ ಹೆಜ್ಜೆ ಹಾಕಿದ.

ಪ್ರೇಮ ವಿವಾಹ

ಶ್ರೀಪಾದ, ಅನುರಾಧ ಒಂದು ತಿಂಗಳ ಹಿಂದಷ್ಟೇ ಮದುವೆಯಾದವರು. ಅವರದು ಪ್ರೇಮ ವಿವಾಹ. ಮೂರು ವರ್ಷದ ಪ್ರೇಮದ ಸಸಿಗೆ ನೀರೆರೆದು ಪೋಷಿಸಿ ಹಿರಿಯರ ವಿರೋಧ ಲೆಕ್ಕಿಸದೆ ಮದುವೆ ಆಗಿ ತಮ್ಮದೇ ಆದ ಪುಟ್ಟ ಗೂಡು ಮಾಡಿಕೊಂಡಿರುವವರು. ಆದರೆ ಸಾಂಸಾರಿಕ ಜೀವನದ ಹೊಸ್ತಿಲಲ್ಲೇ ತೊಡಕುಂಟಾಗಿ ಸುಖ ಸಂತೋಷದ ಬದಲು ಆತಂಕ ಖಿನ್ನತೆ ಇಬ್ಬರನ್ನೂ ಕಾಡ ತೊಡಗಿತ್ತು. ತಮ್ಮ ಸಮಸ್ಯೆಗೆ ಪರಿಹಾರ ಕಾಣದೇ ಮೌನವಾಗಿ ಇಬ್ಬರೂ ನೋವನ್ನು ಅನುಭವಿಸುತ್ತಿದ್ದರು.

"ನೀವೇ ಅಲ್ಲವೇ ಮಿ॥ ಶ್ರೀಪಾದ ? ಬೆಳಿಗ್ಗೆ ಫೋನು ಮಾಡಿದವರು ? ಬನ್ನಿ ಕುಳಿತುಕೊಳ್ಳಿ. ಈಕೆ ನಿಮ್ಮ ಮಿಸೆಸ್ ಇರಬೇಕು" ಡಾ॥ ಮೂರ್ತಿ ಒಳಬಂದವರನ್ನು ಸ್ವಾಗತಿಸಿದರು.

"ನಮಸ್ಕಾರ ಡಾಕ್ಟರ್. ಈಕೆ ಅನುರಾಧ, ನನ್ನ ಹೆಂಡತಿ"

"ಅದೇನೋ ಸಮಸ್ಯೆ ಅಂದಿರಿ ? ಹೇಳಿ ಅದೇನು ?"

"ಸರ್, ನಮ್ಮದು ಪ್ರೇಮ ವಿವಾಹ. ಕಳೆದ ತಿಂಗಳು ಮದ್ವೆ ಆದ್ವಿ. ಹಿರಿಯರ ಒಪ್ಪಿಗೆ ಇಲ್ಲದೇ ಆಗಿದ್ದು ಅನ್ನೋದೊಂದೇ ಕೊರತೆ ಬಿಟ್ರೆ ಮತ್ತೆಲ್ಲಾ ಚೆನ್ನಾಗೇ ಇದ್ವಿ. ಆದ್ರೆ ಈಗ, ನಾನು ಮದ್ವೆ ಆಗದೇ ಇದ್ರೇ ಚೆನ್ನಾಗಿತ್ತು ಅನ್ನಿಸ್ತಿದೆ."

"ಯಾಕೆ ? ಸಂಕೋಚಪಡದೆ ಹೇಳಿ."

"ದಾಂಪತ್ಯ ಜೀವನ ನಡೆಸೋಕೆ ನಮ್ಮಿಂದ ಆಗ್ತಾ ಇಲ್ಲ ಸಾರ್. ನಮಗೆ ಇದೊಂದು ಸಮಸ್ಯೆ ಆಗಿದೆ."

"ಯಾಕೆ ಆಗ್ತಿಲ್ಲ ? ನಿಮ್ಮ ತೊಂದರೆ ಏನೆಂದು ಸ್ಪಷ್ಟವಾಗಿ ಹೇಳ್ತೀರಾ ?"

"ಅದೇನೋ ಸಾರ್. ನಾವೂ ಪ್ರೇಮಿಸಿ ಎಲ್ಲರಂತೆ ಏನೇನೋ ಕನಸು ಕಂಡಿದ್ವಿ. ಆದರೆ ದೈಹಿಕ ಸಂಪರ್ಕ ಮಾಡಲು ಆರಂಭಿಸಿದಾಗ ಅದೇನೋ, ನನ್ನ ಕೈಲಿ ಆಗ್ಲೇ ಇಲ್ಲ..." ಶ್ರೀಪಾದ ತಡವರಿಸಿದ.

"ನೀವೇನು ಹೇಳ್ತೀರಮ್ಮ ? ಯಜಮಾನರು ಹೇಳಿದ್ದಕ್ಕಿಂತ ಇನ್ನೇನಾದ್ರೂ ಹೇಳೋದಿದೆಯ ?"

"ಇಲ್ಲ ಸರ್. ಇದೊಂದೇ ನಮ್ಮ ಸಮಸ್ಯೆ. ಆದ್ರೆ ಇದರ ಬಗ್ಗೆ ಇವರು ತುಂಬ ಚಿಂತೆ ಮಾಡ್ತಾರೆ. ಸಮಾಧಾನ ಹೇಳಿದ್ರೆ ಕೇಳೋದಿಲ್ಲ. ನೀವೇ ಏನಾದ್ರೂ ಸಲಹೆ ಕೊಡಬೇಕು."

ಇಬ್ಬರೂ ಪೂರ್ಣ ಬಾಯಿಬಿಟ್ಟು ಹೇಳಲು ಸಂಕೋಚ ಪಡ್ತಿದ್ದಾರೆ ಎಂಬುದು ಡಾ॥ ಮೂರ್ತಿಯವರಿಗೆ ಸ್ಪಷ್ಟವಾಯಿತು. ಅವರೆಂದರು "ನಾನೀಗ ನಿಮಗೊಂದು ಚಿಕ್ಕ ಕೆಲಸ ಕೊಡ್ತೀನಿ. ದಾಂಪತ್ಯ ಜೀವನದ, ಲೈಂಗಿಕ ಕ್ರಿಯೆ ಬಗ್ಗೆ ನಿಮಗೆ ತಿಳುವಳಿಕೆ ಯಾವಾಗ ಬಂತು ? ಹೇಗೆ ಬಂತು ? ಅದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ? ಈ ಕ್ರಿಯೆಯಲ್ಲಿ ನಿಮ್ಮ ಪಾತ್ರವೇನು ? ಮೊದಲ ಬಾರಿ ಈ ಕ್ರಿಯೆಯಲ್ಲಿ ತೊಡಗಿದಾಗ ನಿಮ್ಮಲ್ಲಿ ಎಂಥ ಭಾವನೆ ಬಂತು ? ಇವೆಲ್ಲವನ್ನೂ ಸರಿಯಾಗಿ ಜ್ಞಾಪಿಸಿ ಕೊಂಡು ಈ ಕಾಗದದ ಮೇಲೆ ಪ್ರತ್ಯೇಕವಾಗಿ ಬರೆಯಿರಿ. ನಾನು ಅರ್ಧ ಗಂಟೆ ಬಿಟ್ಟು ಬರ್ತೀನಿ, ನೀವು ನಿಮ್ಮ ನಿಮ್ಮ ಅನಿಸಿಕೆಗಳನ್ನ ಬರೆದಿಟ್ಟು ಹೋಗಿ. ಹೋಗಿದ್ದು ಸ್ವಲ್ಪ ಹೊತ್ತು ಬಿಟ್ಟು ಬನ್ನಿ. ಆಮೇಲೆ ನಿಮ್ಮ ಸಮಸ್ಯೆಗೆ ಪರಿಹಾರ ಹುಡುಕೋಣ."

ಈಗಲೂ ಸಂಕೋಚ

ಡಾ॥ ಮೂರ್ತಿ ಶ್ರೀಪಾದ ಬರೆದಿದ್ದುದನ್ನು ನೋಡಿದರು. "ಲೈಂಗಿಕ

ಕ್ರಿಯೆಯ ಬಗ್ಗೆ ನನಗೆ ತಿಳಿವಳಿಕೆ ಬಂದದ್ದು ಸುಮಾರು ಆರು ವರ್ಷಗಳ ಹಿಂದೆ ಎನ್ನಬಹುದು. ಪುಸ್ತಕಗಳು ಮತ್ತು ಸಿನೇಮಾಗಳ ಮೂಲಕ. ಅದರ ಬಗ್ಗೆ ಮಾತಾಡಲು ಮೊದಲು, ಏಕೆ ಈಗಲೂ ಸಂಕೋಚವಾಗುತ್ತದೆ. ನನ್ನ ಸ್ನೇಹಿತರು ಆದರ ಬಗ್ಗೆ ಮಾತಾಡುತ್ತಿದ್ದರೆ ನನಗೆ ಬಹಳ ಮುಜುಗರವಾಗುತ್ತಿತ್ತು. ಲೈಂಗಿಕ ಕ್ರಿಯೆ ವ್ಯಕ್ತಿಯ ತೀರಾ ವೈಯಕ್ತಿಕ ಚಟುವಟಿಕೆ. ಅದರ ಬಗ್ಗೆ ಬಹಿರಂಗವಾಗಿ ಮಾತಾಡುವುದು ಸರಿ ಅಲ್ಲ ಎಂದು ನನ್ನ ಭಾವನೆ. ಅದೊಂದು ದೈಹಿಕ ಬಯಕೆ. ಅದನ್ನು ನಾವು ನಿಯಂತ್ರಣದಲ್ಲಿಡಬೇಕು. ಇಲ್ಲದಿದ್ದರೆ ತೊಂದರೆ ಖಂಡಿತ. ಪೂರ್ಣ ನಿಯಂತ್ರಣ ಸಾಧಿಸುವುದೇ ಪುರುಷನ ಲಕ್ಷಣ. ಲೈಂಗಿಕ ಬಯಕೆಗೆ ಸೋತು ಪದೇ ಪದೇ ಮಾಡಿದರೆ, ದೇಹದ ಆರೋಗ್ಯಕ್ಕೆ ಒಳ್ಳೆಯದಲ್ಲ. ಪ್ರತಿ ಬಾರಿ ಲೈಂಗಿಕ ಕ್ರಿಯೆ ಮಾಡಿದಾಗ ಹೆಣ್ಣು ಗಂಡಿನ ಶಕ್ತಿಯನ್ನು ಹೀರಿಬಿಡುತ್ತಾಳೆ. ಗಂಡು ನಿಸ್ತೇಜನಾಗುತ್ತಾನೆ ಎಂದು ಎಲ್ಲೋ ಓದಿದ ನೆನಪು. ಆದ್ದರಿಂದ ಲೈಂಗಿಕ ಕ್ರಿಯೆಯ ಮೇಲಿನ ಹತೋಟಿ ಗಂಡಸಿಗೆ ಬಹಳ ಮುಖ್ಯ ಎಂದು ನನಗನಿಸುತ್ತದೆ. ಬ್ರಹ್ಮಚರ್ಯದಿಂದ ನಮ್ಮ ಪೌರುಷ ವೃದ್ಧಿಯಾಗುತ್ತದೆ. ಅಲ್ಲದೆ ಲೈಂಗಿಕ ಕ್ರಿಯೆ ಸಂತಾನೋತ್ಪತ್ತಿಗೆ ದಾರಿ. ಆದ್ದರಿಂದ ಇನ್ನಷ್ಟು ಹತೋಟಿ ಅಗತ್ಯ.

ಲೈಂಗಿಕ ಚಟುವಟಿಕೆಯಿಂದ ವರ್ಣಿಸಲಾಗದಷ್ಟು ಸುಖ ಸಿಗುತ್ತದೆ ಎಂದು ಹೇಳುತ್ತಾರೆ. ಎಲ್ಲರೂ ಅದಕ್ಕಾಗಿ ಹಾತೊರೆಯುತ್ತಾರೆ. ಮೊದಲ ರಾತ್ರಿ ನಾನು ಅಂತಹ ಅಸದೃಶ ಸುಖಕ್ಕಾಗಿ ನಿರೀಕ್ಷೆ ಮಾಡಿದ್ದೆ. ಆದರೆ ಏನೂ ಆಗಲಿಲ್ಲ. ಆಕೆಯನ್ನು ಚುಂಬಿಸಿದಾಗ, ತಬ್ಬಿಕೊಂಡಾಗ ಹಿತವಾಗಿತ್ತು. ಆದರೆ ಆ ಹಿತ ನಾನು ಮುಂದುವರೆದಾಗ ಇರಲಿಲ್ಲ. ಲೈಂಗಿಕ ಕ್ರಿಯೆ ಬಗ್ಗೆ ಜನ ಸಲ್ಲದ, ಉತ್ಪ್ರೇಕ್ಷಿತ ಭಾವನೆ, ಕಲ್ಪನೆ ಇಟ್ಟುಕೊಂಡಿದ್ದಾರೆ ಎಂದು ನನ್ನ ಅನಿಸಿಕೆ."

ಮೂರ್ತಿಯವರು ಅನೂರಾಧ ಬರೆದ ಕಾಗದವನ್ನು ಕೈಗೆತ್ತಿಕೊಂಡರು. "ಲೈಂಗಿಕ ಕ್ರಿಯೆ ಮತ್ತು ಚಟುವಟಿಕೆ ಬಗ್ಗೆ ನನಗೆ ಪೂರ್ಣವಾಗಿ ಗೊತ್ತಿದೆ ಎಂದು ಹೇಳಲಾರೆ. ಪುಸ್ತಕಗಳು, ಸಿನೇಮಾ, ಮದುವೆಯಾದ ಗೆಳತಿಯರೊಂದಿಗೆ ಮಾತುಕತೆಯಿಂದ, ಇದರ ಬಗ್ಗೆ ಸುಮಾರಾದ ಕಲ್ಪನೆ ಬಂದಿದೆ ಎಂದು ಹೇಳಬಹುದು. ಹೆಣ್ಣಾಗಿ ಸಹಜವಾಗಿ ನನಗೆ ಈ ವಿಚಾರದಲ್ಲಿ ಬಹಳ ಸಂಕೋಚವಿದೆ. ಲೈಂಗಿಕ ಕ್ರಿಯೆ ಹೆಣ್ಣು ಗಂಡಿನ ನಡುವೆ ಆಕರ್ಷಣೆ ಮತ್ತು ಬಾಂಧವ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ನನ್ನ ಅನಿಸಿಕೆ. ಈ ಕ್ರಿಯೆಯಲ್ಲಿ ಗಂಡಹೆಂಡತಿ ಇಬ್ಬರೂ ಪರಸ್ಪರ ಸಹಕರಿಸಬೇಕು. ಹೆಂಡತಿಯಾದವಳು ಗಂಡನಿಗೆ ಒತ್ತಾಸೆಯಾಗಿರಬೇಕು ಎಂದು ಗೊತ್ತಿದೆ. ಆದರೆ ಲೈಂಗಿಕ ಕ್ರಿಯೆ ಒಂದು ಅಶ್ಲೀಲ ಕ್ರಿಯೆ. ಅದರ ಬಗ್ಗೆ ಗಂಡನೊಂದಿಗೆ ಹೇಗೆ ಮಾತಾಡುವುದು? ಹಾಗೆ ಮಾಡಿದರೆ ಆತ ಇವಳು

ಅತಿಕಾಮಿ ಎಂದುಕೊಂಡುಬಿಟ್ಟರೆ ? ಎಂಬ ಭಯ ನನ್ನನ್ನು ಕಾಡುತ್ತದೆ. ಪ್ರಥಮ ರಾತ್ರಿಯಂದೇ ಇವರು ದೈಹಿಕ ಸಂಪರ್ಕ ಮಾಡಲು ಪ್ರಯತ್ನಿಸಿದರು. ಅಂದು ನನಗೆ ಮೊದಲ ಬಾರಿಗೆ ಅವರೆದುರಿಗೆ ವಿವಸ್ತ್ರಳಾಗುವುದಕ್ಕೆ ಬಹಳ ಸಂಕೋಚ, ಮುಜುಗರವಾಯಿತು. ನನ್ನನ್ನು ಮದುವೆಯಾದವರಲ್ಲವೇ ಎಂದುಕೊಂಡರೂ ಮುಜುಗರ ಕಡಿಮೆ ಆಗಲಿಲ್ಲ. ಶರೀರವನ್ನು ಮುದುಡಿ ಗುಬ್ಬಚ್ಚಿಯಂತೆ ಮಲಗಿದೆ. ಅವರು ಅಪ್ಪಿಕೊಂಡಾಗ, ಮುದ್ದಿಸಿದಾಗ ನನ್ನ ದೇಹ ಸ್ಪಂದಿಸಿದರೂ ಸಂಭೋಗಕ್ಕೆ ಅದು ಅಣಿಯಾಗಲಿಲ್ಲವೆಂಬುದು ಈಗ ಯೋಚಿಸಿದರೆ ಅನಿಸುತ್ತದೆ. ಅವರು ಸಂಭೋಗಕ್ಕೆ ಯತ್ನಿಸಿದಾಗ ಆಗಲೇ ಇಲ್ಲ. ಮರುಕ್ಷಣ ಅವರ ಉದ್ರೇಕ ಇಳಿದು ಹೋಯಿತು. ಅವರು ತುಂಬಾ ಬೇಜಾರು ಮಾಡಿಕೊಂಡರು. ನನಗೂ ಬಹಳ ನಿರಾಶೆಯಾಯಿತು. ಲೈಂಗಿಕ ಕ್ರಿಯೆಯಿಂದ ಸಂತೋಷ ಸಿಕ್ಕುತ್ತದೆ, ಅನಿರ್ವಚನೀಯ ಆನಂದ ದೊರೆಯುತ್ತದೆ ಎಂದು ನನ್ನ ಮದುವೆಯಾದ ಗೆಳತಿಯರು ಹೇಳಿದ್ದರು. ಆದರೆ ಅದು ನಮಗಿನ್ನೂ ದಕ್ಕಿಲ್ಲ."

ಪರಿಹಾರ

"ನಿಮ್ಮ ಅಭಿಪ್ರಾಯಗಳನ್ನು ಓದಿದೆ. ನಿಮ್ಮ ಸಮಸ್ಯೆಗೆ ಕಾರಣ ಸ್ಪಷ್ಟವಾಗಿ ಕಾಣುತ್ತಿದೆ. ಅದನ್ನು ನೀವು ಸುಲಭವಾಗಿ ಪರಿಹರಿಸಿಕೊಳ್ಳಬಹುದು" ಡಾ॥ ಮೂರ್ತಿಯವರ ಮಾತುಗಳನ್ನು ಕೇಳಿ, ಅದುವರೆಗೆ ಸಂಕೋಚದಿಂದ ಮುದುಡಿಕೊಂಡು ಸಪ್ಪಗೆ ಕುಳಿತಿದ್ದ ಶ್ರೀಪಾದನ ಮುಖ ಅರಳಿತು, ತಲೆತಗ್ಗಿಸಿ ಕುಳಿತಿದ್ದ ಅನುರಾಧ ತಲೆ ಎತ್ತಿ ಅವರತ್ತ ನೋಡಿದಳು.

"ನೀವು ಇದ್ದಕ್ಕಿದ್ದ ಹಾಗೆ ಈ ವಿಚಾರವಾಗಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ ಎಂದಾಗ ನನಗೆ ಏನು ಬರೆಯಬೇಕು ಎನ್ನೋದೇ ಗೊತ್ತಾಗಲಿಲ್ಲ ಸರ್. ಕೊನೆಗೆ ಏನೋ ಒಂದಷ್ಟು ಬರೆದೆ. ನೀವು ಅದನ್ನು ಓದಿ ನಕ್ಕಿರಬೇಕು" ಎಂದ ಶ್ರೀಪಾದ.

"ನಿಮ್ಮ ಸಮಸ್ಯೆಗೆ ಕಾರಣ ನಿಮ್ಮ ಬರವಣಿಗೆಯಲ್ಲಿ ಸ್ಪಷ್ಟವಾಗಿದೆ. ಸಂಭೋಗದಲ್ಲಿ ನೀವು ಸೋಲೋದಕ್ಕೆ ಕಾರಣ ಲೈಂಗಿಕ ಕ್ರಿಯೆಯ ಬಗ್ಗೆ ನಿಮಗಿರೋ ಅಜ್ಞಾನ, ಸಂಕೋಚ. ಶ್ರೀಪಾದ, ನಿಮಗೆ ಲೈಂಗಿಕ ಕ್ರಿಯೆ ಬಗ್ಗೆ ದ್ವಂದ್ವ ಭಾವನೆ ಇದೆ. ಒಂದು ಕಡೆ ಅದರಿಂದ ಸುಖ ಸಂತೋಷದ ನಿರೀಕ್ಷೆ ಮಾಡ್ತೀರಿ. ಇನ್ನೊಂದು ಕಡೆ ಅದೊಂದು ದೈಹಿಕ ಬಯಕೆ, ಅದನ್ನು ನಿಯಂತ್ರಣದಲ್ಲಿಡಬೇಕು, ಅದಕ್ಕೆ ಬಲಿ ಆಗಬಾರದು ಅಂತ ಹೇಳ್ತೀರಿ. ಲೈಂಗಿಕ ಕ್ರಿಯೆ ಮಾಡಿದಾಗ, ಹೆಣ್ಣು ಗಂಡಿನ ಶಕ್ತಿಯನ್ನು ಹೀರಿಬಿಡ್ತಾಳೆ. ಆದರಿಂದ ಗಂಡು ದುರ್ಬಲನಾಗ್ತಾನೆ ಅನ್ನೋ ತಪ್ಪು ನಂಬಿಕೆ ಇಟ್ಟುಕೊಂಡಿದ್ದೀರಿ. ಜೊತೆಗೆ ಸಂತಾನೋತ್ಪತ್ತಿಯ ಭಯವೂ ಇದೆ. ಈ

ದ್ವಂದ್ವ, ತಪ್ಪು ನಂಬಿಕೆಗಳಿಂದ ನಿಮ್ಮ ಮನಸ್ಸು ಗೊಂದಲಕ್ಕೀಡಾಗಿ, ಘಾಸಿಗೊಂಡು ಸಮತೋಲನ ತಪ್ಪಿದಾಗ ಸಹಜವಾಗಿ ಲೈಂಗಿಕ ಕ್ರಿಯೆ ಸಾಧ್ಯ ಆಗಿಲ್ಲ. ಅನುರಾಧಾಗೆ ಲೈಂಗಿಕ ಕ್ರಿಯೆ ಬಗ್ಗೆ ಪೂರ್ಣ ತಿಳುವಳಿಕೆ ಇಲ್ಲ. ಈ ಕ್ರಿಯೇಲಿ ತನ್ನ ಪಾತ್ರದ ಅಸ್ಪಷ್ಟ ಕಲ್ಪನೆ ಮಾತ್ರ ಇದೆ. ಅದರ ಬಗ್ಗೆ ಮಾತನಾಡಿದರೆ ನೀವು ಎಲ್ಲಿ ತನ್ನನ್ನು ಅತಿಕಾಮಿ, ಲಜ್ಜೆ ಇಲ್ಲದೋಳು ಎಂದು ಬಿಡ್ತಿರೋ ಅನ್ನೊ ಹೆದರಿಕೆ ಇದೆ. ಜೊತೆಗೆ ಹೆಣ್ಣಿಗೆ ಸಹಜವಾದ ಸಂಕೋಚ, ಹಿಂಜರಿಕೆ ಇದೆ. ಅಲ್ಲದೆ ಸರಿಯಾದ ಪೂರ್ವಸಿದ್ಧತೆ ಇಲ್ಲದೆ, ಮೊದಲ ರಾತ್ರಿಯೇ ನಿಮ್ಮೆದುರಿಗೆ ಬಟ್ಟೆ ಕಳಚಬೇಕಾಗಿ ಬಂದಾಗ, ಆಕೆಯ ದೇಹ, ಮನಸ್ಸು ಮುದುಡಿ ಮುಚ್ಚಿದ ಪೆಟ್ಟಿಗೆ ಹಾಗೆ ಆಯಿತು. ಇಂಥಾ ಪ್ರತಿಕ್ರಿಯೆಯಿಂದ, ನಿಮ್ಮ ಉದ್ರೇಕ ಇಳಿದುಹೋಗಿದ್ದರಲ್ಲಿ ಏನೂ ಆಶ್ಚರ್ಯ ಇಲ್ಲ. ನಂತರ ವಿಫಲತೆಯ ಭಯ, ಆತಂಕಗಳೇ ನಿಮ್ಮ ಸಮಸ್ಯೆಗೆ ಕಾರಣ ಆಗಿದೆ."

ಡಾ॥ ಮೂರ್ತಿಯವರು ದಂಪತಿಗಳಿಗೆ ಲೈಂಗಿಕಕ್ರಿಯೆ ಮತ್ತು ಅದಕ್ಕೆ ಬೇಕಾದ ಸಿದ್ಧತೆಯ ಬಗೆಗೆ ಕೆಲವು ವಿವರಗಳನ್ನು ನೀಡಿದರು. ಲೈಂಗಿಕ ಕ್ರಿಯೆ ಒಂದು ಸೂಕ್ಷ್ಮ ಹಾಗೂ ಸಂಕೀರ್ಣವಾದ ದೈಹಿಕ ಮತ್ತು ಮಾನಸಿಕ ಚಟುವಟಿಕೆ ; ದಂಪತಿಗಳಲ್ಲಿ ಲೈಂಗಿಕ ಆಸೆ ಮೂಡಿ, ಲೈಂಗಿಕ ಕ್ರಿಯೆ ಪ್ರಾರಂಭವಾಗಿ, ಮುಗಿಯುವವರೆಗೆ, ಪ್ರತಿಯೊಂದು ಹಂತವೂ ಸ್ವಯಂಚಾಲಿತವಾಗಿ ತನಗೆ ತಾನೇ ನಡೆದು ಹೋಗುತ್ತೆ. ನಮ್ಮ ನರಮಂಡಲ ಮತ್ತು ಲೈಂಗಿಕ ಗ್ರಂಥಿಗಳು ಸ್ರವಿಸುವ ಚೋದನಿಕೆಗಳು ಈ ಇಡೀ ಕ್ರಿಯೆ ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತವೆ. ನಮ್ಮ ಮನಸ್ಸನ್ನು ಯಾವುದೇ ಆತಂಕ, ಭಯ ನಾಚಿಕೆ, ಹಿಂಜರಿತಗಳು ಆವರಿಸಿದ್ದರೆ, ಅದರ ಅಹಿತ ಪರಿಣಾಮ ನರಮಂಡಲದ ಮೇಲಾಗುತ್ತೆ. ಜೊತೆಗೆ ಲೈಂಗಿಕ ಕ್ರಿಯೆ ಬಗ್ಗೆ ನಮ್ಮ ನಿಲುವು, ಧೋರಣೆ, ಅನಿಸಿಕೆಗಳು ಕೂಡ ಪರಿಣಾಮ ಬೀರುತ್ತವೆ.

ಇದಲ್ಲದೆ ಗಂಡ ಹೆಂಡತಿ ಲೈಂಗಿಕ ಕ್ರಿಯೆಯಲ್ಲಿ ಹೊಂದಾಣಿಕೆ ಸಾಧಿಸಲು ಸಾಕಷ್ಟು ಕಾಲ ಬೇಕು. ಆದ್ದರಿಂದ ಮದುವೆಯಾದ ಮೇಲೆ, ಮೊದಲ ರಾತ್ರಿಯೇ ಸಂಭೋಗ ನಡೆಸಿ, ಅದರಿಂದ ಪೂರ್ಣ ಸಂತೋಷ ಪಡೆಯಬೇಕು ಎಂದು ನಿರೀಕ್ಷಿಸುವುದು ಸರಿ ಅಲ್ಲ. ಅನನುಭವಿಗಳಾದ ನೀವು ಪ್ರಾರಂಭದಲ್ಲಿ ವಿಫಲವಾಗಿರುವುದು ಅತಿಶಯವಲ್ಲ.

ಬಾಂಧವ್ಯ–ರಂಜನೆ

ಲೈಂಗಿಕ ಕ್ರಿಯೆಯ ಉದ್ದೇಶ ಕೇವಲ ಸಂತಾನೋತ್ಪತ್ತಿಯಲ್ಲ. ಅದರ

ಜೊತೆಗೆ, ಆದರ ಮೂಲಕ ಮಧುರ ಬಾಂಧವ್ಯವನ್ನೂ, ಮನಸ್ಸಿಗೆ ರಂಜನೆಯನ್ನೂ ಪಡೆಯುವುದೂ ಅಷ್ಟೇ ಮುಖ್ಯ. ಇದರಲ್ಲಿ ಗಂಡು ಮತ್ತು ಹೆಣ್ಣಿಗೆ ಸಮ ಪಾತ್ರ ಏದೆ. ಮೊದಲು ಪ್ರೀತಿ ಅನುರಾಗದ ಮಾತುಗಳನ್ನಾಡಿ, ದೈಹಿಕ ಸಾಮಿಪ್ಯದ, ಸ್ಪರ್ಶದ ಆನಂದವನ್ನು ಪಡೆಯಲು ಪ್ರಾರಂಭಿಸಬೇಕು. ಸಹಜವಾದ ಸಂಕೋಚ ವನ್ನು, ನಾಚಿಕೆಯನ್ನು ಕ್ರಮೇಣ ಹತೋಟಿಯಲ್ಲಿಟ್ಟುಕೊಂಡು ಒಬ್ಬರನ್ನೊಬ್ಬರು ಅರಿತುಕೊಳ್ಳಲು ಯತ್ನಿಸಬೇಕು. ಲೈಂಗಿಕ ಭಾವನೆಗಳನ್ನು, ಆಸೆಗಳನ್ನು ಮೊದಲು ಪರೋಕ್ಷವಾಗಿ, ನಂತರ ನೇರವಾಗಿ ಪರಸ್ಪರ ಹೇಳಿಕೊಳ್ಳಲು ಶುರುಮಾಡಿ. ಲೈಂಗಿಕ ಕ್ರಿಯೆ ಅಶ್ಲೀಲವಲ್ಲ. ಗುಟ್ಟಿನಲ್ಲಿ, ಬೇಗ ಮಾಡಿ ಮುಗಿಸಬೇಕಾದ ಅನಿಷ್ಟ ಕೆಲಸವಲ್ಲ. ಅದು ಆನಂದವನ್ನುಂಟು ಮಾಡುವ ಕುಶಲ ಕಲೆ. ಅದರ ಒಗ್ಗೆ ಆರೋಗ್ಯಕರ ನಿಲುವನ್ನು ಬೆಳೆಸಿಕೊಳ್ಳಿ. ಆಗ ಸಂಭೋಗ ಸುಲಲಿತವಾಗಿ, ಸರಾಗವಾಗಿ ನಡೆಯಲು ಹಾಗೂ ಅದರಿಂದ ಮೈಮನಗಳು ಅರಳು ವಂತಹ ಸುಖ, ಸಂತೃಪ್ತಿ ಸಿಗಲು ಸಾಧ್ಯವಾಗುತ್ತದೆ. ಪ್ರಯತ್ನಿಸಿ, ನಿಮಗೆ ಖಂಡಿತ ಯಶಸ್ಸು ದೊರಕುತ್ತದೆ' ಎಂದರು ಡಾ॥ ಮೂರ್ತಿ.

"ನಿಮ್ಮ ಈ ಸಲಹೆ–ಸಹಾಯಕ್ಕೆ ತುಂಬಾ ಥ್ಯಾಂಕ್ಸ್ ಸರ್. ನಮ್ಮ ಕಣ್ಣನ್ನ ನೀವು ತೆರೆಸಿದಿರಿ. ನಿಮ್ಮ ಉಪಕಾರಕ್ಕೆ ನಾವು ಏನು ಹೇಳಬೇಕೋ ಗೊತ್ತಾಗ್ತಾ ಇಲ್ಲ" ಎಂದ ಶ್ರೀಪಾದ, ಅನುರಾಧ ಎದ್ದು ಕೈ ಮುಗಿದರು.

o o o o

ಮೂರು ತಿಂಗಳ ನಂತರ ಡಾ॥ ಮೂರ್ತಿ ಅವರಿಗೆ ಒಂದು ಪತ್ರ ಬಂದಿತು.

ಮಾನ್ಯ ಶ್ರೀ ಡಾ॥ ಮೂರ್ತಿಯವರಿಗೆ ನಮ್ಮ ಅನಂತ ನಮಸ್ಕಾರಗಳು.

ಸರ್. ನಿಮ್ಮ ಅಮೂಲ್ಯವಾದ ಸಲಹೆ, ಮಾರ್ಗದರ್ಶನದಿಂದ, ನಮ್ಮ ಬಾಳಿನಲ್ಲಿ ತೃಪ್ತಿ, ಸಂತೋಷಗಳು ಕಾಲಿಟ್ಟಿವೆ. ಈಗ ನಮಗೆ ಯಾವ ತೊಂದರೆಯೂ ಇಲ್ಲ. ನಾವು ನಿಮಗೆ ಚಿರಋಣಿಗಳಾಗಿದ್ದೇವೆ. ಸದಾ ನಿಮ್ಮ ನೆರವನ್ನು ನೆನೆಸುವ.

ತಮ್ಮ ವಿಶ್ವಾಸಿಗಳು
ಶ್ರೀಪಾದ, ಅನುರಾಧ

ಗಂಡನ ಬಳಿ ಹೋಗಲು ಹೆದರುವ ಹೆಂಡತಿ

"ಡಾಕ್ಟರ್, ಬಿಡಿಸಲಾಗದ ಸಮಸ್ಯೆಯಿಂದ ಕಂಗೆಟ್ಟು ಹೋಗಿದ್ದೀವಿ. ಏನು ಮಾಡಬೇಕು ಅನ್ನೋದು ತಿಳೀದೆ ಕಂಗಾಲಾಗಿದ್ದೀವಿ. ಎಷ್ಟು ಯೋಚನೆ ಮಾಡಿದ್ರೂ, ಒಂದು ದಾರಿ ಕಾಣ್ತಾ ಇಲ್ಲ. ತಲೆ ಚಿಟ್ಟು ಹಿಡಿದಿದೆ. ರಾತ್ರಿ ಹೊತ್ತು ನಿದ್ರೆ ಬರೋದಿಲ್ಲ. ಹಸಿವಿಲ್ಲ. ಕೆಲಸ ಮಾಡೋದಕ್ಕೆ ಆಸಕ್ತಿ ಇಲ್ಲ."

"ಯಾಕೆ ಏನಾಗಿದೆ ನಿಮಗೆ?" ಕೇಳಿದರು ಡಾ|| ಮೂರ್ತಿ.

"ಬೇರೇನಿಲ್ಲ ಡಾಕ್ಟ್ರೆ, ನನಗೆ ಮದುವೆ ಆಗಿ ಆರು ತಿಂಗಳಾಯ್ತು. ಆದರೆ ಸುಖ ನನ್ನ ಪಾಲಿಗೆ ಬಿಸಿಲ್ಗುದುರೆ ಆಗಿದೆ. ನನ್ನ ಹೆಂಡತಿ ಸುಮತಿ ನನಗೆ ದೊಡ್ಡ ಸಮಸ್ಯೆ ಆಗಿಬಿಟ್ಟಿದ್ದಾಳೆ. ಅವಳಿಗೇನಾಗಿದೆ, ಆಕೆ ಆ ರೀತಿ ಯಾಕೆ ಮಾಡ್ತಾಳೆ, ಒಂದೂ ನನಗೆ ಅರ್ಥವಾಗಲ್ಲ. ಅವಳಿಗೂ ಗೊತ್ತಿಲ್ಲ. ಇತ್ತೀಚೆಗೆ ಆಕೆ 'ನನ್ನಿಂದ ನಿಮಗೆ ಸುಖವಿಲ್ಲ, ನೀವು ಇನ್ನೊಂದು ಮದ್ವೆ ಮಾಡಿಕೊಳ್ಳಿ' ಅಂತ ಒತ್ತಾಯ ಮಾಡ್ತಿದಾಳೆ. ತುಂಬಾ ಒಳ್ಳೇ ಹುಡುಗಿ ಸಾರ್, ನೋಡೋದಿಕ್ಕೂ ಲಕ್ಷಣವಾಗಿದ್ದಾಳೆ. ಬೆಳಗಿನಿಂದ ರಾತ್ರಿವರೆಗೆ ಒಂದು ನಿಮಿಷ ಸುಮ್ಮನೆ ಕೂತುಕೊಳ್ಳೋದಿಲ್ಲ, ಏನಾದ್ರೂ ಒಂದು ಕೆಲಸ ಮಾಡ್ತಾನೆ ಇರ್ತಾಳೆ. ಎಲ್ಲದರಲ್ಲೂ ಅಚ್ಚುಕಟ್ಟು. ಮನೆಯನ್ನು ಓರಣವಾಗಿಟ್ಟಿದಾಳೆ. ಮನೆಸುತ್ತಲೂ ಹೂವಿನ ಗಿಡಗಳನ್ನ ಬೆಳೆಸಿದಾಳೆ. ನನಗೆ ಏನು ಬೇಕು ಅಂತ ನಾನು ಬಾಯ್ಬಿಟ್ಟು ಹೇಳೋ ಮೊದಲೇ ಪೂರೈಸ್ತಾಳೆ.

ಪತ್ನಿಯ ಅನಾಸಕ್ತಿ

ನನ್ನ ತಂದೆ ತಾಯಿಯರೂ ಆಕೆಯ ಅಚ್ಚುಕಟ್ಟುತನ ಮತ್ತು ಕೆಲಸ ನೋಡಿ ಬಾಯಿ ತುಂಬಾ ಹೊಗಳ್ತಾರೆ. ಆದ್ರೆ ಎಲ್ಲಾ ಗುಣಾನ್ನೂ ಮಸಿ ನುಂಗಿತು ಅನ್ನೋ ಹಾಗೆ, ಸುಮತಿಗೆ ದಾಂಪತ್ಯ ಜೀವನದಲ್ಲಿ ಸ್ವಲ್ಪಾನೂ ಆಸಕ್ತಿ ಇಲ್ಲಾ ಡಾಕ್ಟರ್. ಓಮದ ಗೆಡ್ಡೆ ಅವಳು. 'ದೈಹಿಕ ಸಂಬಂಧದಲ್ಲಿ ನನಗೆ ಆಸಕ್ತಿ ಇಲ್ಲ, ಮನಸ್ಸಿಗೆ ಹಿಡಿಸೋಲ್ಲ. ಜಿಗುಪ್ಸೆ ತರಿಸೋ ಆ ಕೆಲಸ ನನ್ನಿಂದ ಸಾಧ್ಯವಿಲ್ಲ' ಅಂತಾಳೆ. ನಾನು

ಬೇಕಾದಷ್ಟು ಹೇಳಿ ನೋಡಿದೆ. ಎಲ್ಲಾ ಗೋರ್ಕಲ್ಲ ಮೇಲೆ ಮಳೆ ಸುರಿದ ಹಾಗಾಯ್ತು. ನನಗೆ ಕೋಪ ಬಂದು 'ನನ್ನನ್ನು ಏಕೆ ಮದ್ವೆ ಮಾಡ್ಕೊಂಡೆ ? ಯಾವುದಾದ್ರು ಮಠಕ್ಕೆ ಸೇರ್ಕೊಂಡು ಸನ್ಯಾಸಿನಿ ಆಗ್ಬಹುದಿತ್ತಲ್ಲ' ಅಂತ ದಬಾಯಿಸಿದ್ರೆ, ಅವಳು ಕಣ್ಣೀರು ಹಾಕ್ತಾಳೆ. ನನ್ನ ಪ್ರಶ್ನೆಗೆ ಉತ್ತರ ಕೊಡಲ್ಲ. ಅವಳ ಈ ಧೋರಣೇನ ಬದಲಾಯ್ಸೋದಿಕ್ಕೆ ನಾನು ಬಹಳ ಪ್ರಯತ್ನಪಟ್ಟೆ. ಏನೂ ಪ್ರಯೋಜನವಾಗಿಲ್ಲ. ಮನಸ್ಸಿಗೆ ಬಹಳ ಬೇಜಾರಾಗಿದೆ."

ಅಷ್ಟು ಹೊತ್ತೂ ಮೌನವಾಗಿ ಎಲ್ಲವನ್ನೂ ಕೇಳುತ್ತಿದ್ದ ಡಾ॥ ಮೂರ್ತಿ.

"ಆಕೆಗೆ ಇಷ್ಟೊಂದು ಅನಾಸಕ್ತಿ ಬರಲು ಏನು ಕಾರಣ ಇರಬಹುದು ಅಂತ ನಿಮ್ಮ ಅಭಿಪ್ರಾಯ ಗೋಪಾಲ್ ?" ಎಂದ ಪ್ರಶ್ನಿಸಿದರು.

"ನನಗಂತೂ ಗೊತ್ತಾಗ್ತಾ ಇಲ್ಲ ಸಾರ್. ಅವಳ ಈ ವರ್ತನೆ ನನಗೆ ಒಂದು ದೊಡ್ಡ ಸಮಸ್ಯೆ ಆಗಿದೆ. ನಾನೂ ಕೆಲವು ಮನಶಾಸ್ತ್ರದ ಪುಸ್ತಕಗಳನ್ನ ಓದಿದೀನಿ. ಲೈಂಗಿಕ ಅನಾಸಕ್ತಿಗೆ ತಪ್ಪು ನಂಬಿಕೆ, ಅಹಿತ ಅನುಭವ, ಭಯ ಕಾರಣ ಅಂತ ತಿಳಿದಿದೀನಿ. ಆಕೇನ ಇದರ ಬಗ್ಗೆ ಕೇಳಿ ನೋಡಿದೆ. 'ನೋಡು ನನ್ನ ಹತ್ತಿರ ಸಂಕೋಚ ಬೇಡ. ಯಾವುದನ್ನೂ ಮುಚ್ಚಿಟ್ಟುಕೋ ಬೇಡ. ನಿನಗೆ ಲೈಂಗಿಕ ಆಸೆ ಇಲ್ಲದೇ ಇರೋದಿಕ್ಕೆ ಏನು ಕಾರಣ ? ಅದರ ಬಗ್ಗೆ ಜಿಗುಪ್ಸೆ ಬಂದಿರಬೇಕಾದರೆ, ನಿನ್ನ ಜೀವನದಲ್ಲಿ ಏನಾದರೂ ಅಹಿತಕರ ಘಟನೆ ನಡೆದಿದೆಯಾ ? ನಿನ್ನನ್ನು ಕೆಡಿಸೋದಿಕ್ಕೆ ಯಾರಾದರೂ ಪ್ರಯತ್ನ ಪಟ್ಟಿದ್ದರಾ ? ಅಥವಾ ನಿನ್ನ ಸ್ನೇಹಿತೆಯರಲ್ಲಿ ಯಾರಾದರೂ ತಮ್ಮ ಕೆಟ್ಟ ಅನುಭವಾನ್ನ ನಿನಗೆ ಹೇಳಿದರಾ ?' ಆದಕ್ಕೆ ಅವಳು 'ಇಲ್ಲಾ ಅಂಥಾದ್ದೇನೂ ನಡೆದಿಲ್ಲ. ನನ್ನಾಣೆ ನಂಬಿ.' ಅಂತ ಪ್ರಮಾಣ ಮಾಡ್ತಾಳೆ.

ನಮ್ಮ ಮೊದಲ ರಾತ್ರೀನೇ ಅವಳು ವಿಚಿತ್ರವಾಗಿ ನಡೆದುಕೊಂಡಳು ಡಾಕ್ಟರೇ. ರೂಮಿಗೆ ಬಂದೋಳು ನನ್ನಿಂದ ದೂರದಲ್ಲೇ ಕೂತಳು. ನಾನು ಒಂದೆರಡು ಮಾತಾಡಿ "ಸುಮ ಅಷ್ಟು ದೂರ ಯಾಕೆ ಕೂತಿದೀಯಾ ಹತ್ತಿರ ಬಾ" ಅಂದೆ. ಆಕೆ 'ನನಗೆ ಭಯವಾಗತ್ತೆ ನಿಮ್ಮ ಹತ್ತಿರ ಬರೋಲ್ಲ' ಅಂದಳು. ನನಗೆ ನಗು ಬಂತು. 'ನಾನೇನು ಸಿಂಹನೇ, ಕರಡೀನೇ, ಭಯ ಯಾಕೆ, ನೀನು ಹತ್ತಿರ ಬರದೇ ಹೋದರೆ ನಾನೇ ನಿನ್ನ ಹತ್ತಿರ ಬರ್ತೀನಿ' ಅಂದೆ. ಅವಳ ಮುಖ ಭಯದಿಂದ ಕಪ್ಪಿಟ್ಟು ಹೋಯಿತು. ದೇಹ ನಡುಗೋದಿಕ್ಕೆ ಪ್ರಾರಂಭ ಆಯ್ತು. ಅವಳ ಸ್ಥಿತೀನ ನೋಡಿ ನನಗೆ ಗಾಬರಿ ಆಯ್ತು. 'ಯಾಕೆ ಸುಮ ನಿನಗೆ ಮೈ ಹುಷಾರಿಲ್ವೆ' ಅಂತ ಕೇಳಿದೆ, 'ಹೂಂ. ತಲೆನೋವು ತಲೆ ಸಿಡೀತಾ ಇದೆ' ಅಂದಳು. 'ಹಾಗಾದ್ರೆ ಮಲಕ್ಕೋ, ವಿಶ್ರಾಂತಿ ತಗೊಂಡರೆ ಸರಿಹೋಗುತ್ತೆ' ಎಂದೆ. ಆಕೆ ಮುಸುಕೆಳೆದು ಕೊಂಡು ಮಲಗಿಬಿಟ್ಟಳು. ನನಗೆ ತುಂಬಾ ನಿರಾಶೆ ಆಯಿತು. ಮೊದಲ ರಾತ್ರಿ

ಬಗ್ಗೆ ನಾನು ಏನೇನೋ ಕಲ್ಪನೆ ಮಾಡಿಕೊಂಡಿದ್ದೆ. ಆದರೆ ಸುಮತಿ ನಡೆದುಕೊಂಡ ರೀತಿಯಿಂದ ನನ್ನೆಲ್ಲಾ ಕಲ್ಪನೆಗಳು ಹಾಳಾದವು. ಸುಮತಿ ಅಜ್ಞಾನಿ ಇರಬಹುದೇ, ಅರಸಿಕಳೇ ಅಂತ ಯೋಚಿಸಿದೆ. ಗಂಡನ ಜೊತೆ ಮೊದಲ ರಾತ್ರಿ ಹೇಗೆ ನಡಕೋಬೇಕು ಅನ್ನೋದು ಅವಳಿಗೆ ಗೊತ್ತಿಲ್ಲವೇ ಅಥವಾ ಬೇರೆ ಯಾರನ್ನೋ ಪ್ರೀತಿಸಿ, ಬಲವಂತಕ್ಕೆ ನನ್ನ ಮದುವೆ ಆಗಿದ್ದಾಳೋ ಅಂತ ಯೋಚಿಸಿದೆ. ಸ್ವಲ್ಪ ಹೊತ್ತು ಆದ ಮೇಲೆ ಮುಸುಕು ಸರಿಸಿ ನೋಡಿದೆ. ಆಕೆ ಪುಟ್ಟ ಮಗು ಹಾಗೆ ನಿದ್ದೆ ಮಾಡ್ತಾ ಇದ್ದಳು. ಮದುವೆ ಗಲಾಟೆಯಿಂದ ಸುಸ್ತಾಗಿರಬೇಕು. ತಲೆನೋವು ಬಂದಿರಬೇಕು ಅಂದುಕೊಂಡು ನನ್ನನ್ನು ನಾನೇ ಸಮಾಧಾನ ಮಾಡಿಕೊಂಡೆ.

ಆದರೆ ಸಮಾಧಾನ ಬಹಳ ದಿನ ಉಳಿಯಲಿಲ್ಲ. ಶಾಸ್ತ್ರಗಳೆಲ್ಲ ಮುಗಿದು ಎರಡು ವಾರಗಳಾದ ಮೇಲೆ ತಂದೆ ತಾಯಿ ಜೊತೆಯಲ್ಲಿದ್ದು ಅನಂತರ ನಮ್ಮ ಮನೆಗೆ ಬಂದಳು. ರಾತ್ರಿ ರೂಂಗೆ ಬಂದಾಗ, ನಾನು ನಗುತ್ತಾ 'ಏನು ಸುಮ. ನಾನಿನ್ನೂ ಹುಲಿ ಕರಡಿ ಹಾಗೆ ಕಾಣಿಸ್ತೀನಾ ? ಭಯ ಕಡಿಮ ಆಗಿದೆಯಾ ?' ಕೇಳಿದೆ. ಅವಳು ತಲೆ ತಗ್ಗಿಸಿದಳು. ಕಣ್ಣಲ್ಲಿ ನೀರಾಡಿತು. ಭಾವೋದ್ವೇಗಕ್ಕೆ ಒಳಗಾದ ಹಾಗೆ ಅವಳ ಶರೀರ ಕಂಪಿಸ್ತಾ ಇತ್ತು. ಸ್ವಲ್ಪ ಹೊತ್ತಿನ ಮೇಲೆ ಆಕೆ, 'ನೀವು ನನ್ನ ತಪ್ಪು ತಿಳಿಯಬೇಡಿ. ನನ್ನ ಭಯ ಸ್ವಲ್ಪವೂ ಕಡಿಮೆಯಾಗಿಲ್ಲ. ನನ್ನ ಹತೋಟಿ ಇಲ್ಲದೇನೇ ಎದೆ ನಡುಗುತ್ತೆ. ಕಾಲುಗಳಲ್ಲಿ ಶಕ್ತಿ ಇಲ್ಲದಂತಾಗಿದೆ. ನಿಮ್ಮ ಹತ್ತಿರ ಬರೋದಿಕ್ಕೆ ಆಗ್ತಾ ಇಲ್ಲ. ಉಸಿರು ಸಿಕ್ಕಿಹಾಕಿಕೊಂಡ ಹಾಗೆ ಆಗುತ್ತೆ. ನಿಮ್ಮನ್ನು ನಿರಾಸೆಗೊಳಿಸ್ತಾ ಇದೀನಿ. ದಯವಿಟ್ಟು ನನ್ನ ಕ್ಷಮಿಸಿ. ನನಗೆ ಸ್ವಲ್ಪ ಸಮಯ ಕೊಡಿ. ಕ್ರಮೇಣ ಇದೆಲ್ಲಾ ಸರಿಹೋಗಬಹುದು' ಅಂದಳು. ಅವಳ ಅಸಹಾಯ ಕತೆ ನೋಡಿ ನನಗೆ ಅಯ್ಯೋ ಅನ್ನಿಸ್ತು. ಅನುಕಂಪ ಬಂತು. ಯಾವುದೋ ಒಂದು ಮನೋಕ್ಲೇಶ ಆಕೇನ ಕಾಡ್ತಾ ಇದೆ. ಆತುರ ಪಡೋದು ಬೇಡ ಅಂತ ನಿಶ್ಚಯ ಮಾಡ್ದೆ. ಆಗಲಿ ಸುಮ, ನಾನು ಖಂಡಿತ ಬೇಜಾರು ಮಾಡ್ಕೋಳಲ್ಲ, ಧೈರ್ಯ ತಂದ್ಕೋ. ನಾನು ನಿನ್ನ ಮನಸಾರೆ ಪ್ರೀತಿಸ್ತೀನೆ, ಶರೀರ ಸುಖ ಪಡೆಯೋದೊಂದೇ ದಾಂಪತ್ಯ ಜೀವನದ ಉದ್ದೇಶ ಅಲ್ಲ. ನೀನು ನನ್ನ ಜೊತೆ ಹೊಂದಿಕೊಳ್ಳೋಕೆ. ಸಂತೋಷವಾಗಿರೋಕೆ ಏನು ಬೇಕಾದರೂ ಮಾಡ್ತೀನಿ. ಜೊತೇಲಿ ಮಲಕ್ಕೋ ಅಂತ ಬಲವಂತ ಮಾಡೋಲ್ಲ. ಆದರೆ ಈ ಭಯ ಬಿಡೋದಿಕ್ಕೆ ಪ್ರಯತ್ನ ಪಡು' ಅಂದೆ. ಕೃತಜ್ಞತೆಯಿಂದ ಆಕೆ ನನ್ನನ್ನ ನೋಡಿದಳು 'ನೀನು ಬೇರೆ ಮಲಗು. ಆದರೆ ಅಮ್ಮನಿಗೆ ಇದು ಗೊತ್ತಾಗೋದು ಬೇಡ. ಬೇಡದ ಪ್ರಶ್ನೆಗಳು ಬರುತ್ವೆ ಅಂದೆ. ಹೀಗೆ ಮದುವೆಯಾದ್ರೂ ಬ್ರಹ್ಮಚಾರಿಗಳ ಹಾಗೆ ನಾವು ಇದೀವಿ."

'ಸುಮತಿ ನನ್ನನ್ನು ಮಗುವಿನ ಹಾಗೆ ನೋಡಿಕೊಳ್ತಾಳೆ ಸರ್. ಒಂದು ಆಶ್ಚರ್ಯದ ವಿಚಾರ ಅಂದರೆ ಹಗಲು ಹೊತ್ತು ನನ್ನ ಹತ್ತಿರ ಬರೋದಕ್ಕೆ, ನನ್ನನ್ನು ಮುಟ್ಟೋದಕ್ಕೆ ಆಕೆ ಭಯಪಡದೇ ಇರೋದು. ನಾನು ತಲೆಗೆ ನೀರು ಹಾಕಿ ಕೊಳ್ಳಲು ಹೋದರೆ ಆಕೆಯೇ ಬಂದು ನನ್ನ ಬೆನ್ನು ಉಜ್ಜುತ್ತಾಳೆ. ನಮ್ಮ ಬಚ್ಚಲು ಮನೆ ತುಂಬಾ ಚಿಕ್ಕದು ಸರ್. ನನ್ನ ಹತ್ತಿರವೇ ನಿಂತು ನೀರು ಹುಯ್ಯುತ್ತಾಳೆ. ಇದು ಅವಳಿಗೂ ಆಶ್ಚರ್ಯ. ರಾತ್ರಿ ಮಲಗೋ ಕೋಣೇಲಿ ನನ್ನ ಹತ್ತಿರ ಬರೋದಿಕ್ಕೆ ಮಾತ್ರ ಹೆದರ್ತಾಳೆ.'

'ಅವಳ ಈ ವಿಚಿತ್ರ ಭಯಾನ್ನ ತೊಡೆದು ಹಾಕೋದಕ್ಕೆ ನಾನೂ ತುಂಬಾ ಪ್ರಯತ್ನ ಪಟ್ಟೆ ಸಾರ್. ದೂರದಲ್ಲೇ ಕೂತು ಸರಸವಾಗಿ ಮಾತಾಡೋದು, ಪ್ರೇಮ ಸನ್ನಿವೇಶ, ಸಂಭಾಷಣೆಗಳಿರೋ ಕಥೆ ಕಾದಂಬರೀನ ಓದಿ ಹೇಳೋದು. ಸಿನಿಮಾ ವಿಚಾರಗಳನ್ನು ಮಾತಾಡೋದು ಎಲ್ಲ ಮಾಡಿ ನೋಡಿದೆ. ಇಂಥಾ ಸಂದರ್ಭದಲ್ಲೆಲ್ಲಾ ಚೆನ್ನಾಗಿರ್ತಾಳೆ. ಆಮೇಲೆ ಯಥಾ ಪ್ರಕಾರ ಭಯ. ಹೀಗೆಲ್ಲ ಮಾಡಿದ್ರೆ ಪ್ರಯೋಜನ ಇಲ್ಲ, ಭಯ ಭಯ ಅಂತ ಹಿಂಜರಿದರೆ ಭಯ ಹೋಗೋ ದಿಲ್ಲ ಅಂತ, ಒಮ್ಮೆ ಆಕೇನ ಅನಿರೀಕ್ಷಿತವಾಗಿ ತಬ್ಬಿಹಿಡಿದು ಮಾತಾಡಿಸಿದರೆ ಆಕೆಯ ಮೈ ಚಳಿ ಬಿಡುತ್ತೆ ಅಂತ ಯೋಚನೆ ಮಾಡಿ, ಹಾಗೇ ಮಾಡಿದಾಗ, ಆಕೆ ಕಿರುಚಿ ಕೊಂಡು ಬಿಟ್ಳು.

ಬೇರೆ ಮದುವೆಗೆ ಒತ್ತಾಯ

ಮದುವೆ ಆಗಿ ಆರು ತಿಂಗಳಾಗ್ತಾ ಬಂತು. ಅವಳಲ್ಲಿ ಯಾವ ಬದಲಾವಣೇನೂ ಆಗಿಲ್ಲ. ಅದು ಅವಳಿಗೂ ಗೊತ್ತಾಗಿ ಬೇರೆ ಮದುವೆ ಆಗೋಕೆ ಒತ್ತಾಯಿಸ್ತಿದಾಳೆ. ನೀವು ನಮಗೆ ಸಹಾಯ ಮಾಡ್ಬೇಕು ಸಾರ್. ನಾವು ಎಲ್ಲರಂತೆ ಜೀವನ ಮಾಡೋ ಹಾಗೆ ಮಾಡಬೇಕು."

"ಸುಮತೀನ ಕರ್ಕೊಂಡು ಬನ್ನಿ ಗೋಪಾಲ್, ಪ್ರಯತ್ನ ಮಾಡೋಣ. ಆಕೆಯ ಈ ಭಯಕ್ಕೆ ಏನು ಕಾರಣ ಅಂತ ಗೊತ್ತಾದ್ರೆ, ಪರಿಹಾರ ಹುಡುಕ ಬಹುದು."

"ಆಕೆ ಹೊರಗೆ ಕೂತಿದಾಳೆ ಸರ್. ಸಂಕೋಚದಿಂದ ನನ್ನ ಜೊತೆ ಒಳಕ್ಕೆ ಬರ್ಲಿಲ್ಲ. ಹೋಗಿ ಕರೀತೇನೆ" ಎಂದು ಗೋಪಾಲ್ ಹೊರಹೋಗಿ, ಸುಮತಿಯನ್ನು ಕರೆತಂದ.

ಗೋಪಾಲ್ ಹೇಳಿದಂತೆ ಆಕೆ ಲಕ್ಷಣವಾಗಿದ್ದಳು. "ಬಾಮ್ಮ ಕುಳಿತುಕೋ. ನಿನ್ನ ಯಜಮಾನರು ನಿನ್ನ ಸಮಸ್ಯೇನ ವಿವರವಾಗಿ ಹೇಳಿದಾರೆ. ಸಂಕೋಚ

ಪಟ್ಟುಕೋಬೇಡ. ನಿನಗೆ ಈ ರೀತಿ ಭಯ ಆಗೋದಿಕ್ಕೆ ಏನು ಕಾರಣ ಅಂತ ನಿನ್ನ ಊಹೆ? ನಿನಗಾಗೋದನ್ನ ಚಾಚೂ ತಪ್ಪದೆ ಹೇಳ್ತೀಯಾ ?"

"ಕಾರಣ ನನಗೆ ಗೊತ್ತಿಲ್ಲ ಡಾಕ್ಟ್ರೆ, ಇವರು ನಿಮಗೆ ಹೇಳಿರಬೇಕು. ಹಗಲು ಹೊತ್ತು ಇವರ ಹತ್ತಿರ ಹೋಗೋದಿಕ್ಕೆ ಯಾವ ತೊಂದರೇನೂ ಇಲ್ಲ. ಆದ್ರೆ ರಾತ್ರಿ ಹೊತ್ತು, ಸಹಿಸೋದಕ್ಕೆ ಆಗದಷ್ಟು ಭಯ ಬಂದುಬಿಡುತ್ತೆ. ಜೀವ ಹೋದಂತೆ ಆಗುತ್ತೆ."

"ಗಂಡನೊಂದಿಗೆ ಸೇರ್ಬೇಕು, ದಾಂಪತ್ಯ ಸುಖ ಅನುಭವಿಸಬೇಕು, ಮಕ್ಕಳನ್ನು ಪಡೀಬೇಕು ಅನ್ನೊ ಆಸೆ ನಿನಗಿಲ್ಲವೆ ?"

"ಖಂಡಿತ ಇದೆ ಸಾರ್. ಮಕ್ಕಳೆಂದರೆ ನನಗೆ ತುಂಬಾ ಆಸೆ. ಆದರೆ ಗರ್ಭಿಣಿ ಆಗೋದು ಮಗುವನ್ನು ಹೆರೋದು ಬಹಳ ಕಷ್ಟ ಅಲ್ವೆ ; ನನಗೆ ಹೆದರಿಕೆ ಆಗುತ್ತೆ."

"ಈ ಹೆದರಿಕೆ ಬರೋಕೆ ಏನು ಕಾರಣ ?"

"ಹೀಗೇ ಕೇಳ್ತೀವಲ್ಲ. ಕೆಲವರಿಗೆ ಹೆರಿಗೆ ಕಷ್ಟವಾಗೋದು, ತಾಯಿನೋ, ಮಗುವೋ ಸತ್ಹೋಗೋದು."

"ಇದಕ್ಕೆ ನೀನು ಹೆದರುವ ಕಾರಣವಿಲ್ಲ. ಆಗಾಗ ಪರೀಕ್ಷೆ ಮಾಡಿಸಿಕೊಂಡು, ಡಾಕ್ಟರ ಸಹಾಯವಿದ್ದರೆ, ಹೆರಿಗೆ ಸುಸೂತ್ರವಾಗಿ ಆಗುತ್ತೆ. ಅಲ್ಲದೆ ಈಗಲೇ ಮಗು ಬೇಡ ಅನ್ನೋದಾದರೆ, ಗರ್ಭನಿರೋಧಕ ವಿಧಾನಗಳು ಇವೆ. ನಿಮಗೆ ಗೊತ್ತಿಲ್ಲವೇನಮ್ಮ ?"

"ಗೊತ್ತಿದೆ ಸಾರ್."

"ಹಾಗಾದರೆ ನಿನಗೆ ಲೈಂಗಿಕ ಕ್ರಿಯೆ ಬಗ್ಗೆ ಭಯ ಇರಬೇಕು..."

"ನೀವು ಹೇಳೋದು ನಿಜ ಸಾರ್. ಆದರೆ ಇದು ಒಂದು ವಿಚಿತ್ರ ಭಯ. ಸಿನಿಮಾ ನೋಡಿದಾಗ, ಕಥೆ ಕಾದಂಬರಿ ಓದ್ದಾಗ ನನಗೂ ಆಸೆಯಾಗುತ್ತೆ. ರಾತ್ರಿ ಆಗ್ತಿದ್ದಹಾಗೆ, ಇವರ ಹತ್ತಿರ ಹೋಗ್ಬೇಕು ಅಂದಾಗ ಭಯ ಆವರಿಸಿಕೊಳ್ಳುತ್ತೆ. ನನಗೆ ಏನು ಮಾಡ್ಬೇಕು ಅಂತ ತೋಚ್ತಾ ಇಲ್ಲ."

"ಯೋಚನೆ ಮಾಡಬೇಡಮ್ಮ. ನೀನು ನಾಳೆ ಬೆಳಿಗ್ಗೆ ಏನೂ ತಿನ್ನದೆ ಬಾ. ಒಂದು ಸಣ್ಣ ಇನ್‌ಜೆಕ್ಷನ್ ಕೊಟ್ಟು. ನಿನ್ನ ಮನಸ್ಸಿನಲ್ಲಿರೋ ಭಯದ ಕಾರಣಾನ್ನ ಪತ್ತೆ ಮಾಡೋಣ."

ಕ್ರೂರ ಭಾವ

ಔಷಧ ಆಕೆಯ ರಕ್ತನಾಳದೊಳಕ್ಕೆ ಹೋಗುತ್ತಿದ್ದಂತೆ ಸುಮತಿಯ ಕಣ್ಣುಗಳು ಮುಚ್ಚಿಕೊಂಡವು.

"ಸುಮತಿ, ಈಗ ನಿನಗೆ ಏನಾಗ್ತದೆ ?"

"ಎಲ್ಲೋ ತೇಲಿಹೋದ ಹಾಗೆ ಆಗ್ತಿದೆ..."

"ಈಗ ನಿಮಗೆ ಭಯವೇ ?"

"ಇಲ್ಲ..."

"ನಿಮ್ಮ ಯಜಮಾನ್ರನ್ನ ಕಂಡರೆ ?"

"ಅವರನ್ನ ಕಂಡರೆ ಭಯ."

"ಏಕೆ ?"

"ಅವರು ಗಂಡಸು ಅದಕ್ಕೆ. ಗಂಡಸರು ಕ್ರೂರಿಗಳು"

"ಗೋಪಾಲ್ ಕ್ರೂರಿಯೆ ? ಹಾಗೆ ನಡೆದುಕೊಂಡಿದ್ದಾರೆಯೆ ?"

"ಇಲ್ಲ. ಆದರೆ ಕ್ರೂರಿಯಾಗಿ ನಡೆದುಕೋಬಹುದು."

"ಅದು ಹೇಗೆ ಗೊತ್ತು ?"

"ರಾಜಪ್ಪ ಕ್ರೂರಿ. ಅವನು ಗಂಡಸು, ಇವರೂ ಗಂಡಸು."

"ಈ ರಾಜಪ್ಪ ಯಾರು ?"

"ಅವನು ನನ್ನ ಭಾವ. ನನ್ನ ಅಕ್ಕನ ಗಂಡ. ರಾಕ್ಷಸ."

"ಆತ ನಿನ್ನೊಂದಿಗೆ ಕ್ರೂರವಾಗಿ ನಡೆದುಕೊಂಡನೆ ?"

"ಇಲ್ಲ. ಆತ ನನ್ನ ಅಕ್ಕನಿಗೆ ಸಹಿಸೋದಕ್ಕೆ ಆಗದಷ್ಟು ಕಷ್ಟ ಕೊಟ್ಟ. ಕೊನೆಗೆ ಅವಳು ಸಾಯೋಹಾಗೆ ಮಾಡಿದ."

"ಹೇಗೆ ?"

"ರಾಜಪ್ಪ ಕುಡುಕ. ದಿನಾ ಕಂಠಪೂರ್ತಿ ಕುಡಿದು ಬರೋದು, ಅಕ್ಕನ್ನ ಚೆನ್ನಾಗಿ ಹೊಡೆಯೋದು. ಅವಳು ಕಣ್ಣೀರಲ್ಲಿ ಕೈ ತೊಳೀತಿದ್ದಳು. ಒಂದು ದಿನ..." ಸುಮತಿ ಅಳತೊಡಗಿದಳು.

"ಆ ದಿನ ಏನಾಯಿತಮ್ಮ ?"

"ಆ ದಿನ ರಾತ್ರಿ ಕುಡಿದು ಬಂದ. ನಾನಿರೋದನ್ನೂ ನೋಡದೆ, ಅಶ್ಲೀಲ ವಾಗಿ ನಡೆದುಕೊಂಡ. ಅಕ್ಕ, 'ಏನಿದು ನಿಮಗೆ ಮಾನ ಮರ್ಯಾದೆ ಬೇಡವಾ. ಸುಮತಿ ಎದುರು ಹೀಗೆ ಆಡ್ತೀರ' ಅಂತ ಪ್ರತಿಭಟಿಸಿದಳು. ಆತ ಸಿಟ್ಟಿಗೆದ್ದ. 'ನಾನು ನಿನ್ನ ಗಂಡ ಕಣೇ, ನಾನು ಕೇಳಿದಾಗ ನಿನ್ನ ಮೈಯನ್ನು ನನಗೆ ಕೊಡ್ಬೇಕು. ಇವಳೆದುರಿಗೆ ನಿನ್ನ ಮಾನ ಕಳೀತೀನಿ' ಅಂತ ಕೂಗಾಡಿದ. ಅಕ್ಕನನ್ನು ಹಿಡಿದುಕೊಂಡು

ಎಳೆದಾಡಿದ. ಆಕೆಯು ಬಟ್ಟೇನ ಕಿತ್ತೆಸೆದ. ನಾನು ಕಿರುಚಿಕೊಂಡು ಅಡುಗೆ ಮನೆಗೆ ಹೋಗಿ ಬಾಗಿಲು ಹಾಕಿಕೊಂಡೆ. ಒಂದು ಘಂಟೆಯ ನಂತರ ಕದ ತೆರೆದು ಈಚೆಗೆ ಬಂದೆ. ರಾಜಪ್ಪ ಒಂದು ಕಡೆ ಮಲಗಿ ಗೊರಕೆ ಹೊಡೀತಿದ್ದ. ಅರೆ ಬೆತ್ತಲಾಗಿದ್ದ ಅವನ್ನ ಕಂಡು ವಾಂತಿ ಬಂತು. ಅಕ್ಕ ಅಲ್ಲೆಲ್ಲೂ ಕಾಣಲಿಲ್ಲ. ನನಗೆ ಭಯವಾಗಿ ಹೊರ ಗಡೆಗೆ ಓಡಿದೆ. ನನ್ನ ಕೂಗಾಟ ಕೇಳಿ ಅಕ್ಕಪಕ್ಕದೋರು ಬಂದರು. ಅಕ್ಕನಿಗಾಗಿ ಎಲ್ಲಾ ಕಡೆ ಹುಡುಕಿದರು. ಮಾರನೇ ದಿನ ಕೆರೇಲಿ ಅವಳ ಹೆಣ ಸಿಕ್ತು. ರಾಜಪ್ಪನನ್ನು ಪೊಲೀಸ್ನೋರು ಎಳಕೊಂಡು ಹೋದರು.

ಆ ದಿನದ ಘಟನೇನ ನೆನೆಸಿಕೊಂಡ್ರೆ ನನ್ನ ಗುಂಡಿಗೆ ಹೊಡೆದು ಹೋಗುತ್ತೆ. ಆತ ಮೃಗದ ಹಾಗೆ ನನ್ನ ಅಕ್ಕನ ಮೇಲೆ ಬಿದ್ದದ್ದನ್ನ ನೆನೆಸಿದ್ರೆ ಅಸಹ್ಯ, ಜಿಗುಪ್ಸೆ ಆಗುತ್ತೆ. ಮೈಮೇಲೆ ಮುಳ್ಳು ಏಳುತ್ತೆ."

"ಸುಮತಿ, ನಿನಗೆ ಗಂಡ ಹೆಂಡತಿ ಸಂಬಂಧ ಅಂದರೆ, ನಿನ್ನ ಅಕ್ಕನ ದುರಂತ ಜ್ಞಾಪಕಕ್ಕೆ ಬರುತ್ತಾ ? ಈ ಕಾರಣದಿಂದ ಗೋಪಾಲ್ ಬಳಿ ಹೋಗಲು ಹೆದರ್ತೀಯಾ ?"

"ಹೌದು, ಲೈಂಗಿಕ ಸಂಬಂಧ ಅಂದ್ರೆ ಆ ದೃಶ್ಯ ಜ್ಞಾಪಕಕ್ಕೆ ಬರುತ್ತೆ. ಭಯ ಅಸಹ್ಯ, ಜಿಗುಪ್ಸೆ ಮನಸ್ಸನ್ನು ತುಂಬಿಕೊಳ್ಳುತ್ವೆ. ನನ್ನವರು ತುಂಬಾ ಒಳ್ಳೇವರು. ಅವರನ್ನು ಕಂಡ್ರೆ ಯಾಕೆ ಹೆದರಿಕೋಬೇಕು ಅಂದ್ಕೊಳ್ತೀನಿ. ಪ್ರಯೋಜನ ವಾಗೋಲ್ಲ. ಲೈಂಗಿಕ ಉದ್ರೇಕದಿಂದ ಗಂಡು ಮೃಗವಾಗ್ತಾನೆ. ರಾಜಪ್ಪನಂತೆ ಕ್ರೂರಿಯಾಗ್ತಾನೆ ಅಂತ ಅನಿಸತ್ತೆ."

"ಸುಮತಿ ನಿನ್ನ ಅಕ್ಕನಿಗೆ ಆ ರೀತಿ ಆದದ್ದು ಅನ್ಯಾಯ. ರಾಜಪ್ಪನಂತವನು ಹಾಗೆ ಮಾಡಿದ ಅಂದ್ರೆ ಎಲ್ಲರೂ ಹಾಗೆ ಮಾಡೋಲ್ಲ. ಪರಸ್ಪರ ಪ್ರೀತಿ ಮಾಡೋ, ಒಬ್ಬರ ಸುಖಕ್ಕಾಗಿ ಏನನ್ನಾದರೂ ಮಾಡೋಕೆ ಸಿದ್ಧರಾಗಿರೋ, ಹೊಂದಾಣಿಕೆ ಯಿಂದ ಸಂತೋಷ ಸುಖ ಪಡೋ ನೂರಾರು ದಂಪತಿಗಳಿದ್ದಾರೆ. ಲೈಂಗಿಕ ಕ್ರಿಯೆ ಯಿಂದ ಮನರಂಜನೆ ಅಲ್ಲದೆ ಬಾಂಧವ್ಯಾನ್ನ ಹೆಚ್ಚಿಸಿಕೊಂಡು ಮಕ್ಕಳನ್ನು ಪಡೆದು ತೃಪ್ತಿಯಿಂದ ಸಂಸಾರ ಮಾಡ್ತಾರೆ. ನಿನಗೆ ಒಳ್ಳೆಯ ಗಂಡ ಸಿಕ್ಕಿದಾನೆ. ನಿನ್ನೊಂದಿಗೆ ಸಂತೋಷದಿಂದ ಸಂಸಾರ ಮಾಡಲು ಇಷ್ಟಪಡ್ತಾನೆ. ಆತನೊಂದಿಗೆ ಬೆರೆತು ನೀನು ಬಾಳಬೇಕು. ಇನ್ನು ಮುಂದೆ ನಿನ್ನ ಗಂಡನನ್ನು ಏಕಾಂತದಲ್ಲಿ ನೋಡಿದಾಗ ನಿನಗೆ ಮಧುರವಾದ ಭಾವನೆ ಬರಬೇಕೇ ಹೊರತು ರಾಜಪ್ಪನ ನಡತೆ ನೆನಪಾಗಬಾರದು. ಗಂಡ ಹೆಂಡತಿಯ ನಡುವಿನ ಪ್ರೀತಿ, ಅವರ ದೈಹಿಕ ಸಂಬಂಧ ಸದುದ್ದೇಶದಿಂದ ಕೂಡಿರುತ್ತೆ. ಅದು ಅವಶ್ಯಕ. ಇದನ್ನು ನೀನು ಪಡೆಯಬೇಕು. ಭಯ ಬೇಡ. ತಿಳಿಯಿತೆ ?"

"ಹೂಂ. ನೀವು ಹೇಳಿದಂತೆ ಮಾಡ್ತೀನಿ. ನನ್ನವರನ್ನು ಪ್ರೀತಿಸುತ್ತೇನೆ ಅವರು ಒಳ್ಳೇವರು,"

ಂ ಂ ಂ ಂ

ಆಕೆಯ ಮನಸ್ಸಿಗೆ ಸೂಕ್ತ ಸಲಹೆ ಕೊಟ್ಟ ನಂತರ, ಆಕೆಯ ಮನೋಬಲದ ವರ್ಧನೆಗಾಗಿ ಡಾ॥ ಮೂರ್ತಿ ಮನೋ ಚಿಕಿತ್ಸೆಯನ್ನು ಮುಂದುವರೆಸಿದರು. ಗಂಡ ಹೆಂಡತಿಯ ನಡುವೆ ಬೆಳೆಯಬೇಕಾದ ಹೊಂದಾಣಿಕೆ ಮತ್ತು ಪ್ರೀತಿ ಬೆಳೆಯುವಂತೆ ಪ್ರೋತ್ಸಾಹಿಸಿದರು. ಹಂತಹಂತವಾಗಿ ಗಂಡನೊಂದಿಗೆ ಒಡನಾಡಲು ಲೈಂಗಿಕ ಚಟುವಟಿಕೆ ನಡೆಸಲು ಕಾರ್ಯಕ್ರಮ ಹಾಕಿ ಕೊಟ್ಟರು. ಕ್ರಮೇಣ ಸುಮತಿ ಚೇತರಿಸಿ ಕೊಂಡಳು.

ಮದ್ಯಪಾನ ತಂದ ಷಂಡತನ

"ಸಾರ್, ನನ್ನನ್ನು ಏಕೆ ಬದುಕಿಸಿದ್ರಿ? ನಾನು ಸತ್ಹೋಗಿದ್ರೆ ಚೆನ್ನಾಗಿತ್ತು" ಸತೀಶನ ಮುಖದಲ್ಲಿ ದುಃಖ, ನಿರಾಶೆ ಮನೆಮಾಡಿತ್ತು. ಎಲ್ಲರನ್ನೂ, ಎಲ್ಲವನ್ನೂ ಕಳೆದುಕೊಂಡ ಅನಾಥನಂತೆ ಹಾಸಿಗೆಯ ಮೇಲೆ ಕುಳಿತಿದ್ದ. ಪಕ್ಕದಲ್ಲಿ ಆತನ ಹೆಂಡತಿ ಮೀರಾ ಕಣ್ಣೀರು ಸುರಿಸುತ್ತಾ ನಿಂತಿದ್ದಳು. ಇಪ್ಪತ್ತನಾಲ್ಕು ಗಂಟೆಗಳ ಕಾಲ ಹೋರಾಟ ಮಾಡಿ ಬದುಕುಳಿದಿದ್ದ. ಸುಮಾರು ಮೂವತ್ತು ನಿದ್ರೆಮಾತ್ರೆಗಳನ್ನು ತಿಂದು ಸಾವಿನ ದವಡೆಯನ್ನು ಹೊಕ್ಕು ವೈದ್ಯರ ಪ್ರಯತ್ನದಿಂದ ಬದುಕುಳಿದಿದ್ದ.

"ಬದುಕಿಗೆ ಯಾವಾಗ್ಲೂ ಒಂದು ಅರ್ಥ ಇದ್ದೇ ಇರುತ್ತೆ ಸತೀಶ್. ಯೋಚನೆ ಮಾಡಬೇಡಿ. ಕೆಲವು ಸಲ ಮನಸ್ಸಿಗೆ ತುಂಬಾ ಬೇಜಾರಾದಾಗ ಹೀಗೆ ಅನ್ನಿಸುತ್ತೆ. ಈ ನೋವು, ನಿರಾಶೆ ಎಲ್ಲಾ ತಾತ್ಕಾಲಿಕ. ಸುಖ ಸಂತೋಷದ ದಿನಗಳು ಮತ್ತೆ ಬರುತ್ತವೆ" ಡಾ॥ ಮೂರ್ತಿ ಆತನನ್ನು ಸಂತೈಸಲು ಯತ್ನಿಸಿದರು.

"ಇಲ್ಲಾ ಡಾಕ್ಟರ್. ನನ್ನ ಜೀವನದಲ್ಲಿ ಸಂತೋಷದ ದಿನಗಳು ಪುನಃ ಬರಲು ಸಾಧ್ಯವೇ ಇಲ್ಲ. ಸಮಸ್ಯೆ ಬಲು ದೊಡ್ಡದು ಸಾರ್. ಕಳೆದ ಆರು ತಿಂಗಳಿಂದ ಪರಿಹಾರಕ್ಕೆ ಪ್ರಯತ್ನ ಮಾಡಿದೆ, ಏನೂ ಪ್ರಯೋಜನ ಆಗ್ಲಿಲ್ಲ. ಈ ಸಮಸ್ಯೆ ಇಟ್ಟುಕೊಂಡು ಬದುಕೋದಕ್ಕಿಂತ ಸಾಯೋದೇ ಮೇಲು ಅಂತ ನಿರ್ಧಾರ ಮಾಡಿದ್ರೆ, ನೀವು ಅದಕ್ಕೂ ನನ್ನ ಬಿಡ್ತಾ ಇಲ್ಲ" ಸತೀಶ ನಿಟ್ಟುಸಿರುಬಿಟ್ಟ.

"ನಿಮ್ಮ ಸಮಸ್ಯೆ ಬಗ್ಗೆ ಆಮೇಲೆ ನಿಧಾನವಾಗಿ ಮಾತಾಡೋಣ ಸತೀಶ್. ಯಾವುದೇ ಸಮಸ್ಯೆ ಆದರೂ, ಅದಕ್ಕೆ ಒಂದು ಪರಿಹಾರಮಾರ್ಗ ಇರತ್ತೆ. ಕೆಲವು ಸಲ ಆ ಮಾರ್ಗ ಸುಲಭಕ್ಕೆ ಸಿಕ್ಕೋಲ್ಲ. ಸ್ವಲ್ಪ ಹುಡುಕಬೇಕಾಗುತ್ತೆ. ನಿಮ್ಮ ಸಮಸ್ಯೆಗೆ ಪರಿಹಾರ ಹುಡುಕೋಣ. ಯೋಚ್ನೆ ಮಾಡ್ಬೇಡಿ" ಎಂದು ಡಾ॥ ಮೂರ್ತಿ ಆತನ ಬೆನ್ನು ತಟ್ಟಿ, ಇನ್ನೊಬ್ಬ ರೋಗಿಯನ್ನು ನೋಡಲು ಹೊರಟರು.

"ಏನಮ್ಮ, ನಿಮ್ಮ ಯಜಮಾನರ ಸಮಸ್ಯೆ ಬಗ್ಗೆ ನಿಮಗೇನಾದರೂ ಗೊತ್ತೆ? ಕಳೆದ ಆರು ತಿಂಗಳಿಂದ ಒಂದು ಸಮಸ್ಯೆ ಬಾಧಿಸ್ತಾ ಇದೆ, ಈ ಸಮಸ್ಯೆಯಿಂದಾಗಿಯೇ

ಸಾಯಲು ಪ್ರಯತ್ನಪಟ್ಟೆ ಅಂತ ಹೇಳ್ತಾರಲ್ಲ. ನಿಮಗೇನಾದ್ರೂ ಹೇಳಿದ್ದಾರಾ ? ನಿಮಗೆ ಗೊತ್ತಿರೋದನ್ನು ಸಂಕೋಚವಿಲ್ಲದೆ ಹೇಳಿ" ಎಂದರು ಡಾ॥ ಮೂರ್ತಿ.

ಅವರ ಎದುರು ತಲೆತಗ್ಗಿಸಿ ಕುಳಿತ ಮೀರಾಳ ಕಣ್ಣುಗಳು ಜಲಾವೃತವಾದುವು. ಹೇಳಲೋ ಬೇಡವೋ ಎಂಬ ಮಾನಸಿಕ ಹೋರಾಟ ಮುಖದಲ್ಲಿ ಅಚ್ಚೊತ್ತಿತ್ತು. ಮಾತಾಡದೆ ಮೌನವಾಗಿ ಕುಳಿತಳು.

"ಮನೆಯಲ್ಲಿ ನೀವು ಮಾತ್ರ ಇದ್ದೀರಿ. ನಿಮ್ಮ ಯಜಮಾನರಿಗೆ ಒಳ್ಳೆಯ ಕೆಲಸವಿದೆ. ಮುದ್ದಾದ ಮಗು ಇದೆ. ನೋಡಿದೋರಿಗೆ ಯಾವ ಕೊರತೆ ಕಾಣದ, ಸುಖೀ ಸಂಸಾರ. ಆದರೆ ಸಂತೋಷ ಇಲ್ಲ ಅಂತ ಹೇಳಬೇಕಾದ್ರೆ, ಯಾವುದೋ ಬಲವಾದ ಕಾರಣ ಇರ್ಬೇಕು. ನಿಮಗೆ ತಿಳಿದಿದೆ. ಸಮಸ್ಯೆ ಯಾವುದೇ ಇರಲಿ. ನನ್ನೊಂದಿಗೆ ಹೇಳೋದಿಕ್ಕೆ ಸಂಕೋಚಬೇಡ. ನೀವು ದಂಪತಿಗಳು ಅನ್ಯೋನ್ಯವಾಗಿದೀರಾ ? ಏನಾದರೂ ಮನಸ್ತಾಪ.... ವಿರಸ...?"

"ಇಲ್ಲ ಸಾರ್. ನಮ್ಮ ನಡುವೆ ಯಾವುದೇ ಮನಸ್ತಾಪ, ಜಗಳ ಇಲ್ಲ. ನಾವು ಒಬ್ಬರನ್ನೊಬ್ಬರು ತುಂಬಾ ಪ್ರೀತಿಸ್ತೇವೆ. ಆಫೀಸ್ ಕೆಲಸ ಮುಗಿದ ಕೂಡ್ಲೇ, ಮನೆಗೆ ಬಂದುಬಿಡ್ತಾರೆ. ನನ್ನ ಒಪ್ಪಿಗೆ ಇಲ್ಲದೆ ಏನನ್ನೂ ಮಾಡೋದಿಲ್ಲ. ಎಲ್ಲಿಗೆ ಹೋಗಬೇಕಾಗಲಿ, ಏನು ಮಾಡ್ಬೇಕಾಗಲೀ ಇಬ್ಬರೂ ಮಾತಾಡಿಕೊಂಡು ಮಾಡ್ತೇವೆ. ಭಿನ್ನಾಭಿಪ್ರಾಯ ಇಲ್ಲ. ಆರು ತಿಂಗಳಿಂದ ಒಂದು ವಿಚಾರದಲ್ಲಿ ಮಾತ್ರ ಕೊರತೆ ಇದೆ..."

"ಯಾವ ವಿಚಾರದಲ್ಲಿ, ಏನು ಕೊರತೆ ಅಂತ ಹೇಳಬಹುದಲ್ಲ."

"ನಮ್ಮ ದಾಂಪತ್ಯ ಜೀವನದಲ್ಲಿ ಸಂತೋಷವಿಲ್ಲ ಸಾರ್. ಮದುವೆಯಾಗಿ ಮೂರು ವರ್ಷ ಚೆನ್ನಾಗಿದ್ದೆವು. ಈ ಅವಧಿಯಲ್ಲೇ ರಶ್ಮಿ ಹುಟ್ಟಿದಳು. ಸ್ವರ್ಗ ದಂತೆ ಇದ್ದ ನಮ್ಮ ಸಂಸಾರ ಈಗ ನರಕವಾಗಿದೆ... ಇವರು ಷಂಡರಾಗಿದ್ದಾರೆ.... ಮೀರಾ ಬಿಕ್ಕಳಿಸಿದಳು.

ಹೀಗೇಕಾಯಿತು ಅಂತ ಯಾರಿಗೂ ಗೊತ್ತಿಲ್ಲ ಸಾರ್. ಇವರನ್ನು ಪರೀಕ್ಷೆ ಮಾಡಿದ ನಮ್ಮ ಫ್ಯಾಮಿಲಿ ಡಾಕ್ಟ್ರು ಶರೀರದಲ್ಲಿ ಯಾವುದೇ ಕೊರತೆ ಅಥವಾ ಖಾಯಿಲೆ ಇಲ್ಲ ಅಂದ್ರು. ಹಾರ್ಮೋನ್ ಇಂಜೆಕ್ಷನ್ ಕೊಟ್ರು. ಏನೂ ಪ್ರಯೋಜನ ವಾಗ್ಲಿಲ್ಲ. ನನ್ನ ಜೊತೆ ಸೇರೋದಿಕ್ಕೆ ಆಸೆ ಆಗುತ್ತೆ. ಬಯಕೆ ಮೂಡುತ್ತೆ ಅಂತಾರೆ. ಅದೂ ನನಗೆ ಸ್ಪಷ್ಟವಾಗಿ ಗೊತ್ತಾಗುತ್ತೆ. ಆದರೆ ಸಂಭೋಗ ಮಾಡೋ ವೇಳೆಗೆ ಅವರ ಉದ್ರೇಕ ಇಳಿದು ಹೋಗುತ್ತೆ. ತನಗೆ ಹೀಗಾಯ್ತಲ್ಲ ಅಂತ ಇವರು ಕೊರಗ್ತಾರೆ. ನಾನು ಎಷ್ಟೇ ಸಮಾಧಾನ ಹೇಳಿದ್ರೂ, 'ಗಂಡು ತನ್ನ ಗಂಡಸುತನವನ್ನು ಕಳೆದುಕೊಂಡ ಮೇಲೆ ಇರಬಾರ್ದು' ಅಂತಾರೆ. 'ನನ್ನಿಂದ ನಿನಗೆ

ಸುಖ ಇಲ್ಲ. ನಾನು ಬದುಕಿರಬಾರದು. ನೀನು ಇನ್ನೊಂದು ಮದ್ವೆ ಆಗಿಬಿಡು' ಅಂತ ಪ್ರತಿನಿತ್ಯ ಹೇಳ್ತಾರೆ. ಸುಮಾರು ಮೂರು ಸಾವಿರ ರೂಪಾಯಿ ತನಕ ಖರ್ಚುಮಾಡಿದ್ರು. ಅದೇನೋ ತಾಮ್ರದ ಬಳೆ ಹಾಕ್ಕೊಂಡ್ರು. ಮುಲಾಮು ಹಚ್ಚಿಕೊಂಡರು. ನಾಟಿ ಔಷಧ ಅಂತ ಪುಡಿ, ಲೇಹ್ಯ ತಿಂದರು. ದೇಹಕ್ಕೆ ಏನಾದ್ರೂ ಆಗ್ಲಿ. ಮೊದಲಿನ ಪುರುಷತ್ವ ಬಂದ್ರೆ ಸಾಕು ಅಂತ, ಕಂಡು ಕೇಳಿದ ಔಷಧಿಗಳನ್ನೆಲ್ಲ ಮಾಡ್ತಾ ಇದಾರೆ. ಸ್ವಲ್ಪ ದಿವಸ ಕುಡಿಯೋದಿಕ್ಕೆ ಶುರು ಮಾಡಿದ್ರು, ಬ್ರಾಂದಿ, ವಿಸ್ಕಿ ಕುಡಿದ್ರೆ ಲೈಂಗಿಕ ಶಕ್ತಿ ಜಾಸ್ತಿ ಆಗತ್ತೆ ಅಂತ ಅವರ ಸ್ನೇಹಿತರು ಹೇಳಿದ್ರಂತೆ. ಕುಡಿದು, ಮತ್ತು ತಲೆಗೇರಿ ಬಡಬಡಿಸೋರು. ಆದರೂ ಪ್ರಯೋಜನ ವಾಗದಿದ್ದಾಗ ಬಹಳ ಬೇಜಾರು ಮಾಡ್ಕೊಂಡು ನಾನು ಸತ್ಹೋಗ್ತೀನಿ ಅಂತ ಮೊನ್ನೆ ಮಾತ್ರೆ ತಿಂದರು. ಇದೇ ನಮ್ಮ ಸಮಸ್ಯೆ ಡಾಕ್ಟ್ರೇ."

ಮತ್ತು–ಮೋಜು

"ಈ ದೌರ್ಬಲ್ಯ ಹೇಗೆ ಶುರುವಾಯ್ತು ಅನ್ನೋದು ನಿನಗೆ ಜ್ಞಾಪಕ ಇದೆಯೇನಮ್ಮ?"

"ಚೆನ್ನಾಗಿ ಜ್ಞಾಪಕ ಇದೆ ಸಾರ್, ಆರು ತಿಂಗಳ ಹಿಂದೆ ಒಂದು ದಿನ ಇವರು ಪಾರ್ಟಿಗೆ ಹೋಗಿ ಬಂದರು. ಸ್ವಲ್ಪ ಜಾಸ್ತಿಯಾಗೇ ಕುಡಿದಿದ್ದರು. ಅದರ ಪ್ರಭಾವವೋ ಏನೋ, ವಿಪರೀತ ಮಾತಾಡ್ತಿದ್ದರು. ಸ್ವಲ್ಪ ಕಾರಣಕ್ಕೇ ಜೋರಾಗಿ ನಗೋದು, ಪಾರ್ಟೀಲಿ ಯಾರು ಏನೇನು ಮಾಡಿದ್ರು, ಏನು ಜೋಕ್ ಹೇಳಿದ್ರು, ಎಂಥಾ ಮಜಾ ಇತ್ತು ಎಲ್ಲಾ ಹೇಳಿದ್ರು. ಬೆಡ್‌ರೂಂಗೆ ಬಂದು ಈ ಹೊತ್ತು ನಾವು ತುಂಬಾ ಫ್ರೀಯಾಗಿರ್ಬೇಕು. ನೀನು ತುಂಬಾ ಚೆನ್ನಾಗಿ ಕಾಣ್ತೀಯ ಅಂದ್ರು. ಬಯಕೆ ಬೆಟ್ಟದಷ್ಟು ಇತ್ತು. ಆದರೇನು, ಸಂಭೋಗ ಮಾಡೋ ವೇಳೆಗೆ, ತಣ್ಣಗಾದರು. ಆಮೇಲೆ ಮೂರು ದಿನ ಅದರ ಬಗ್ಗೆಯೇ ಮಾತ್ನಾಡ್ತಾ ಯಾಕೆ ಹೀಗಾಯ್ತು ಅಂತ ಪೇಚಾಡಿದ್ರು. ನೀವು ಆ ದಿನ ಜಾಸ್ತಿ ಕುಡಿದಿದ್ರಿ. ಆದರಿಂದ ಆಗಿರಬಹುದು ಅಂದೆ. ಇವರು ನಂಬಲಿಲ್ಲ. 'ಇಲ್ಲವೇ, ನನ್ನ ಸ್ನೇಹಿತರು ಹೇಳ್ತಾರೆ. ಆಲ್ಕೋಹಾಲ್ ತೆಗೆದುಕೊಂಡಾಗ ಲೈಂಗಿಕ ಆಸೆ ಹೆಚ್ಚುತ್ತೆ, ತುಂಬಾ ಚೆನ್ನಾಗಿರುತ್ತೆ ಅಂತ. ನನಗೆ ಈ ರೀತಿ ಆಗಬೇಕಾದರೆ, ನನ್ನಲ್ಲೇ ಏನೋ ಕೊರತೆ ಇರ್ಬೇಕು' ಅಂತ ಹೇಳಿದ್ರು. ಮೂರು ದಿನಗಳ ನಂತರ ನಾವು ಮತ್ತೊಮ್ಮೆ ಕೂಡೋವಾಗ ಇದೇ ಮಾತು–'ಈ ಹೊತ್ತು ಏನಾಗುತ್ತೋ ನೋಡಬೇಕು.' ದುರಾದೃಷ್ಟಕ್ಕೆ ಆದಿನವೂ ಆಗದೆ ಹೋದಾಗ ಅವರಿಗೆ ಗಾಬರಿ ಆಯ್ತು. ನನ್ನ ಶಕ್ತಿ ಉಡುಗ್ಹೋಗಿದೆ. ನನಗೆ ಷಂಡತನ ಬಂದುಬಿಟ್ಟಿದೆ ಅಂತ ಕಂಗಾಲಾದರು."

"ಹೌದು ಸಾರ್. ನನ್ನ ತೊಂದ್ರೆ ಪ್ರಾರಂಭವಾದದ್ದು ಆ ದಿನವೇ. ಪಾರ್ಟೀಲಿ ಸ್ನೇಹಿತರ ಒತ್ತಾಯಕ್ಕೆ, ಮಾಮೂಲಿಗಿಂತ ಜಾಸ್ತಿ ಕುಡಿದೆ. ಎಲ್ಲರ ಸ್ಥಿತಿಯೂ ಹಾಗೇ ಇತ್ತು ಅನ್ನಿ, ಬರೀ ಗಂಡಸರಿದ್ದರಿಂದ, ಪೋಲಿ ಜೋಕು ಗಳನ್ನು ಹೇಳುತ್ತಾ, ಪಾರ್ಟಿಗೆ ಒಳ್ಳೇ ಕಳೆ ಬಂದಿತ್ತು. ಆಲ್ಕೋಹಾಲ್ ಮಹಿಮೆ! ಎಲ್ಲರೂ ಮೈ ಚಳಿ ಬಿಟ್ಟು. ಯಾವ ಸಂಕೋಚ ಇಲ್ಲದೆ ತಮ್ಮ ತಮ್ಮ ಲೈಂಗಿಕ ಪ್ರತಾಪಗಳನ್ನು ಹೇಳಿಕೊಂಡರು. ಮನೆಗೆ ಬಂದಾಗ ನಾನು ಸಾಕಷ್ಟು ಉದ್ರೇಕ ಗೊಂಡಿದ್ದೆ. ನನ್ನ ಸ್ನೇಹಿತರ ಪ್ರತಾಪಗಳ ವರ್ಣನೆ ತಲೆಯಲ್ಲಿ ಗುಯ್‌ಗುಡು ತ್ತಿತ್ತು. ಅವರಂತೆಯೇ ನಾನು ನನ್ನ ಪ್ರತಾಪವನ್ನು ಮೆರೆಯಬೇಕು ಅಂತ ಪ್ರಯತ್ನಪಟ್ಟೆ. ಆಗಲಿಲ್ಲ. ಬಹಳ ಅವಮಾನ ಆದಂತಾಯ್ತು. ಕೈ ಹಿಡಿದ ಹೆಂಡತಿ ಮುಂದೆ ಹೀಗಾಯ್ತಲ್ಲ ಅಂತ ನಾಚಿಕೆ ಆಯ್ತು. ಆಮೇಲೆ ಇನ್ನೊಂದ್ಸಲ ಕೂಡ ನಾನು ವಿಫಲನಾದಾಗ, ಭಯದಿಂದ ಕಂಗೆಟ್ಟು ಹೋದೆ. ನಾನು ಷಂಡ ನಾಗಿಬಿಟ್ಟೆನೇ ಅಂತ ಕುಸಿದು ಹೋದೆ. ಅದರಿಂದ ಚೇತರಿಸಿಕೊಳ್ಳೋದಿಕ್ಕೆ ಆಗಲೇ ಇಲ್ಲ. ನನಗೆ ಯಾವ ದುಶ್ಚಟವೂ ಇಲ್ಲ ಸಾರ್. ಯಾವಾಗಲಾದರೊಮ್ಮೆ ಸ್ವಲ್ಪ ಡ್ರಿಂಕ್ಸ್ ತೆಗೆದುಕೊಳ್ಳುತ್ತೇನಷ್ಟೆ. ಬೇರೆ ಹೆಂಗಸರ ಸಂಪರ್ಕ ಮಾಡಿಲ್ಲ. ಯಾವ ಖಾಯಿಲೆ ಇಲ್ಲ. ವಯಸ್ಸಿಗೆ ಬಂದಾಗ ಸ್ವಲ್ಪ ಕಾಲ ಮುಷ್ಟಿ ಮೈಥುನ ಮಾಡಿ ಕೊಳ್ಳುತ್ತಿದ್ದೆ. 'ಅದು ಸಹಜ, ಅದರಿಂದ ಯಾವ ತೊಂದರೆಯೂ ಆಗೊಲ್ಲ' ಅಂತ ನಮ್ಮ ಫ್ಯಾಮಿಲಿ ಡಾಕ್ಟರು ಹೇಳಿದ್ದಾರೆ. ಆದರೆ ಈ ಷಂಡತನ, ಏಕೆ ಬಂತೋ ಗೊತ್ತಿಲ್ಲ, ನಾನಾ ರೀತಿ ಚಿಕಿತ್ಸೆ ಮಾಡಿಸಿಕೊಂಡೆ. ಪ್ರಯೋಜನ ವಾಗ್ಲಿಲ್ಲ, ಪುರುಷತ್ವ ಕಳೆದುಕೊಂಡವನ ಜೀವನ ಭಯಂಕರ ಸಾರ್. ಪ್ರತಿ ದಿನ, ಪ್ರತಿ ನಿಮಿಷ ಇದು ನನ್ನ ಚುಚ್ಚಿ ಕೊಲ್ಲುತ್ತೆ. ಕಡೆಗೆ ಬೇಸತ್ತು ನಾನು ಆತ್ಮಹತ್ಯೆಗೆ ಪ್ರಯತ್ನಪಟ್ಟೆ" ಎಂದು ಸತೀಶ್ ಸಿಟ್ಟು ಸಿರುಬಿಟ್ಟ.

"ಸತೀಶ್, ನನ್ನ ಕೆಲವು ಪ್ರಶ್ನೆಗಳಿಗೆ ಸಂಕೋಚ ಪಡದೆ ಉತ್ತರ ಕೊಡಿ, ಈ ಆರು ತಿಂಗಳಲ್ಲಿ ನಿಮಗೆ ಸಂಭೋಗ ಮಾಡುವಾಗ ಉದ್ರೇಕ ಉಳಿಯೋದಿಲ್ಲ ಅಂದಿರಿ. ಬೇರೆ ಸಮಯದಲ್ಲಿ ಅಂದರೆ ಬೆಳಗಿನ ಜಾವ ಅಥವಾ ನೀವು ಒಬ್ಬರೇ ಇದ್ದಾಗ, ನಿಮ್ಮ ಜನನಾಂಗ ಉದ್ರೇಕ ಆಗುತ್ತದೆಯೋ ?"

"ಹಾಂ... ಹೌದು ಸಾರ್. ಬೇರೆ ಸಮಯದಲ್ಲಿ, ಮತ್ತೇ ನಾನು ಮೀರಳೊಂದಿಗೆ ಸರಸ ಸಲ್ಲಾಪ ಮಾಡೋವಾಗ಼್ೂ ಉದ್ರೇಕ ಇರುತ್ತೆ, ಸಂಭೋಗಕ್ಕೆ ಶುರು ಮಾಡ್ಬೇಕು ಅನ್ನೋವಾಗ ಅದು ಇಳಿದು ಹೋಗುತ್ತೆ. ಇದೇ ನನ್ನ ಸಮಸ್ಯೆ."

ಮಾನಸಿಕ

ಈ ವಿವರಣೆಯಿಂದ ಸತೀಶ್ ಮಾನಸಿಕಜನ್ಯ ಷಂಡತನದಿಂದ ಬಳಲುತ್ತಿದ್ದುದು ಸ್ಪಷ್ಟವಾಗಿತ್ತು. ಆಲ್ಕೋಹಾಲ್ ಮತ್ತು ಲೈಂಗಿಕ ಬಯಕೆ ಹಾಗೂ ಸಾಮರ್ಥ್ಯಗಳ ಸಂಬಂಧ ಬಹಳ ವಿಚಿತ್ರ. "ಆಲ್ಕೋಹಾಲ್ ಸೇವನೆಯಿಂದ ಲೈಂಗಿಕ ಆಸೆ, ಬಯಕೆ ಮತ್ತು ಲೈಂಗಿಕ ಕ್ರಿಯೆ ನಡೆಸುವ ಸಾಮರ್ಥ್ಯ ಹೆಚ್ಚುತ್ತದೆ" ಎಂಬ ನಂಬಿಕೆ ಪ್ರಚಲಿತವಿದೆ. ಆದರೆ ವಾಸ್ತವ ಸಂಗತಿಯೇ ಬೇರೆ. ಆಲ್ಕೋಹಾಲ್ ಕೇಂದ್ರ ನರಮಂಡಲವನ್ನು ಮಂಕಾಗಿಸುತ್ತದೆ, ಪ್ರಚೋದಿಸುವುದಿಲ್ಲ. ಸ್ವಲ್ಪ ಪ್ರಮಾಣದ ಸೇವನೆಯಿಂದ, ಮನಸ್ಸಿನ ಹಿಂಜರಿಕೆ, ನಿಯಂತ್ರಣಗಳು ಸಡಿಲಗೊಳ್ಳುತ್ತವೆ. ನಾಚಿಕೆ, ಸಂಕೋಚಗಳು ಮರೆಯಾಗುತ್ತವೆ, ಸಾಮಾನ್ಯ ಸ್ಥಿತಿಯಲ್ಲಿ ವ್ಯಕ್ತಿ ತನ್ನ ಸಹಜ ಲೈಂಗಿಕ ಆಸೆ, ಬಯಕೆಗಳನ್ನು ಅದುಮಿಡುತ್ತಾನೆ. ಪ್ರಕಟಿಸಲು ಹಿಂಜರಿಯುತ್ತಾನೆ. ಸಾಮಾಜಿಕ, ನೈತಿಕ ಹಾಗೂ ಧಾರ್ಮಿಕ ನಿಯಂತ್ರಣ, ನಿಯಮಗಳನ್ನು ಪಾಲಿಸುತ್ತಾನೆ. ಆಲ್ಕೋಹಾಲ್ ಪ್ರಭಾವದಿಂದ ಆತ ಬಯಕೆಗಳನ್ನು ಅದುಮಿಡುವುದಿಲ್ಲ. ಪ್ರಕಟಿಸಲು ಹಿಂಜರಿಯುವುದಿಲ್ಲ. ಯಾವುದೇ ನಿಯಂತ್ರಣವಿಲ್ಲದೆ ಮುಕ್ತನಾಗಿರುತ್ತಾನೆ. ಇದರಿಂದ ತೋರಿಕೆಗೆ ಆತನ ಲೈಂಗಿಕ ಬಯಕೆ ಹೆಚ್ಚಿದಂತೆ ಭಾಸವಾಗುತ್ತದೆ.

ಆಲ್ಕೋಹಾಲ್ ಸೇವನೆ ಪ್ರಮಾಣ ಹೆಚ್ಚಿದಾಗ, ಕೇಂದ್ರ ನರಮಂಡಲ ಮಂಕಾಗಿ ಆತನ ಲೈಂಗಿಕ ಸಾಮರ್ಥ್ಯ ಕುಗ್ಗುತ್ತದೆ. ಜನನಾಂಗವನ್ನು ಉದ್ರೇಕಗೊಳಿಸುವ ಸ್ವಾಯತ್ತ ನರ ವ್ಯವಸ್ಥೆ ನಿಷ್ಕ್ರಿಯವಾಗುತ್ತದೆ. ಆತ ಸಂಭೋಗ ಕ್ರಿಯೆಯಲ್ಲಿ ವಿಫಲನಾಗುತ್ತಾನೆ. ಇದನ್ನು ಬಹಳ ಹಿಂದೆಯೇ ಗಮನಿಸಿದ ಶೇಕ್ಸ್‌ಪಿಯರ್ "ಮದ್ಯವು ಆಸೆಯನ್ನು ಹುಟ್ಟಿಸುತ್ತದೆ ; ಆದರೆ ನಿರ್ವಹಣಾ ಸಾಮರ್ಥ್ಯವನ್ನು ನಾಶ ಮಾಡುತ್ತದೆ" ಎಂದು ಬರೆದಿದ್ದಾನೆ.

ಸತೀಶನಿಗೆ ಆದದ್ದು ಇಷ್ಟೆ. ಮದ್ಯಪಾನದಿಂದ, ಆತ ಲೈಂಗಿಕ ಕ್ರಿಯೆಯಲ್ಲಿ ವಿಫಲನಾದಾಗ, ಭಯ ಅವನ ಮನಸ್ಸನ್ನು ತುಂಬಿಕೊಂಡಿತು. ಮುಂದಿನ ಸಲ ಮಾಡುವಾಗ, ಈ ಆತಂಕ, ಭಯ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಮಾಡಿತು. ಇದರಿಂದ ಪುನಃ ಜನನಾಂಗದ ಉದ್ರೇಕವನ್ನು ನಿಯಂತ್ರಿಸುವ ನರವ್ಯವಸ್ಥೆ ನಿಷ್ಕ್ರಿಯವಾಯಿತು. ಈ ವಿಫಲತೆಯಿಂದ ಆತನ ಭಯ ಇನ್ನಷ್ಟು ಹೆಚ್ಚಾಯಿತು. ಇದೊಂದು ವಿಷಚಕ್ರವಾಗಿ ಸತೀಶ್ ಷಂಡತನಕ್ಕೆ ಒಳಗಾದ. ಜನನಾಂಗ ಉದ್ರೇಕಗೊಳ್ಳುವುದು, ತನಗೆ ತಾನೇ ಆಗುವ ಒಂದು ಸೂಕ್ಷ್ಮ, ಸಂಕೀರ್ಣ ಕ್ರಿಯೆ. ಆದರ ಮೇಲೆ ನಮಗೆ ನೇರ ಹತೋಟಿ ಇಲ್ಲ. ನಮ್ಮ ಇಷ್ಟದಂತೆ ಅದು ನಡೆಯುವುದಿಲ್ಲ. ಆತಂಕ, ಭಯ, ದುಃಖದಂತಹ ಭಾವೋದ್ವೇಗಗಳು, ನರಮಂಡಲವನ್ನು

ಮಂಕಾಗಿಸುವ ಮಾದಕ ವಸ್ತುಗಳು, ನಿದ್ರಾ ಮಾತ್ರೆಗಳು ಈ ಸೂಕ್ಷ್ಮ ಪ್ರಕ್ರಿಯೆ ನಡೆಯದಂತೆ ತಡೆ ಒಡ್ಡುತ್ತವೆ ಎನ್ನುವುದು ಗಮನಾರ್ಹ. ಆತಂಕ, ಭಯ ಮತ್ತು ಖಿನ್ನತೆಗೀಡಾದ ಸತೀಶ ನಂತರವೂ ವಿಫಲನಾದದ್ದು ಹೀಗೆ.

o o o o

ಡಾ॥ ಮೂರ್ತಿ ಚಿಕಿತ್ಸೆಯ ಅವಧಿಯಲ್ಲಿ ಈ ಎಲ್ಲ ವಿಚಾರಗಳನ್ನು ಅವನಿಗೆ ಮನವರಿಕೆ ಮಾಡಿಕೊಟ್ಟರು. ಆತನ ಷಂಡತನಕ್ಕೆ ಶಾರೀರಕ ಕಾರಣಗಳೇನೂ ಇಲ್ಲ. ಮಾನಸಿಕಜನ್ಯವಾದ ಈ ತೊಂದರೆ ಕಡಿಮೆ ಆಗುತ್ತದೆ ಎಂದು ಭರವಸೆ ಕೊಟ್ಟರು. ಆತನ ಮೇಲೆ ಒತ್ತಡವಿಲ್ಲದಿರಲಿ ಎಂದು ಸ್ವಲ್ಪ ಕಾಲ ಸಂಭೋಗ ಮಾಡದಂತೆ ಸೂಚಿಸಿದರು. ಮನಸ್ಸಿನ ಆತಂಕ, ಭಯ, ಖಿನ್ನತೆ ಕಡಿಮೆಯಾಗಲು, ಸತೀಶ್ ಮತ್ತು ಮೀರಾ ಪರಸ್ಪರ ಪ್ರೀತಿ–ಅನುರಾಗದ ಮಾತುಗಳನ್ನಾಡುತ್ತ, ಮಾನಸಿಕವಾಗಿ ಹೆಚ್ಚು ಸಮಾಧಾನ ಸಂತೋಷದಿಂದಿರಲು ಹೇಳಿದರು, ದಂಪತಿಗಳು ಹೇಗೆ ನೋಟ ಮತ್ತು ಸ್ಪರ್ಶ ಸಂವೇದನೆಗಳಿಂದ ಪರಸ್ಪರ ಉತ್ತೇಜಿತರಾಗಬಹುದು ಎಂದು ತಿಳುವಳಿಕೆ ನೀಡಿದರು. ಸ್ವಲ್ಪ ದಿನಗಳಲ್ಲೇ ಸತೀಶನ ಷಂಡತನ ಗುಣವಾಯಿತು.

ಹೆಂಡತಿಯ ತಲೆನೋವಿಗೆ ಮದ್ದು

"ತಲೆನೋವು ಸಾರ್. ಹಣೆಯ ಮುಂಭಾಗ, ನೆತ್ತಿ, ಕತ್ತಿನ ಎರಡೂ ಪಕ್ಕ ನೋಯಲು ಶುರುವಾಯ್ತು ಅಂದ್ರೆ. ಪ್ರಾಣ ಹೋದಂತಾಗುತ್ತೆ. ಮೊದ ಮೊದಲು ಅನಾಸಿನ್, ಆಸ್ಪ್ರೊ ಮಾತ್ರೆ ತಿಂದರೆ ಸ್ವಲ್ಪ ಕಡಿಮೆ ಆಗೋದು. ಈಗ ಮಾತ್ರೆ ತಿಂದರೂ ಕಡಿಮೆ ಆಗೋಲ್ಲ. ನರಗಳು ವೀಕಾಗಿರ್ಬೋದು, ಸ್ಪೆಶಲಿಸ್ಟ್‌ಗೆ ತೋರಿಸು ಅಂದರು. ನಿಮ್ಮಲ್ಲಿಗೆ ಬಂದಿದೀನಿ" ಎಂದು 22 ವರ್ಷದ ರಮಾ. ಡಾ|| ಮೂರ್ತಿಗೆ ಹೇಳಿದಳು.

"ಎಷ್ಟು ದಿನದಿಂದ ನಿಮಗೆ ಈ ತೊಂದರೆ ?"

"ಎರಡು ವರ್ಷದಿಂದ. ಅದಕ್ಕೆ ಮುಂಚೆ ನಾನು ಚೆನ್ನಾಗಿಯೇ ಇದ್ದೆ."

"ಈ ತಲೆನೋವು ಪ್ರತಿದಿನ ಇರುತ್ತಾ ಅಥವಾ ಬಿಟ್ಟು ಬಿಟ್ಟು ಬರುತ್ತಾ ?"

"ಸಾಮಾನ್ಯವಾಗಿ ಎರಡು ಮೂರು ದಿನಕ್ಕೊಂದು ಸಾರಿ ಬರುತ್ತೆ. ಬಂದಾಗ ಹೆಚ್ಚೂ ಕಡಿಮೆ ದಿನವೆಲ್ಲಾ ಇರುತ್ತೆ"

"ಅದರ ಜೊತೆಗೆ ಇನ್ನೇನಾದ್ರೂ ತೊಂದರೆ ಇದೆಯೇ ? ವಾಕರಿಕೆ ವಾಂತಿ ಇತ್ಯಾದಿ ?"

"ಇಲ್ಲ ಸಾರ್. ಸ್ವಲ್ಪ ಸುಸ್ತಾಗುತ್ತೆ ಅಷ್ಟೆ, ಸುಮ್ನೆ ಒಂದು ಕಡೆ ಮಲಗಿ ರೋಣ ಅಂತ ಅನ್ನಿಸುತ್ತೆ. ಕೆಲಸ ಮಾಡೋದಕ್ಕೆ ಆಗೋಲ್ಲ"

"ತಲೆನೋವು ಯಾವಾಗ ಅಥವಾ ಏನು ಮಾಡಿದ್ರೆ ಜಾಸ್ತಿ ಆಗುತ್ತೆ ?"

"ಬೆಳಿಗ್ಗೆ ಏಳ್ತಿದ್ದ ಹಾಗೆ ಕಾಣಿಸಿಕೊಳ್ಳುತ್ತೆ. ಏನಾದ್ರೂ ಮನಸ್ಸಿಗೆ ಬೇಜಾರು ಅಸಮಾಧಾನ ಆದ್ರೆ, ತುಂಬಾ ಜಾಸ್ತಿ ಆಗಿಬಿಡತ್ತೆ"

"ಬೇಜಾರು, ಅಸಮಾಧಾನ ಆಗೋದಕ್ಕೆ ಏನು ಕಾರಣ ?"

"ಸಂಸಾರ ಅಂದ್ಮೇಲೆ ಏನಾದ್ರೂ ಇರತ್ತಲ್ಲ... ಅಷ್ಟೇ ಸಾರ್. ದೊಡ್ಡ ಸಮಸ್ಯೆ ಏನೂ ಇಲ್ಲ."

"ನಿಮ್ಮ ನಿದ್ರೆ, ಹಸಿವು ಹೇಗಿದೆ ?"

"ನಿದ್ರೆ ಅಷ್ಟಕ್ಕಷ್ಟೆ ಸಾರ್. ಮಲಗಬೇಕು ಅಂದ್ರೆ ಕೂಡ್ಲೇ ನಿದ್ರೆ ಬರೊಲ್ಲ.

ಅರ್ಧ ಅಥವಾ ಒಂದು ಘಂಟೆ ಆಗತ್ತೆ. ತೃಪ್ತಿ ಆಗೋಹಾಗೆ ನಿದ್ರೆ ಮಾಡಿ ಬಹಳ ದಿನ ಆಯ್ತು. ಊಟದ್ದೇನೂ ತೊಂದ್ರೆ ಇಲ್ಲ. ಚೆನ್ನಾಗೇ ತಿನ್ತೀನಿ!"

ಪ್ರೇಮವಿವಾಹ

"ನಿಮ್ಮ ಮದುವೆಯಾಗಿ ಎಷ್ಟು ದಿನ ಆಯ್ತು? ನಿಮ್ಮ ಯಜಮಾನರ ವಿಚಾರ ಸ್ವಲ್ಪ ಹೇಳ್ತೀರಾ ?"

"ಎರಡೂವರೆ ವರ್ಷ ಆಯ್ತು ಸಾರ್. ನಮ್ಮದು ಒಂದು ರೀತೀಲಿ ಪ್ರೇಮ ವಿವಾಹವೂ ಹೌದು. ಇನ್ನೊಂದು ರೀತೀಲಿ ದೊಡ್ಡವರು ನಿಂತು ಮಾಡಿದ ಮದುವೆಯೂ ಹೌದು. ನಾವು ಸಂಬಂಧಿಕರು. ಒಬ್ಬರನ್ನ ಒಬ್ಬರು ಮೆಚ್ಚಿ ಕೊಂಡೆವು. ಹಿರಿಯರಿಗೆ ತಿಳಿಸಿದಾಗ ಅವರೂ ಒಪ್ಪಿದರು. ಮದುವೆಯಾದ್ವಿ."

"ಮಕ್ಕಳು ?"

"ಇಲ್ಲ ಸಾರ್. ಈಗಲೇ ಬೇಡ ಅಂತ ಪ್ಲಾನ್ ಮಾಡಿದ್ದೇವೆ. ನಾನು ಕಾಪರ್‌ಟಿ ಹಾಕಿಸಿಕೊಂಡಿದ್ದೇನೆ"

"ನಿಮ್ಮ ದಾಂಪತ್ಯ ಜೀವನ ಹೇಗಿದೆ? ಏನಾದರೂ ಕೊರತೆ, ತೊಂದರೆ ಇದೆಯೇ ?"

"ಮೊದಲ ಆರು ತಿಂಗಳು ಪ್ರಾರಂಭದ ಆಕರ್ಷಣೆ ಇತ್ತು, ಸಂತೋಷ ಸಂಭ್ರಮ ಇತ್ತು. ಸಾಕಷ್ಟು ಸುತ್ತಾಡಿದೆವು. ಆಮೇಲೆ ಎಲ್ಲಾ ತಣ್ಣಗಾಯ್ತು. ಈಗ ಯಾಂತ್ರಿಕವಾಗಿಬಿಟ್ಟಿದೆ. ನನಗೆ ಅದರಲ್ಲಿ ಸ್ವಲ್ಪವೂ ಆಸಕ್ತಿ ಉಳಿದಿಲ್ಲ. ಅವರು ಹತ್ತಿರ ಬಂದ್ರೆ ತಲೆನೋವು ಶುರುವಾಗುತ್ತೆ."

"ಏಕೆ ಹೀಗಾಯ್ತು ಅಂತ ಯೋಚ್ನೆ ಮಾಡಿದೀರಾ ?"

"ಯೋಚ್ನೆ ಮಾಡಿದೀನಿ ಸಾರ್. ಏನು ಪರಿಹಾರ ಅಂತಾನೂ ಗೊತ್ತು, ಆದರೆ ಅವರು ಈ ವಿಚಾರದಲ್ಲಿ ವಿಚಿತ್ರವಾಗಿ ನಡೆದು ಕೊಳ್ತಾರೆ. ಅವರಿಗೆ ಬದ ಲಾಗೋದಿಕ್ಕೆ ಹೇಳೋದು ಹೇಗೆ ಅಂತ ನನಗೆ ಗೊತ್ತಾಗ್ತಾ ಇಲ್ಲ. ಅವರೇ ಅರ್ಥ ಮಾಡಿಕೋಬೇಕು ಅಂತ ನನ್ನ ಆಸೆ. ಇತ್ತೀಚೆಗೆ ಅವರನ್ನು ಕಂಡರೆ ಸಿಟ್ಟು ಬರುತ್ತೆ. ಎರಡು ಅಥವಾ ಮೂರು ದಿನಕ್ಕೊಂದು ಸಲ ನನ್ನ ಹತ್ತಿರ ಬರ್ತಾರೆ. ಒಂದು ಮಾತಿಲ್ಲ, ಕಥೆ ಇಲ್ಲ. ಪ್ರೀತಿಯಿಂದ ಹೇಗಿದೀಯಾ ಅಂತ ವಿಚಾರಿಸೋದಿಲ್ಲ ಮೂರು ನಿಮಿಷಗಳಲ್ಲಿ ತಮ್ಮ ಬಯಕೆಯನ್ನು ಪೂರೈಸಿಕೊಂಡು ಪಕ್ಕಕ್ಕೆ ತಿರುಗಿ ಮಲಗಿಬಿಡ್ತಾರೆ. ನಿನ್ನ ಆಸೆ ಏನು? ನಿನಗೇನು ಬೇಕು? ಸಂತೋಷ ಆಯ್ತೆ ಅಂತ ಕೇಳೋದಿಲ್ಲ. ಅವರ ಬಯಕೆ ತೀರಿಸೋದಿಕ್ಕೆ ನಾನು ಒಂದು ಸಾಧನ ಅಷ್ಟೆ. ಕೆಲಸ ಆದಮೇಲೆ ನಾನು ಯಾಕೆ ಬೇಕು..." ರಮಾಳ ಧ್ವನಿ ಗದ್ಗದವಾಯಿತು.

ತಣ್ಣಗಾದ ಉತ್ಸಾಹ

"ನಾನು ಬ್ಯಾಂಕ್ ಮೆನೇಜರ್ ಡಾಕ್ಟ್ರೇ. ದೊಡ್ಡ ಜವಾಬ್ದಾರಿಯ ಕೆಲಸ. ರಾತ್ರಿ ಹತ್ತಾದ್ರೂ ಪೇಪರ್ ವರ್ಕ್ ಮುಗಿಯೋದಿಲ್ಲ. ಕೆಲಸವನ್ನು ಮನಃಪೂರ್ವಕವಾಗಿ ಪ್ರಾಮಾಣಿಕವಾಗಿ ಮಾಡ್ಬೇಕು ಅನ್ನೋದೇ ನನ್ನ ಜೀವನಧ್ಯೇಯ. ರಮಾಗೆ ನಾನು ಯಾವುದಕ್ಕೂ ಕಡಿಮೆ ಮಾಡಿಲ್ಲ. ನನಗೆ ಬರೋ ಸಂಬಳಾನೆಲ್ಲಾ ಆಕೆ ಕೈಯಲ್ಲೇ ಕೊಡ್ತೀನಿ. ಹೇಗೆ ಬೇಕಾದ್ರೂ ಖರ್ಚು ಮಾಡು ಅಂತ ಹೇಳಿದೀನಿ. ಸಂತೋಷವಾಗಿ, ಆರಾಮವಾಗಿರೋದಿಕ್ಕೆ ಯಾವ ಕೊರತೇನೂ ಇಲ್ಲ. ಹೀಗಿದ್ದರೂ ಅವಳು ಯಾವಾಗಲೂ ಬೇಸರ ಅಂತಿರ್ತಾಳೆ. ಎರಡು ದಿನ, ಮೂರು ದಿನಕ್ಕೊಂದು ಸಲ ತಲೆನೋವು ಅಂತ ಮಲಕ್ಕೊತಾಳೆ. ಡಾಕ್ಟರಿಗೆ ತೋರಿಸಿ ಒಳ್ಳೆ ಟ್ರೀಟ್ ಮೆಂಟ್ ತಗೋ ಅಂದ್ರೆ ಕೇಳೋದಿಲ್ಲ. ಅವಳನ್ನು ಹೇಗೆ ಸುಧಾರಿಸಬೇಕು ಅಂತ ತಿಳೀತಾ ಇಲ್ಲ. ನಾನು ಆಕೆಯನ್ನು ಮೆಚ್ಚಿ ಮದುವೆಯಾದೆ. ಆದರೆ ಈಗ ಯಾಕಪ್ಪಾ ಮದುವೆ ಮಾಡಿಕೊಂಡೆ ಅಂತ ಅನ್ನಿಸ್ತಾ ಇದೆ." ರವೀಂದ್ರ ನಿಟ್ಟುಸಿರು ಬಿಟ್ಟ.

"ನೀವು ಮತ್ತು ನಿಮ್ಮಾಕೆ ಒಬ್ಬರಿಗೊಬ್ಬರು ಎಷ್ಟು ಹೊಂದಿಕೊಂಡಿದ್ದೀರಿ ? ಯಾವ ವಿಚಾರದಲ್ಲಾದರೂ ಮನಸ್ತಾಪ ಇದೆಯೇ ?"

"ಮನಸ್ತಾಪಕ್ಕೆ ಅವಕಾಶವೇ ಇಲ್ಲ ಡಾಕ್ಟರ್. ಎಲ್ಲವನ್ನೂ ಅವಳ ಇಷ್ಟಕ್ಕೆ ಬಿಟ್ಟಿದೀನಿ. ಹಾಗಲ್ಲ ಹೀಗೆ ಅಂತ ಹೇಳಿದ್ರೆ ತಾನೇ ಅಭಿಪ್ರಾಯ ಬೇಧ ಬರೋದು ? ನನ್ನ ಇಷ್ಟಗಳನ್ನು ಅವಳ ಮೇಲೆ ಹೇರಿದ್ರೆ ತಾನೇ ವಿರಸ ಬರೋದು ? ಅದೊಂದಕ್ಕೂ ನಾನು ಅವಕಾಶ ಕೊಟ್ಟಿಲ್ಲ."

"ನಿಮ್ಮ ದಾಂಪತ್ಯ-ಸಂಬಂಧ ಹೇಗಿದೆ ?"

"ತೊಂದರೆ ಏನಿಲ್ಲ. ಶುರುವಿನಲ್ಲಿ ಇದ್ದ ಆಸಕ್ತಿ ಈಗ ಇಲ್ಲ. ಕೆಲಸದ ಒತ್ತಡ ಜಾಸ್ತಿ. ಬ್ಯಾಂಕಿನಿಂದ ಬಂದಾಗಲೇ ಸುಸ್ತಾಗಿರತ್ತೆ. ಬೇಗ ಮಲಗಿ ನಿದ್ರೆ ಮಾಡಿದ್ರೆ ಸಾಕಪ್ಪ ಅಂತ ಅನಿಸ್ತಿರತ್ತೆ. ಆಕೆಯೂ ಅಂತಹ ಆಸಕ್ತಿ ತೋರಿಸ್ತಾ ಇಲ್ಲ. ಕೆಲವು ಸಾರಿ ತಲೆ ನೋವು ಅಂತ ಬೇಡ ಅಂದ್ಬಿಡ್ತಾಳೆ. ಆದ್ರೂನು ಎರಡು ದಿನಕ್ಕೊಮ್ಮೆ ಮೂರು ದಿನಕ್ಕೊಮ್ಮೆ ಸಂಬಂಧ ಮಾಡ್ತೀವಿ. ದಾಂಪತ್ಯ ಜೀವನವೇ ಇಷ್ಟು ಅಂತ ಕಾಣುತ್ತೆ ಡಾಕ್ಟರ್. ಮದುವೆಗೆ ಮೊದಲು ಅದರ ಬಗ್ಗೆ ಬಣ್ಣ ಬಣ್ಣದ ಕಲ್ಪನೆ ಮಾಡಿಕೊಂಡಿರ್ತೀವಿ, ಅದಕ್ಕಾಗಿ ಹಾತೊರೀತೀವಿ. ಮದುವೆ ಮಾಡಿಕೊಂಡ ಹೊಸತರಲ್ಲಿ ಪ್ರವಾಹದ ಹಾಗೆ ಬರೋ ಬಯಕೆಗಳಲ್ಲಿ ಕೊಚ್ಚಿ ಹೋಗ್ತೀವಿ. ಆಮೇಲೆ ಎಲ್ಲಾ ತಣ್ಣಗಾಗಿಬಿಡತ್ತೆ. ಈ ಅವಧಿಯಲ್ಲಿ ಮಕ್ಕಳೂ ಆಗಿಬಿಟ್ಟರೆ, ಜೀವನ ನರಕ ಆಗ್ಬಿಡುತ್ತೆ."

"ನೀವು ತನ್ನ ಜೊತೆ ಮಾತಾಡೊಲ್ಲ, ಪ್ರೀತಿ ತೋರಿಸೊಲ್ಲ ಅಂತ ಆಕೆ ನೊಂದುಗೊಂಡಿದ್ದಾರೆ. ಇದು ನಿಮಗೆ ಗೊತ್ತೇ ?"

"ಹೂಂ... ಗೊತ್ತು ಸಾರ್. ನನ್ನನ್ನು ಆ ರೀತಿ ದೂರ್ತಿರ್ತಾಳೆ. ಆದ್ರೆ ಏನು ಮಾತಾಡೋದು ? ನಮ್ಮಿಬ್ಬರ ನಡುವೆ ಸಮಾನ ಆಸಕ್ತಿಯ ವಿಷಯವೇ ಇಲ್ಲ. ಅವಳಿಗೆ ಬ್ಯಾಂಕಿಂಗ್, ಸ್ಪೋರ್ಟ್ಸ್, ಪಾಲಿಟಿಕ್ಸ್‌ನಲ್ಲಿ ಆಸಕ್ತಿ ಇಲ್ಲ. ನನಗೆ ಇದೆ. ಅವಳಿಗೆ ಸಿನೇಮಾ, ಕಥೆ ಕಾದಂಬರಿ, ಸಾಹಿತ್ಯದಲ್ಲಿ ಆಸಕ್ತಿ, ನನಗಿಲ್ಲ! ಅವಳಿಗೆ ಸಿನೇಮಾದಲ್ಲಿ ಮಾಡ್ತಾರಲ್ಲ, ಹಾಗೆ ಪ್ರೇಮಾಲಾಪ ಮಾಡ್ಬೇಕೋ ಏನೋ ನನಗೆ ತಿಳಿಯದು." ವಿಷಾದದ ನಗೆ ಅವನ ಮುಖದಲ್ಲಿ ಮೂಡಿತು.

ಮುಗುಳ್ನಗೆ

ಹಲವು ಸಂಸಾರಗಳಲ್ಲಿ ನಡೆಯುವ ಕಥೆ ಇದು. ಗಂಡ ಹೆಂಡತಿ ಒಂದೇ ಸೂರಿನ ಕೆಳಗೆ ವಾಸಿಸುತ್ತಿದ್ದರೂ, ತಮ್ಮ ತಮ್ಮ ಆವರಣದಲ್ಲೇ ಇದ್ದು, ಬೇರೊಬ್ಬರ ಬೇಕು ಬೇಡಗಳಿಗೆ, ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸುವುದೇ ಇಲ್ಲ. ತಾವು ಮಾಡುವುದೇ ಸರಿ. ತಮ್ಮ ನಿಲುವೇ ಸರಿ ಎಂದು ನಂಬುತ್ತಾರೆ. ದಾಂಪತ್ಯ ಜೀವನದ ಗಿಡಕ್ಕೆ ಪ್ರತಿದಿನ ಪ್ರೀತಿ–ಅನುರಾಗದ ನೀರನ್ನು ಹಾಕುತ್ತಿರಬೇಕು ಎಂಬುದನ್ನು ಮರೆಯುತ್ತಾರೆ. ಪ್ರೀತಿಯನ್ನು ಮಾತಿನ ಮೂಲಕ ವ್ಯಕ್ತಪಡಿಸ ಬಹುದು. ಹಾಗೇ ಒಂದು ಮೆಚ್ಚಿಕೆಯ ನೋಟ, ಒಂದು ಮುಗುಳ್ನಗೆ, ಮೃದು ವಾಗಿ ಕೆನ್ನೆ, ತಲೆಯನ್ನು ಸವರುವುದು, ಒಂದು ಅಪ್ಪುಗೆ, ಒಂದು ಮುತ್ತು ಇವೆಲ್ಲಾ ಪ್ರೀತಿ–ವಿಶ್ವಾಸದ ಪ್ರಕಟಣೆಯ ಮಾರ್ಗಗಳು. ಇವೊಂದನ್ನೂ ಮಾಡದೇ ಯಾಂತ್ರಿಕವಾಗಿ ಬದುಕುತ್ತಾ ಸುಖ ಸಂತೋಷದಿಂದ ವಂಚಿತರಾಗುತ್ತಾರೆ.

ಗಂಡ ಹೆಂಡತಿಯ ಸಂಬಂಧ ಕೇವಲ ದೈಹಿಕ ಸಂಪರ್ಕ, ಅದನ್ನು ಮಾಡಿ ಬಿಟ್ಟರೆ ಕರ್ತವ್ಯ ಮುಗಿಯಿತು ಎಂದುಕೊಳ್ಳುವ ದಂಪತಿಗಳದೆಷ್ಟೋ ಇದ್ದಾರೆ, ಲೈಂಗಿಕ ಸಂಬಂಧಕ್ಕೆ ಪೂರಕವಾದದ್ದು, ಅಷ್ಟೇ ಪ್ರಾಮುಖ್ಯವಾದದ್ದು ಪರಸ್ಪರ ಪ್ರೀತಿ–ವಿಶ್ವಾಸ ಮತ್ತು ಅದರ ಪ್ರಕಟಣೆ ಎಂಬ ಸತ್ಯವನ್ನು ಗಮನಿಸುವುದಿಲ್ಲ. ಗಂಡ, ತಾನು ಸಂಪಾದಿಸಿ, ಹಣ ತಂದಿತ್ತರೆ ತನ್ನ ಕರ್ತವ್ಯ ಮುಗಿಯಿತು ಎಂದು ತಿಳಿಯುತ್ತಾನೆ. ಹೆಂಡತಿ, ಅಡುಗೆ ಮಾಡಿ, ರಾತ್ರಿ ಅವನಿಗೆ ಮೈ ಒಪ್ಪಿಸಿದರೆ ತನ್ನ ಕರ್ತವ್ಯ ಮುಗಿಯಿತು ಎಂದು ಕೊಳ್ಳುತ್ತಾಳೆ. ಮಧುರ ಬಾಂಧವ್ಯ, ಸ್ನೇಹ ಪೂರ್ಣ ಸಂಬಂಧ, ಭಾವನೆಗಳನ್ನೂ, ಅನಿಸಿಕೆ ಅನುಭವಗಳನ್ನೂ ಹಂಚಿಕೊಂಡು ಸುಖಪಡುವ ಅವಶ್ಯಕತೆಯನ್ನು ಕ್ರಮೇಣ ಅರಿತುಕೊಂಡರೂ, ಅದನ್ನು ಮಾಡಲು ಮುಂದಾಗುವುದಿಲ್ಲ. 'ನಾನೇಕೆ ಮುಂದುವರೆಯಲಿ, ಅವರೇ (ಅಥವಾ ಆಕೆಯೇ)

ಮೊದಲು ಮಾಡಲಿ. ಎಂಬ ಧೋರಣೆ, ಪರೀಕ್ಷೆ ಇಟ್ಟುಕೊಂಡು, ಮೂಕಸಂಕಟ ಪಡುತ್ತಾರೆ. ಕೊನೆಗೆ ಪರಸ್ಪರ ಆಕರ್ಷಣೆಯನ್ನೂ, ಬದುಕಿನಲ್ಲಿ ಅರ್ಥವನ್ನೂ ಕಳೆದುಕೊಳ್ಳುತ್ತಾರೆ. ದಾಂಪತ್ಯ ಜೀವನ ಬರಡಾಗುತ್ತದೆ.

ರಮಾಳ ಜೀವನದಲ್ಲಿ ಆದದ್ದೂ ಇದೇ. ಹಣ, ವಸ್ತುಗಳನ್ನು ಮಾತ್ರ ಸ್ತ್ರೀ ಬಯಸುತ್ತಾಳೆ ಎಂದು ಭಾವಿಸಿದ ರವೀಂದ್ರ, ತನ್ನ ಸಂಪಾದನೆಯ ಎಲ್ಲ ಹಣ ವನ್ನಿತ್ತು, ತಾನು ಒಳ್ಳೆಯ ಪತಿಯಾಗಿದ್ದೇನೆ ಎಂದುಕೊಂಡಿದ್ದ. ಆದರೆ ರಮಾಗೆ ಬೇಕಾದದ್ದು ಆತನ ಪ್ರೀತಿ ಮಾತು, ಆತನ ಅಪ್ಪುಗೆ, ನೀನು ನನಗೆ ಬೇಕು ಎನ್ನುವ ಬಾಂಧವ್ಯ. ಅದು ಸಿಗದೇ ಇದ್ದಾಗ, ಆಕೆ ನಿರಾಶಳಾಗಿದ್ದಳು. ರವೀಂದ್ರ ತನ್ನ ಬಗ್ಗೆ ಉದಾಸೀನತೆ ತೋರಿಸುತ್ತಿದ್ದಾನೆ, ತನ್ನ ಅವಶ್ಯಕತೆ ಆತನಿಗಿಲ್ಲವೇನೋ ಎಂಬ ಅನುಮಾನ ಮೂಡಿ, ಮಾನಸಿಕವಾಗಿ ನೋಯುತ್ತಿದ್ದಳು. ಈ ಬಗೆಯ ಮನೋಕ್ಲೇಶ ದಿಂದ ಕ್ರಮೇಣ ಆಕೆ ತಲೆನೋವಿಗೆ ಒಳಗಾಗಿದ್ದಳು. ಲೈಂಗಿಕ ಕ್ರಿಯೆ ಬಗ್ಗೆ ಆಸಕ್ತಿ ಕಳೆದುಕೊಂಡಿದ್ದಳು.

ಮನಃಕ್ಲೇಶ

ಗಂಡನ ಪ್ರೀತಿಯ ನುಡಿಗಳು, ಆಲಿಂಗನ, ಸಾಮೀಪ್ಯ, ಒತ್ತಾಸೆ ಸ್ತ್ರೀಯ ಮೈಮನಸ್ಸುಗಳು ಸ್ಪಂದಿಸುವಂತೆ ಮಾಡುತ್ತವೆ. ಬಣ್ಣಿಸಲಾಗದ ಸುಖ ಆನಂದ ಗಳನ್ನು ತರುತ್ತವೆ. ಲೈಂಗಿಕ ಸಂಪರ್ಕ ಮಾಡುವಾಗ ಇವುಗಳ ಅವಶ್ಯಕತೆ ಮತ್ತಷ್ಟು ಹೆಚ್ಚುತ್ತದೆ. ಪ್ರೀತಿ ಮಾತುಗಳ ಪೂರ್ವಸಿದ್ಧತೆ ಇಲ್ಲದೆ, ನೋಟ, ಸ್ಪರ್ಶ ಸಂವೇದನೆಗಳ ಮೂಲಕ ಪರಸ್ಪರ ಉತ್ತೇಜಿತರಾಗದಿದ್ದರೆ, ದೇಹಗಳು ಲೈಂಗಿಕ ಕ್ರಿಯೆಗೆ ಸಜ್ಜುಗೊಳ್ಳುವುದಿಲ್ಲ, ಆತುರಾತುರವಾಗಿ ಮಾಡಿ ಮುಗಿಸುವ ಲೈಂಗಿಕ ಕ್ರಿಯೆ ಮನಸ್ಸಿಗೆ ಹಿತವನ್ನು ಕೊಡುವುದಿಲ್ಲ. ಆನಂದವನ್ನು ತರುವುದಿಲ್ಲ. ಮತ್ತೆ ಅದು ಬೇಕೆನಿಸುವುದಿಲ್ಲ. ಅವಸರದ ಸಂಪರ್ಕದಿಂದ ಗಂಡಿಗೆ ವೀರ್ಯಸ್ಖಲನವಾಗಿ, ಲೈಂಗಿಕ ಒತ್ತಡ ಕಡಿಮೆಯಾದರೂ, ಮುದ ಕೊಡುವುದಿಲ್ಲ. ಹೆಣ್ಣಿಗೆ ಇದರಿಂದ ಸ್ವಲ್ಪವೂ ಹಿತವಾಗುವುದಿಲ್ಲ. ಪದೇ ಪದೇ ಈ ಬಗೆಯ ಸಂಪರ್ಕದಿಂದ ಆಕೆಗೆ ಹಿಂಸೆಯಾಗುತ್ತದೆ. ಸಾಧ್ಯವಾದಷ್ಟು ಈ ಸಂಪರ್ಕವನ್ನು ಆಕೆ ನಿರಾಕರಿಸುತ್ತಾಳೆ. ಅದಾಗದಿದ್ದರೆ, ಮನೋಕ್ಲೇಶಕ್ಕೀಡಾಗಿ ಮನೋದೈಹಿಕ ಬೇನೆಗೆ ತುತ್ತಾಗುತ್ತಾಳೆ. ತಲೆನೋವು, ಬೆನ್ನುನೋವು, ಸುಸ್ತು, ನಿಶ್ಶಕ್ತಿ, ಅನಾರೋಗ್ಯದಿಂದ ಬಳಲುತ್ತಾಳೆ.

ಚಿಕಿತ್ಸಾ ಸಂದರ್ಶನಗಳಲ್ಲಿ, ರಮಾ ರವೀಂದ್ರರಿಗೆ ಈ ವಿಷಯಗಳನ್ನು ಮನ ದಟ್ಟು ಮಾಡಿಕೊಡಲಾಯಿತು. ರಮಾಳ ತಲೆನೋವನ್ನು ನಿವಾರಿಸುವ ಮದ್ದು ರವೀಂದ್ರನಲ್ಲೇ ಇದೆ ಎಂದು ತಿಳಿಸಲಾಯಿತು. ಲೈಂಗಿಕ ಚಟುವಟಿಕೆಗೆ ಸೂಕ್ತ

ಆದ್ಯತೆ ನೀಡಬೇಕು. ಸಂಜೆ ವೇಳೆಗೆ ಬ್ಯಾಂಕಿನ ಕೆಲಸ ಮುಗಿಸಿ, ಅಲ್ಲಿನ ಸಮಸ್ಯೆ ತಾಪತ್ರಯಗಳನ್ನು ಅಲ್ಲೇ ಬಿಟ್ಟು ಮನೆಗೆ ಬರಬೇಕು. ಮನೆಗೆ ಬಂದ ಮೇಲೆ, ಮನಸ್ಸಿಗೆ ಹಿತಕೊಡುವ, ವಿರಾಮವನ್ನು ತರುವ ಚಟುವಟಿಕೆಗಳಲ್ಲಿ (ಉದಾಹರಣೆಗೆ ವಾಯುಸೇವನೆಯ ತಿರುಗಾಟ, ಹರಟೆ, ಸಂಗೀತ, ಕೇರಂ, ಚೆಸ್ ಇತ್ಯಾದಿ ಆಟದ ಮೂಲಕ ಮನರಂಜನೆ ಇತ್ಯಾದಿ) ತೊಡಗಬೇಕು. ಇದರಲ್ಲಿ ರಮಾ ಸಕ್ರಿಯವಾಗಿ ಭಾಗವಹಿಸಬೇಕು. ಇಬ್ಬರೂ ಪರಸ್ಪರ ತಮ್ಮಲ್ಲಿರುವ ಒಳ್ಳೆಯ ಅಂಶಗಳನ್ನು ಗುರುತಿಸಿ ಪ್ರಶಂಸಿಸಬೇಕು. ಸಂಭೋಗ ಮಾಡುವ ಮೊದಲು ಪೂರ್ವಸಿದ್ಧತೆ ನಡೆಸಬೇಕು. ಕಣ್ಣುಗಳಿಗೆ, ಕಿವಿಗಳಿಗೆ, ಮೈಗೆ ಹಿತವಾದ ಸಂವೇದನೆಗಳಾಗುವಂತೆ ಸರಸ ಸಲ್ಲಾಪ ಮಾಡಬೇಕು. ದೇಹದ ಉದ್ರೇಕಕಾರಿ ಭಾಗಗಳನ್ನು ಗಮನಿಸಿ, ಸ್ಪರ್ಶಿಸಿ ಪ್ರಚೋದಿಸಬೇಕು. ಇದರಿಂದ ಲೈಂಗಿಕ ಕ್ರಿಯೆ ಹೆಚ್ಚು ಆಕರ್ಷಣೀಯವಾಗುತ್ತದೆ. ಹೆಚ್ಚು ಸುಖದಾಯಕವಾಗುತ್ತದೆ. ಆಗ ದಂಪತಿಗಳ ಶಾರೀರಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯ ವೃದ್ಧಿಸುತ್ತದೆ. ತಮ್ಮ ಅನಿಸಿಕೆ, ಅವಶ್ಯಕತೆಗಳನ್ನು ಯಾವ ಹಿಂಜರಿಕೆ ಇಲ್ಲದೆ ಪರಸ್ಪರ ಹೇಳಿಕೊಳ್ಳುವುದರಿಂದ ಅವರ ನಡುವೆ ಉತ್ತಮ ಬಾಂಧವ್ಯ ಬೆಳೆಯುತ್ತದೆ ಎಂದು ವಿವರಿಸಲಾಯಿತು. ವಾರಕ್ಕೊಮ್ಮೆ ಬಂದು, ಪ್ರಗತಿಯ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಯಿತು. ಸ್ವಲ್ಪ ದಿವಸಗಳಲ್ಲೇ ರಮಾಳ ತಲೆನೋವು ಗುಣವಾಯಿತು.

ಬಲವಂತದ ಮದುವೆ, ಬೇಡದ ಹೆಂಡತಿ

"ಪ್ರಿಯ ಡಾ॥ ಮೂರ್ತಿ ಅವರಿಗೆ ವಂದನೆಗಳು.

ಈ ಪತ್ರ ತಂದಿರುವ ಶ್ರೀಮತಿ ಸುಧಾಮಣಿ ನನಗೆ ಬಂಧುವಾಗಬೇಕು. ಜೀವನದಲ್ಲಿ ಸಾಕಷ್ಟು ನೊಂದಿದ್ದಾಳೆ. ಆಕೆಗೆ ನಿಮ್ಮ ಸಹಾಯ ಬೇಕಾಗಬಹುದು ಎಂದು ಅನಿಸಿದ್ದರಿಂದ, ನಿಮ್ಮನ್ನು ಕಾಣಲು ಹೇಳಿದ್ದೇನೆ. ಆಕೆಯ ದಾಂಪತ್ಯ ಒಡೆ ಹೋಗುವ ದಾರಿಯಲ್ಲಿದೆ. ಐದು ವರ್ಷದ ಹಿಂದೆ ಆಕೆಯ ಮದುವೆ ನಡೆಯಿತು. ಸಾಕಷ್ಟು ವರೋಪಚಾರ, ಉಡುಗೊರೆ ಕೊಟ್ಟು ಆಕೆಯ ತಂದೆ ಅದ್ದೂರಿಯಿಂದಲೇ ಮದುವೆ ಮಾಡಿದರು, ಎರಡೂ ಒಳ್ಳೆಯ ಕುಟುಂಬಗಳೇ. ಮೊದಲಿನಿಂದಲೂ ಪರಸ್ಪರ ಪರಿಚಯವಿದ್ದವರೇ. ಸುಧಾಳ ಗಂಡ ಎಲೆಕ್ಟ್ರಿಕ್ ಸಾಮಾನುಗಳ ಮಳಿಗೆ ಇಟ್ಟಿದ್ದಾನೆ. ತಕ್ಕಷ್ಟು ಅನುಕೂಲವಾಗಿದ್ದಾನೆ. ಸಿಥಾನಸ್ಥ. ಯಾವ ಕೆಟ್ಟ ಚಟಗಳೂ ಇಲ್ಲ. ಮದುವೆಯಾದ ಮೇಲೆ ನಾವು ಕಂಡಂತೆ ಮೂರು ವರ್ಷ ಎಲ್ಲವೂ ಚೆನ್ನಾಗಿತ್ತು. ಗಂಡ ಹೆಂಡತಿ ನೋಡಲು ಅನ್ಯೋನ್ಯವಾಗಿದ್ದರು. ಸುಧಾಳ ಜೀವನ ಸುಗಮವಾಗಿರುವುದನ್ನು ಕಂಡು, ಎಲ್ಲರೂ ಈಕೆ ಬಹಳ ಪುಣ್ಯ ವಂತೆ ಎನ್ನುತ್ತಿದ್ದರು. ಒಂದೇ ಕೊರತೆ ಎಂದರೆ ಈಕೆಗೆ ಮಕ್ಕಳಾಗದಿದ್ದುದು. ಇದರ ಬಗ್ಗೆ ಸುಧಾಳ ಗಂಡ ಯಾವ ಆಸಕ್ತಿಯನ್ನೂ ತೋರಿಸದಿದ್ದುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತ್ತು. ತಾಯಿ ವಿವರವಾಗಿ ಕೇಳಿದರೂ ಈಕೆ ಆದರ ಬಗ್ಗೆ ತುಟಿ ಬಿಚ್ಚಲಿಲ್ಲ. ಕಳೆದ ವರ್ಷ ಈಕೆ ತನ್ನ ಗಂಡ ಷಂಡನಾಗಿದ್ದಾನೆ ಎಂದು ತಾಯಿಗೆ ಹೇಳಿದಳು. ಇದನ್ನು ಕೇಳಿ ಸಹಜವಾಗಿ, ಸುಧಾಳ ತಂದೆ ತಾಯಿಗಳು ಹೌಹಾರಿದರು. ಪ್ರಭು ದೇವನ ತಂದೆ ತಾಯಿಗಳೂ ಚಿಂತೆಗೀಡಾದರು. ನೇರವಾಗಿ ಕೇಳಿದಾಗ ಪ್ರಭು ಹೌದೆಂದು ಒಪ್ಪಿಕೊಂಡ. ಡಾಕ್ಟರಿಗೆ ತೋರಿಸಿ, ಚಿಕಿತ್ಸೆ ಮಾಡಿ ಸಿಕೋ ಎಂದಾಗ, ಆತ ತನಗೆ ಯಾವ ಚಿಕಿತ್ಸೆಯೂ ಬೇಡ. ತಾನು ಹೇಗಿದ್ದೇನೆಯೋ ಹಾಗೇ ಇರಲು ಇಷ್ಟ. ಅದರಿಂದಲೇ ತನಗೆ ನೆಮ್ಮದಿ ಎಂದು ಹೇಳಿ ಮತ್ತೊಮ್ಮೆ ಎಲ್ಲರನ್ನೂ ಆಶ್ಚರ್ಯಪಡಿಸಿದ. ಈ ಸೌಭಾಗ್ಯಕ್ಕೆ ನೀನು ಮದುವೆಯನ್ನೇಕೆ ಮಾಡಿ ಕೊಂಡೆ. ಒಂದು ಹೆಣ್ಣಿನ ಜೀವನವನ್ನು ಏಕೆ ಹಾಳು ಮಾಡಿದೆ. ಸುಧಾಳ

ರವಿಷ್ಯವೇನು ಎಂದು ಕೇಳಿದಾಗ 'ಮದುವೆಗೆ ಮೊದಲು ನಾನು ಚೆನ್ನಾಗಿಯೇ ಇದ್ದೆ. ಮದುವೆಯಾದ ಮೇಲೂ ಸ್ವಲ್ಪ ಕಾಲ ಎಲ್ಲವೂ ಸರಿಯಾಗೇ ಇತ್ತು. ನಂತರ ನನ್ನ ಲೈಂಗಿಕ ಸಾಮರ್ಥ್ಯ ಕಡಿಮೆಯಾಯಿತು. ಆಕೆಗೆ ತೊಂದರೆ ಕೊಡುವ ಉದ್ದೇಶ ನನಗಿಲ್ಲ. ನನ್ನನ್ನು ಬಿಟ್ಟು ಆಕೆ ಬೇರೊಬ್ಬನನ್ನು ಮದುವೆಯಾಗಲಿ. ಡೈವೋರ್ಸ್ ಪಡೆದುಕೊಳ್ಳಲು ನನ್ನ ಅಭ್ಯಂತರವಿಲ್ಲ' ಎಂದುಬಿಟ್ಟ. ನಾವೆಲ್ಲಾ ಬಗೆ ಬಗೆ ಯಾಗಿ ಹೇಳಿ ನೋಡಿದೆವು. 'ಪ್ರಭು ಇದೆಲ್ಲ ಚೆನ್ನಾಗಿರುವುದಿಲ್ಲ. ಒಳ್ಳೇ ಡಾಕ್ಟರಿಗೆ ತೋರಿಸಿ ಚಿಕಿತ್ಸೆ ಮಾಡಿಸಿಕೋ, ಸುಧಾಳ ಕೈಬಿಡಬೇಡ. ನಮ್ಮ ಸಮಾಜದಲ್ಲಿ ಸ್ತ್ರೀಗೆ ಎರಡನೇ ಮದುವೆ ಸಾಧ್ಯವೇ. ಆಕೆಯನ್ನು ಯಾರು ಮದುವೆ ಮಾಡಿ ಕೊಳ್ಳುತ್ತಾರೆ. ಹಠ ಹಿಡಿಯಬೇಡ ಎಂದು ಬುದ್ಧಿ ಹೇಳಿದ್ದು ಗೋರ್ಕಲ್ಲ ಮೇಲೆ ಮಳೆ ಸುರಿದಂತಾಯ್ತು.

ತಲೆಭಾರ, ಸುಸ್ತು

ಸುಧಾ ಕಳೆದ ಒಂದು ವರ್ಷದಿಂದ ತಾಯಿಯ ಮನೆಯಲ್ಲೇ ಇದ್ದಾಳೆ. ಅವಳ ದುಃಖವನ್ನು ನೋಡುವುದಕ್ಕೆ ಆಗುವುದಿಲ್ಲ. ಈ ಮನೋವ್ಯಥೆಯಿಂದ ಅವಳ ಆರೋಗ್ಯವೂ ಅಷ್ಟು ಚೆನ್ನಾಗಿಲ್ಲ. ಯಾವಾಗಲೂ ತಲೆಭಾರ, ಸುಸ್ತು ಎನ್ನುತ್ತಿರು ತ್ತಾಳೆ. ಊಟ, ನಿದ್ರೆ ಅಲಂಕಾರದ ಬಗ್ಗೆ ಸ್ವಲ್ಪವೂ ಆಸಕ್ತಿ ತೋರಿಸುವುದಿಲ್ಲ. ಯಾವಾಗಲೂ ಮಂಕಾಗಿ ಒಂದೆಡೆ ಕುಳಿತಿರುತ್ತಾಳೆ. ಬಲವಂತ ಮಾಡಿದರೆ ಅಳುತ್ತಾ, 'ಇವೆಲ್ಲಾ ಯಾವ ಸೌಭಾಗ್ಯಕ್ಕಾಗಿ ? ನಾನೇಕೆ ಬದುಕಬೇಕು ? ಸತ್ತು ಹೋದರೆ ಚಂದ' ಎಂದು ಹೇಳುತ್ತಾಳೆ. ಈಕೆಯ ತಂದೆ ತಾಯಿಗಳು ಈ ವಿಚಾರ ವಾಗಿ ಕೋರ್ಟಿಗೆ ಹೋಗಲು ತೀವ್ರವಾಗಿ ಯೋಚಿಸುತ್ತಿದ್ದಾರೆ, ಹೀಗಿರುವಾಗ ಒಂದು ಕುತೂಹಲಪೂರ್ಣ ಬೆಳವಣಿಗೆ ನಡೆದಿದೆ. ಪ್ರಭುದೇವ ಬೇರೊಂದು ಹೆಣ್ಣಿನ ಸ್ನೇಹ ಮಾಡಿದ್ದಾನಂತೆ. ಮೂರು ವರ್ಷದಿಂದ ಎಲ್ಲರ ಕಣ್ಣು ತಪ್ಪಿಸಿ ನಡೆಯುತ್ತಿದ್ದ ಈ ವ್ಯವಹಾರ ಇತ್ತೀಚೆಗೆ ಬೆಳಕಿಗೆ ಬಂದಿದೆ. ಆಕೆ ಪ್ರಭುವಿಗೆ ಬರೆ ದಿದ್ದ ಪತ್ರ ಸುಧಾಳಿಗೆ ಸಿಕ್ಕಿದೆ. ಆತ ಷಂಡನಾಗಿದ್ದರೆ ಇದು ಹೇಗೆ ಸಾಧ್ಯವಾ ಯಿತು ಎಂಬುದು ಯಕ್ಷ ಪ್ರಶ್ನೆಯಾಗಿದೆ. ಈ ಸುದ್ದಿ ತಿಳಿದು ಸುಧಾ ಕಂಗಾಲಾಗಿ ದ್ದಾಳೆ. ನಾನು ವಿಚಾರಿಸಿದ ಪ್ರಕಾರ, ಪ್ರಭುದೇವನ ಈ ಪ್ರೇಮ ಪ್ರಕರಣ ನಿಜ ಸಂಗತಿ ಎಂದು ಗೊತ್ತಾಯಿತು ಅವನು ಆ ಹೆಂಗಸಿನೊಂದಿಗೆ ಸಂತೋಷವಾಗಿದ್ದಾನೆ. ಸುಧಾಳೊಂದಿಗೆ ಸಂಸಾರ ಮಾಡಲಾರೆ, ನನಗೆ ಲೈಂಗಿಕ ದೌರ್ಬಲ್ಯ ಇದೆ ಎಂಬ ಅವನ ಮಾತು ಸುಳ್ಳೆ. ಬೇಕೆಂದೇ ಈ ನಾಟಕ ಮಾಡಿದನೇ. ನಮಗೆ ಒಂದೂ ಅರ್ಥವಾಗ್ತಾ ಇಲ್ಲ. ಸುಧಾಮಣಿಯನ್ನು ಕೇಳಿದರೆ 'ಇಲ್ಲ ಅವರು ಷಂಡರೇ.

ನನಗೆ ಚೆನ್ನಾಗಿ ಗೊತ್ತು' ಎನ್ನುತ್ತಾಳೆ, ಒಬ್ಬಳೊಂದಿಗೆ ಲೈಂಗಿಕಕ್ರಿಯೆ ನಡೆಸಲು ವಿಫಲನಾದವನು ಇನ್ನೊಬ್ಬಳೊಂದಿಗೆ ನಡೆಸಲು ಸಫಲನಾಗುತ್ತಾನೆಯೇ ? ಈ ಸಮಸ್ಯೆಗೆ ಪರಿಹಾರವೇನು ಎಂದು ನೀವು ಆಕೆಯೊಂದಿಗೆ ಮಾತನಾಡಿ ಆಕೆಗೆ ಸಮಾಧಾನ ಹೇಳಿ. ನಾನು ಪ್ರಭುದೇವನೊಂದಿಗೆ ಮಾತನಾಡಿ, ಬದಲಾಗಲು ಒತ್ತಡ ತರುತ್ತೇನೆ. ಈ ಪ್ರಕರಣದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ."

ನಿರ್ಲಿಪ್ತ

ಗೆಳೆಯ ರಾಮಕೃಷ್ಣಯ್ಯನವರ ಪತ್ರವನ್ನು ಓದಿಕೊಂಡ ಡಾ|| ಮೂರ್ತಿ, ತಮ್ಮೆದುರು ಕುಳಿತ್ತಿದ್ದ ಸುಧಾಮಣಿಯನ್ನು ನೋಡಿದರು. ದಪ್ಪಗಿದ್ದರೂ, ಲಕ್ಷಣವಾಗಿ, ನೋಡಿದವರು ಮತ್ತೊಮ್ಮೆ ನೋಡಲು ಬಯಸುವಂತೆ ಆಕರ್ಷಣೀಯವಾಗಿದ್ದಳು. ದುಗುಡ ತುಂಬಿದ ಮುಖ, ಕಾಂತಿಹೀನ ಕಣ್ಣುಗಳು ಆಕೆ ಸಂಕಷ್ಟದಲ್ಲಿದ್ದಾಳೆ ಎಂಬುದನ್ನು ಸೂಚಿಸುತ್ತಿದ್ದುವು.

"ನಿಮ್ಮ ಮದುವೆ, ನಿಮ್ಮ ಯಜಮಾನರು, ನಿಮ್ಮ ದಾಂಪತ್ಯ ಜೀವನದ ವಿವರಗಳನ್ನು ಹೇಳುತ್ತೀರ ?"

"ನಮ್ಮದು ಹಿರಿಯರು ನಡೆಸಿದ ಸಾಂಪ್ರದಾಯಿಕ ರೀತಿಯ ಮದುವೆ ಸಾರ್. ನಮ್ಮ ಮನೆಯವರಿಗೂ, ಅವರ ಮನೆಯವರಿಗೂ ಮೊದಲಿನಿಂದಲೂ ಪರಿಚಯ. ಆದರೆ ನಾವು ಮದುವೆಯಾಗ್ತೇವೆ ಅಂತ ಅಂದು ಕೊಂಡಿರ್ಲಿಲ್ಲ. ನನ್ನನ್ನು ಮೂರು ನಾಲ್ಕು ಮಂದಿ ಗಂಡುಗಳು ಬಂದು ನೋಡ್ಕೊಂಡು ಹೋಗಿದ್ರು. ಯಾವ ಗಂಡೂ ಸೆಟ್ ಆಗ್ಲಿಲ್ಲ. ಜಾತಕ ಸರಿಬರಲಿಲ್ಲ ಅಂತಾನೋ, ನಾನು ಸ್ವಲ್ಪ ದಪ್ಪ ಅಂತಾನೋ ಅಥವಾ ಗಂಡು ಚೆನ್ನಾಗಿಲ್ಲ ಅಂತಾನೋ ಸಂಬಂಧ ಕೂಡಿ ಬರ್ಲಿಲ್ಲ. ನಮ್ಮ ತಂದೆತಾಯಿಗೆ ನನ್ನದೇ ಚಿಂತೆ ಆಯ್ತು. ಆಗ ಒಂದು ದಿನ ನಮ್ಮ ಯಜಮಾನರ ತಂದೆ ತಾಯಿ ಖುದ್ದಾಗಿ ಬಂದು ಮದುವೆ ಬಗ್ಗೆ ಪ್ರಸ್ತಾಪ ಮಾಡಿದ್ರು. ಒಳ್ಳೆ ಮನೆತನ, ಸ್ಥಿತಿವಂತರು, ನಾವು ಕಂಡಿದ್ದಂತೆ ಹುಡುಗನೂ ಒಳ್ಳೇವನೇ. ನಮ್ಮ ತಂದೆ ತಾಯಿ ಒಪ್ಪಿದರು. ಮೂರೇ ತಿಂಗಳಲ್ಲಿ ಮದುವೆ ನಡೆದು ಹೋಯಿತು.

ನಮ್ಮ ದಾಂಪತ್ಯ ಜೀವನದ ಮೊದಲ ರಾತ್ರಿಯೇ ನನಗೆ ಒಂದು ದೊಡ್ಡ ಆಘಾತ ಕಾದಿತ್ತು. ಅಪಾರ ಆಸೆ, ಆಕಾಂಕ್ಷೆ ಹೊತ್ತು ಅವರ ಹತ್ರ ಹೋದ ನನಗೆ ಅವರ ನಿರ್ಲಿಪ್ತ ಮುಖಭಾವ ಒಂದು ಒಗಟಾಯಿತು. ಅವರು ನನ್ನತ್ತ ನೋಡ್ಲಿಲ್ಲ, ನಗಲಿಲ್ಲ. ತಲೆಯ ಮೇಲೆ ಬೆಟ್ಟ ಹೊತ್ತವರಂತೆ ಕುಳಿತಿದ್ದರು. ನಾನೇ ಸಂಕೋಚ ಬಿಟ್ಟು 'ಇದೇಕೆ ಹೀಗಿದ್ದೀರಿ. ಏಕೆ ಮೈ ಹುಶಾರಿಲ್ಲವೇ.

ಮದುವೆಯ ಸಮಯದಲ್ಲಿ ನನ್ನಿಂದ ಅಥವಾ ನಮ್ಮ ಮನೆಯೋರಿಂದ ಏನಾದರೂ ಅಪಚಾರವಾಯಿತೇ. ಇನ್ನೇನಾದರೂ ತೊಂದರೆ ಇದೆಯೇ" ಎಂದು ವಿಚಾರಿಸಿದೆ. ಏನೂ ಇಲ್ಲ ಎಂದ ಅವರು ಬಹಳ ಒತ್ತಾಯ ಮಾಡಿದ ಮೇಲೆ "ಸುಧಾ ನನ್ನ ಮನಸ್ಸು ಸರಿ ಇಲ್ಲ. ನಾನು ನಿನ್ನನ್ನು ಮದುವೆ ಮಾಡಿಕೋಬಾರ್ದಿತ್ತು. ಆದರೆ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿಬಿದ್ದಿದ್ದೇನೆ. ಸ್ವಲ್ಪ ಟೈಂ ಕೊಡು. ನಿನ್ನನ್ನು ಪ್ರೀತಿ ಸೋದಿಕ್ಕೆ, ಹೆಂಡತಿಯಾಗಿ ಒಪ್ಪಿಕೊಳ್ಳೋದಿಕ್ಕೆ ಈಗ ನನ್ನ ಮನಸ್ಸು ಸಿದ್ಧವಿಲ್ಲ" ಎಂದಾಗ ನನಗೆ ಸಿಡಿಲು ಬಡಿದಂತೆ ಆಯಿತು. ದುಃಖ ಒತ್ತರಿಸಿ ಬಂತು "ಹಾಗಾದ್ರೆ ನನ್ನ ಏಕೆ ಮದುವೆ ಆದ್ರಿ, ಬೇರೆ ಯಾವುದಾದ್ರೂ ಹುಡುಗೀನ ಪ್ರೀತಿಸಿದ್ದೀರಾ" ಎಂದೆ. "ಇಲ್ಲಾಂತ ಹೇಳಿ ಸುಳ್ಳಾಡಲು ನನಗಿಷ್ಟವಿಲ್ಲ. ಸುನೀತಳನ್ನು ನಾನು ಪ್ರೀತಿಸಿದೆ. ಅವಳನ್ನೇ ಮದುವೆ ಆಗ್ಬೇಕು ಅಂತ ಇಷ್ಟ ಪಟ್ಟೆ, ಅಪ್ಪ ಅಮ್ಮನನ್ನು ಹೇಗಾದ್ರೂ ಒಪ್ಪಿಸಬೇಕು ಅಂತ ನಿರ್ಧಾರ ಮಾಡಿದ್ದೆ. ಅಷ್ಟರಲ್ಲಿ ಎಲ್ಲವೂ ಹಾಳಾಯಿತು. ನಮ್ಮ ಪ್ರೇಮದ ಸುಳಿವು ಸಿಕ್ಕ ಆಕೆಯ ತಂದೆ, ಒಂದು ವಾರದಲ್ಲಿ ಹುಡುಗನೊಬ್ಬನನ್ನು ಹುಡುಕಿ ಬಲಾತ್ಕಾರದಿಂದ ಮದುವೆಮಾಡಿಬಿಟ್ಟರು. ಏನಾಗುತ್ತಿದೆ ಅಂತ ಗೊತ್ತಾಗೋದರೊಳಗಾಗಿ ಮದುವೆ ನಡೆದುಹೋಗಿತ್ತು. ಬಹಳ ಕಷ್ಟಪಟ್ಟು ಸುನೀತಳನ್ನು ಭೇಟಿಮಾಡ್ದೆ. ನನ್ನಂತೆ ಅವಳು ಕಂಗೆಟ್ಟಿರುತ್ತಾಳೆ ದುಃಖಪಡ್ತಿರ್ತಾಳೆ ಅಂತ ನಿರೀಕ್ಷಿಸಿದ ನನಗೆ ಅವಳನ್ನು ನೋಡಿದಾಗ ಆಶ್ಚರ್ಯವಾಯ್ತು. ಆಕೆ ಖುಷಿಯಾಗಿದ್ದಳು. ನನ್ನನ್ನು ನೋಡಿ 'ಪ್ರಭು ನನಗಾಗಿ ಚಿಂತೆ ಮಾಡ್ಬೇಡ, ಕೊರಗ್ಬೇಡ. ನಾವು ಒಂದಾಗ್ಬೇಕು ಅನ್ನೋ ಆಸೆ ನೆರವೇರ್ಲಿಲ್ಲ, ವಾಸ್ತವಿಕತೇನ ಒಪ್ಕೋಬೇಕು. ನೀನು ಒಂದು ಒಳ್ಳೇ ಹುಡುಗೀನ ನೋಡಿ ಮದುವೆ ಮಾಡ್ಕೋ. ನಾವು ಇನ್ಮೇಲೆ ಸ್ನೇಹಿತರಂತೆ ಇರೋಣ' ಅಂದ್ಳು. ಅವಳೇನೋ ಸುಲಭವಾಗಿ ಹೇಳಿಬಿಟ್ಳು. ಆದರೆ ನನಗೆ ಬಹಳ ಕಷ್ಟ ಆಗ್ತಿದೆ. ಮೊದಲ್ನೇ ಹೆಜ್ಜೆ ಆಗಿ ನಿನ್ನನ್ನು ಮದುವೆ ಮಾಡಿಕೊಳ್ಳೋದಿಕ್ಕೆ ಒಪ್ಕೊಂಡೆ. ನಿನ್ನನ್ನು ಪ್ರೀತಿಸೋದಿಕ್ಕೆ, ಹೆಂಡತಿಯಾಗಿ ನಡೆಸಿ ಕೊಳ್ಳೋದಕ್ಕೆ ನನಗೆ ಸ್ವಲ್ಪ ಸಮಯಕೊಡು" ಅಂತ ಅಂದ್ರು. ನನಗೆ ನಿರಾಶೆ ಆದರೂ ಅವರು ಮುಚ್ಚಿಡದೆ ಸ್ಪಷ್ಟವಾಗಿ ಎಲ್ಲವನ್ನೂ ಹೇಳಿದ್ದನ್ನು ಕಂಡು ಸಮಾಧಾನ ಆಯ್ತು. ಅವರ್ನ ಮನಃಪೂರ್ವಕವಾಗಿ ಪ್ರೀತಿಸಿ ಅವರ ಬೇಕು ಬೇಡಗಳನ್ನು ಗಮನಿಸಿ ಚೆನ್ನಾಗಿ ನೋಡಿ ಕೊಂಡು ನನ್ನ ಬಗ್ಗೆ ಅವರಲ್ಲಿ ಪ್ರೀತಿ ಹುಟ್ಟೋ ಹಾಗೆ ಮಾಡ್ಬೇಕು ಅಂತ ನಿರ್ಧಾರ ಮಾಡಿಕೊಂಡೆ. ಇದು ಸಾಕಷ್ಟು ಫಲವನ್ನು ಕೊಟ್ಟಿತು. ದಿನಗಳು ಉರುಳಿದ ಹಾಗೆ ಪ್ರಭು ನನ್ನೊಂದಿಗೆ ಹೊಂದಿಕೊಳ್ಳತೊಡಗಿದರು. ಜೊತೆಯಲ್ಲಿ ವಾಕಿಂಗ್, ಸಿನೇಮಾಕ್ಕೆ ಹೋಗ್ತಿದ್ದೆವು. ಮನೆಯಲ್ಲಿ ತಮಗೆ ಏನು ಬೇಕಿದ್ರೂ

ಅವರು ನನ್ನನ್ನೇ ಕರೀತಿದ್ರು. ನೋಡಿದೋರಿಗೆ ನಾವು ಬಹಳ ಅನ್ಯೋನ್ಯವಾಗಿ ದ್ದೇವೆ ಅಂತ ಅನಿಸ್ತಿತ್ತು, ಆದರೆ ಒಂದು ಕೊರತೆ ಮಾತ್ರ ನೀಗಲಿಲ್ಲ. ನಾವು ಏಕಾಂತದಲ್ಲಿದ್ದಾಗ ಅವರು ನನ್ನನ್ನು ತಬ್ಬಿಕೊಳ್ತಿದ್ದರೂ, ಮುತ್ತು ಕೊಡುತ್ತಿದ್ದರೂ ದೈಹಿಕ ಸಂಪರ್ಕ ಮಾಡೋದಕ್ಕೆ ಪ್ರಯತ್ನಿಸ್ಲೇ ಇಲ್ಲ. ನಾನು ಎದುರಿಗಿದ್ದಾಗ, ನನ್ನ ಸ್ಪರ್ಶ ಮಾಡಿದಾಗ ಅವರು ಲೈಂಗಿಕವಾಗಿ ಉದ್ರೇಕಗೊಳ್ಳುತ್ತಿದ್ದುದು ನನ್ನ ಗಮನಕ್ಕೆ ಬರುತ್ತಿತ್ತು. ಹೆಣ್ಣಿಗೆ ಸಹಜವಾದ ಸಂಕೋಚದಿಂದ, ಮೊದಲು ಕೆಲವು ತಿಂಗಳು ನೀವು ಸಂಭೋಗವನ್ನೇಕೆ ಮಾಡೋದಿಲ್ಲ ಅಂತ ಕೇಳೋದಿಕ್ಕೆ ನನಗೆ ಸಾಧ್ಯ ವಾಗ್ಲಿಲ್ಲ. ಅಲ್ಲದೆ ಅದರ ಬಗ್ಗೆ ನನಗೆ ಹೆಚ್ಚು ತಿಳುವಳಿಕೇನೂ ಇರ್ಲಿಲ್ಲ. ಕಡೆಗೆ ಒಂದು ದಿನ ನಾನು ಬಾಯಿಬಿಟ್ಟು ಕೇಳಿಯೇ ಬಿಟ್ಟೆ. ನಮಗೆ ಮಕ್ಕಳಾಗೋದು ಬೇಡ್ವೆ, ಇನ್ನೆಷ್ಟು ದಿನ ನಾವು ದೂರ ದೂರ ಇರೋದು ಅಂತ. ಅದನ್ನು ಕೇಳಿ ಅವರು ಗಂಭೀರವಾದರು. 'ಸುಧಾ, ತಪ್ಪು ತಿಳೀಬೇಡ. ಸುನೀತ ನನ್ನ ಮನಸ್ಸಿ ನಿಂದ ಪೂರ್ಣವಾಗಿ ದೂರವಾಗಿಲ್ಲ. ನೀನು ನನ್ನನ್ನು ಎಷ್ಟೊಂದು ಪ್ರೀತಿಸ್ತೀಯಾ ಅಂತ ನನಗೆ ಗೊತ್ತು. ನಿನ್ನನ್ನು ಪ್ರೀತಿಸೋದಿಕ್ಕೆ ನಾನೂ ಪ್ರಯತ್ನ ಪಡ್ತಾನೇ ಇದ್ದೀನಿ. ನಿನ್ನ ಅಪ್ಪಿಕೊಂಡಾಗ ನನಗೂ ಬಯಕೆಗಳು ಕೆರಳುತ್ತೆ. ಮರುಕ್ಷಣ ಸುನೀತಳ ಜ್ಞಾಪಕ ಬಂದು, ನಾನು ಮಾಡುತ್ತಿರುವುದು ಸರಿಯೇ ಅನ್ನೋ ಜಿಜ್ಞಾಸೆ ಬಂದುಬಿಡುತ್ತೆ. ಇಷ್ಟು ಕಾಯ್ದೆಯ ಇನ್ನಷ್ಟು ದಿನ ಕಾಯೋದಿಕ್ಕೆ ಆಗೊಲ್ಲವೇ, ಅಂದರು. ಅವರು ಹೇಳಿದಂತೆ ನಾನು ಕಾಯ್ದೆ. ಒಂದಲ್ಲ ಒಂದು ದಿನ ಅವರು ಸರಿ ಹೋಗ್ತಾರೆ ಅಂತ ನಂಬಿಕೊಂಡೆ. ಕೊನೆಗೆ ಆ ದಿನ ಬಂತು. ಮದುವೆ ಆದ ಒಂದೂವರೆ ವರ್ಷದ ನಂತರ, ಒಂದು ದಿನ ನಾನು ಸಾಕಷ್ಟು ಉದ್ರೇಕಗೊಂಡಿದ್ದೆ. ನಾನೇ ಮುಂದುವರೆದೆ, ಪರಿಣಾಮವಾಗಿ ನಾವು ದೈಹಿಕ ಸಂಪರ್ಕಮಾಡಿದೆವು. ಆದರೆ ಒಂದೆರಡು ನಿಮಿಷಗಳಲ್ಲೇ ಅವರ ಉದ್ರೇಕ ಇಳಿದು ಹೋಯ್ತು. ಅತೃಪ್ತಿ ಆದರೂ ಉದ್ರೇಕ ಇಷ್ಟಾದರೂ ಆಯ್ತಲ್ಲ ಅಂತ ಸಮಾಧಾನ ಮಾಡಿಕೊಂಡೆ. ಆಮೇಲೆ ತಿಂಗಳಿಗೊಮ್ಮೆ ಅಥವಾ ಎರಡು ಸಾರಿ ಸೇರ್ತಿದ್ದೆವು. ಹೀಗೇ ಆರು ತಿಂಗಳು ಕಳೆಯಿತು.

ವಿಚಿತ್ರ ಧೋರಣೆ

ಆಮೇಲೆ ಏನಾಯಿತೋ ಏನೋ ಅವರು ನನ್ನಿಂದ ದೂರ ಆಗತೊಡಗಿದರು. ನನ್ನೊಂದಿಗೆ ಮಾತಾಡುವುದನ್ನು ಕಡಿಮೆ ಮಾಡಿದರು. ನನ್ನ ಮೇಲೆ ಸಿಡುಕೋದಿಕ್ಕೆ ಶುರು ಮಾಡಿದರು. ನೇರವಾಗಿ, ಪರೋಕ್ಷವಾಗಿ ನನ್ನ ಉದಾಸೀನ ಮಾಡ ತೊಡಗಿದರು, ಅವರನ್ನು ಆಕರ್ಷಿಸಲು ನನ್ನೆಲ್ಲ ಸಾಮರ್ಥ್ಯವನ್ನು ಖರ್ಚುಮಾಡಿದೆ.

ಲವೊಮ್ಮೆ ಅವರು ಅದಕ್ಕೆ ಪ್ರತಿಕ್ರಿಯೆ ತೋರಿಸಿದ್ರೂ ನನಗೆ ದೊಡ್ಡ ನಿರಾಶೆ ಾದಿತ್ತು. ದೈಹಿಕ ಸಂಪರ್ಕಕ್ಕೆ ಪ್ರಯತ್ನ ಪಟ್ಟಾಗ ಅವರು ಉದ್ರೇಕಗೊಳ್ಳಲೇ ಿಲ್ಲ. ಇದು ಪುನರಾವರ್ತನೆ ಆದಾಗ, ಅವರು ನನ್ನನ್ನೇ ದೂಷಿಸಿದರು, "ನೀನು ಿನೋ ಮಾಡಿಸಿ ನನ್ನನ್ನು ಷಂಡನನ್ನಾಗಿ ಮಾಡಿದೀಯಾ. ಇದರಿಂದ ನಿನಗೆ ಳ್ಳೇದಾಗೋದಿಲ್ಲ" ಅಂತ ಜರಿದರು. ನಾನು ಕಣ್ಣೀರು ಹಾಕಿದೆ. ಹೀಗೆಲ್ಲಾ ನನ್ನನ್ನು ದೂರಬೇಡಿ ಎಂದು ಕೇಳಿಕೊಂಡೆ. "ನಾನು ಷಂಡ. ನನ್ನಿಂದ ನಿನಗೇನು ಸುಖ ಸಿಕ್ಕೀತು. ಡೈವೋರ್ಸ್ ತೆಗೆದುಕೊಂಡುಬಿಡು" ಎಂದು ಅವರು ಹೇಳ ತೊಡಗಿದಾಗ ಅವರ ವರ್ತನೆ, ಧೋರಣೆ ಸ್ವಲ್ಪವೂ ಅರ್ಥವಾಗಲಿಲ್ಲ. ನನ್ನ ದುರದೃಷ್ಟವನ್ನು ಹಳಿದುಕೊಂಡೆ.

ನನ್ನ ಬಗ್ಗೆ ಈ ಬಗೆಯ ಉದಾಸೀನಕ್ಕೆ, ದೋಷಾರೋಪಣೆಗೆ ಕಾರಣ ನನಗೆ ಬಹಳ ದಿನಗಳಾದ ಮೇಲೆ ತಿಳಿಯಿತು. ಬಿಸಿನೆಸ್ ಎಂದು ಮನೆಗೆ ತಡವಾಗಿ ಬರೋದು : ಬೆಂಗಳೂರಿಗೆ ಹೋಗುತ್ತೇನೆ ಎಂದು ಎರಡು ಮೂರು ದಿನ ಮನೆಗೆ ಬರದಿರುವುದರ ಮರ್ಮ ತಿಳಿದದ್ದು. ಅವರಿಗೆ ಬಂದಿದ್ದ ಒಂದು ಹಳೆಯ ಪತ್ರ ಅವರ ಕೋಟಿನ ಜೇಬಿನಲ್ಲಿ ಸಿಕ್ಕಾಗ. ಸುನೀತ ಅವರಿಗೆ ಪತ್ರ ಬರೆದು, ತನ್ನ ಗಂಡ ಶಾಶ್ವತವಾಗಿ ತನ್ನನ್ನು ಬಿಟ್ಟು ಹೋಗಿದ್ದಾನೆ. ಇನ್ನು ತಾವು ಯಾವ ಅಂತಕವಿಲ್ಲದೆ ಮುಚ್ಚುಮರೆಯಿಲ್ಲದೆ ಸೇರಲು ಅಡ್ಡಿ ಇಲ್ಲ ಎಂದು ತಿಳಿಸಿದ್ದಳು. ಆ ಪತ್ರವನ್ನು ತೋರಿಸಿ, ನನ್ನವರನ್ನು ತರಾಟೆಗೆ ತೆಗೆದುಕೊಂಡೆ. ನೀವು ನನಗೆ ದೊಡ್ಡ ಮೋಸ ಮಾಡಿದಿರಿ ಎಂದು ಜರಿದೆ. ಅವರು ಇದರಿಂದ ಸ್ವಲ್ಪವೂ ವಿಚಲಿತರಾಗದೆ 'ಹೌದು ನಾನು ಸುನೀತಳನ್ನು ಪ್ರೀತಿಸಿದೆ. ಆಕೆಯ ತಂದೆಯ ಕುತಂತ್ರದಿಂದ ಆಕೆ ನನ್ನ ಕೈತಪ್ಪಿದಳು. ನಾನು ನಿನ್ನನ್ನು ಮದುವೆಯಾಗಬೇಕಾಯಿತು. ಬೇಡದ ನಿನ್ನೊಂದಿಗೆ ದೈಹಿಕ ಸಂಪರ್ಕ ಮಾಡಿ ನನಗೆ ಷಂಡತನ ಬಂತು. ನನ್ನ ಅದೃಷ್ಟಕ್ಕೆ ಸುನೀತ ನನಗೆ ಮತ್ತೆ ಸಿಕ್ಕಿದ್ದಾಳೆ. ತನ್ನ ಅಪಾರ ಪ್ರೀತಿಯಿಂದ ಕಳೆದು ಹೋಗಿದ್ದ ನನ್ನ ಪೌರುಷವನ್ನು ನನಗೆ ಮರಳಿ ಕೊಟ್ಟಿದ್ದಾಳೆ. ನಿನ್ನಿಂದ ನನಗೆ ಏನೂ ಸಿಕ್ಕಿಲ್ಲ. ನನ್ನ ಮನಸ್ಸಿನಲ್ಲಿ ನಿನ್ನ ಬಗ್ಗೆ ಪ್ರೀತಿ ಉಳಿದಿಲ್ಲ. ಬೇಕಾದರೆ ಇಲ್ಲಿರು, ಇಲ್ಲದಿದ್ದರೆ ನಿನ್ನ ತಂದೆಯ ಮನೆಗೆ ಹೋಗಲು ಸ್ವತಂತ್ರಳು. ನಿನಗೆ ಬೇಕಾದಷ್ಟು ಹಣ ಕೊಡುತ್ತೇನೆ' ಎಂದಾಗ, ನನಗೆ ನಿಂತ ನೆಲ ಬಾಯ್ಬಿಟ್ಟು ನನ್ನನ್ನು ನುಂಗಬಾರದೆ ಅನ್ನಿಸಿತು. ಇದು ನನ್ನ ಜೀವನದ ದುರಂತ" ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಮಾನಸಿಕ ಸಿದ್ಧತೆ

ಪ್ರಭುವಿನ ವೃತ್ತಾಂತ 'ನಿರ್ದಿಷ್ಟ ವ್ಯಕ್ತಿಯೊಂದಿಗೆ ಷಂಡತನ' ಸ್ಥಿತಿಗೆ ಒಂದು ಉದಾಹರಣೆ. ಕೆಲವರು ಯಾವುದೇ ಪೂರ್ವಸಿದ್ಧತೆ ಇಲ್ಲದೆ, ಯಾವ ಸ್ತ್ರೀಯೊಂದಿಗಾದರೂ ಕೂಡಲು ಸಿದ್ಧರಿರುತ್ತಾರೆ. ಕೆಲವರಿಗೆ ಲೈಂಗಿಕವಾಗಿ ಉದ್ರೇಕಗೊಳ್ಳಲು, ಯಶಸ್ವಿ ಲೈಂಗಿಕ ಕ್ರಿಯೆ ನಡೆಸಲು ಮಾನಸಿಕ ಪೂರ್ವಸಿದ್ಧತೆ ಮತ್ತು ಪರಿಸರದಲ್ಲಿ ಸೂಕ್ತ ಸೌಲಭ್ಯಗಳು ಬೇಕಾಗುತ್ತವೆ. ಅವಿಲ್ಲದಿದ್ದರೆ ಅವರು ಉದ್ರೇಕಗೊಳ್ಳುವುದಿಲ್ಲ. ಜೊತೆಗೆ ಸಂಗಾತಿಯನ್ನು ಇಷ್ಟಪಡುವುದು, ಪ್ರೀತಿಸುವುದು, ಲೈಂಗಿಕ ಉದ್ರೇಕಕ್ಕೆ ಅವಶ್ಯಕ. ಸಂಗಾತಿಯ ಬಗ್ಗೆ ಪ್ರೀತಿ ಅನುರಾಗ, ವ್ಯಕ್ತಿಯನ್ನು ಮಾನಸಿಕವಾಗಿ ಉತ್ತೇಜಿಸುತ್ತವೆ ; ಆತನ ಲೈಂಗಿಕ ವ್ಯವಸ್ಥೆಯನ್ನು ಪ್ರಚೋದಿಸುತ್ತವೆ. ಸಂಗಾತಿ ಮನಸ್ಸಿಗೆ ಇಷ್ಟವಾಗದಿದ್ದರೆ ಆಕೆಯ ಬಗ್ಗೆ ಪ್ರೀತಿ ಇಲ್ಲದಿದ್ದರೆ. ಅದರ ಬದಲು ತಿರಸ್ಕಾರ ದ್ವೇಶವಿದ್ದರೆ ವ್ಯಕ್ತಿ ಪ್ರಚೋದಿತಗೊಳ್ಳುವುದಿಲ್ಲ. ಸಂಭೋಗ ಮಾಡಲು ವಿಫಲನಾಗುತ್ತಾನೆ. ಬಲವಂತಕ್ಕೆ ತನ್ನಿಷ್ಟಕ್ಕೆ ವಿರುದ್ಧವಾಗಿ ಲೈಂಗಿಕ ಕ್ರಿಯೆ ನಡೆಸಲು ಆತನಿಗೆ ಸಾಮರ್ಥ್ಯವಿರುವುದಿಲ್ಲ. ಆದರೆ ಅದೇ ಸಮಯದಲ್ಲಿ, ತಾನು ಪ್ರೀತಿಸುವ ಸ್ತ್ರೀ ಸಿಕ್ಕಿದರೆ ಉದ್ರೇಕಗೊಂಡು, ಲೈಂಗಿಕಕ್ರಿಯೆ ನಡೆಸಲು ಶಕ್ತನಾಗುತ್ತಾನೆ. ಪ್ರಭುವಿಗಾದದ್ದು ಹೀಗೆಯೇ. ಸುಧಾಮಣಿಯನ್ನು ಹಿರಿಯರ ಬಲವಂತಕ್ಕೆ ಮದುವೆಯಾದ. ಆಕೆಯನ್ನು ಪ್ರೀತಿಸಲು ಆತನಿಗೆ ಸಾಧ್ಯವಾಗಲಿಲ್ಲ. ಆಕೆಯೊಂದಿಗೆ ದೈಹಿಕ ಸಂಪರ್ಕ ಮಾಡುವುದನ್ನು ಆದಷ್ಟೂ ತಪ್ಪಿಸಿದ. ಆಕೆಯ ಬಲವಂತಕ್ಕೆ ಮಾಡಿದಾಗ, ಬೇಗ ವೀರ್ಯಸ್ಖಲನವಾಗಿ ಆಕೆಗೆ ತೃಪ್ತಿಯನ್ನು ಕೊಡಲು ವಿಫಲನಾದ. ಸುನೀತಾಳ ಸಂಪರ್ಕ ಮತ್ತೆ ದೊರೆತಾಗ, ಆಕೆಯೊಂದಿಗೆ ಯಶಸ್ವಿಯಾಗಿ ಲೈಂಗಿಕಕ್ರಿಯೆ ನಡೆಸಿ ಸಂತೋಷಪಟ್ಟರೆ, ಸುಧಾಳ ಮುಂದೆ ಷಂಡನಾಗಿದ್ದ.

ಹೀಗೆ ಕೆಲವರು, ತಮ್ಮ ಸಂಗಾತಿಯ ಮೇಲಿನ ದ್ವೇಷ ತಿರಸ್ಕಾರದಿಂದ, ಪ್ರೀತಿಯ ಅಭಾವದಿಂದ ಷಂಡರಾಗುತ್ತಾರೆ. ಆದರೆ ಅದೇ ಸಮಯಕ್ಕೆ ತಮಗೊಪ್ಪುವ ಇನ್ನೊಬ್ಬ ಸಂಗಾತಿಯೊಂದಿಗೆ ಸಂಭೋಗ ಮಾಡಿ ಸುಖ ಪಡೆಯಲು, ಕೂಡಲು ಶಕ್ತರಾಗಿರುತ್ತಾರೆ. ಮನಃಪೂರ್ವಕವಾಗಿ, ಸಂಗಾತಿಯ ಮೇಲಿನ ದ್ವೇಷ, ನಿರಾಸಕ್ತಿಯನ್ನು ನಿವಾರಿಸಿಕೊಳ್ಳಬಲ್ಲರಾದರೆ ಆಕೆಯೊಂದಿಗೆ ಸಫಲ ಸಂಪರ್ಕವನ್ನು ಮಾಡಬಲ್ಲರು.

ಮುದುಡಿದ ದೇಹ, ಬೇಸರದ ಮನಸ್ಸು

ಮಾನ್ಯ ಡಾ॥ ಮೂರ್ತಿ ಅವರಿಗೆ ನಮಸ್ಕಾರಗಳು.

ಕಳೆದ ಐ.ಎಂ.ಎ. ಮೀಟಿಂಗ್‌ನಲ್ಲಿ ನಿಮ್ಮನ್ನು ಭೇಟಿ ಆದ ನಂತರ, ಮತ್ತೆ ನಿಮ್ಮನ್ನು ಕಾಣಲಾಗಲಿಲ್ಲ. ನನ್ನ ಕ್ಲಿನಿಕ್ಕಿಗೆ ಬರುವ ರೋಗಿಗಳಲ್ಲಿ, ಎಷ್ಟು ಮಂದಿಗೆ ಮಾನಸಿಕ ಕ್ಲೇಶಗಳಿರುತ್ತವೆ ಎಂಬ ಅಧ್ಯಯನವನ್ನು ನಿಮ್ಮ ಸೂಚನೆಯಂತೆ ನಡೆಸುತ್ತಿದ್ದೇನೆ. ನೀವು ತಿಳಿಸಿದಂತೆ, ಹತ್ತು ಜನಕ್ಕೆ ಕನಿಷ್ಟ ಮೂರು ಮಂದಿಯಲ್ಲಾದರೂ ಮಾನಸಿಕ ಸಮಸ್ಯೆಗಳಿರುವುದು ನನ್ನ ಗಮನಕ್ಕೆ ಬಂದಿದೆ. ಮನಸ್ಸಿನಲ್ಲಿ ಹತ್ತಾರು ನೋವು, ಸಮಸ್ಯೆಗಳನ್ನಿಟ್ಟುಕೊಂಡು, ಅದರಿಂದ ನರಳುತ್ತಿದ್ದರೂ, ಕ್ಲಿನಿಕ್‌ಗೆ ಬಂದು 'ನನಗೆ ತಲೆನೋವು, ಸುಸ್ತು, ಸಂಕಟ, ಹಸಿವಿಲ್ಲ, ನಿದ್ರೆ ಇಲ್ಲ, ಒಳ್ಳೇ ಔಷಧ ಬರೆದುಕೊಡಿ' ಎಂದು ಹೇಳುತ್ತಾರೆ. ಈ ಮೊದಲು ಇಂಥವರನ್ನು ಪರೀಕ್ಷಿಸಿ, ಶರೀರದಲ್ಲಿ ಯಾವ ನ್ಯೂನತೆ ಅಥವಾ ಖಾಯಿಲೆಯನ್ನೂ ಕಾಣದೆ, ಅವರಿಗೆ ಏನು ಚಿಕಿತ್ಸೆ ಕೊಡುವುದು ಎಂದು ತಿಳಿಯುತ್ತಿರಲಿಲ್ಲ. ಬೇರೆ ದಾರಿ ಕಾಣದೆ, ಬಾಯಿಗೆ ಬಂದ ಯಾವುದಾದರೂ ವಿಟಮಿನ್ ಮಾತ್ರೆ, ಇಂಜೆಕ್ಷನ್ ಅಥವಾ ಟಾನಿಕ್ ಬರೆದು ಕಳುಹಿಸುತ್ತಿದ್ದೆ. ಅದರಿಂದ ಕೆಲವರಿಗೆ ಮಾತ್ರ ತಾತ್ಕಾಲಿಕವಾಗಿ ತೊಂದರೆ ಕಡಿಮೆಯಾಗುತ್ತಿತ್ತು. ಹೆಚ್ಚು ಜನರಿಗೆ ಯಾವ ಉಪಯೋಗವೂ ಕಾಣುತ್ತಿರಲಿಲ್ಲ. ಈಗ ಈ ರೋಗಿಗಳ ಕಷ್ಟ ಸುಖದ ಬಗ್ಗೆ ವಿಚಾರಿಸುತ್ತೇನೆ. ಸೂಕ್ತ ಸಹಾನುಭೂತಿ, ಆಸರೆ, ಪ್ರೋತ್ಸಾಹಗಳನ್ನು ಕೊಡುತ್ತಿದ್ದೇನೆ. ಇದರ ಪರಿಣಾಮವಾಗಿ. ಅವರ ತೊಂದರೆ, ನೋವು ಕಡಿಮೆಯಾಗುತ್ತಿದೆ. ಮೊದಲು ಸಂಕಟದಿಂದ ಮುಖ ಗಂಟು ಹಾಕಿಕೊಂಡಿರುತ್ತಿದ್ದವರು, ಈಗ ಮುಗುಳ್ನಗುತ್ತಾರೆ. ಡಾಕ್ಟರು ಒಳ್ಳೆಯವರು, ಚೆನ್ನಾಗಿ ನೋಡುತ್ತಾರೆ ಎಂದು ನನ್ನ ಬಗ್ಗೆ ಪ್ರಶಂಸೆಯ ಮಾತನಾಡುತ್ತಾರೆ. ಸಹಜವಾಗಿ ಇದು ನನಗೆ ತೃಪ್ತಿಯನ್ನು ಕೊಟ್ಟಿದೆ.

ಈ ಒಂದು ಸಮಸ್ಯೆಯ ಕೇಸನ್ನು, ಸಲಹೆ-ಚಿಕಿತ್ಸೆಗಾಗಿ ನಿಮ್ಮ ಬಳಿಗೆ ಕಳುಹಿಸುತ್ತಿದ್ದೇನೆ. ಈಕೆಯ ಹೆಸರು ಶ್ರೀಮತಿ. ವಯಸ್ಸು 20 ವರ್ಷ. ಈಕೆಯ ಗಂಡ ಶ್ರೀಪತಿ. ನನ್ನ ಕ್ಲಿನಿಕ್ ಪಕ್ಕದಲ್ಲೇ ಸ್ಟೇಶನರಿ ಅಂಗಡಿ ಇಟ್ಟಿದ್ದಾನೆ,

ಸ್ನೇಹಜೀವಿ. ಅವರ ಮದುವೆಯಾಗಿ ಆರು ತಿಂಗಳಾಗಿವೆ ಅಷ್ಟೆ. ನೋಡಲು ಅನುರೂಪವಾದ ಜೋಡಿ. ಎರಡು ತಿಂಗಳ ಹಿಂದೆ ಶ್ರೀಮತಿಯನ್ನು ನನ್ನ ಕ್ಲಿನಿಕ್‌ಗೆ ಕರೆದುಕೊಂಡು ಬಂದ. ಆಕೆ ತನಗೆ ತುಂಬಾ ಸೊಂಟ ನೋವು, ಸುಸ್ತು, ಕೆಲಸ ಮಾಡಲಾಗುವುದಿಲ್ಲ ಎಂದಳು. 'ಡಾಕ್ಟ್ರೇ ಇವಳ ನೋವು, ಕಷ್ಟವನ್ನು ನೋಡ ಲಾಗುವುದಿಲ್ಲ. ನೋವಿನಿಂದ ಅಳುತ್ತಾಳೆ. ಒಳ್ಳೇ ಔಷಧ ಬರೆದು ಕೊಡಿ' ಎಂದ ಶ್ರೀಪತಿ. ರೋಗ ನಿರ್ಧಾರ ಮಾಡಲು ನಾನು ಕೇಳಬೇಕಾದ ಪ್ರಶ್ನೆಗಳನ್ನೆಲ್ಲ ಕೇಳಿದೆ. ಋತು ಚಕ್ರ. ಬಿಳೀ ಸೆರಗು ಇತ್ಯಾದಿಗಳ ಬಗ್ಗೆ ವಿಚಾರಿಸಿದೆ, ಯಾವ ತೊಂದರೆಯೂ ಇರಲಿಲ್ಲ. ರಕ್ತಹೀನತೆ ಇದೆಯೇ ಎಂದು ನೋಡಿದೆ. ಅದೂ ಇರ ಲಿಲ್ಲ. ಆಕೆಯ ತೊಂದರೆಗಳಿಗೆ ಕಾರಣವಾಗಬಹುದಾದ ಶಾರೀರಕ ಖಾಯಿಲೆ ಯಾವುದೂ ಇದ್ದಂತೆ ಕಾಣಲಿಲ್ಲ. ನಿಮ್ಮ ಉಪನ್ಯಾಸದ ವಿವರಗಳು ನೆನಪಿಗೆ ಬಂದು ಗಂಡಹೆಂಡತಿಯರನ್ನು ವಿವರವಾಗಿ ಸಂದರ್ಶಿಸಿದೆ. ಒಬ್ಬರನೊಬ್ಬರು ಎಷ್ಟು ಹೊಂದಿಕೊಂಡಿದ್ದಾರೆ. ಏನಾದರೂ ಮನಸ್ತಾಪ, ವಿರಸ ಇದೆಯೇ ಎಂದು ವಿಚಾರಿ ಸಿದೆ. ಅವರಿಬ್ಬರೂ ತಾವು ಪರಸ್ಪರ ಪ್ರೀತಿಸುವುದಾಗಿಯೂ, ಯಾವುದೇ ಭಿನ್ನಾಭಿ ಪ್ರಾಯ ಇಲ್ಲದೆ ತಾವು ಅನ್ಯೋನ್ಯವಾಗಿರುವುದಾಗಿಯೂ ತಿಳಿಸಿದರು. ಅವರ ದಾಂಪತ್ಯ ಜೀವನದ ಬಗ್ಗೆ ವಿಚಾರಿಸಿದೆ.

ಅತೃಪ್ತ ದಾಂಪತ್ಯ

ನಾನು ಪ್ರಶ್ನೆ ಕೇಳುತ್ತಿದ್ದಂತೆ ಶ್ರೀಮತಿಯ ಕಣ್ಣಲ್ಲಿ ನೀರಾಡಿತು. ಆಕೆ ತಲೆ ತಗ್ಗಿಸಿ ಕುಳಿತಳು. ಶ್ರೀಪತಿಯ ಮುಖ ಕುಂದಿಹೋಯಿತು. ಆತ ಭಾರವಾದ ಧ್ವನಿಯಲ್ಲಿ 'ಡಾಕ್ಟ್ರೆ, ದಾಂಪತ್ಯ ಜೀವನವನ್ನು ತೃಪ್ತಿಯಿಂದ ನಡೆಸುವ ಭಾಗ್ಯ ನಮ ಗಿಲ್ಲ ಅಂತ ಕಾಣುತ್ತೆ' ಎಂದ. 'ಏಕೆ, ಏನು ತೊಂದರೆ, ಸಂಕೋಚವಿಲ್ಲದೆ ಹೇಳ ಬಹುದಲ್ಲ' ಎಂದೆ. ಅದಕ್ಕೆ ಆತ 'ನಮಗೆ ಸಂಭೋಗ ಮಾಡಲು ಸಾಧ್ಯವೇ ಆಗ್ತಿಲ್ಲ. ನನ್ನ ಜನನಾಂಗ ಸಾಕಷ್ಟು ಉದ್ರೇಕವಾಗಿರುತ್ತೆ. ಆದರೆ ಯೋನಿ ಪ್ರವೇಶ ಮಾಡೋದಿಕ್ಕೆ ಆಗೋದೇ ಇಲ್ಲ. ಮುಟ್ಟುತ್ತಿದ್ದ ಹಾಗೇ ಆಕೆಗೆ ವಿಪರೀತ ನೋವಾ ಗುತ್ತೆ. ಮುದುಡಿಕೊಂಡುಬಿಡ್ತಾಳೆ. 'ಬೇಡ, ನೋವನ್ನು ತಡೆಯೋಕಾಗಲ್ಲ' ಅಂತ ಅಳೋದಿಕ್ಕೆ ಶುರುಮಾಡ್ತಾಳೆ. ಆಗ ನಾನು ನಿಲ್ಲಿಸಿಬಿಡ್ತೇನಿ. ಇಂದು ಸರಿ ಹೋಗ್ಬೋದು, ನಾಳೆ ಸರಿಹೋಗ್ಬೋದು ಅಂತ ಇದುವರೆಗೆ ನೋಡಿದೆವು. ಏನೂ ಆಗ್ಲಿಲ್ಲ. ಸಂಭೋಗಮಾಡಿ ಸಂತೋಷಪಡೋ ಅವಕಾಶ ನಮಗೆ ಇಲ್ಲವೇನೋ ಅಂತ ಅನಿಸಿಬಿಟ್ಟಿದೆ. ಪ್ರೀತಿಯಿಂದ ಮಾತಾಡಿ, ಪರಸ್ಪರ ಮುದ್ದಿಟ್ಟು ಸಮಾಧಾನ ಮಾಡ್ಕೊಳ್ತೇವೆ.'

ವೈದ್ಯರಿಗೆ ತೋರಿಸೋಣ ಅಂದ್ರೆ, ಇವಳಿಗೆ ವಿಪರೀತ ನಾಚಿಕೆ. 'ಬೇಡಿ ಇದನ್ನೆಲ್ಲ ಅವರಿಗೆ ಹೇಗೆ ಹೇಳೋದು. ಹಾಗೇ ಸರಿಹೋಗಬಹುದು, ಅಂತಾಳೆ. ಈ ದಿನ ಇದರ ಬಗ್ಗೆ ಹೇಳೋದಿಕ್ಕೆ ಅವಕಾಶ ಸಿಕ್ಕಿತು' ಎಂದ. ಆಕೆಗೆ ದಪ್ಪನಾದ ಯೋನಿಪಟಲ ಇರಬೇಕು ಎಂದು ನಾನು ಊಹಿಸಿ, ಆಕೆಯನ್ನು ಗೈನೆಕಾಲಜಿಸ್ಟ್‌ಗೆ ತೋರಿಸಲು ಸಲಹೆ ಮಾಡಿದೆ. ಅಂತೆಯೇ ಅವರು ಡಾ॥ ಇಂದಿರಾಬಾಯಿ ಅವರನ್ನು ಕಂಡರು. ಶ್ರೀಮತಿಯನ್ನು ಪರೀಕ್ಷಿಸಿದ ಅವರು 'ಯೋನಿಪಟಲ ಈಗಾಗಲೇ ಹರಿದಿದೆ, ಸಂಭೋಗಕ್ಕೆ ಅಡ್ಡಿಯಾಗುವಂತಹ ಯಾವ ನ್ಯೂನತೆಯೂ ಕಂಡುಬರುತ್ತಿಲ್ಲ. ಆದರೆ ಆಕೆಯ ಜನನಾಂಗದ ಸುತ್ತಮುತ್ತಲಿನ ಮಾಂಸ ಖಂಡಗಳು ಅತಿಯಾಗಿ ಸಂಕುಚಿತಗೊಂಡಿವೆ. ಹೀಗಾಗಿ ಯೋನಿದ್ವಾರ ವಿಪರೀತ ಚಿಕ್ಕದಿದೆ. ಶ್ರೀಮತಿ ವಿಪರೀತ ಸಂಕೋಚದ, ಆತಂಕ ಸ್ವಭಾವದ ಹುಡುಗಿ. ಯಾವುದೋ ಭಯ, ಮಾನಸಿಕ ಒತ್ತಡದಿಂದ ಈಕೆಗೆ ಯೋನಿಸೆಡೆತ (ವೆಜೈನಿಸ್ಮಸ್) ಬಂದಿದೆ. ಆಕೆ ಮನೋವೈದ್ಯರ ಸಲಹೆ ಪಡೆಯುವುದು ಒಳ್ಳೆಯದು' ಎಂದು ಬರೆದುಕೊಟ್ಟಿದ್ದಾರೆ.

ಈ ಸಮಸ್ಯೆಯ ಪರಿಹಾರಕ್ಕೆ ಈ ದಂಪತಿಗಳನ್ನು ನಿಮ್ಮ ಬಳಿಗೆ ಕಳುಹಿಸುತ್ತಿದ್ದೇನೆ. ಅವರಿಗೆ ನೀವು ಸಹಾಯ ಮಾಡುತ್ತೀರೆಂಬ ನಂಬಿಕೆ ನನಗಿದೆ. ಈ ಕೇಸನ್ನು ನೀವು ಹೇಗೆ ವಿಶ್ಲೇಷಿಸುತ್ತೀರಿ, ಈಕೆಯ ಮನಸ್ಸಿನಾಳದಲ್ಲಿರುವ ಯಾವ ವಿಷಯ ಈಕೆಯ ಯೋನಿ ಸೆಡೆತಕ್ಕೆ ಕಾರಣವಾಗಿದೆ. ಹೇಗೆ ಚಿಕಿತ್ಸೆ ಕೊಡುತ್ತೀರಿ ಎಂದು ತಿಳಿಯಲು ಕುತೂಹಲವಿದೆ. ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ತಮ್ಮ ವಿಶ್ವಾಸಿ
ಡಾ॥ ವಿವೇಕ್

ಪ್ರಿಯ ಡಾ॥ ವಿವೇಕ್

ನೀವು ಬರೆದ ಪತ್ರ ತಲುಪಿತು ಹಾಗೂ ನೀವು ಸಲಹೆ ಚಿಕಿತ್ಸೆಗಾಗಿ ಕಳುಹಿಸಿದ ಶ್ರೀಪತಿ ದಂಪತಿಗಳು ನನ್ನನ್ನು ಭೇಟಿ ಮಾಡಿದ್ದಾರೆ. ಸೊಂಟ ನೋವು, ಸುಸ್ತು ಎಂದು ನಿಮ್ಮಲ್ಲಿಗೆ ಬಂದ ಶ್ರೀಮತಿಗೆ ನೋವು ಶಮನ ಮಾಡುವ ಅಥವಾ ಟಾನಿಕ್ ಮಾತ್ರೆಯನ್ನು ಬರೆದುಕೊಟ್ಟು ಕಳುಹಿಸಿಬಿಡದೆ, ಆಕೆಯ ನೋವಿನ ಮೂಲವನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಕ್ಕೆ ನಿಮಗೆ ಅಭಿನಂದನೆಗಳು. ನಿಮ್ಮ ತಿಳುವಳಿಕೆಗಾಗಿ, ಆಕೆಯ ಈ ತೊಂದರೆಯು ಪ್ರಾರಂಭವಾಗಲು ಕಾರಣ ಮತ್ತು ಅದರ ಹಿನ್ನೆಲೆಯನ್ನು ವಿವರಿಸುತ್ತೇನೆ.

ಶ್ರೀಮತಿ ತನ್ನ ತಾಯಿಗೆ ಕಡೇ ಮಗುವಾಗಿ ಹುಟ್ಟಿದಳು. ತಾಯಿಗೆ ಹೆರಿಗೆ

ತುಂಬಾ ಕಷ್ಟವಾಗಿ, ವೈದ್ಯರು ಎಷ್ಟೇ ಪ್ರಯತ್ನಪಟ್ಟರೂ, ಉಳಿಯದೆ ತೀರಿಕೊಂಡಳು. ಶ್ರೀಮತಿಗೆ ಬುದ್ಧಿ ತಿಳಿದಂದಿನಿಂದ, ಒಬ್ಬರಲ್ಲ ಒಬ್ಬರು, ಆಗಿಂದಾಗ್ಗೆ, ತಾಯಿಗೆ ಹೆರಿಗೆ ಎಷ್ಟು ಕಷ್ಟವಾಯಿತು. ಎಷ್ಟು ನೋವು ತಿಂದು ನರಳಿದಳು. ಒಂದು ಮಗುವನ್ನು ಗರ್ಭದಲ್ಲಿ ಹೊತ್ತು, ಹೆರುವುದೆಂದರೆ ಹೆಣ್ಣಿಗೆ ಮತ್ತೆ ಹುಟ್ಟಿ ಬಂದಷ್ಟು ಕಷ್ಟವಾಗುತ್ತದೆ. ಈ ಜವಾಬ್ದಾರಿಯಲ್ಲಿ ಎಷ್ಟೋ ಹೆಂಗಸರು ತಮ್ಮ ಪ್ರಾಣವನ್ನೇ ಕಳೆದುಕೊಳ್ಳುತ್ತಾರೆ, ಆದ್ದರಿಂದ ಗರ್ಭ ಧರಿಸುವುದು, ಹೆರಿಗೆಯಾಗುವುದು ತುಂಬಾ ನೋವುಂಟು ಮಾಡುವ, ಪ್ರಾಣಾಪಾಯವನ್ನುಂಟುಮಾಡುವ ಸ್ಥಿತಿಗಳೆಂದು ಹೇಳುತ್ತಾ, ಆಕೆಯ ಮನಸ್ಸಿನಲ್ಲಿ ಸಾಕಷ್ಟು ಭೀತಿಯುಂಟುಮಾಡಿದ್ದಾರೆ.

ನಿರ್ಧಾರ

ಚಿಕ್ಕಂದಿನಿಂದಲೇ ಈ ಬಗೆಯ ಧೋರಣೆ, ಅಭಿಪ್ರಾಯಗಳನ್ನು ಶ್ರೀಮತಿ ರೂಢಿಸಿಕೊಂಡಳು. ಜೊತೆಗೆ ಆಗಾಗ ನೆರೆಹೊರೆಯವರಲ್ಲಿ, ಬಂಧು-ಮಿತ್ರರುಗಳಲ್ಲಿ ಯಾರಿಗಾದರೂ ಹೆರಿಗೆ ಕಷ್ಟವಾಯಿತು, ತಾಯಿ ಸತ್ತಳು ಅಥವಾ ಮಗು ಸತ್ತಿತು ಎಂದು ಕೇಳಿದಾಗ ಅವಳ ಈ ಭಯ ಮತ್ತಷ್ಟು ಆಳವಾಗಿ ಬೇರೂರತೊಡಗಿತು. ಬೆಳೆದಂತೆ, ಬುದ್ಧಿ ವಿಕಾಸವಾದಂತೆ, ತನಗೆ ಮದುವೆಯಾದರೆ, ಮಕ್ಕಳಾಗುತ್ತವೆ. ಅಂದರೆ ಗರ್ಭಧಾರಣೆ, ಮಗುವನ್ನು ಹೆರುವ ತಾಪತ್ರಯ ಬರುತ್ತದೆ. ಆದ್ದರಿಂದ ತಾನು ಮದುವೆಯನ್ನೇ ಮಾಡಿಕೊಳ್ಳಬಾರದು ಎಂದು ನಿಶ್ಚಯಿಸಿದಳು. ಮನೆಯವರೊಂದಿಗೆ ಅಥವಾ ಸ್ನೇಹಿತರೊಂದಿಗೆ ಮದುವೆ ವಿಚಾರ ಬಂದಾಗಲೆಲ್ಲಾ ಆಕೆ ತನ್ನ ಈ ನಿರ್ಧಾರವನ್ನು ತಿಳಿಸುತ್ತಿದ್ದಳು. ಕೇಳುತ್ತಿದ್ದವರು ನಕ್ಕು ಸುಮ್ಮನಾಗುತ್ತಿದ್ದರೇ ವಿನಃ ಯಾರೂ ಆಕೆಯ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ನಾಲ್ಕು ವರ್ಷದ ಹಿಂದೆ ಶ್ರೀಮತಿಯ ಅಕ್ಕನ ಚೊಚ್ಚಲ ಹೆರಿಗೆ ತುಂಬಾ ಕಷ್ಟವಾಗಿ ಕೊನೆಗೆ ಸಿಸೇರಿಯನ್ ಆಪರೇಶನ್ ಮಾಡಿ, ಮಗುವನ್ನು ಹೊರ ತೆಗೆಯಬೇಕಾಯಿತು. ತಾಯಿ ಪೂರ್ಣವಾಗಿ ಚೇತರಿಸಿಕೊಳ್ಳಲು ಕೆಲವಾರು ದಿನಗಳೇ ಬೇಕಾದವು. ಆಕೆಯ ಅದೃಷ್ಟ ಚೆನ್ನಾಗಿತ್ತು. ಬುದ್ಧಿವಂತಿಕೆಯಿಂದ, ವೈದ್ಯರು ಸರಿಯಾದ ಸಮಯಕ್ಕೆ ಆಪರೇಶನ್ ಮಾಡಿದ್ದರಿಂದ ಆಕೆ ಬದುಕಿಕೊಂಡಳು ಎಂದು ಎಲ್ಲರೂ ಮಾತಾಡಿಕೊಂಡರು. ಇದು ಮೊದಲೇ ಹೆದರಿದ್ದ ಶ್ರೀಮತಿಯ ಮೇಲೆ ಹಾವೆಸೆದಂತಾಯಿತು. ತಾನು ಖಂಡಿತ ಮದುವೆ ಮಾಡಿಕೊಳ್ಳಬಾರದು ಎಂದು ನಿರ್ಧರಿಸಿದಳು.

ಆದರೆ ಆರು ತಿಂಗಳ ಹಿಂದೆ, ಆಕೆಯ ತಂದೆ ಶ್ರೀಪತಿಯನ್ನು ಆಯ್ಕೆ ಮಾಡಿ, ಮದುವೆಯ ಮಾತೆತ್ತಿದರು. ಶ್ರೀಮತಿ ಸಾಕಷ್ಟು ವಿರೋಧ ಮಾಡಿದರೂ, ಎಲ್ಲರ

ಒತ್ತಾಯದ ಜೊತೆಗೆ, ಶ್ರೀಪತಿಯ ರೂಪ, ಸ್ವಭಾವದ ಆಕರ್ಷಣೆಗೆ ಸೋತು, ಆತನನ್ನು ಮದುವೆಯಾಗಲು ಒಪ್ಪಿದಳು. ಮದುವೆ ನಡೆದುಹೋಯಿತು.

ಪ್ರಥಮ ರಾತ್ರಿಯಂದು ಆಕೆಯ ಪ್ರತಿಕ್ರಿಯೆ ಹೇಗಿತ್ತು, ನಿಮ್ಮೊಂದಿಗೆ ಹೇಗೆ ನಡೆದುಕೊಂಡಳು ಎಂದು ಶ್ರೀಪತಿಯನ್ನು ವಿಚಾರಿಸಿದೆ. ಆತ ಕೊಟ್ಟ ಮಾಹಿತಿ ಹೀಗಿತ್ತು. ಒಟ್ಟಿಗೆ ಕುಳಿತು ಒಂದಷ್ಟು ಮಾತುಕತೆಯಾದ ನಂತರ ಆಕೆ ತುಂಬಾ ಸಂಕೋಚದಿಂದ 'ನಾನು ಒಂದು ವಿಚಾರ ಹೇಳ್ತೀನೆ. ನೀವು ಬೇಸರಿಸಬಾರದು. ಕೋಪ ಮಾಡಿಕೋಬಾರದು. ನನಗೆ ಗರ್ಭಧಾರಣೆ ಮತ್ತು ಹೆರಿಗೆ ಎಂದರೆ ತುಂಬಾ ಭಯ, ನಡುಕ ಬರುತ್ತದೆ. ನಾನು ಆಗ ಸತ್ತುಹೋಗುತ್ತೇನೆ ಎನಿಸುತ್ತದೆ. ಆದ್ದರಿಂದ ಸ್ವಲ್ಪ ದಿವಸ ದೈಹಿಕ ಸಂಪರ್ಕ ಮಾಡೋದು ಬೇಡ. ಇದಕ್ಕೆ ನೀವು ಸಹಕರಿಸಬೇಕು' ಎಂದಳು. ಅದಕ್ಕೆ ಶ್ರೀಪತಿ ನಗುತ್ತಾ 'ಅಲ್ವೇ, ಮಕ್ಕಳಾಗುವುದು ಬೇಡ ಅಂದ್ರೆ ಅದಕ್ಕೆ ಬೇಕಾದಷ್ಟು ಸುರಕ್ಷಿತ ವಿಧಾನಗಳಿವೆ. ನಾವು ದೈಹಿಕ ಸಂಪರ್ಕ ಮಾಡಲೇನು ಅಡ್ಡಿ. ದಾಂಪತ್ಯ ಸುಖದಿಂದ ನಾವು ವಂಚಿತರಾಗೋ ಅವಶ್ಯಕತೆ ಇಲ್ಲ' ಎಂದ. ಇದು ಆಕೆಯ ಭಯವನ್ನು ಕಡಿಮೆ ಮಾಡಿತು. ಅಂದು ಸಂಭೋಗಕ್ಕೆ ಪ್ರಯತ್ನಿಸದೆ, ಸರಸ ಸಲ್ಲಾಪದಲ್ಲಿ ಕಾಲ ಕಳೆದರು. ಒಂದು ವಾರದ ನಂತರ ಶ್ರೀಪತಿ ಕಾಂಡೂಮ್ ಬಳಸಿ, ಸಂಭೋಗಕ್ಕೆ ಪ್ರಯತ್ನಪಟ್ಟ. ಸಂಭೋಗ ಸಾಧ್ಯವಾದರೂ ಇಬ್ಬರ ಪ್ರಾರಂಭಿಕ ಹಿಂಜರಿಕೆ, ನಾಚಿಕೆಗಳಿಂದ ಅದು ಅಷ್ಟು ಸಂತೋಷದಾಯಕವಾಗಿರಲಿಲ್ಲ.

ಈ ಮಧ್ಯೆ ಶ್ರೀಮತಿ ಗರ್ಭ ನಿರೋಧಕಗಳು ಮತ್ತು ಅವು ಎಷ್ಟರಮಟ್ಟಿಗೆ ಸುರಕ್ಷಿತ ಎಂಬ ಪುಸ್ತಕವನ್ನು ಓದಿದಳು. ಅದರಲ್ಲಿ, ತಾತ್ಕಾಲಿಕ ಗರ್ಭ ನಿರೋಧಕ ಸಾಧನಗಳಾದ ಕಾಂಡೂಮ್, ವಂಕಿ, ಸುರಕ್ಷಿತ ಅವಧಿಯಲ್ಲಿ ಮಾತ್ರ ಸಂಭೋಗ— ಇವು ನೂರಕ್ಕೆ ನೂರು ಸುರಕ್ಷಿತ ಎಂದು ಹೇಳಲಾಗದು, ಗರ್ಭಧಾರಣೆಯಾಗುವ ಸಂಭವ ಸ್ವಲ್ಪಮಟ್ಟಿಗೆ ಇದ್ದೇ ಇರುತ್ತದೆ ಎಂದು ಬರೆದಿರುವುದನ್ನು ಕಂಡು ಹೌಹಾರಿದಳು. ಶ್ರೀಪತಿಗೆ ನಾವು ಸಂಭೋಗ ಮಾಡುವುದು ಬೇಡ ಎಂದು ಹೇಳಿಬಿಟ್ಟಳು. ಆತ ಸಹನೆಯಿಂದ ಆಕೆ ಹೇಳುವುದನ್ನೆಲ್ಲಾ ಕೇಳಿ, ತನಗೆ ಪರಿಚಯವಿದ್ದ ಲೇಡಿ ಡಾಕ್ಟರಲ್ಲಿಗೆ ಕರೆದೊಯ್ದು, ಅವರಿಂದ ಸಮಾಧಾನ ಹೇಳಿಸಿದ. ಆ ಪುಸ್ತಕದಲ್ಲಿ ಬರೆದಿರುವುದು ವೈಜ್ಞಾನಿಕವಾಗಿ ನಿಜವಾದರೂ, ವಾಸ್ತವಿಕವಾಗಿ ಈ ಗರ್ಭನಿರೋಧಕ ಸಾಧನಗಳು ಸಾಕಷ್ಟು ಮಟ್ಟಿಗೆ ಸುರಕ್ಷಿತ. ಅಕಸ್ಮಾತ್ ಗರ್ಭ ನಿಂತರೇನಂತೆ, ತಾವು ಆಕೆಯನ್ನು ಚೆನ್ನಾಗಿ ನೋಡಿಕೊಂಡು, ಸುರಕ್ಷಿತವಾಗಿ ಹೆರಿಗೆ ಮಾಡಿಸುವುದಾಗಿ ಭರವಸೆ ಕೊಟ್ಟರು. ಈ ಎಲ್ಲ ಭರವಸೆಗಳು ಆಕೆಯನ್ನು ಸಮಾಧಾನ ಮಾಡಲು, ಆಕೆಯನ್ನು ಭಯಮುಕ್ತಳನ್ನಾಗಿ ಮಾಡಲು ವಿಫಲವಾದುವು. ಡಾಕ್ಟರು

ಸುಮ್ಮನೆ ಭರವಸೆ ಕೊಡುತ್ತಾರೆ. ಧೈರ್ಯ ಹೇಳುತ್ತಾರೆ. ಆದರೆ ಏನಾದರೂ ತೊಂದರೆಯಾದರೆ 'ಏನು ಮಾಡುವುದು. ಕೆಲವು ಸಲ ಪರಿಸ್ಥಿತಿ ನಮ್ಮ ಕೈಮೀರಿ ಹೋಗುತ್ತದೆ. ಅದು ನಿಮ್ಮ ದುರಾದೃಷ್ಟ' ಎಂದುಬಿಡುತ್ತಾರೆ. ನೋವು ಅನುಭವಿಸುವವರು, ನರಳುವವರು ನಾವು. ಆದ್ದರಿಂದ ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು ಎಂದುಕೊಂಡಳು.

ಇದು ಆಕೆಯ ಕೇಂದ್ರ ಮತ್ತು ಸ್ವಾಯತ್ತ ನರವ್ಯವಸ್ಥೆಯ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿತು. ಸಂಭೋಗ ಸಮಯದಲ್ಲಿ, ಯೋನಿಯ ಸುತ್ತ ಮುತ್ತಲಿನ ಮಾಂಸಖಂಡಗಳು ವಿರಮಿಸುವಂತೆ, ತನ್ಮೂಲಕ ಯೋನಿದ್ವಾರ ಹಿಗ್ಗಿ, ಶಿಶ್ನ ಪ್ರವೇಶಕ್ಕೆ ಅನುಕೂಲವಾಗುವಂತೆ, ಸ್ವಾಯತ್ತ ನರವ್ಯವಸ್ಥೆ ಕೆಲಸ ಮಾಡುತ್ತದೆ. ಜೊತೆಗೆ ಯೋನಿ ಒದ್ದೆಯಾಗುವಂತೆಯೂ ಮಾಡುತ್ತದೆ. ಆದರೆ ಭಯ, ಆತಂಕಕ್ಕೀಡಾದ ವ್ಯಕ್ತಿಯಲ್ಲಿ ಇದಾವುದೂ ನಡೆಯುವುದಿಲ್ಲ. ಜೊತೆಗೆ ಯೋನಿದ್ವಾರವನ್ನು ನಿಯಂತ್ರಿಸುವ ಮತ್ತು ಕಿಗ್ಗುಳಿಯ ಮಾಂಸ ಖಂಡಗಳೆಲ್ಲ ಸಂಕುಚಿತಗೊಳ್ಳುತ್ತವೆ. ಅಲ್ಲದೆ ವ್ಯಕ್ತಿ ತನ್ನಿಚ್ಛೆಯಿಂದಲೂ ಈ ಮಾಂಸ ಖಂಡಗಳನ್ನು ಸಂಕುಚಿತಗೊಳಿಸಬಹುದು. ಸಂಭೋಗ ಸಾಧ್ಯ ವಾಗುವುದಿಲ್ಲ. ಶ್ರೀಮತಿ ತನ್ನ ಗಂಡ ತನ್ನನ್ನು ಸ್ಪರ್ಶಿಸಿದ ಕೂಡಲೇ, ಎಲ್ಲಿ ತಾನು ಬಯಕೆಗೆ ಸೋತು, ಸಂಭೋಗಕ್ಕೆ ಸಿದ್ಧಳಾಗಿ, ಅಪಾಯ ಕ್ಕೀಡಾಗುತ್ತೇನೆಯೋ ಎಂದು ಭಯಪೀಡಿತಳಾಗುತ್ತಿದ್ದಳು, ಆಕೆಯ ಜನನಾಂಗದ ಸುತ್ತಮುತ್ತಲಿನ ಮಾಂಸಖಂಡಗಳೆಲ್ಲಾ, ಮುಟ್ಟಿದರೆ ಮುನಿ ಸಸ್ಯದ ಎಲೆಗಳಂತೆ ಮುದುಡಿ ಸಂಕುಚಿತಗೊಂಡು, ಯೋನಿದ್ವಾರವನ್ನು ಮುಚ್ಚಿಬಿಡುತ್ತಿದ್ದುವು. ಶಿಶ್ನ ಪ್ರವೇಶ ಅಸಾಧ್ಯವಾಗುತ್ತಿತ್ತು. ಈ ಬಗೆಯ ತೀವ್ರ ಒತ್ತಡಕ್ಕೊಳಗಾದ ಆಕೆ ಮಾನಸಿಕವಾಗಿ ಮತ್ತಷ್ಟು ಬಳಲತೊಡಗಿದಳು. ತತ್ಪರಿಣಾಮವಾಗಿ, ಸೊಂಟ ನೋವು, ಸುಸ್ತು, ಸಂಕಟದಂತಹ ರೋಗಚಿಹ್ನೆಗಳು ಕಾಣಿಸಿಕೊಂಡವು. ಹೀಗೆ ಗರ್ಭಧಾರಣೆಯ ಬಗ್ಗೆ ಆಕೆಗಿದ್ದ ಅತಿಭಯವೇ ಆಕೆಯ ಯೋನಿ ಸೆಡೆತ ಸ್ಥಿತಿಗೆ ಕಾರಣವಾಯಿತು.

ಚಿಕಿತ್ಸಾ ಕಾರ್ಯಕ್ರಮದಲ್ಲಿ ಆಕೆಯ ಈ ಭಯವನ್ನು ತೆಗೆಯಬೇಕಾಗುತ್ತದೆ. ಗರ್ಭಧಾರಣೆಯು ಆಕೆ ತಿಳಿದಿರುವಷ್ಟು ಅಪಾಯಕಾರಿ ಅಲ್ಲ ಎಂಬುದನ್ನಲ್ಲದೇ ಮುದ್ದುಮಗುವಿನ ತಾಯಿಯಾಗುವುದರಲ್ಲಿನ ಆನಂದ, ತೃಪ್ತಿಯ ಬಗ್ಗೆ ಆಕೆಯ ಗಮನವನ್ನು ಸೆಳೆಯಬೇಕಾಗುತ್ತದೆ. ಈ ದಿಸೆಯಲ್ಲಿ ಆಕೆಯ ಮನಸ್ಸಿಗೆ ತರಬೇತಿ, ಸಲಹೆ ಸೂಚನೆಗಳನ್ನು ಕೊಡಲು ಉದ್ದೇಶಿಸಲಾಗಿದೆ. ನಡವಳಿಕೆ, ಚಿಕಿತ್ಸಾವಿಧಾನ

ಗಳಿಂದ ಇದನ್ನು ಸಾಧಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ. ಶ್ರೀಮತಿಗೆ ಲೈಂಗಿಕ ಕ್ರಿಯೆ ಬಗ್ಗೆ ಸಹಜ, ಸ್ವಾಭಾವಿಕ ಆಸಕ್ತಿ ಇದೆ. ಮಕ್ಕಳ ಬಗ್ಗೆಯೂ ಅವಳಿಗೆ ಆಕರ್ಷಣೆ ಇದೆ. ಚಿಕಿತ್ಸೆಯಲ್ಲಿ ಸಹಕರಿಸುವುದಾಗಿ ಒಪ್ಪಿಕೊಂಡಿದ್ದಾಳೆ. ಆದ್ದರಿಂದ ಚಿಕಿತ್ಸೆ ಸಫಲವಾಗುವುದರಲ್ಲಿ ಸಂದೇಹವಿಲ್ಲ. ನೀವೂ ಈ ದಂಪತಿಗಳಿಗೆ ಪ್ರೋತ್ಸಾಹ ನೀಡಿ.

ತಮ್ಮ ವಿಶ್ವಾಸಿ,
ಡಾ|| ಮೂರ್ತಿ

ಮಧ್ಯವಯಸ್ಕನಿಗೆ ಹದಿಹರೆಯದ ಹೆಂಡತಿ

'ನಾನು ಒಳಗೆ ಬರಬಹುದೇ ಡಾಕ್ಟರೇ ?'

ವೈದ್ಯಕೀಯ ನಿಯತಕಾಲಿಕೆಯೊಂದನ್ನು ಓದುತ್ತಿದ್ದ ಡಾ॥ ಮೂರ್ತಿ ತಲೆ ಎತ್ತಿ ನೋಡಿದರು. ಸುಮಾರು ನಲವತ್ತು ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಬಾಗಿಲ ಬಳಿ ನಿಂತಿದ್ದರು. ವೇಷಭೂಷಣಗಳಿಂದ, ಸಾಕಷ್ಟು ಶ್ರೀಮಂತಿಕೆ ಇರುವ ವ್ಯಾಪಾರಿ ಎಂದು ಹೇಳಬಹುದಾಗಿತ್ತು. 'ಬನ್ನಿ ಕುಳಿತುಕೊಳ್ಳಿ' ಎಂದಾಗ, ಆತ ಒಳ ಬಂದು ಡಾ॥ ಮೂರ್ತಿಯವರ ಮುಂದಿದ್ದ ಕುರ್ಚಿಯಲ್ಲಿ ಕುಳಿತರು. ಜೊತೆಯಲ್ಲಿಯೇ ಒಳ ಬಂದ ಸುಗಂಧ ಮೂಗಿಗೆ ಬಡಿದಾಗ ಈತ ರಸಿಕ ಎಂದು ಅಂದುಕೊಂಡರು ಡಾ॥ ಮೂರ್ತಿ.

'ತಾವ್ಯಾರು ? ನನ್ನಿಂದ ಏನಾಗಬೇಕು ?'

'ನನ್ನ ಹೆಸರು ನಾರಾಯಣಸ್ವಾಮಿ ಅಂತ. ಇಲ್ಲೇ ಬಸವನಗರದಲ್ಲಿ ಡಿಪಾರ್ಟ್‌ಮೆಂಟಲ್ ಸ್ಟೋರ್ ಇಟ್ಟಿದ್ದೇನೆ. ನಿಮ್ಮ ಬಗ್ಗೆ ನಾನು ಬಹಳ ಕೇಳಿದ್ದೇನೆ. ಅಲ್ದೆ ಪೇಪರ್‌ನಲ್ಲಿ ನೀವು ಬರೀತಿರಲ್ಲ. ಚೆನ್ನಾಗಿ ಬರೀತೀರಿ. ನನ್ನದೊಂದು ಸಮಸ್ಯೆ ಇದೆ. ಅದಕ್ಕೆ ನಿಮ್ಮಿಂದ ಪರಿಹಾರ ಸಿಗುತ್ತೆ ಅನ್ನೋ ಆಸೆಯಿಂದ ನಿಮ್ಮಲ್ಲಿಗೆ ಬಂದಿದ್ದೇನೆ, ದುಡ್ಡು ಎಷ್ಟಾದರೂ ಪರವಾಗಿಲ್ಲ. ನೀವು ನನಗೆ ಫಸ್ಟ್‌ಕ್ಲಾಸ್ ಟ್ರೀಟ್‌ಮೆಂಟನ್ನೇ ಕೊಡಬೇಕು.'

'ದುಡ್ಡಿನ ಮಾತಿರಲಿ ನಾರಾಯಣಸ್ವಾಮಿಗಳೇ. ಟ್ರೀಟ್‌ಮೆಂಟ್‌ನಲ್ಲಿ ಫಸ್ಟ್ ಕ್ಲಾಸ್, ಥರ್ಡ್‌ಕ್ಲಾಸ್ ಅಂತ ಇರೋಲ್ಲ. ಅದಿರಲಿ, ನಿಮ್ಮ ತೊಂದರೆ ಏನು ಹೇಳಿ.'

'ನನ್ನ ತೊಂದರೆ ತುಂಬಾ ಪರ್ಸನಲ್. ಅಲ್ಲದೆ ಡೆಲಿಕೇಟು... ಇಲ್ಲಿ ಸಂಕೋಚವಿಲ್ಲದೇ ಮಾತಾಡಬಹುದೇ ?'

'ನಿಸ್ಸಂಕೋಚವಾಗಿ ಮಾತಾಡಿ. ನಿಮ್ಮ ಸಮಸ್ಯೆ ಏನು ಅಂತ ಹೇಳಿ. ನನ್ನ ಕೈಲಿ ಆಗೋದಾದ್ರೆ, ಖಂಡಿತ ನಿಮಗೆ ನೆರವಾಗ್ತೇನೆ.'

'ನಿಮ್ಮಿಂದ ನನಗೆ ಒಳ್ಳೇ ಟ್ರೀಟ್‌ಮೆಂಟ್ ಸಿಗುತ್ತೆ ಅಂತ ನಂಬಿಕೊಂಡು

ಬಂದಿದ್ದೇನೆ. ನನ್ನ ಎರಡನೇ ಹೆಂಡತಿ ಜಯ, ನಿಮ್ಮ ಪುಸ್ತಕಗಳನ್ನು ಓದಿದಾಳೆ. ಅವಳೇ ನಾನು ನಿಮ್ಮನ್ನು ಕಂಡು ಬರಬೇಕು ಅಂತ ಹೇಳಿದ್ದು.'

'ಊಂ.'

ಗಂಡು ಮಗುವಿನ ಆಸೆ

'ನಾನು ಎರಡನೇ ಮದುವೆ ಯಾಕೆ ಮಾಡ್ಕೊಂಡೆ ಅಂತ ನೀವು ಕೇಳಬಹುದು. ನಾನು ಚಪಲಕ್ಕೆ ಈ ಮದುವೆ ಮಾಡ್ಕೊಳ್ಳಿಲ್ಲ. ನನ್ನ ಮೊದಲ ಹೆಂಡತಿ ರುಕ್ಕು ಎರಡು ಮಕ್ಕಳನ್ನ ಹೆತ್ತಳು. ಎರಡೂ ಹೆಣ್ಣೇ. ನನಗೆ ಸಾಕಷ್ಟು ಚರಾಚರ ಆಸ್ತಿ ಇದೆ ಡಾಕ್ಟರೆ. ಆ ಭಗವಂತನ ದಯೆ. ಈ ಆಸ್ತಿಗೆ ವಾರಸುದಾರ ಒಬ್ಬ ಬೇಡವೇ. ಅಲ್ಲದೆ ನಾನು ಸತ್ತ ಮೇಲೆ ಪಿಂಡ ಹಾಕೋದಕ್ಕೆ ಗಂಡು ಮಗ ಬೇಕಲ್ಲವೇ. ನಾನು ಎಲ್ಲ ದೇವರುಗಳಿಗೆ ಹರಕೆ ಕಟ್ಟಿದೆ. ಆದರೆ ಈ ವಿಚಾರದಲ್ಲಿ ಆ ಭಗವಂತನಿಗೆ ಕರುಣೆ ಬರ್ಲಿಲ್ಲ. ರುಕ್ಕೂಗೆ ಗರ್ಭಕೋಶದಲ್ಲಿ ಗೆಡ್ಡೆ ಬೆಳೆದು ಕೊಂಡು, ಕೊನೆಗೆ ಆಪರೇಷನ್ ಮಾಡಿ ಗರ್ಭಕೋಶವನ್ನೇ ತೆಗೆದು ಹಾಕಿಬಿಟ್ಟರು. ನನಗಾದ ನಿರಾಶೆ ಅಷ್ಟಿಷ್ಟಲ್ಲ. ರುಕ್ಕೂನೇ ನೀವು ಇನ್ನೊಂದು ಮದುವೆ ಮಾಡಿ ಕೊಳ್ಳಿ ಅಂತ ಒತ್ತಾಯ ಮಾಡಿದಳು. ನನ್ನ ಕೆಲವು ಸ್ನೇಹಿತರು ಮುಂದೆ ನಿಂತು ಎರಡನೇ ಮದುವೆ ಮಾಡಿದರು. ನನ್ನ ಎರಡನೇ ಹೆಂಡತಿಯಾಗಿ ಬಂದ ಜಯ ಎಲ್ಲರೊಂದಿಗೆ ಚೆನ್ನಾಗಿ ಹೊಂದ್ಕೊಂಡಿದ್ದಾಳೆ. ಅಪರಂಜಿಯಂತಹ ಗುಣ.'

"ನಿಮ್ಮ ತೊಂದರೆ ಏನೂ ಅಂತ ಹೇಳಲಿಲ್ಲವಲ್ಲ" ಡಾ॥ ಮೂರ್ತಿ ನುಡಿದರು.

"ಹೇಳ್ತೀನೆ, ಹೇಳ್ತೀನೆ. ಅದನ್ನು ಹೇಳೋವಷ್ಟರಲ್ಲಿ ನೀವು ಪ್ರಶ್ನೆ ಮಾಡಿ ಬಿಟ್ರಿ. ನನಗೆ ನಿಶ್ಯಕ್ತಿಯಾಗಿ ಬಿಟ್ಟಿದೆ. ಶರೀರ ವೀಕ್ ಆಗ್ಬಿಟ್ಟಿದೆ ಅಂತ ಅನ್ನಿಸ್ತದೆ. ಶಕ್ತಿ ಬರೋ ಹಾಗೆ ನೀವು ಟ್ರೀಟ್‌ಮೆಂಟ್ ಕೊಡಬೇಕು."

"ನೀವು ನೋಡೋದಿಕ್ಕೆ ಸದೃಢವಾಗಿದ್ದೀರಲ್ಲ ನಾರಾಯಣಸ್ವಾಮಿ. ಮುಖ ದಲ್ಲಿ ರಕ್ತ ಚಿಮ್ತಾ ಇದೆ. ನಿಶ್ಯಕ್ತಿ ಅಂದ್ರೆ ಏನು ಸ್ವಲ್ಪ ವಿವರಿಸಿ."

"ಶರೀರ, ನೀವು ಹೇಳಿದ ಹಾಗೆ ಪುಷ್ಟಿಯಾಗಿದೆ ಡಾಕ್ಟರೇ. ಚಿಕ್ಕಂದಿನಿಂದಲೂ ಒಳ್ಳೆ ಪೋಷಣೆ ಪಡೆದು ಬೆಳೆದಿದೆ. ನಿಶ್ಯಕ್ತಿ ಅಂದ್ರೆ... ನನ್ನ ಜನನಾಂಗ ಬೇಗ ಉದ್ರೇಕವಾಗೋದಿಲ್ಲ. ಚಿಕ್ಕ ವಯಸ್ಸಿನ ಹೆಂಡತಿಯ ಮುಂದೆ ಮಾನ ಹೋಗುವ ಪ್ರಸಂಗ ಬಂದಿದೆ. ಆಕೆಯೊಂದಿಗೆ ಸಂಭೋಗ ಮಾಡೋಣ ಅಂತ ಅಂದ್ರೆ, ಅದು ತಕ್ಷಣ ಉದ್ರೇಕವಾಗೋದೇ ಇಲ್ಲ. ಬಹಳ ಹೊತ್ತಾದ ಮೇಲೆ ಆಗುತ್ತೆ."

"ಸಂಭೋಗ ಮಾಡೋದಿಕ್ಕೆ ಆಗ್ತಿದೆಯಾ ಅಥವಾ ಆಗೋದಿಲ್ಲವಾ ?"

"ಸಂಭೋಗ ಮಾಡ್ತೇನೆ ಡಾಕ್ಟರೇ. ಆದರೆ ಬೇಕು ಅಂದ ಕೂಡ್ಲೇ ಅದು ರೆಡಿಯಾಗೋಲ್ಲ. ಇದನ್ನು ಸರಿಪಡಿಸಬೇಕು ಅಂತ ನಾನು ತಿಂದ ಔಷಧ, ತೆಗೆದು ಕೊಂಡ ಟ್ರೀಟ್‌ಮೆಂಟ್‌ಗಳಿಗೆ ಲೆಕ್ಕವಿಲ್ಲ."

"ಇದುವರೆಗೆ ಏನೇನು ಚಿಕಿತ್ಸೆ ಮಾಡಿಸಿದ್ರಿ ?"

"ಮೊದಲು ನಮ್ಮ ಫ್ಯಾಮಿಲಿ ಡಾಕ್ಟರನ್ನು ಕಂಡು ಈ ಸಮಸ್ಯೆಯನ್ನ ಹೇಳಿ ಕೊಂಡೆ. ಅವರು ಒಂದಷ್ಟು ಹಾರ್ಮೋನ್ ಮಾತ್ರೆಗಳನ್ನು ಕೊಟ್ಟರು ; ತಿಂದೆ. ಗುಣ ಕಾಣಲಿಲ್ಲ. ಆಮೇಲೆ ಹಾರ್ಮೋನ್ ಇನ್‌ಜೆಕ್ಷನ್ ಕೊಟ್ರು. ಉಹೂಂ... ಕೊನೆಗೆ ಅವರು 'ನಾರಾಯಣಸ್ವಾಮಿ, ನಿನಗೆ ವಯಸ್ಸಾಯಿತು. ಇದ್ದದ್ರಲ್ಲೇ ತೃಪ್ತಿಪಟ್ಟುಕೋಬೇಕು' ಅಂತ ಹೇಳಿಬಿಟ್ರು. ಅವರು ಸೋತರು ಅಂದ್ರೆ ನಾನು ಸೋಲೋದಿಕ್ಕೆ ಸಿದ್ಧವಾಗಿರಲಿಲ್ಲ."

"ಏನು ಮಾಡಿದಿರಿ ?"

ಚಿನ್ನದ ಚೂರ್ಣ

"ಆಮೇಲೆ ಪೇಪರ್‌ನಲ್ಲಿ ಜಾಹೀರಾತು ಕೊಡ್ತಾರಲ್ಲ ಅವರ ಹತ್ತಿರ ಹೋದೆ. ಒಬ್ಬ ಹಚ್ಚಿಕೊಳ್ಳೋದಿಕ್ಕೆ ಮುಲಾಮು ಕೊಟ್ಟ. ಜೊತೆಗೆ ತಿನ್ನೋದಿಕ್ಕೆ ಲೇಹ್ಯ ಕೊಟ್ಟ. ಸುಮಾರು ದುಡ್ಡು ಕಿತ್ತ. ಎರಡು ವಾರದಲ್ಲಿ ಲೈಂಗಿಕ ಶಕ್ತಿ ಹೆಚ್ಚುತ್ತೆ ಅಂದ. ನಾನು ಮರುಳಾದೆ. ಎರಡು ವಾರಗಳ ನಂತರ ಯಥಾಸ್ಥಿತಿ. ಇನ್ನೊಬ್ಬ ಜಾಹೀರಾತಿನವನ ಹತ್ತಿರ ಹೋದೆ. ಆತ ಚಿನ್ನದಿಂದ ಬಹಳ ಪವರ್ ಫುಲ್ ಆದ ಚೂರ್ಣವನ್ನು ತಯಾರಿಸಿ ಕೊಡುತ್ತೇನೆ. ಮೂರು ದಿನ ತಿಂದರೆ ಸಾಕು, ಸರಿ ಹೋಗ್ತೀರಿ ಅಂದ. ಅರ್ಧ ತೊಲ ಚಿನ್ನ ತೆತ್ತು, ಅವನು ಕೊಟ್ಟ ಚೂರ್ಣ ತಿಂದೆ, ಪ್ರಯೋಜನವಾಗ್ಲಿಲ್ಲ. ಸ್ವಲ್ಪ ದಿವಸಗಳ ನಂತರ ಒಬ್ಬ ಲೈಂಗಿಕ ತಜ್ಞನನ್ನು ಭೇಟಿ ಮಾಡಿದೆ. ಆತ 'ನಾನು ಬೇರೆಯವರ ಹಾಗೆ ಫೋಂಗಿ ವೈದ್ಯ ನಲ್ಲ. ವಾಸಿಯಾದ ಮೇಲೆ ನನಗೆ ದುಡ್ಡು ಕೊಡಿ. ಇದುವರೆಗೆ ನಾನು ಔಷಧ ಕೊಟ್ಟವರಲ್ಲಿ, ಒಬ್ಬರಾದರೂ ಬಂದು ಕಂಪ್ಲೇಂಟ್ ಮಾಡಿಲ್ಲ. ಇದು ಅಂಥಿಂಥಾ ಮದ್ದಲ್ಲ. ಆಫ್ರಿಕಾ ದೇಶದ ಖಡ್ಗ ಮೃಗದ ಕೊಂಬಿನಿಂದ ತಯಾರಾಗುತ್ತದೆ. ಅದನ್ನು ನಾನು ಕಳ್ಳತನದಿಂದ ತರಿಸುತ್ತೇನೆ. ಖಡ್ಗಮೃಗವನ್ನು ಕೊಂದು ಅದರ ಕೊಂಬನ್ನು ಪಡೀಬೇಕು. ಸ್ವಲ ಅಡ್ವಾನ್ಸ್ ಕೊಟ್ಟಿರಿ' ಅಂತ ಐನೂರು ರೂಪಾಯಿ ಕಿತ್ತ. ನಾನು ಮೂರ್ಖನಂತೆ ಅವನು ಕೊಟ್ಟ ಪುಡಿಯನ್ನು ತಿಂದೆ. ಉತ್ತಮ ವಾಗದಿದ್ದುದನ್ನು ಕಂಡು ಅವನಲ್ಲಿಗೆ ಹೋಗಿ ಜಗಳವಾಡಿದೆ. 'ಸ್ವಾಮಿ ಮೋಸ

ವಾಗಿದೆ. ಡೂಪ್ಲಿಕೇಟ್ ಕೊಂಬು ಕೊಟ್ಟಿದ್ದಾರೆ ಅಂತ ಕಾಣತ್ತೆ. ನೀವು ಯೋಚನೆ ಮಾಡ್ಬೇಡಿ. ಆ ಗ್ಯಾಂಗ್‌ನೋರಿಗೆ ಬುದ್ಧಿ ಕಲಿಸುತ್ತೇನೆ. ನೀವು ಒಂದು ತಿಂಗಳು ಬಿಟ್ಟು ಬನ್ನಿ, ಒರಿಜಿನಲ್ ಕೊಂಬಿನ ಪುಡಿ ತರಿಸಿಟ್ಟಿರ್ತೇನೆ' ಅಂತ ಹೇಳಿದ.

ನನ್ನ ಆಸೆ ಮಾತ್ರ ಕಡಿಮೆ ಆಗ್ಲಿಲ್ಲ. ಈ ತೊಂದರೆಗೆ ಮದ್ದು ಇದ್ದೇ ಇರುತ್ತೆ. ಅದನ್ನು ಹೇಗಾದರೂ ಮಾಡಿ ಕೊಂಡ್ಕೋಬೇಕು. ನನ್ನ ಶಕ್ತೀನ ಹೆಚ್ಚಿಸ್ಕೋಬೇಕು ಅಂತ ನಿರ್ಧಾರ ಮಾಡ್ದೆ. ಹಕ್ಕಿ ಪಕ್ಕಿಯೋರು ಕಾಡಿನಲ್ಲಿ ಸಿಗೋ ನಾರು ಬೇರು ಮತ್ತು ಮೊಲಗಳ ವೃಷಣಗಳಿಂದ ಔಷಧಿ ಮಾಡ್ತಾರೆ ಅಂತ ಕೇಳಿ ಅದನ್ನೂ ಉಪಯೋಗಿಸ್ದೆ. ಇತ್ತೀಚೆಗೆ ಸೆಕ್ಸ್ ಕ್ಲಿನಿಕ್‌ಗೆ ಹೋಗಿ ಒಂದು ತಿಂಗಳ ಕಾಲ ಮಸಾಜ್ ಟ್ರೀಟ್‌ಮೆಂಟ್ ತೆಗೆದುಕೊಂಡೆ. ಕಡೆಗೆ ನನ್ನ ಅವಸ್ಥೆಯನ್ನು ನೋಡಿದ ಜಯ, 'ಅಷ್ಟೊಂದು ಔಷಧಿ ಮಾಡೋ ಬದ್ಲು ನೀವು ಡಾಕ್ಟರ್ ಮೂರ್ತಿಯವರ ಬಳಿಗೆ ಹೋಗಿ ಬರಬಾರದಾ? ಅವರು ಹೇಳಿದಂತೆ ಮಾಡಿನೋಡಿ' ಎಂದಳು. ಹಾಗೇ ನಿಮ್ಮಲ್ಲಿಗೆ ಬಂದೆ."

'ನಾರಾಯಣಸ್ವಾಮಿ, ನಿಮ್ಮ ವಯಸ್ಸೆಷ್ಟು ?'

'ನಲವತ್ತಮೂರು ವರ್ಷ ಡಾಕ್ಟರೇ.'

'ನೀವು ಗಂಡು ಮಗು ಬೇಕು ಅಂತ ಎರಡನೇ ಬಾರಿ ಮದುವೆ ಆದಿರಲ್ಲ, ನಿಮ್ಮ ಎರಡನೇ ಹೆಂಡತಿಯ ವಯಸ್ಸೆಷ್ಟು ?'

'ಇ... ಇಪ್ಪತ್ತು ವರ್ಷ.'

'ಆ ವಯಸ್ಸಿನ ಹುಡುಗಿಯನ್ನು ಮದುವೆಯಾದಾಗ ನಿಮಗೆ ಏನನ್ನಿಸಿತು ?'

'ಸಂಕೋಚವಾಯ್ತು. ಈ ವಯಸ್ನಲ್ಲಿ ಈ ಕೆಲಸ ಮಾಡಬಾರ್ದಿತ್ತು ಅಂತ ಅನ್ನಿಸ್ತು. ಆದರೆ ಮಗನನ್ನು ಪಡೆಯೋ ಆಸೆ ಬೆಟ್ಟದಷ್ಟು ಇದ್ದದ್ದರಿಂದ ನನ್ನನ್ನು ನಾನೇ ಸಮಾಧಾನ ಮಾಡ್ಕೊಂಡೆ.'

'ಆಗ ನಿಮ್ಮ ಲೈಂಗಿಕ ಸಾಮರ್ಥ್ಯದ ಬಗ್ಗೆ ನಿಮಗೆ ಏನು ಭಾವನೆ ಇತ್ತು ?'

'ಬೇರೆ ಇನ್ನ್ಯಾವ ಭಾವನೆ ಇರೋದಿಕ್ಕೆ ಸಾಧ್ಯ ಡಾಕ್ಟರೆ. ನನಗೆ ವಯಸ್ಸಾಗಿದೆ. ಲೈಂಗಿಕ ಶಕ್ತಿ ಕಡಿಮೆಯಾಗಿರತ್ತೆ. ನನ್ನ ಕೈಲಿ ಸರಿಯಾಗಿ ಮಾಡೋದಿಕ್ಕೆ ಆಗುತ್ತೋ ಇಲ್ಲವೋ. ಚಿಕ್ಕವಯಸ್ಸಿನ ಹೆಂಡತಿಯನ್ನು ತೃಪ್ತಿ ಪಡಿಸಬಲ್ಲೆನೇ ಎಂಬ ಅನುಮಾನ ಮನಸ್ಸಿನಲ್ಲಿ ಇತ್ತು. ಅಲ್ದೇ ರುಕ್ಕೂಗೆ ಕಾಯಿಲೆ ಕಸಾಲೆ ಅಂತ ಸುಮಾರು ಎರಡು ವರ್ಷ ನಾವು ದೂರ ದೂರಾನೇ ಇದ್ವಿ.'

'ನಾರಾಯಣಸ್ವಾಮಿ, ನಿಮ್ಮ ಸಮಸ್ಯೆಗೆ ಕಾರಣ ಏನು ಅನ್ನೋದನ್ನು ನಾನು ಸ್ಪಷ್ಟವಾಗಿ ಗುರುತಿಸಬಲ್ಲೆ. ಜನನಾಂಗ ಉದ್ರೇಕಗೊಳ್ಳೋದು ತನಗೆ ತಾನೇ ನಡೆಯುವ ಶಾರೀರಕ ಕ್ರಿಯೆ. ನಮ್ಮ ಮಿದುಳಿನ ಸ್ವಾಯತ್ತ ನರಮಂಡಲ

ಇದನ್ನು ನಿಯಂತ್ರಿಸುತ್ತೆ ಹೊರತು ನಾವು ಬೇಕು ಅಂದರೆ, ನಮ್ಮಿಚ್ಛೆಯಂತೆ ಅದು ನಡೆಯೋಲ್ಲ. ಅಂದರೆ ನೀವು 'ಈಗ ನನ್ನ ಜನನಾಂಗ ಉದ್ರೇಕಗೊಳ್ಳಲಿ, ಅಂತ ಆಜ್ಞೆ ಮಾಡಿದರೆ ಅದು ಆಗೋದಿಲ್ಲ. ಒಂದು ವಯಸ್ಸಿನಲ್ಲಿ ಲೈಂಗಿಕ ಆಸೆ ಮನಸ್ಸಿನಲ್ಲಿ ಬರ್ತಿದ್ದಹಾಗೆ, ಸಂಗಾತಿಯನ್ನು ನೋಡ್ತಿದ್ದಹಾಗೆ ಅಥವಾ ಸ್ಪರ್ಶಿಸು ತ್ತಿದ್ದ ಹಾಗೆ ಕೆಲವೇ ಸೆಕೆಂಡುಗಳಲ್ಲಿ ಜನನಾಂಗ ಉದ್ರೇಕವಾಗಿ ಬಿಡುತ್ತೆ.

ಕ್ರಮೇಣ ವಯಸ್ಸಾಗುತ್ತಿದ್ದ ಹಾಗೆ, ಇದು ಸ್ವಲ್ಪ ನಿಧಾನವಾಗುತ್ತೆ. ಅಂದರೆ ಲೈಂಗಿಕ ಬಯಕೆ ಬಂದ ಮೇಲೆ ಜನನಾಂಗ ಅದಕ್ಕೆ ಪ್ರತಿಕ್ರಿಯೆ ತೋರಿಸಿ, ಸಿದ್ಧವಾಗೋದಿಕ್ಕೆ ಒಂದೆರಡು ಅಥವಾ ಕೆಲವು ನಿಮಿಷಗಳಾಗಬಹುದು. ಇದು ಸಹಜ, ಸ್ವಾಭಾವಿಕ. ನಿಮಗೆ ಆಗಿರೋದು ಇಷ್ಟೆ. ಪ್ರತಿಕ್ರಿಯೆ ತೋರಿಸೋದು ನಿಧಾನವಾದರೂ, ಸಂಭೋಗ ಮಾಡೋ ಸಾಮರ್ಥ್ಯವೇನೂ ಕಡಿಮೆ ಆಗೋಲ್ಲ. ಗಂಡಸರಲ್ಲಿ ಎಪ್ಪತ್ತು, ಎಂಭತ್ತು ವರ್ಷದವರೆಗೆ ಲೈಂಗಿಕ ಸಂಪರ್ಕ ನಡೆಸೋ ಸಾಮರ್ಥ್ಯ ಇರುತ್ತೆ. ಆದರೆ ಜನಸಾಮಾನ್ಯರು 'ಅಯ್ಯೋ ವಯಸ್ಸಾಯಿತು. ಇನ್ನೆಲ್ಲಿಯ ಮುಂಚಿನ ಶಕ್ತಿ' ಎಂದುಕೊಂಡು ಮಾನಸಿಕವಾಗಿ ನಿಷ್ಕ್ರಿಯರಾಗುತ್ತಾರೆ. ಈ ಧೋರಣೆಯಿಂದಾಗಿ, ಸ್ವಾಯತ್ತ ನರವ್ಯವಸ್ಥೆ ತನ್ನ ಮೊದಲಿನ ಚುರುಕು ಪ್ರತಿ ಕ್ರಿಯೆಯನ್ನು ತೋರಿಸುವುದಿಲ್ಲ.

ಮಾನಸಿಕ ಕೀಳರಿಮೆ

ನೀವು ಗಂಡು ಮಗುವಿನ ಆಸೆಗೋಸ್ಕರ, ಅನವಶ್ಯಕವಾಗಿ ಚಿಕ್ಕ ವಯಸ್ಸಿನಾಕೆ ಯನ್ನು ಮದುವೆಯಾಗಿ ಮುಜುಗರ ಪಡುತ್ತಿದ್ದೀರಿ. ತಪ್ಪಿತಸ್ಥ ಭಾವನೆ ನಿಮ್ಮ ಮನಸ್ಸಿನಲ್ಲಿ ಮನೆ ಮಾಡಿದೆ. 'ನಾನು ಆಕೆಗೆ ಸರಿ ಜೋಡಿಯಲ್ಲ' ಎಂಬ ಕೀಳರಿಮೆ ಇದೆ. ಇದು ಕೂಡ ಮನಸ್ಸಿನ ಮೇಲೆ ಪರಿಣಾಮ ಬೀರಿ, ನಿಮ್ಮ ಸಾಮರ್ಥ್ಯ ವನ್ನು ಕಡಿಮೆ ಮಾಡಿದೆ. ಅಲ್ಲದೆ ನೀವು ಎರಡು ವರ್ಷಗಳಷ್ಟು ದೀರ್ಘ ಕಾಲ ಸಂಭೋಗ ನಡೆಸದೆ, ನಂತರ ಮತ್ತೆ ಮಾಡಲು ನೀವು ಪ್ರಯತ್ನ ಪಟ್ಟಾಗ, ಸಹಜವಾಗಿ ಜನನಾಂಗ ಪ್ರತಿಕ್ರಿಯೆ ತೋರಲು ನಿಧಾನ ಮಾಡಿದೆ. ಇದು ಲೈಂಗಿಕ ದುರ್ಬಲತೆ ಲಕ್ಷಣವಲ್ಲ. ಈ ಸಾಮರ್ಥ್ಯ ಹೆಚ್ಚಿಸಲು ಮಾತ್ರೆ, ಔಷಧ, ಇನ್‌ಜೆಕ್ಷನ್ ಯಾವುದೂ ಇಲ್ಲ. ಹಣ ಕೀಳುವ ಢೋಂಗಿ ವೈದ್ಯರ ಬಲೆಗೆ ಬಿದ್ದು ಹಣ ಮತ್ತು ನೆಮ್ಮದಿಯನ್ನು ಹಾಳು ಮಾಡಿಕೊಂಡಿರಿ. ಚಿನ್ನದ ಚೂರ್ಣ, ಖಡ್ಗ ಮೃಗದ ಕೊಂಬು, ಪ್ರಾಣಿಗಳ ವೃಷಣ, ಮಾಯದ ಬಳೆ ಇವೆಲ್ಲ ನಿಮ್ಮಂತಹ ಜನರನ್ನು ಮರಳು ಮಾಡಲು ಅವರು ಒಡ್ಡುವ ಆಮಿಷಗಳು.

ಹೆಂಡತಿಯನ್ನು ಕಂಡರೆ ನೀವು ತೋರಿಸುವ ಪ್ರೀತಿ ವಿಶ್ವಾಸ, ಆಕೆಯ

ಆಕರ್ಷಕ ಶರೀರ, ಮಾತುಗಳು, ನಿಮಗೆ ತೋರಿಸುವ ಪ್ರೀತಿ, ನೀವು ನಡೆಸುವ ಸರಸ ಸಲ್ಲಾಪ, ಪರಸ್ಪರ ದೇಹದ ಪ್ರಚೋದಕ ಭಾಗಗಳನ್ನು ಸ್ಪರ್ಶಿಸಿ ಉತ್ತೇಜಿಸುವುದು, ಯಾವ ಚಿಂತೆ, ಸಮಸ್ಯೆಯ ಜಂಜಾಟವಿಲ್ಲದೆ. ಸಮಾಧಾನ ಚಿತ್ತದಿಂದ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವುದು, ಮೈಮನಗಳಿಗೆ ಖುಷಿಕೊಡುವ ಪರಿಸರ– ಇವು ಲೈಂಗಿಕ ಸಾಮರ್ಥ್ಯವನ್ನು ವೃದ್ಧಿಸುತ್ತವೆ. ನಿಮಗೆ ಯಾವ ಔಷಧಿಯೂ ಬೇಕಾಗಿಲ್ಲ. ಮುಕ್ತ ಮನಸ್ಸಿನಿಂದ ಲೈಂಗಿಕ ಚಟುವಟಿಕೆ ನಡೆಸಿ ನಿಮ್ಮ ಹೆಂಡತಿಯ ಪೂರ್ಣ ಸಹಕಾರ ಪಡೆಯಿರಿ. ನಿಮ್ಮ ಸಮಸ್ಯೆ ಪರಿಹಾರವಾಗುತ್ತದೆ,' ಎಂದು ವಿವರಿಸಿ ಹೇಳಿದರು. ಗಂಡ ಹೆಂಡತಿ ಇಬ್ಬರನ್ನೂ ಕರೆದು, ತಿಳುವಳಿಕೆ ಮಾರ್ಗ ದರ್ಶನ ನೀಡಿದರು, ನಾರಾಯಣಸ್ವಾಮಿ ಲೈಂಗಿಕ ಶಕ್ತಿವರ್ಧಕವನ್ನು ಹುಡುಕಿಕೊಂಡು ಹೋಗುವುದನ್ನೂ ಬಿಟ್ಟರು.

ಸತಿಯ ನಿರಾಸಕ್ತಿ, ಪತಿಯ ಪರಸ್ತ್ರೀ ವ್ಯಾಮೋಹ

"ತಾವು ಮನೋವೈದ್ಯರಾದ ಡಾ॥ ಮೂರ್ತಿಯವರಲ್ಲವೆ ?"

ಕಾಫಿ ಕುಡಿಯುತ್ತಿದ್ದ ಮೂರ್ತಿ ತಲೆ ಎತ್ತಿ ನೋಡಿದರು. ಸುಮಾರು ಐವತ್ತು ವರ್ಷ ವಯಸ್ಸಿನ ವ್ಯಕ್ತಿಯೊಬ್ಬರನ್ನು ಕಂಡು ಮುಗುಳ್ನಕ್ಕರು.

"ನಾನು ಶಿವಾನಂದಸ್ವಾಮಿ ಅಂತ. ಇದೇ ಊರಿನಲ್ಲಿರುವ ಶಿವ ಅಂಡ್ ಶಿವ ಎಂಟರ್‌ಪ್ರೈಸಸ್‌ನ ಮಾಲೀಕ. ನಿಮ್ಮ ಬಗ್ಗೆ ಸಾಕಷ್ಟು ಕೇಳಿದ್ದೇನೇ ವಿನಃ ಭೇಟಿ ಆಗಿರಲಿಲ್ಲ. ನಿಮ್ಮೊಂದಿಗೆ ಎರಡು ನಿಮಿಷ ಮಾತನಾಡಬಹುದೇ ?"

"ಅದಕ್ಕೇನಂತೆ ಬನ್ನಿ, ನನ್ನ ಜೊತೇಲಿದ್ದವರೆಲ್ಲ ಡ್ರಿಂಕ್ಸ್ ತೆಗೆದುಕೊಳ್ಳಲು ಹೋದರು. ನನಗೆ ನಿಮ್ಮ ಕಂಪನಿ ಸಿಕ್ಕಿದಂತಾಯಿತು. ಹೊರಗೆ ವರಾಂಡದಲ್ಲಿ ಕುಳಿತುಕೊಳ್ಳೋಣ. ಈ ಸಂಗೀತದ ಗದ್ದಲವಿಲ್ಲದೆ, ಅಲ್ಲಿ ಮಾತಾಡಬಹುದು" ಎಂದು ಹೊರಬಂದು ಕುಳಿತರು.

ದಾರಿ ತಪ್ಪಿದ ತಮ್ಮ

"ಡಾ॥ ಮೂರ್ತಿಯವರೇ, ನನ್ನ ತಮ್ಮ ಸದಾಶಿವನ ವರ್ತನೆ ಇತ್ತೀಚೆಗೆ ಏಕೋ ಮೊದಲಿನಂತಿಲ್ಲ ಅಂತ ನನಗನ್ನಿಸ್ತಾ ಇದೆ. ಆತ ನನ್ನ ಬಿಸಿನೆಸ್ ಪಾರ್ಟ್‌ನರ್ ಕೂಡ. ವ್ಯವಹಾರದಲ್ಲಿ ನನಗಿಂತಲೂ ಚುರುಕಾದ ಮನುಷ್ಯ. ಗುಣದಲ್ಲಿ ಅಪ್ಪಟ ಅಪರಂಜಿಯಂತಿದ್ದ. ಅದೇಕೋ ಇತ್ತೀಚೆಗೆ ಸ್ವಲ್ಪ ದಾರಿ ತಪ್ಪಿದ್ದಾನೆ ಅನ್ನೋ ಸಂಗತಿ ನನ್ನನ್ನು ಶೂಲದ ಹಾಗೇ ಇರೀತಾ ಇದೆ...." ಶಿವಾನಂದಸ್ವಾಮಿಗಳ ಧ್ವನಿ ಭಾರವಾಯಿತು. ಕಣ್ಣಂಚಿನಲ್ಲಿ ನೀರಾಡಿತು. ಒಂದೆರಡು ನಿಮಿಷಗಳಲ್ಲಿ ಸಾವರಿಸಿಕೊಂಡು "ಸಾರಿ ಡಾಕ್ಟರೆ, ಉದ್ವೇಗವನ್ನು ತಡೆಯೋದಕ್ಕೆ ಆಗ್ಲಿಲ್ಲ" ಎಂದು ಕಣ್ಣೀರನ್ನು ಒರೆಸಿಕೊಂಡರು.

"ದಾರಿ ತಪ್ಪಿದಾನೆ ಅಂದ್ರೆ ಯಾವ ರೀತಿ ?"

"ಬೇರೆ ಸ್ತ್ರೀ ಸಂಗ ಮಾಡಿದಾನೆ."

"ಇದು ನಿಮಗೆ ಹೇಗೆ ಗೊತ್ತಾಯಿತು ? ನಿಮ್ಮ ತಮ್ಮನ ಹೆಂಡತಿ ಇದರ ಬಗ್ಗೆ ಏನು ಹೇಳುತ್ತಾರೆ ?"

"ಆತನನ್ನು ಅಂತಹ ಜಾಗದಲ್ಲಿ ಕಂಡವರು ನನಗೆ ಹೇಳಿದರು. ಇದು ಸದಾಶಿವನ ಹೆಂಡತಿ ಜಾನಕಿಗೆ ಗೊತ್ತಿದೆಯೋ ಇಲ್ಲವೋ ನನಗೆ ತಿಳಿಯದು. ನಾವು ಒಟ್ಟಿಗೆ ವ್ಯವಹಾರ ಮಾಡಿದರೂ, ಒಂದೇ ಮನೆಯಲ್ಲಿ ವಾಸವಾಗಿಲ್ಲ. ಪ್ರತ್ಯೇಕವಾಗಿದ್ದರೇ ಒಳ್ಳೇದು ಅಂತ ಮೊದಲಿನಿಂದಲೂ ನಾವು ಬೇರೆ ಬೇರೆ ಇದ್ದೇವೆ. ಪರಸ್ಪರ ವಿಶ್ವಾಸದಿಂದಲೇ ಇದ್ದೇವೆ. ಜಾನಕಿ ತುಂಬಾ ಒಳ್ಳೇ ಹೆಂಗಸು. ಗಂಡ-ಹೆಂಡತಿ ಬಹಳ ಅನ್ಯೋನ್ಯವಾಗಿಯೇ ಇದ್ದರು. ಆದರೆ ಇತ್ತೀಚೆಗೆ ಆಕೆ ಮೊದಲಿನಷ್ಟು ಚುರುಕಾಗಿಲ್ಲ. ಏನೋ ಒಂದು ಥರ ಮಂಕಾಗಿದ್ದಾಳೆ. ಗಂಡ-ಹೆಂಡತಿ ನಡುವೆ ಏನು ನಡೆದಿದೆಯೋ ಆ ದೇವರೇ ಬಲ್ಲ. ನನ್ನ ಹೆಂಡತಿ ಮುಖಾಂತರ ಏನಾದರೂ ತೊಂದರೆ ಇದೆಯೇ ಅಂತ ವಿಚಾರಿಸಿದೆ. ಅಂಥಾದ್ದೇನೂ ಇಲ್ಲ. ಏಕೋ ಬೇಜಾರು ಅಷ್ಟೆ. ಕೆಲಸದಲ್ಲಿ ಆಸಕ್ತಿ ಇಲ್ಲ. ಫ್ಯಾಮಿಲಿ ಡಾಕ್ಟರನ್ನು ಕಂಡು ಅವರು ಕೊಟ್ಟ ಟಾನಿಕ್ ಇನ್‌ಜೆಕ್ಷನ್‌ಗಳನ್ನು ತಗೋಳ್ತಿದಾಳೆ ಅಂತ ತಿಳೀತು. ಸದಾಶಿವ ನೋಡಿದ್ರೆ ಹೀಗೆ ಮಾಡ್ತಿದಾನೆ. ಇವರಿಬ್ಬರಿಗೆ ಏನಾಗಿದೆ ಅಂತ ನನಗೆ ಗೊತ್ತಾಗ್ತಾ ಇಲ್ಲ. ನೇರವಾಗಿ ಕೇಳೋಣ ಅಂದ್ರೆ ಇದು ಅವರ ವೈಯುಕ್ತಿಕ ವಿಚಾರ. ಕೇಳಲು ನನಗೂ ಸಂಕೋಚ. ಹೇಳಲು ಅವರಿಗೂ ಸಂಕೋಚ ಆಗಬಹುದು. ನನಗೆ ಏನು ಮಾಡಲು ಗೊತ್ತಾಗ್ತಾ ಇಲ್ಲ. ಈ ವಿಚಾರದಲ್ಲಿ ನನಗೆ ನೀವು ಸಹಾಯ ಮಾಡಲು ಸಾಧ್ಯವೇ ?"

"ನಿಮ್ಮ ತಮ್ಮ ಮತ್ತು ಅವರ ಹೆಂಡತಿಯನ್ನು ನನ್ನ ಬಳಿಗೆ ಕಳುಹಿಸಿಕೊಡಿ ಶಿವಾನಂದಸ್ವಾಮಿ. ಅವರೊಡನೆ ಮಾತನಾಡಿ ಸಮಸ್ಯೆ ಏನೆಂದು ತಿಳಿದುಕೊಳ್ಳೋಣ. ಆಮೇಲೆ ಪರಿಹಾರ ಸುಲಭವಾಗಬಹುದು."

"ಥ್ಯಾಂಕ್ಯೂ ಡಾ॥ ಮೂರ್ತಿ. ನೀವು ನನ್ನ ಮನಸ್ಸಿನ ಮೇಲಿದ್ದ ದೊಡ್ಡ ಭಾರವನ್ನು ಕಡಿಮೆ ಮಾಡಿದಿರಿ. ಆದಷ್ಟು ಬೇಗ ಸದಾಶಿವ–ಜಾನಕಿಯರನ್ನು ನಿಮ್ಮ ಬಳಿ ಕಳುಹಿಸುತ್ತೇನೆ" ಎಂದು ಕೈಕುಲುಕಿ ಎದ್ದರು.

o o o

"ನಾನು ಸದಾಶಿವ. ನನ್ನಣ್ಣ ಶಿವಾನಂದಸ್ವಾಮಿ ನಿಮ್ಮನ್ನು ಭೇಟಿಯಾಗಲು ಹೇಳಿದರು. ಈಕೆ ನನ್ನ ಹೆಂಡತಿ ಜಾನಕಿ."

ಸಂಕೋಚದಿಂದ ನಿಂತಿದ್ದ ಅವರನ್ನು ಡಾ॥ ಮೂರ್ತಿ ಕುಳಿತುಕೊಳ್ಳಲು ಹೇಳಿದರು. ಇಬ್ಬರದೂ ಸದಭಿರುಚಿಯ ವೇಷಭೂಷಣ. ಸೌಮ್ಯತೆಯೊಂದಿಗೆ ಯಾವುದೋ ನೋವಿನ ಛಾಯೆ ಹೊತ್ತ ಮುಖ. ಆದರೂ ಇಬ್ಬರದೂ ಆಕರ್ಷಕ ರೂಪ, ನಿಲುವು. ಅನುರೂಪ ಜೋಡಿ ಎಂದುಕೊಂಡರು.

'ಮೊನ್ನೆ ಪಾರ್ಟಿಯಲ್ಲಿ ನಿಮ್ಮ ಅಣ್ಣನವರ ಪರಿಚಯವಾಯಿತು. ನಿಮಗೆ ಏನೋ ಸಮಸ್ಯೆ ಇದೆ ಅಂತ ಅವರಿಗೆ ಅನಿಸಿದೆ. ನನ್ನೊಂದಿಗೆ ಹೇಳಬೇಕೆನಿಸಿದರೆ ಹೇಳಿ. ಸಂಕೋಚಪಡಬೇಡಿ.'

"ಹೌದು ಡಾಕ್ಟರೆ. ಕಳೆದ ನಾಲ್ಕು ತಿಂಗಳಿನಿಂದ ನನ್ನ ಮನಸ್ಸಿನ ನೆಮ್ಮದಿ ಹಾಳಾಗಿದೆ, ನನ್ನ ಹೆಂಡತಿ ಜಾನಕಿಯ ವಿಷಯ ಅದು. ಅದೇಕೋ ಅವಳು ಮೊದಲಿನಂತೆ ಇಲ್ಲವೇ ಇಲ್ಲ."

ಜಾನಕಿಯ ಮುಖ ಮತ್ತಷ್ಟು ಮಂಕಾಯಿತು. ತಲೆ ತಗ್ಗಿಸಿ ಕುಳಿತಳು.

"ಮೊದಲಿನಂತೆ ಅಂದರೆ ಹೇಗೆ ? ಸ್ವಲ್ಪ ವಿವರಿಸ್ತೀರಾ ?"

"ನಮ್ಮ ಮದುವೆಯಾಗಿ ಹನ್ನೊಂದು ವರ್ಷಗಳಾದವು ಡಾಕ್ಟರೆ. ಮೂರು ಮಕ್ಕಳಿದ್ದಾರೆ. ಕಡೆಯ ಮಗುವಿಗೆ ಮೂರು ವರ್ಷ. ಆಗಲೇ ಜಾನಕಿ ಟ್ಯುಬೆಕ್ಟಮಿ ಮಾಡಿಸಿಕೊಂಡಳು. ನಂತರ ಯಾವ ತೊಂದರೆಯೂ ಇಲ್ಲದೆ ಚೆನ್ನಾಗಿದ್ದೆವು. ಮನೆ ಕೆಲಸ, ಮಕ್ಕಳು ಮತ್ತು ನನ್ನ ಯೋಗಕ್ಷೇಮ ಎಲ್ಲವನ್ನು ಇವಳೇ ಮುತುವರ್ಜಿಯಿಂದ ನೋಡಿಕೊಳ್ಳೋಳು. ಒಂದು ನಿಮಿಷ ಸುಮ್ಮನೆ ಕೂತ್ಕೊಳ್ಳಲ್ಲ. ಸದಾ ಆ ಕೆಲಸ ಈಕೆಲಸ ಎಂದು ತೊಡಗಿರೋಳು. ಆದರೆ ಇತ್ತೀಚೆಗೆ ಬರ್ತಾ ಬರ್ತಾ ಮಂಕಾಗ್ತಿದಾಳೆ. ಯಾವುದರಲ್ಲೂ ಆಸಕ್ತಿ ಇಲ್ಲ. ಸುಸ್ತು ನಿಶ್ಯಕ್ತಿ ಅಂತಾಳೆ. ಡಾಕ್ಟರು ನೋಡಿ ಆಯ್ತು, ರಕ್ತ ಮೂತ್ರ ಪರೀಕ್ಷೆ ಎಲ್ಲಾ ಆಯ್ತು, ಯಾವ ಖಾಯಿಲೆಯೂ ಇಲ್ಲ ಅಂತಾರೆ. ಟಾನಿಕ್‌ಗಳಾದವು. ಏನೂ ಪ್ರಯೋಜನ ಕಾಣ್ತಾ ಇಲ್ಲ. ಈಗೀಗಲಂತೂ ಎಲ್ಲದಕ್ಕೂ ಬೇಜಾರು ಅಂತಾಳೆ."

"ಮತ್ತೆ ನಿಮ್ಮ ವೈವಾಹಿಕ ಜೀವನ ?" ಡಾ॥ ಮೂರ್ತಿ ಕೇಳಿದರು.

"ಚೆನ್ನಾಗಿಯೇ ಇತ್ತು ಡಾಕ್ಟ್ರೇ, ಇಷ್ಟು ವರ್ಷವಾದ್ರೂ ನಾವು ಪರಸ್ಪರ ಆಕರ್ಷಣೆಯನ್ನು ಉಳಿಸಿಕೊಂಡಿದ್ದೆವು. ವಾರಕ್ಕೆ ಎರಡು ಮೂರು ಸಾರಿ ಶರೀರ ಸಂಪರ್ಕ ಮಾಡ್ತಿದ್ದೆವು. ರಸಿಕತನದಲ್ಲಿ ಜಾನಕಿ ನನಗಿಂತ ಒಂದು ಕೈ ಜಾಸ್ತಿಯೇ. ಆದರೆ ಈ ನಾಲ್ಕು ತಿಂಗಳಲ್ಲಿ ನಾವು ಒಂದು ಬಾರಿಯೂ ಕೂಡಿಲ್ಲ. 'ನನಗೇನೂ ಬೇಕಿಲ್ಲ, ಅದರಲ್ಲಿ ಆಸಕ್ತಿ ಇಲ್ಲ' ಅಂತಾಳೆ. 'ಮೊದಲಿನ ನಿನ್ನ ರಸಿಕತನ ಎಲ್ಲಿ ಹೋಯಿತು, ಏನಾಗಿದೆ ನಿನಗೆ. ಈ ವಯಸ್ನಲ್ಲಿ ನಾವು ಸನ್ಯಾಸಿಗಳ ತರಹ ಇರಬೇಕಾ ?' ಅಂತ ಕೇಳಿದ್ರೆ, ಅದಕ್ಕೆ ಉತ್ತರ ಕೊಡೊಲ್ಲ. ಪಕ್ಕಕ್ಕೆ ತಿರುಗಿ ಮಲಗಿ ಬಿಡ್ತಾಳೆ. ಅಕಸ್ಮಾತ್ ಮಾತಾಡಿದ್ರೆ 'ನನಗೇನಾಗ್ತಿದೆ ಅಂತ ನನಗೇ ಗೊತ್ತಾಗ್ತಿಲ್ಲ– ಈ ಬೇಜಾರು ನನ್ನನ್ನು ಶನಿ ಹಿಡಿದ ಹಾಗೆ ಹಿಡಿದುಬಿಟ್ಟಿದೆ. ನಾನೇನ್ಮಾಡಲಿ, ಅಂತಾಳೆ. ಮನೆಯಲ್ಲಿ ಮನೋರಂಜನೆ ಸಾಧನೆಗಳಿಗೇನೂ ಕೊರತೆಯಿಲ್ಲ. ಆದ್ರೂ

ಆದೇಕೆ ಹೀಗಾದ್ಲೊ ನೀವೇ ನೋಡಿ. ನನ್ನ ಜಾನಕಿ ಮೊದಲಿನಂತೆ ಆಗೋ ಹಾಗೆ ಮಾಡಿ ಡಾಕ್ಟ್ರೇ" ಸದಾಶಿವ ಮಾತು ನಿಲ್ಲಿಸಿದ. ಮೂರ್ತಿ ಜಾನಕಿಯತ್ತ ನೋಡಿದರು.

ಮಂಕುತನ

"ನಿಮಗೆ ಏನು ತೊಂದರೆ ಇದೆ ಅಂತ ಹೇಳ್ತೀರಾಮ್ಮ. ನೀವು ಎಲ್ಲಿಯವರೆಗೆ ಚೆನ್ನಾಗಿದ್ರಿ. ಈ ಬೇಜಾರು, ಮಂಕುತನ ಯಾವಾಗ್ಲಿಂದ, ಹೇಗೆ ಶುರುವಾಯ್ತು ಹೇಳಿ."

"ನಾಲ್ಕು ತಿಂಗಳ ಹಿಂದೆ ನಾನು ಚೆನ್ನಾಗಿ ಇದ್ದೆ ಡಾಕ್ಟರೆ. ಈ ತೊಂದರೆ ಹೀಗೇ ಶುರುವಾಯ್ತು ಅಂತ ಹೇಳಲಾರೆ, ಮೋಡ ಮುಚ್ಚಿಕೊಳ್ಳೋ ಹಾಗೆ, ಮಂಕುತನ ನನ್ನನ್ನು ಮುಚ್ಚಿಕೊಂಡುಬಿಟ್ಟಿದೆ. ಯಾವುದರಲ್ಲೂ ನನಗೆ ಆಸೆ, ಆಸಕ್ತಿ ಇಲ್ಲ. ಯಾವುದೂ ನನ್ನನ್ನು ಆಕರ್ಷಿಸೋಲ್ಲ. ಸುಮ್ಮನೆ ಒಂದು ಕಡೆ ಕೂತಿರೋಣ ಅಥವಾ ಮಲಗಿರೋಣ ಅಂತ ಅನ್ನಿಸುತ್ತೆ. ತುಂಬಾ ಬೇಜಾರು. ಯಾರಪ್ಪಾ ಮನೆಕೆಲಸ ಮಾಡೋರು ಅಂತ ಅನ್ನಿಸುತ್ತೆ. ಅಲಂಕಾರದಲ್ಲೂ ಮನಸ್ಸಿಲ್ಲ. ಯಾವುದೇ ಚಟುವಟಿಕೆ ಮಾಡೋದಿಕ್ಕೆ ಹೋದರೂ, ಯಾಕೆ ಮಾಡ್ಬೇಕು. ಮಾಡೋದರಿಂದ ಏನು ಪ್ರಯೋಜನ ಅಂತ ಅನಿಸಿರುತ್ತೆ. ಈ ಜೀವನ ಯಾಕೆ; ಬದುಕೋದರಲ್ಲಿ ಏನರ್ಥ ಇದೆ. ಊಟ ಮಾಡೋದು, ನಿದ್ರೆ ಮಾಡೋದು, ಮನೆಕೆಲಸ ಮಾಡೋದು ಇಷ್ಟೇ ಜೀವನಾನೇ. ಇವರ ಬಳಿ ಹೋಗೋಕೂ ಬೇಜಾರು. ಅವರು ನನ್ನ ಬಳಿ ಬಂದರೂ ಬೇಜಾರು. ಮೂರು ಮಕ್ಕಳಾಗಿವೆ. ಇನ್ನೂ ಯಾಕೆ ಈ ಮೋಹ, ಚಪಲ ಅಂತ ಅನಿಸುತ್ತೆ. ಮನಸ್ಸಿನಲ್ಲಿ ಲೈಂಗಿಕ ಭಾವನೆಯೇ ಹುಟ್ಟೋದಿಲ್ಲ."

"ಅಷ್ಟೇ ಅಲ್ಲ, ಈ ಒಂದು ತಿಂಗಳಲ್ಲಿ ನಾನು ಸಾಯಬೇಕು ಅನ್ನೋ ಭಾವನೆ ಬಲವಾಗ್ತಾ ಇದೆ. ಇದನ್ನು ಬೇರೆಯೋರಿಗೆ ಹೇಳಿಲ್ಲ, ಹೇಳಿದರೆ ಗಾಬರಿ ಆಗ್ತಾರೆ ಅಂತ ಹೇಳಿಲ್ಲ. ಯಾವುದಾದರೂ ಒಂದಷ್ಟು ಮಾತ್ರೆಗಳನ್ನು ನುಂಗಿಬಿಡೋಣ, ಚಾಕು, ಬ್ಲೇಡ್‌ಗಳನ್ನು ಕಂಡಾಗ, ತೆಗೆದುಕೊಂಡು ಕೊಯ್ದುಕೊಂಡು ಸತ್ತು ಹೋಗಬೇಕು. ಸಾಯೋದು ಚೆನ್ನಾಗಿರತ್ತೆ ಅನ್ನೋ ಯೋಚನೆಗಳು ಬರುತ್ತೆ. ಇವರು ಒಳ್ಳೆಯವರು. ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು ಬೆಳಸ್ತಾರೆ. ನಾನಿರೋ ಅವಶ್ಯಕತೆ ಇಲ್ಲ. ನಾನಿರಬಾರದು ಅನ್ನೋ ಯೋಚನೆ ಮನಸ್ನಲ್ಲಿ ತುಂಬಿಕೊಂಡಿದೆ. ಇವರು ಯಾಕೆ ನಿನಗೆ ಬೇಜಾರು ಅಂತಾರೆ. ಅದಕ್ಕೆ ಉತ್ತರ

ನನಗೆ ಗೊತ್ತಿಲ್ಲ. ಯಾವುದೋ ಜನ್ಮದಲ್ಲಿ ನಾನು ತಪ್ಪು ಮಾಡಿರಬಹುದು. ಅದಕ್ಕೇ ದೇವರು ನನಗೆ ಈ ರೀತಿ ಶಿಕ್ಷೆ ಕೊಡ್ತಿರಬಹುದು. ನಾನು ಪಾಪಿ" ಎಂದು ಅಳತೊಡಗಿದಳು.

"ಡಾಕ್ಟರೆ, ಜಾನಕಿ ಪಾಪಿ ಅಲ್ಲ. ಆಕೆ ಯಾವ ತಪ್ಪನ್ನೂ ಮಾಡಿಲ್ಲ. ತಪ್ಪು ಮಾಡಿರೋದು ನಾನು. ಜಾನಕಿಗೆ ನಾನು ಮೋಸ ಮಾಡಿದ್ದೇನೆ, ಇಷ್ಟು ವರ್ಷ ನನ್ನೊಂದಿಗೆ ಸಂಸಾರ ಮಾಡಿ, ನನಗೆ ಸುಖ ಸಂತೋಷ ಕೊಟ್ಟ ಈಕೆಗೆ ನಾನು ಅನ್ಯಾಯ ಮಾಡಿದ್ದೇನೆ. ಜಾನಕಿ ಲೈಂಗಿಕ ಸಂಪರ್ಕಕ್ಕೆ ಆಸಕ್ತಿ ತೋರಿಸದೇ ಇದ್ದುದನ್ನು ಕಂಡು, ಈಕೆಗೆ ವಯಸ್ಸಾಯಿತು. ಇನ್ನು ಈಕೆಯಿಂದ ನನಗೆ ಲೈಂಗಿಕ ಸುಖ ಸಿಗೋದಿಲ್ಲ ಅಂತ ನಿರ್ಧಾರಕ್ಕೆ ಬಂದು ಬಿಟ್ಟೆ. ಇದನ್ನು ನನ್ನ ಸ್ನೇಹಿತನೊಂದಿಗೆ ಹೇಳಿಕೊಂಡಾಗ, ಆತ 'ಇದಕ್ಕೆ ಯಾಕೆ ಯೋಚನೆ ಮಾಡ್ತೀಯಾ' ಅಂತ ಹೇಳಿ ಒಬ್ಬ ಹೆಂಗಸಿನ ಪರಿಚಯ ಮಾಡಿಕೊಟ್ಟ. ಆಕೆಯೊಂದಿಗೆ ಸಂಪರ್ಕ ಮಾಡಿ, ತೃಪ್ತಿ ಪಟ್ಟುಕೊಂಡೆ. ನಾನು ಈ ರೀತಿ ಮಾಡಬಾರದಿತ್ತು. ಇದು ನನ್ನ ಅಣ್ಣನ ಕಿವಿಗೆ ಏನಾದರೂ ಬಿದ್ದರೆ, ಆತ ಎಷ್ಟು ನೊಂದುಕೊಳ್ತಾನೋ ಏನೋ. ಜಾನಕಿ ನನ್ನನ್ನು ಕ್ಷಮಿಸು. ಮತ್ತೊಮ್ಮೆ ಈ ಅನ್ಯಾಯವನ್ನು ನಾನು ಮಾಡೋದಿಲ್ಲ" ಎಂದು ಸದಾಶಿವ ಬಡಬಡಿಸಿದ.

ಮಾನಸಿಕ ಕಾಯಿಲೆ

ಮೂವತ್ತನಾಲ್ಕು ವರ್ಷದ ಜಾನಕಿ 'ಒಳಜನ್ಯ ಖಿನ್ನತೆ' ಎಂಬ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಳು. ಶರೀರದಲ್ಲೇ ಉತ್ಪತ್ತಿಯಾಗುವ ಈ ಕಾಯಿಲೆಯಲ್ಲಿ ಮಿದುಳಿನ ನರಕೋಶಗಳಲ್ಲಿ ಡೋಪಮಿನ್ ಎನ್ನುವ ನರವಾಹಕ ರಾಸಾಯನಿಕ ವಸ್ತು ಎಷ್ಟು ಪ್ರಮಾಣದಲ್ಲಿ ಇದ್ದು ಕ್ರಿಯಾಶೀಲವಾಗಿರಬೇಕೋ, ಅಷ್ಟು ಪ್ರಮಾಣದಲ್ಲಿರುವುದಿಲ್ಲ. ಇದರ ಪರಿಣಾಮವಾಗಿ ಖಿನ್ನತೆ ರೋಗಿಯನ್ನು ಆವರಿಸುತ್ತದೆ. ವಿನಾಕಾರಣ ಬೇಸರ, ದುಃಖ, ಅನಾಸಕ್ತಿ, ಮಂಕುತನ ಕಾಡುತ್ತವೆ. ರೋಗಿ ನಿಷ್ಕ್ರಿಯನಾಗುತ್ತಾನೆ. ಮನಸ್ಸಿನ ನೆಮ್ಮದಿ ಹಾಳಾಗಿ, ಮಾನಸಿಕವಾಗಿ ಹಿಂಸೆಯನ್ನು ಅನುಭವಿಸುತ್ತಾನೆ. ಜೀವನ ಬೇಡವಾಗಿ ಆತ್ಮಹತ್ಯೆ ಯೋಚನೆಗಳು ಬರುತ್ತವೆ. ಬದುಕಿರುವುದಕ್ಕಿಂತ ಸಾಯುವುದು ಮೇಲು ಎನಿಸುತ್ತದೆ. ರೋಗಿ ಆತ್ಮಹತ್ಯೆಗೆ ಪ್ರಯತ್ನವನ್ನೂ ಮಾಡಬಹುದು. ಲೈಂಗಿಕ ಚಟುವಟಿಕೆಯೂ ಸೇರಿದಂತೆ, ಸಂತೋಷ ತರುವ ಯಾವುದೇ ಚಟುವಟಿಕೆ ರೋಗಿಗೆ ಬೇಕಾಗುವುದಿಲ್ಲ. ಹಸಿವು, ನಿದ್ರೆ ಏರುಪೇರಾಗುತ್ತದೆ. ವಾತಾವರಣದಲ್ಲಿ ಯಾವ ತೋರಿಕೆಯ ಕಾರಣವೂ ಇಲ್ಲದೆ ಬರುವ ಈ ಖಿನ್ನತೆ ರೋಗಿಗೆ ಮತ್ತು ಮನೆಯವರಿಗೆ ಒಗಟಾಗು

ತ್ತದೆ. ಏಕೆ ಹೀಗೆ ಎಂದು ತಲೆ ಕೆರೆದುಕೊಳ್ಳುವಂತಾಗುತ್ತದೆ. ದೆವ್ವ, ಮಾಟ, ಮಂತ್ರ ಮದ್ದು ಹಾಕುವುದು. ಗ್ರಹಗತಿ, ದೇವರ ಕೋಪ, ಇತ್ಯಾದಿ ನಂಬಿಕೆಗಳಿದ್ದರೆ, ಅದರಿಂದಲೇ ವ್ಯಕ್ತಿ ಹೀಗಾಗಿದ್ದಾನೆ ಎಂದು ಜನ ಊಹಿಸುವಂತಾಗುತ್ತದೆ. ಈಗ ಒಳಜನ್ಯ ಖಿನ್ನತೆಗೆ ಯಶಸ್ವಿ ಚಿಕಿತ್ಸೆ ಲಭ್ಯವಿದೆ. ಬಹುತೇಕ ಪ್ರಕರಣಗಳಲ್ಲಿ ಖಿನ್ನತೆ ನಿವಾರಕ ಔಷಧಗಳಿಂದ, ಖಿನ್ನತೆಯನ್ನು ಗುಣಪಡಿಸಬಹುದು. ಕೆಲವು ತೀವ್ರ ಬಗೆಯ ಪ್ರಕರಣಗಳಲ್ಲಿ ವಿದ್ಯುತ್ ಕಂಪನ ಚಿಕಿತ್ಸೆ ಸಹಕಾರಿ. ಆದ್ದರಿಂದ ಖಿನ್ನತೆ ಇರುವ ವ್ಯಕ್ತಿಗಳು ಮನೋವೈದ್ಯರ ಸಲಹೆ–ಸಹಾಯವನ್ನು ಪಡೆಯುವುದು ಉಚಿತ.

ಗಂಡಿಗೆ ಹೆಣ್ಣಾಗುವ ಬಯಕೆ

"ಡಾ॥ ಮೂರ್ತಿಯವರಿಗೆ ನಮಸ್ಕಾರಗಳು."

ಈ ಪತ್ರ ತಂದಿರುವಾತನ ಹೆಸರು ವಿಜಯಕುಮಾರ್. ಇಪ್ಪತ್ತು ವರ್ಷ ವಯಸ್ಸು. ನಿನ್ನೆ ನಮ್ಮ ಹೊರರೋಗಿ ವಿಭಾಗಕ್ಕೆ ಬಂದು ನನ್ನನ್ನು ಪ್ರತ್ಯೇಕವಾಗಿ ನೋಡಲು ಇಷ್ಟಪಟ್ಟ. ಏನು ತೊಂದರೆ ಎಂದು ವಿಚಾರಿಸಿದಾಗ "ಡಾಕ್ಟರೇ, ಆಪರೇಷನ್ ಮಾಡಿ ನನ್ನನ್ನು ಹುಡುಗಿಯನ್ನಾಗಿ ಮಾಡಿ" ಎಂದ. ಪೇಪರ್‌ನಲ್ಲಿ ಇಂಥ ಕೇಸ್‌ಗಳ ಬಗ್ಗೆ ಓದಿದ್ದ ನಾನು ಪ್ರತ್ಯಕ್ಷವಾಗಿ ಈ ಬಗೆಯ ವ್ಯಕ್ತಿಯನ್ನು ನೋಡಿದ್ದು ಇದೇ ಮೊದಲು. ಗಡ್ಡ ಮೀಸೆಗಳೇ ಮುಂತಾಗಿ ಎಲ್ಲ ಪುರುಷನ ಲಕ್ಷಣಗಳೇ ಇರುವ ಇವನನ್ನು "ಎಲ್ಲ ಸರಿಯಾಗಿದೆಯಲ್ಲಾ, ಏಕೆ ಹುಡುಗಿಯಾಗ ಬೇಕು" ಅಂತ ಕೇಳಿದರೆ ಆತ "ನಾನು ಮಾನಸಿಕವಾಗಿ ಹೆಣ್ಣು. ಹೆಣ್ಣಿಗಿರಬೇಕಾದ ಭಾವನೆಗಳು, ಆಸೆಗಳು ಇವೆ. ಆದರೆ ಈ ದೇಹ ಗಂಡಾಗಿದೆ. ನನಗೆ ಈ ಗಂಡು ದೇಹ ಬೇಡ. ಪತ್ರಿಕೆಯಲ್ಲಿ ಆಪರೇಷನ್ ಮಾಡಿ ಹುಡುಗನನ್ನು ಹುಡುಗಿಯನ್ನಾಗಿ ಮಾಡಿದರು ಅಂತ ಓದಿದ್ದೇನೆ. ನೀವು ದೊಡ್ಡ ಸರ್ಜನ್. ಅಂತಹ ಆಪರೇಷನ್‌ನನ್ನು ನನಗೂ ಮಾಡಿ, ನಾನು ಹುಡುಗಿಯಾಗಬೇಕು" ಎಂದು ಒತ್ತಾಯ ಮಾಡಿದ. ಈತ ನನ್ನು ನಿಮ್ಮ ಬಳಿಗೆ ಕಳಿಸುತ್ತಿದ್ದೇನೆ. ಈತನಿಗೆ ಸಹಾಯ ಮಾಡಿ. ನಿಮ್ಮ ಅಭಿಪ್ರಾಯವನ್ನು ಮತ್ತು ಈತ ಹೀಗಾಗಲು ಏನು ಕಾರಣ ಎಂಬುದನ್ನೂ ಪತ್ರ ದಲ್ಲಿ ತಿಳಿಸಲು ಮರೆಯಬೇಡಿ.

ಇಂತಿ ತಮ್ಮ ವಿಶ್ವಾಸಿ
ಡಾ॥ ಶ್ರೀಕಂಠಸ್ವಾಮಿ

ಡಾ॥ ಮೂರ್ತಿ ಪತ್ರವನ್ನು ಓದಿ, ಅದನ್ನು ತಮಗೆ ತಂದಿತ್ತ ಯುವಕನನ್ನು ನೋಡಿದರು. ದೃಢಕಾಯವಾದ ಆರೋಗ್ಯವಂತ ಶರೀರ. ಹದಿಹರೆಯದ ಹುಡುಗಿ ಯರು ಮೋಹಗೊಳ್ಳುವಂತಹ ಮುಖ, ನಿಲುವು, ಆದರೆ ಮುಖದಲ್ಲಿ ಸಂಕೋಚ, ಬೇಸರ, ಚಡಪಡಿಕೆಯ ಛಾಯೆ, ಏನೋ ಮುಜುಗರ ಇದ್ದಂತೆ ಕಾಣುತ್ತಿದೆ.

ಸಮಸ್ಯೆಯೇನು ?

"ನಿನ್ನ ಸಮಸ್ಯೆ ಏನು ವಿಜಯಕುಮಾರ್. ಯಾವ ಸಂಕೋಚವೂ ಇಲ್ಲದೆ ಹೇಳು. ಲಿಂಗ ಬದಲಾವಣೆ ಆಪರೇಷನ್ ಮಾಡಿ ಎಂದು ಡಾ॥ ಶ್ರೀಕಂಠಸ್ವಾಮಿ ಯವರಲ್ಲಿಗೆ ಹೋಗಿದ್ದೀಯಾ. ಅವರು ನಿನ್ನನ್ನು ನನ್ನ ಬಳಿಗೆ ಕಳುಹಿಸಿರುವ ಉದ್ದೇಶ, ಈ ಆಸೆ ನಿನ್ನಲ್ಲಿ ಬರಲು ಕಾರಣವೇನು, ಅದು ಎಷ್ಟು ತೀವ್ರವಾಗಿದೆ, ನಿನಗೆ ಯಾವ ಬಗೆಯ ಸಹಾಯಬೇಕಾದೀತು ಎಂದು ತಿಳಿದುಕೊಳ್ಳುವುದು. ಆದ್ದರಿಂದ ಯಾವ ಹಿಂಜರಿಕೆ ಇಲ್ಲದೆ ಮಾತಾಡು."

"ನಾನು ಹೆಣ್ಣಾಗಬೇಕು. ಹೆಣ್ಣಿನಂತೆ ನಾನು ಜೀವನ ಮಾಡಬೇಕು. ಅಂದರೆ ಮದುವೆಯಾಗಿ ಗಂಡನೊಂದಿಗೆ ಸಂಸಾರ ಮಾಡಬೇಕು. ನನ್ನದೇ ಆದ ಮಕ್ಕಳನ್ನು ಪಡೆಯಬೇಕು ಅಂತ ಬಹಳ ಆಸೆ ಡಾಕ್ಟರೇ."

"ಶಾರೀರಕ ಲಕ್ಷಣಗಳ ಪ್ರಕಾರ ನೀನು ಗಂಡಸು. ಗಡ್ಡ ಮೀಸೆಗಳು ಬಂದಿವೆ. ಪುರುಷ ಜನನಾಂಗ ಇದೆ ಅಲ್ಲವೆ ?"

"ಹೌದು ಸಾರ್. ನನ್ನ ಶರೀರ ನೂರಕ್ಕೆ ನೂರು ಗಂಡಸಿನದು. ಕನಸಿನಲ್ಲಿ ಲೈಂಗಿಕ ಭಾವನೆಗಳು ಬಂದಾಗ ಜನನಾಂಗ ಉದ್ರೇಕಗೊಳ್ಳುತ್ತದೆ. ಆಗಾಗ ವೀರ್ಯವೂ ಹೋಗುತ್ತದೆ. ಆದರೆ ನನ್ನ ಮನಸ್ಸು 'ನಾನು ಹೆಣ್ಣು. ಈ ಗಂಡಿನ ದೇಹದಲ್ಲಿ ಬಂದಿಯಾಗಿದ್ದೇನೆ. ಇದರಿಂದ ಬಿಡುಗಡೆ ಪಡೆಯಬೇಕು. ಏನಾದರೂ ಮಾಡಿ ದೇಹವನ್ನು ಬದಲಿಸಿ, ಹೆಣ್ಣಿನ ಲಕ್ಷಣಗಳು ಬರುವಂತೆ ಮಾಡಿಕೊಳ್ಳಬೇಕು ಅನ್ನೋ ಆಸೆ ದಿನ ಕಳೆದಂತೆ ಹೆಚ್ಚುತ್ತಾ ಇದೆ. ಪೇಪರ್‌ನಲ್ಲಿ ಪ್ರತಿಸಲ ಲಿಂಗ ಬದಲಾವಣೆಯ ಪ್ರಕರಣ ಓದಿದಾಗ, ನಾನೂ ಹಾಗೇ ಆಪರೇಷನ್ ಮಾಡಿಸಿ ಕೊಂಡು, ನನ್ನ ಗಂಡು ಲಕ್ಷಣಗಳನ್ನು ಕಳೆದುಕೊಳ್ಳಬೇಕು. ಆದರೆ ಅಂತಹ ಸರ್ಜನ್ ಹತ್ತಿರದಲ್ಲಿ ಯಾರಿದ್ದಾರೆ ಎಂದು ಯೋಚಿಸುತ್ತಿದ್ದೆ. ಡಾ॥ ಶ್ರೀಕಂಠ ಸ್ವಾಮಿ ತುಂಬಾ ನುರಿತ ಸರ್ಜನ್. ಪ್ಲಾಸ್ಟಿಕ್ ಸರ್ಜರಿಯನ್ನು ಚೆನ್ನಾಗಿ ಮಾಡು ತ್ತಾರೆ ಅಂತ ತಿಳಿಯಿತು. ಅವರಿಂದ ನನ್ನ ಸಮಸ್ಯೆಗೆ ಪರಿಹಾರ ಸಿಗುತ್ತೆ ಅಂತ ಅವರನ್ನು ಕಂಡೆ. ಅವರು ಏನೂ ಹೇಳದೆ, ನಿಮ್ಮಲ್ಲಿಗೆ ಹೋಗಿ ಬಾ ಅಂದರು."

"ಹೆಣ್ಣಾಗಬೇಕು ಎಂಬ ಆಸೆ ನಿನಗೆ ಯಾವಾಗ ಶುರುವಾಯ್ತು ?"

"ನನಗೆ ಬುದ್ಧಿ ಬಂದಾಗಿನಿಂದ ಈ ಭಾವನೆ ಇದೆ ಸಾರ್. ಚಿಕ್ಕ ವಯಸ್ಸಿನಲ್ಲಿ ನನ್ನಮ್ಮ ನನಗೆ ನಿಕ್ಕರ್ ಶರ್ಟ್ ಹಾಕಿದರೆ, ಬೇಡ ಎಂದು ಕಳಚಿ ಎಸೆದು ಅಕ್ಕನ ಲಂಗ ಜಾಕೀಟುಗಳನ್ನು ಹಾಕುತ್ತಿದ್ದೆ. ನಮ್ಮ ತಾಯಿಗೆ ಈ ನನ್ನ ವರ್ತನೆಯಿಂದ ಸಿಟ್ಟು ಬಂದು ಬೈಯುತ್ತಿದ್ದರು. ಹೊಡೆಯುತ್ತಲೂ ಇದ್ದರು. ಆದರೂ ನಾನು ನನಗೆ ನಿಕ್ಕರ್ ಬೇಡ. ಲಂಗ ಹಾಕು ಎಂದು ಅತ್ತು ಹಠ ಮಾಡುತ್ತಿದ್ದೆ. ಆಡುವುದಕ್ಕೆ

ನಾನು ನನ್ನ ಜೊತೆ ಹುಡುಗರೊಂದಿಗೆ ಸೇರುತ್ತಿರಲಿಲ್ಲ. ಹುಡುಗಿಯರ ಆಟಗಳೇ ಇಷ್ಟವಾಗುತ್ತಿದ್ದವು. ಇದನ್ನು ನೋಡಿ ಬೇರೆಯವರು ಹೆಣ್ಣಿಗ ಎಂದು ನನ್ನನ್ನು ಹಾಸ್ಯ ಮಾಡಿದಾಗ, ನನಗೆ ಕೋಪ ಬರುವ ಬದಲು ಸಂತೋಷವಾಗ್ತಿತ್ತು. ನನ್ನ ಹೆಸರು ವಿಜಯಕುಮಾರ ಅಲ್ಲ. ವಿಜಯಕುಮಾರಿ ಎಂದು ಅಂದ್ಕೊಳ್ಳೋದಕ್ಕೆ ಖುಷಿ ಆಗೋದು, ಏನೋ ಒಂದು ತೃಪ್ತಿ ಸಿಗೋದು.

ಬೇರೆಯವರು ಏನೇ ಹೇಳ್ಲಿ, ಎಷ್ಟೇ ತಮಾಷೆ ಮಾಡ್ಲಿ, ಮನೇಲಿ ಅಪ್ಪ ಅಮ್ಮ ಎಷ್ಟೇ ಬೈದು ಶಿಕ್ಷೆ ಕೊಡಲಿ, ನಾನು ಹುಡುಗಿಯಂತೆಯೇ ಬೆಳೆದೆ. ಅಕ್ಕನಂತೆ ರಂಗೋಲಿ ಹಾಕುವುದನ್ನು ಕಲಿತೆ, ಕಸೂತಿ ಹಾಕಿದೆ. ಸಂಗೀತ ಕಲಿತೆ. ಆದರೆ ವೇಷಭೂಷಣಗಳಲ್ಲಿ ನನ್ನ ಆಸೆ ಆಸೆಯಾಗೇ ಉಳೀತು. 'ನೀನು ಏನು ಬೇಕಾದರೂ ಮಾಡು. ನಿನ್ನ ಹುಚ್ಚಾಟಗಳನ್ನೆಲ್ಲಾ ಸಹಿಸ್ಕೋತೀನಿ. ಆದರೆ ಹುಡುಗೀ ತರ ಬಟ್ಟೆ ಹಾಕ್ಕೊಂಡರೆ ನಾನು ಸಹಿಸೋಲ್ಲ' ಅಂತ ಅಪ್ಪ ಖಡಾಖಂಡಿತವಾಗಿ ಹೇಳಿದಾಗ, ನನಗೆ ಹುಡುಗನಂತೆ ಬಟ್ಟೆ ಹಾಕ್ಕೊಳ್ದೆ ಬೇರೆ ದಾರಿ ಇರಲಿಲ್ಲ."

ನನಗೇಕೆ ಈ ಭಾವನೆ ?

"ನನಗೇಕೆ ಹೀಗಾಗುತ್ತೆ. ಬೇರೆಯವರು ಇದ್ದ ಹಾಗೆ ನಾನೇಕೆ ಇಲ್ಲ. ಹುಡುಗರು ಹುಡುಗರ ಥರಾ ಆಡ್ತಾರೆ. ಹುಡುಗೀರು ಹುಡುಗೀರ ಥರ ವರ್ತಿಸುತ್ತಾರೆ. ನಾನು ಹುಡುಗನ ಥರಾ ಇದ್ದರೂ, ಹುಡುಗಿಯಂತೆ ಆಡ್ತೀನಲ್ಲ ಏಕೆ ಅಂತ ಹಗಲಿರುಳೂ ನನಗೆ ಯೋಚನೆ. ಆದರೆ ಅದಕ್ಕೆ ಉತ್ತರ ಸಿಕ್ಕಿಲ್ಲ. ವಯಸ್ಸಾಗುತ್ತ ಬಂದಂತೆ ನನಗೆ ಪುರುಷ ಲಕ್ಷಣಗಳು ಬರತೊಡಗಿದವು. ಮುಖದ ಮಾಂಸಖಂಡಗಳು ಗಟ್ಟಿ ಆದುವು. ಆದರೆ ಮನಸ್ಸು ಮಾತ್ರ ಬದಲಾಗಲಿಲ್ಲ. ನಾನು ಹೆಣ್ಣು ಅನ್ನೋ ಭಾವನೆ ಮತ್ತಷ್ಟು ಬಲವಾಯ್ತೇ ವಿನಃ ಕಡಿಮೆ ಆಗ್ಲಿಲ್ಲ. ಪ್ರಕೃತಿ ನನಗೆ ತೀರಾ ಅನ್ಯಾಯ ಮಾಡ್ತಿದೆ. ನಾನು ಹೆಣ್ಣು, ಈ ಗಂಡು ದೇಹವನ್ನಿಟ್ಟು ಕೊಂಡು ಏನು ಮಾಡಲಿ! ಇದರಿಂದ ನನಗೆ ಬಿಡುಗಡೆನೇ ಇಲ್ಲವೇ ಅಂತ ಕೊರಗೋದಿಕ್ಕೆ ಶುರು ಮಾಡ್ದೆ. ಶಸ್ತ್ರಕ್ರಿಯೆ ಮಾಡಿಸಿಕೊಂಡು. ನಾನು ಹೆಣ್ಣಾಗುವುದೊಂದೇ ದಾರಿ ಅಂತ ನಿರ್ಧಾರಕ್ಕೆ ಬಂದಿದ್ದೇನೆ ಸಾರ್. ಅದು ಎಷ್ಟರ ಮಟ್ಟಿಗೆ ಸಾಧ್ಯ ಅನ್ನೋದನ್ನು ನೀವೇ ಹೇಳ್ಬೇಕು. ಆಪರೇಷನ್ ಮಾಡೋ ಹಾಗೆ ಡಾ॥ ಶ್ರೀಕಂಠಸ್ವಾಮಿ ಅವರಿಗೆ ಶಿಫಾರಸು ಮಾಡಿ ಸಾರ್."

"ನಿನಗೆ ಯಾವ ರೀತಿಯ ಲೈಂಗಿಕ ಭಾವನೆಗಳು ಬರ್ತವೆ ? ಸುಂದರವಾದ ಹುಡುಗಿಯನ್ನು ಕಂಡರೆ ಏನು ಆಸೆಗಳು ಬರ್ತವೆ ?"

"ಸುಂದರವಾದ ಹುಡುಗಿಯನ್ನು ಕಂಡರೆ, ನನಗೂ ಅಂತಹ ಶರೀರ ಬೇಕು ಅನ್ನಿಸ್ತೆ. ಲೈಂಗಿಕ ಭಾವನೆಗಳಾಗಲೀ, ಉದ್ರೇಕವಾಗಲೀ ಆಗೋದಿಲ್ಲ. ಆದರೆ ಸುಂದರವಾದ ಹುಡುಗನನ್ನು ಕಂಡರೆ ಆಸೆಗಳು ಮೂಡುತ್ವೆ. ಮನಸ್ಸು ಉತ್ತೇಜಿತ ಗೊಳ್ಳುತ್ತೆ. ಅಂದರೆ ನನಗೆ ಸಲಿಂಗ ರತಿಯ ಭಾವನೆಗಳು ಬರ್ತವೆ ಅಂತ ತಪ್ಪು ತಿಳೀಬೇಡಿ ಸಾರ್. ಸುಂದರವಾದ ಯುವಕನನ್ನು ಕಂಡಾಗ, ನಾನು ಹೆಣ್ಣು, ಹೆಣ್ಣಿನಂತೆ ಆತನನ್ನು ಪ್ರೀತಿಬೇಕು. ನಾನು ಹೆಣ್ಣಾಗಿ ಆತನೊಂದಿಗೆ ಲೈಂಗಿಕ ಚಟುವಟಿಕೆ ನಡೆಸಬೇಕು ಅಂತ ಆಸೆ ಹುಟ್ಟುತ್ತೆ."

ಬಿಡುಗಡೆ ಬೇಕು

"ನಿನಗೆ ಆರೋಗ್ಯವಂತ ದೇಹವಿದೆ. ಅದರಲ್ಲಿ ಯಾವ ಊನವೂ ಇಲ್ಲ. ನಾವು ಚಿಕಿತ್ಸೆ ಕೊಟ್ಟು ನಿನ್ನ ಮನಸ್ಸು ಪರಿವರ್ತನೆ ಆಗೋ ಹಾಗೆ ಮಾಡಿದರೆ ಹೇಗೆ? ನಾನು ಗಂಡಿನಂತೆ ಬಾಳಬೇಕು ಅಂತ ಹೇಳುವಂತಾದರೆ, ನಿನಗೆ ಒಪ್ಪಿಗೆಯೇ?"

"ಬೇಡ ಸಾರ್. ಇದಕ್ಕೆ ನಾನು ಖಂಡಿತಾ ಒಪ್ಪೋದಿಲ್ಲ. ನಾನು ಗಂಡಾಗಲು ಖಂಡಿತ ಬಯಸೋದಿಲ್ಲ. ನಾನು ಹೆಣ್ಣಾಗಿ ಬಾಳಬೇಕು. ನನ್ನ ಶರೀರವನ್ನು ಬದಲಿಸಲು ಸಾಧ್ಯವಾದರೆ ಹೇಳಿ ಇಲ್ಲದಿದ್ದರೆ ನನ್ನ ಅದೃಷ್ಟವೇ ಇಷ್ಟು ಅಂತ ಸುಮ್ಮನಿರುತ್ತೇನೆ. ಹಗಲುಗನಸು ಕಾಣುತ್ತಾ ಇದ್ದು ಬಿಡುತ್ತೇನೆ. ನನಗೆ ನಿಮ್ಮ ಮನೋಚಿಕಿತ್ಸೆ ಬೇಡ. ಲಿಂಗ ಬದಲಾವಣೆ ಮಾಡುವಂಥ ಸರ್ಜನ್ ನಮ್ಮ ದೇಶ ದಲ್ಲಿ ಯಾರಿದ್ದಾರೆ ಹೇಳಿ. ನಾನು ಅವರಲ್ಲಿಗೆ ಹೋಗ್ತೇನೆ. ನನ್ನ ಜೀವವನ್ನು ಒತ್ತೆ ಇಟ್ಟಾದ್ರೂ, ಹಣ ಕೂಡಿಸಿ, ಈ ಆಪರೇಷನ್ ಮಾಡಿಸಿಕೊಳ್ತೇನೆ. ನೀವು ನನ್ನನ್ನು ಅರ್ಥ ಮಾಡಿಕೊಳ್ಳಿ ಸಾರ್. ಈ ಗಂಡು ಶರೀರದ ಬಂಧನದಿಂದ ನನಗೆ ಬಿಡುಗಡೆ ಮಾಡಿಸಿ. ನನ್ನ ಈ ಸಮಸ್ಯೆಯನ್ನು ಯಾರೂ ಅರ್ಥ ಮಾಡ್ಕೊಳ್ಳೋಲ್ಲ. ನನಗೆ ಪರಿಹಾರದ ಮಾರ್ಗವನ್ನು ಯಾರೂ ತೋರಿಸೋಲ್ಲ. ಆತ್ಮಹತ್ಯೆ ಮಾಡಿ ಕೊಳ್ಳಬೇಕು ಎನಿಸುತ್ತೆ. ನಮ್ಮಂಥವರನ್ನು ಆ ದೇವರು ಏಕೆ ಸೃಷ್ಟಿಸಿದ! ಯಾವ ತಪ್ಪಿಗೆ ನಮಗೆ ಈ ಶಿಕ್ಷೆ...?"

o o o o

ಈ ರೀತಿ, ವಿಜಯಕುಮಾರನಂತೆ ಲಿಂಗ ಬದಲಾವಣೆ ಬಯಸುವವರು ಪ್ರಪಂಚದೆಲ್ಲೆಡೆ ಇದ್ದಾರೆ. ಈ ವಿಶಿಷ್ಟವಾದ, ಆದರೆ ವಿಚಿತ್ರವಾದ ಆಸೆಯನ್ನು ಯಾರೊಂದಿಗೂ ಹೇಳಿಕೊಳ್ಳಲಾಗದೆ, ಅದನ್ನು ಪೂರೈಸಿಕೊಳ್ಳಲೂ ಆಗದೆ, ಪ್ರತಿಕ್ಷಣ

ಪ್ರತಿದಿನ ನಿರಾಶೆ ನೋವಿಂದ ಬಳಲುತ್ತಾರೆ. ಲಿಂಗ ಬದಲಾವಣೆಯ ಈ ಆಸೆ ಬರಲು ಏನು ಕಾರಣ, ಯಾವ ನ್ಯೂನತೆಯಿಂದ ಹೀಗಾಗುತ್ತದೆ ಎನ್ನುವುದಕ್ಕೆ ಸ್ಪಷ್ಟ ಉತ್ತರ ಲಭ್ಯವಿಲ್ಲ. ಲೈಂಗಿಕ ವಂಶವಾಹಿಗಳಲ್ಲಿ ಏನಾದರೂ ವ್ಯತ್ಯಾಸ ವಿರುತ್ತದೆಯೇ, ಮಿದುಳಿನ ಲಿಂಬಿಕ್ ವ್ಯವಸ್ಥೆಯಲ್ಲಿ ಏನಾದರೂ ಲೋಪ ವಿರುತ್ತದೆಯೇ. ಎಂದು ವಿಜ್ಞಾನಿಗಳ ತಲೆ ತುರಿಸಿಕೊಂಡಿದ್ದಾರೆ. ಯಾವುದೇ ಬಗೆಯ ಲೋಪ, ಕೊರತೆ ಇದೆ ಎನ್ನುವುದಕ್ಕೆ ಸಾಕ್ಷ್ಯ ಪುರಾವೆಗಳು ಸಿಕ್ಕಿಲ್ಲ. ಶರೀರ ಸರಿಯಾಗೇ ಇರುತ್ತದೆ ಎಂದರೆ ಜನನಾಂಗಗಳ ಅಂಗರಚನೆ, ಕ್ರಿಯಾವಿಧಾನ, ಚೋದನಿಕೆಗಳು ಎಲ್ಲಾ ಸರಿಯಾಗೇ ಇರುತ್ತವೆ. ಇದೊಂದು ಮಾನಸಿಕ ವೈಚಿತ್ರ್ಯ.

ತಾಯಿ–ಮಗು ಸಂಬಂಧ

ಮಗುವಿನ ಮನೋ ಲೈಂಗಿಕ ಬೆಳವಣಿಗೆ–ವಿಕಾಸದಲ್ಲಿ ಎಲ್ಲೋ ಏನೋ ಲೋಪವಾಗಿರುತ್ತದೆ ಎಂದು ಊಹಿಸಿ, ಮುಖ್ಯವಾಗಿ ತಾಯಿ ಮತ್ತು ಮಗುವಿನ ಸಂಬಂಧದತ್ತ ಮನೋ ವಿಜ್ಞಾನಿಗಳು ಬೆರಳು ಮಾಡುತ್ತಾರೆ. ಒಂದು ಥಿಯರಿ ಪ್ರಕಾರ, ತಾಯಿಯ ವ್ಯಕ್ತಿತ್ವ ದೋಷಪೂರ್ಣವಾಗಿರುತ್ತದೆ. ಆಕೆಗೆ ತನ್ನ ಸ್ತ್ರೀತನದ ಬಗ್ಗೆ ಗೊಂದಲವಿರುತ್ತದೆ. ಪುರುಷತನದ ಬಗ್ಗೆ ಪ್ರೀತಿ ಮತ್ತು ದ್ವೇಷ ಎರಡೂ ಇದ್ದು. ಮಾನಸಿಕವಾಗಿ ಪರಸ್ಪರ ವಿರುದ್ಧವಾದ ಧೋರಣೆಗಳಿರುತ್ತವೆ. ಇಂತಹ ತಾಯಿ, ತನಗೆ ಗಂಡುಮಗು ಹುಟ್ಟಿದಾಗ ರೋಮಾಂಚನಗೊಂಡರೂ, ಮನಸ್ಸಿನಾಳದಲ್ಲಿ ಇದು ತನ್ನ ಶರೀರದ ಒಂದು ಭಾಗವೇ ಅಂದರೆ ಹೆಣ್ಣೇ ಎಂದು ಭಾವಿಸುತ್ತಾಳೆ. ನೇರವಾಗಿಯೋ, ಪರೋಕ್ಷವಾಗಿಯೋ ಮಗುವನ್ನು 'ನೀನು ನನ್ನಂತೆ ಹೆಣ್ಣು. ನನ್ನಂತೆ ವರ್ತಿಸು' ಎಂದು ಪ್ರೋತ್ಸಾಹಿಸುತ್ತಾಳೆ ಎನ್ನಲಾಗುತ್ತದೆ. ಹೀಗಾಗಿ ಮಗು, ತನ್ನ ಶರೀರ ಅಪ್ಪನಂತಿದ್ದರೂ, ತಾನು ಅಮ್ಮನಂತೆ ಹೆಣ್ಣು ಎಂದು ನಂಬತೊಡಗುತ್ತದೆ. ಕ್ರಮೇಣ ಈ ನಂಬಿಕೆ ಸ್ಥಿರವಾಗಿ ಉಳಿಯುತ್ತದೆ ಎಂದು ಒಂದು ವಿವರಣೆ. ಹೆಣ್ಣು ಮಗುವಿನ ಎಲ್ಲ ಚಟುವಟಿಕೆಗಳನ್ನು ತೋರಿಸಲಾರಂಭಿಸುತ್ತದೆ.

ಕೆಲವು ಪ್ರಕರಣಗಳಲ್ಲಿ, ಹೆಣ್ಣು ಮಗುವಿಗಾಗಿ ಕಾತರಿಸುವ ತಾಯಿ, ಸಾಲಾಗಿ ಗಂಡು ಮಕ್ಕಳನ್ನು ಹೆತ್ತಾಗ ಅವುಗಳಲ್ಲಿ ಹೆಚ್ಚು ಮುದ್ದಾಗಿರುವ ಮಗುವನ್ನು, ಹೆಣ್ಣು ಮಗುವಿನಂತೆ ಆರೈಕೆ ಮಾಡತೊಡಗುತ್ತಾಳೆ. ಅದಕ್ಕೆ ಹೆಣ್ಣಿನಂತೆ ಉಡುಪು ತೊಡಿಸಿ, ಅಲಂಕಾರ ಮಾಡಿ ತೃಪ್ತಿಪಡತೊಡಗುತ್ತಾಳೆ. ಆಗ ಮಗುವಿನ ಮನಸ್ಸಿನಲ್ಲಿ ತಾನು ಹೆಣ್ಣಾದರೆ ತನ್ನ ತಾಯಿ ಹೆಚ್ಚು ಸಂತೋಷಪಡುತ್ತಾಳೆ, ತಾನು ಅವಳಿಗೆ ಹೆಚ್ಚು ಇಷ್ಟವಾಗುತ್ತೇನೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳುತ್ತದೆ. ಕ್ರಮೇಣ ತಾನು ಹೆಣ್ಣೇ ಎಂದು ನಂಬತೊಡಗುತ್ತದೆ ಎಂದು ತಿಳಿದು ಬರುತ್ತದೆ.

ಚಿಕಿತ್ಸೆ : ಈ ವಿಶಿಷ್ಟ ಸಮಸ್ಯೆಗೆ ಒಮ್ಮತದ ಯಶಸ್ವೀ ಚಿಕಿತ್ಸೆಯನ್ನು ಕೊಡಲು ವೈದ್ಯಕೀಯ ವಿಜ್ಞಾನಕ್ಕೆ ಸಾಧ್ಯವಾಗಿಲ್ಲ. ಒಂದು ಕಡೆ, ಕೆಲವು ಉತ್ಸಾಹೀ ಶಸ್ತ್ರಚಿಕಿತ್ಸಕರು, ಇಂತಹ ವ್ಯಕ್ತಿಗಳ ಬೇಡಿಕೆಗೆ ಅಸ್ತು ಎಂದು ಪ್ಲಾಸ್ಟಿಕ್ ಸರ್ಜರಿ ಮೂಲಕ ವೃಷಣಗಳನ್ನು, ಶಿಶ್ನವನ್ನು ತೆಗೆದುಹಾಕಿ, ಕೃತಕಯೋನಿಯನ್ನು ಅಳ ವಡಿಸುತ್ತಾರೆ. ಹಾರ್ಮೋನುಗಳನ್ನಿತ್ತು ಸ್ತನಗಳು ಬೆಳೆಯುವಂತೆ, ಇತರ ಹೆಣ್ಣು ಲಕ್ಷಣಗಳು ಬರುವಂತೆ ಮಾಡುತ್ತಾರೆ. ಈ ಎಲ್ಲ ಸರ್ಕಸ್‌ನಿಂದ ವ್ಯಕ್ತಿ ಹೆಣ್ಣಿನ ಆಕಾರವನ್ನು ಪಡೆಯಬಹುದಾದರೂ, ಹೆಣ್ಣಿನಂತೆ ನಡೆದುಕೊಳ್ಳಲಾರ. ಋತು ಸ್ರಾವ, ಗರ್ಭಧಾರಣೆ ಸಾಧ್ಯವಿಲ್ಲ. ಶಸ್ತ್ರಚಿಕಿತ್ಸೆಯಿಂದ ಹೆಣ್ಣಿನಂತಾದರೂ, ತೃಪ್ತಿ ಸಂತೋಷಗಳು ವ್ಯಕ್ತಿಗೆ ಸಿಕ್ಕುವುದಿಲ್ಲ. ಹಣ, ಶಸ್ತ್ರಚಿಕಿತ್ಸಾ ಸೌಲಭ್ಯಗಳು ವಿಪುಲ ವಾಗಿರುವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ, ಇಂತಹ ಶಸ್ತ್ರಕ್ರಿಯೆಗಳ ಪ್ರಯೋಗವನ್ನು ಮಾಡುತ್ತಿರುತ್ತಾರೆ. ಆದರೆ ಈ ಪ್ರಯೋಗಗಳು ಬೆಟ್ಟವನ್ನು ಅಗೆದು ಇಲಿಯನ್ನು ತೆಗೆದಂತೆ.

ಇನ್ನೊಂದು ಚಿಕಿತ್ಸೆಯಲ್ಲಿ, ದೀರ್ಘಕಾಲದ ಮನೋ ಚಿಕಿತ್ಸೆಯಿಂದ ಮತ್ತು ನಡೆವಳಿಕೆ ಚಿಕಿತ್ಸೆಯಿಂದ ವ್ಯಕ್ತಿಯ ಹೆಣ್ಣಾಗಬಯಸುವ ಆಸೆಯನ್ನು ನಿವಾರಿಸುವುದು; ಗಂಡಿನಂತೆ ವರ್ತಿಸಲು ಪ್ರೋತ್ಸಾಹಿಸುವುದು ಮಾಡಲಾಗುತ್ತದೆ. ಆದರೆ ಈ ಚಿಕಿತ್ಸೆ ಯಲ್ಲಿ ವ್ಯಕ್ತಿ ಎಷ್ಟರ ಮಟ್ಟಿಗೆ ಸಹಕರಿಸಿ ಯಶಸ್ವಿಯಾಗುತ್ತಾನೆ ಎನ್ನುವುದು ಚರ್ಚಾಸ್ಪದ.

ಆದ್ದರಿಂದ ಇಂತಹ ವ್ಯಕ್ತಿಗಳನ್ನು ಮನೆಯವರು, ಸ್ನೇಹಿತರು ಮತ್ತು ಸಂಬಂಧಪಟ್ಟ ಎಲ್ಲರೂ ಸಹಾನುಭೂತಿಯಿಂದ ನೋಡಬೇಕು. ಅವರ ಈ ವಿಶಿಷ್ಟ ಆದರೆ ವಿಚಿತ್ರವಾದ ಆಸೆ, ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಹಾಸ್ಯಮಾಡಿ ದೂರೀಕರಿಸಬಾರದು. ಅವರು ಸಾಧ್ಯವಾದಷ್ಟು ನೆಮ್ಮದಿಯಿಂದ ಬಾಳಲು ಅನು ಕೂಲ, ಅವಕಾಶಗಳನ್ನು ಮಾಡಿಕೊಡಬೇಕು. ಶಸ್ತ್ರಚಿಕಿತ್ಸೆ ಈ ಸಮಸ್ಯೆಗೆ ಸಮಂಜಸ ಉತ್ತರವಾಗಲಾರದು ಎಂಬುದನ್ನು ಗಮನಿಸಬೇಕು.

ಏಕಾಂತದ ಕೊರತೆ; ಈಡೇರದ ಬಯಕೆ

"ನಮಸ್ಕಾರ ಸಾರ್, ನನ್ನ ಹೆಸರು ಶ್ರೀಧರ ಅಂತ. ನಿನ್ನೆ ನೀವು ವಿಜ್ಞಾನ ಸಂಘದಲ್ಲಿ ಮಾಟ ಮಂತ್ರ ಮತ್ತು ಅನಾರೋಗ್ಯದ ಬಗ್ಗೆ ಮಾಡಿದ ಭಾಷಣ ಕೇಳಿದೆ ಸಾರ್. ತುಂಬಾ ಚೆನ್ನಾಗಿತ್ತು. ನೀವು ಉದಾಹರಣೆ ಸಹಿತ, ಜನ ಹೇಗೆ ಖಾಯಿಲೆ ಬಂದಾಗ, ಅದು ಹೇಗೆ ಬಂತು ಅಂತ ತಿಳಿದುಕೊಳ್ಳೋದಕ್ಕೆ ಪ್ರಯತ್ನ ಪಡದೆ, ತಕ್ಷಣ ಅದು ಯಾರೋ ಮಾಟ ಮಂತ್ರ ಮಾಡಿಸಿದ್ದರಿಂದ ಬಂದಿದೆ ಅಂತ ನಿರ್ಧಾರಕ್ಕೆ ಬಂದು ಬಿಡ್ತಾರೆ; ಆ ಮಾಟ ಮಂತ್ರ ತೆಗೆಸೋಕ್ಕೆ ಯಾವ ರೀತಿ ದುಡ್ಡು ವೆಚ್ಚ ಮಾಡ್ತಾರೆ. ಈ ಪ್ರಯತ್ನದಲ್ಲಿ ಅಮೂಲ್ಯವಾದ ವೇಳೆ ಹಾಳಾಗಿ, ರೋಗ ಇನ್ನಷ್ಟು ಜಾಸ್ತಿ ಆಗಿ, ಕಡೇ ಪ್ರಯತ್ನವಾಗಿ ಆಸ್ಪತ್ರೆಗೆ ಬರ್ತಾರೆ ಅನ್ನೋದನ್ನು ಕೇಳುವವರ ಮನಸ್ಸು ಮುಟ್ಟೋ ಹಾಗೆ ವಿವರಿಸಿದ್ರಿ. ನನ್ನ ಸ್ನೇಹಿತ ಒಬ್ಬ ಇದಾನೆ, ರಾಮಣ್ಣ ಅಂತ. ಏಳನೇ ಕ್ಲಾಸ್ ತನಕ ಓದಿ ಬಿಟ್ಟು ಬಿಟ್ಟ. ಬಡತನ, ಓದಿಸೋರು ಯಾರೂ ಇರ್ಲಿಲ್ಲ. ಈಗ ಹಾಲಿನ ವ್ಯಾಪಾರ ಮಾಡ್ತಾನೆ. ಎರಡು ಎಮ್ಮೆ ಒಂದು ಹಸು ಕಟ್ಟಿದಾನೆ. ತಕ್ಕಮಟ್ಟಿಗೆ ಅನುಕೂಲವಾಗಿದಾನೆ. ಆರು ತಿಂಗಳ ಹಿಂದೆ ಮದುವೆ ಮಾಡ್ಕೊಂಡ. ಬಡವರಾದರೂ ಒಳ್ಳೇ ಮನೆತನದ ಹುಡುಗಿ. ನೋಡೋದಿಕ್ಕೆ ಲಕ್ಷಣವಾಗಿದಾಳೆ. ತನ್ನ ಮಾತು ನಡವಳಿಕೆಯಿಂದ ಎಲ್ಲರ ಮೆಚ್ಚಿಕೆ ಸಂಪಾದಿಸಿದಾಳೆ. ಸುಖವಾದ ಸಂಸಾರ ಅನ್ಬೇಕು. ಆದರೆ ರಾಮಣ್ಣನಿಗೆ ವಿಚಿತ್ರವಾದ ತೊಂದರೆ ಶುರುವಾಗಿದೆ. ತನ್ನ ಮನೇಲಿ ಹೆಂಡತಿಯೊಂದಿಗೆ ಕೂಡೋದಿಕ್ಕೆ ಆಗ್ತಾ ಇಲ್ಲವಂತೆ. ಜನನಾಂಗ ಉದ್ರೇಕವಾಗೋದೇ ಇಲ್ಲವಂತೆ. ಮಾವನ ಮನೆಗೆ ಹೋದರೆ, ಅಲ್ಲಿ ಹೆಂಡತಿಯೊಂದಿಗೆ ಸಂಪರ್ಕ ಮಾಡೋದಿಕ್ಕೆ ಯಾವ ತೊಂದರೇನೂ ಇಲ್ಲ ಅಂತಾನೆ. ಹಾಗೇ ಅಂತ ಹೆಂಡತಿಯೊಂದಿಗೆ ಮಾವನ ಮನೇಲೇ ಇರೋಕ್ಕಾಗುತ್ತಾ ಅಂತ ಬೇಜಾರು ಪಡ್ತಾನೆ. ಅವನಿಗೆ ಈ ಮಾಟ ಮಂತ್ರದಲ್ಲಿ ನಂಬಿಕೆ. ತನಗೆ ಆಗ್ದೇ ಇರೋರು ಯಾರೋ ಮಾಟ ಮಾಡ್ಸಿದ್ದಾರೆ. ಮಾಟ ಮಾಡ್ಸಿ, ಅದನ್ನು ತನ್ನ ಮನೆ ಸುತ್ತ ಮುತ್ತ, ಯಾವುದೋ ಒಂದು ಜಾಗದಲ್ಲಿ

ಹೂತಾಕಿದರೆ. ಅದರ ಪ್ರಭಾವದಿಂದ ನನಗೆ ಷಂಡತನ ಬಂದಿದೆ. ಪಕ್ಕದ ಊರಿನಲ್ಲಿರೋ ಮಾವನ ಮನೆಗೆ ಹೋದಾಗ ಅದರ ಪ್ರಭಾವ ಇರೋದಿಲ್ಲ ಅಂತ ನಂಬಿದಾನೆ. ಶಾಸ್ತ್ರದವರನ್ನು ಕೇಳಿದ್ದಕ್ಕೆ ಅವರೂ ಅದನ್ನೇ ಹೇಳಿದರಂತೆ. ಯಾವುದೋ ದುಷ್ಟ ಶಕ್ತಿ ನಿನ್ನ ಮನೇಲಿ ಸೇರ್ಕೊಂಡಿದೆ. ಸರಿಯಾದ ಮಂತ್ರ ವಾದೀನ ಕರೆಸಿ, ದಿಗ್ಬಂಧನ ಮಾಡಿಸು. ದುಷ್ಟ ಶಕ್ತಿಗೆ ತೃಪ್ತಿ ಆಗೋ ಹಾಗೆ ಕುರೀನೋ ಕೋಳೀನೋ ಬಲಿ ಕೊಡಿಸು ಅಂದರಂತೆ. ಅವನು ಅವರು ಹೇಳಿದ್ದ ನ್ನೆಲ್ಲಾ ನಂಬ್ಕೊಂಡು, ಮಂತ್ರ ತಂತ್ರ ಎಲ್ಲಾ ಮಾಡ್ಸಿದ್ದಾನೆ, ಏನೂ ಪ್ರಯೋಜನ ಕಂಡುಬರ್ಲಿಲ್ಲ. ನೀವು ಮನೆ ಬದಲಾಯಿಸಿ ಬಿಡಿ. ಗಂಡ ಹೆಂಡತಿ ಹೆಸರಿಗೆ ಈಗಿರೋ ಮನೆ ಆಗಿ ಬರ್ತಾ ಇಲ್ಲ ಅಂದರಂತೆ. ರಾಮಣ್ಣ ಬೇರೆ ಮನೆ ಹುಡುಕ್ತಾ ಇದ್ದಾನೆ. ಸಿಕ್ಕಿಲ್ಲ ; ಈ ಊರಂಥಾ ಸಣ್ಣ ಜಾಗದಲ್ಲಿ ಬೇಕು ಅಂದಾಕ್ಷಣಕ್ಕೆ ಮನೆ ಸಿಕ್ಕೊಲ್ಲ. ಏನ್ಮಾಡೋದು ಅಂತ ತಲೆ ಮೇಲೆ ಕೈ ಹೊತ್ಕೊಂಡು ಕೂತ್ಕೊಂಡಿದ್ದಾನೆ. ಮಾಟ ಮಂತ್ರ ಮಾಡಿ ಈ ರೀತಿ ಒಬ್ಬನ್ನ ಷಂಡನನ್ನಾಗಿ ಮಾಡೋದು ಸಾಧ್ಯವೇ ಡಾಕ್ಟರೇ ? ಅಲ್ದೆ ಇಲ್ಲಿ ಇನ್ನೂ ಒಂದು ವಿಚಿತ್ರ. ಈ ಷಂಡತನ ಅವನು ತನ್ನ ಮನೇಲಿದ್ದಾಗ ಮಾತ್ರ ಇರುತ್ತೆ. ಇದಕ್ಕೆ ನೀವೇನೂ ಹೇಳ್ತೀರಾ ?"

ತಿಳಿದುಕೊಳ್ಳುವ ಪ್ರವೃತ್ತಿ

ಶ್ರೀಧರ ಹೇಳುವುದನ್ನೆಲ್ಲಾ ಮನಸ್ಸು ಕೊಟ್ಟು ಕೇಳಿದ ಡಾ॥ ಮೂರ್ತಿಯವರು, "ಶ್ರೀಧರ್, ನಿಮ್ಮ ಸ್ನೇಹಿತನನ್ನು ಕರೆದುಕೊಂಡು ಬನ್ನಿ, ಅವನೊಂದಿಗೆ ಮಾತನಾಡಿ, ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳೋಣ. ಆಮೇಲೆ ಈ ನಿರ್ದಿಷ್ಟ ಬಗೆಯ ಷಂಡತನಕ್ಕೆ ಏನು ಕಾರಣ ಅನ್ನೋದನ್ನು ಪತ್ತೆ ಮಾಡೋಣ. ನನ್ನ ಭಾಷಣ ಕೇಳಿದ ಮೇಲೆ, ನಿಮ್ಮ ಸುತ್ತ ಮುತ್ತ ನಡೆಯುವ ಪ್ರಕರಣದ ಬಗ್ಗೆ ನೀವು ಆಸಕ್ತಿ ವಹಿಸಿದ್ದು ಮತ್ತು ಇದು ಹೇಗೆ, ಯಾವ ರೀತಿ ಆಗುತ್ತೆ ಅಂತ ತಿಳಿದು ಕೊಳ್ಳೋದಿಕ್ಕೆ ಇಷ್ಟಪಟ್ಟಿದ್ದರಿಂದ ನನಗೆ ತುಂಬ ಸಂತೋಷ ಆಗಿದೆ. ನಿಮ್ಮ ಹಾಗೆ ಪ್ರಶ್ನೆ ಮಾಡುವ, ಕೇಳಿ ತಿಳಿದುಕೊಳ್ಳೋ ಪ್ರವೃತ್ತಿ ಎಲ್ಲರಲ್ಲೂ ಬೆಳೀಬೇಕು. ಆಗ ಮಾತ್ರ ಮೂಢ ನಂಬಿಕೆಗಳನ್ನು ನಾವು ಬಿಡೋದಿಕ್ಕೆ ಸಾಧ್ಯವಾಗುತ್ತೆ" ಎಂದು ಶ್ರೀಧರನ ಮನೋಭಾವವನ್ನು ಡಾ॥ ಮೂರ್ತಿ ಮೆಚ್ಚಿಕೊಂಡರು.

"ಖಂಡಿತ ರಾಮಣ್ಣನನ್ನು ಕರೆದುಕೊಂಡು ಬರ್ತೇನೆ ಸಾರ್. ತನಗೆ ಇರೋ ಈ ತೊಂದರೆ ಬಗೆಹರಿಯೋದಾದರೆ, ಅವನು ಎಲ್ಲಿಗಾದರೂ ಬರಲು ಸಿದ್ಧ ; ಯಾರನ್ನು ಕಾಣೋದಿಕ್ಕೂ ಸಿದ್ಧ. ನೀವು ಎಷ್ಟು ಹೊತ್ತಿಗೆ ಬಿಡುವಾಗಿರ್ತೀರಾ ಸಾರ್ ?"

"ಸಂಜೆ ಐದು ಗಂಟೆಗೆ ಒಂದು ಕಾರ್ಯಕ್ರಮ ಇದೆ. ಮಧ್ಯಾಹ್ನ ಎರಡು ಗಂಟೆಗೆ ಬಂದುಬಿಡಿ"

○ ○ ○ ○

"ಹೇಳಿ ರಾಮಣ್ಣ. ನೀವು ಸಮಸ್ಯೆ ಏನು? ನಿಮಗೇನಾಗುತ್ತದೆ? ಹೀಗಾಗಲು ಕಾರಣ ಏನು ಎಲ್ಲವನ್ನೂ ವಿವರವಾಗಿ ಹೇಳಿ."

"ನನ್ನ ಸ್ನೇಹಿತ ಶ್ರೀಧರ ನಿಮಗೆ ನನ್ನ ತೊಂದರೆ ಏನು ಅಂತ ಹೇಳಿದಾನೆ ಸಾರ್. ನನಗೆ ಆರು ತಿಂಗಳ ಹಿಂದೆ ಮದುವೆ ಆಯಿತು. ತಂದೆ ತಾಯಿ ನೋಡಿ ಒಪ್ಪಿ, ನಾನೂ ಒಪ್ಪಿ ಗಿರಿಜಳನ್ನ ಮದುವೆ ಮಾಡ್ಕೊಂಡೆ. ನನಗೆ ಮದುವೆಗೆ ಮೊದಲು ಅಥವಾ ಆಮೇಲೆ ಯಾವ ಕೆಟ್ಟ ಅಭ್ಯಾಸವೂ ಇಲ್ಲ: ಬೇರೆ ಯಾವ ಹೆಂಗಸಿನ ಸಹವಾಸವನ್ನೂ ಮಾಡಿಲ್ಲ. ಬೀಡಿ ಸಿಗರೇಟ್ ಸೇದೋದಾಗಲೀ, ಹೆಂಡ ಸಾರಾಯಿ ಕುಡಿಯೋದಾಗಲೀ, ಇಸ್ಪೀಟು ಜೂಜಾಡೋದಾಗಲೀ, ಯಾವೊಂದು ಕೆಟ್ಟ ಚಟಾನೂ ನನಗಿಲ್ಲ. ಸ್ಕೂಲಿಗೆ ಹೋಗ್ತಿದ್ದ ವಯಸ್ನಿಂದ್ಲೇ, ಗರಡೀ ಮನೆಗೂ ಹೋಗ್ತೀನಿ. ಸಾಮು ಮಾಡಿ, ಕಟ್‌ನಿಟ್ಟಾಗಿ ಈ ಶರೀರಾನ ನೋಡ್ಕೊಂಡಿದೀನಿ. ಗರಡಿ ಮನೆ ಗುರುಗಳು, 'ನೋಡ್ರಲೇ, ರಾಮಣ್ಣನಂಗೆ ನಿಯತ್ತಿನಿಂದ ಬಂದು, ದಿನಾ ಬೆವರು ಸುರ್ಸಿ, ಮೈ ಗಟ್ಟಿ ಆಯ್ತುದೆ. ಗರಡೀ ಮನೇಗೆ ಬಂದದ್ದಕ್ಕೆ ಸಾರ್ಥಕ ಆಯ್ತುದೆ' ಅಂತ ಬೇರೆಯೋರ್ಗೆ ಹೇಳ್ತಾರೆ. ಅಂಥಾ ನನಗೆ ಷಂಡತನ ಬರೋಹಂಗೆ ಮಾಡಿಬಿಟ್ಟವರೆ ಯಾರೋ ಕೆಟ್ಟನನ್ನ ಮಕ್ಕಳು. ನಾನು ಅವರಿಗೆ ಏನು ಅನ್ಯಾಯ ಮಾಡಿದ್ದೆ ಅಂತ, ನನಗೆ ಹಿಂಗೆ ಮಾಡ್ಸಿದರೋ, ಆ ಪರಮಾತ್ಮನೇ ಬಲ್ಲ.

ಪೂಜೆ, ಮಂತ್ರ

ನಾನು ಒಬ್ಬರಿಗೆ ಬೈದೋನಲ್ಲ, ಒಬ್ಬರೊಂದಿಗೆ ಜಗಳಾ ಆಡ್ದೋನಲ್ಲ ಸಾರ್. ಎಲ್ಲರಿಗೆ ನನ್ನ ಕೈಲಾದ ಸಹಾಯ ಮಾಡ್ತೀನಿ. ನನ್ನ ಕೆಲಸ ಏನು, ನನ್ನ ಬದುಕು ಏನು, ಅಷ್ಟು ನೋಡ್ಕೊಂಡು, ಸಂತೋಷವಾಗಿ ಜೀವನ ಮಾಡ್ಬೇಕು ಅಂತ ಆಸೆ ಇಟ್ಕೊಂಡಿದ್ದೆ. ಎಲ್ಲಾ ಮಣ್ಣು ಪಾಲಾಯಿತು. ಕೈ ಹಿಡಿದ ಹೆಂಡತಿ ಎದುರು ಅವಮಾನ ಆಗೋ ಹಾಗೆ ಆಯ್ತು. ಗರಡಿ ಮನೆಗೆ ಹೋಗಿ ಸಾಮು ಮಾಡಿದವರು ನೀವು ಇಷ್ಟೇನಾ ನಿಮ್ಮ ಶಕ್ತಿ ಅಂತ ಅವಳೇನಾದರೂ ಅಂದ್‌ಬಿಟ್ರೆ, ನಾನು ಪ್ರಾಣ ಕಳಕೊಳ್ಳೋದೇ ಬಾಕಿ. ಪಾಪ ಗಿರಿಜ ಒಳ್ಳೇ ಹುಡುಗಿ. ಬಹಳ ಮೆತುವು. ನನಗೆ ಹೀಗಾದ್ರೂ ಕೂಡ, ತುಟಿ ಎರಡು ಮಾಡಿಲ್ಲ. ನಾನು ಯೋಚ್ನೆ

ಮಾಡೋದನ್ನ ನೋಡಿ, 'ಅಯ್ಯೋ ಬಿಡಿ, ಇದಕ್ಕೆಲ್ಲಾ ಇಷ್ಟೊಂದು ಹಚ್ಕೊ ತಾರಾ ? ನಮಗೇನೋ ಗ್ರಹಚಾರ. ನಮ್ಮನೇಲಿ ನೀವು ಚೆನ್ನಾಗಿರ್ತೀರಾ. ನನಗೆ ಎಷ್ಟೊಂದು ಸುಖ ಕೊಡ್ತೀರಾ. ಇಲ್ಲಿ ನಿಮ್ಮ ಮನೇಲಿ ಆಗೋದಿಲ್ಲ ಅಂದ್ರೆ. ನಿಮ್ಮ ತಪ್ಪೇನೂ ಇಲ್ಲ. ಸ್ವಲ್ಪ ದಿನದಲ್ಲೇ ಸರಿ ಹೋಗ್ಬೋದು ಬಿಡಿ. ನೀವು ನಗ್ ನಗ್ತಾ ಇರಿ. ನನಗೆ ಅಷ್ಟೇ ಸಾಕು' ಅಂತಾಳೆ. ಮೂರು ತಿಂಗಳಾಯ್ತು. ಆರು ತಿಂಗಳಾಯ್ತು. ನಾನು ಈ ಸೀಮೆ ಸುತ್ತಾ ಇರೋ ಮಂತ್ರವಾದಿ, ಪಂಡಿತರನ್ನು ಒಬ್ಬರನ್ನೂ ಬಿಡದ ಹಾಗೆ ನೋಡಿಬಿಟ್ಟಿದ್ದೀನಿ. ಅವರು ಹೇಳಿದ ಪೂಜೆ, ಮಂತ್ರ ಎಲ್ಲ ಮಾಡಿಸ್ದೆ. ಕಡೇಗೆ ಈಗ ಮನೆ ಬದಲಾಯಿಸಿ ನೋಡೋಣ ಅಂತ ಪ್ರಯತ್ನ ಪಡ್ತಾ ಇದ್ದೀನಿ. ದೇವರ ದಯದಿಂದ ಮನೆ ಒಂದು ಸಿಕ್ಕಿಬಿಟ್ರೆ, ಎಲ್ಲ ಸರಿಹೋಯ್ತದೇನೋ ಅಂತ ಆಸೆ."

"ರಾಮಣ್ಣ, ನಿಮ್ಮ ಮನೇಲಿ, ನೀನು ನಿನ್ನ ಹೆಂಡತಿ ಜೊತೆ ಲೈಂಗಿಕ ಕ್ರಿಯೆ ನಡೆಸೋದಕ್ಕೆ ಪ್ರಯತ್ನಪಟ್ಟರೆ ಏನಾಗುತ್ತೆ ಹೇಳು ?"

"ಏನು ಹೇಳ್ಲಿ ಸಾರ್, ಅದು ಉದ್ರೇಕ ಆಗೋದೇ ಇಲ್ಲ. ಎಷ್ಟು ಹೊತ್ತು ಕಾಯ್ದರೂ, ಪ್ರಯೋಜನ ಆಗೋಲ್ಲ. ಅದೇ ನಮ್ಮ ಮಾವನ ಮನೇಗೆ ಹೋದರೆ ಅವಳು ಹತ್ರ ಒರ್‍ತಿದ್ದ ಹಾಗೆ, ಬಂದು ಪಕ್ಕದಲ್ಲಿ ಕುಳಿತುಕೊಳ್ತಿದ್ದ ಹಾಗೆ, ನನಗೆ ಉದ್ರೇಕವಾಗ್ಬಿಟ್ಟಿರುತ್ತೆ."

ದೊಡ್ಡ ಸಂಸಾರ

"ಇಲ್ಲಿ ನಿಮ್ಮ ಮನೇಲಿ ಯಾರಾರಿದ್ದೀರ ?"

"ನಮ್ಮದು ಸ್ವಲ್ಪ ದೊಡ್ಡ ಸಂಸಾರ ಸಾರ್. ನಮ್ಮ ತಂದೆಗೆ ಮೂರು ಗಂಡು ಮಕ್ಕಳು ; ನಾಲ್ಕು ಹೆಣ್ಣು ಮಕ್ಕಳು. ನಾನೇ ದೊಡ್ಡ ಮಗ. ನಮ್ಮಪ್ಪನಿಗ ವಯಸ್ಸಾಗಿಹೋಗಿದೆ. ನಮ್ಮ ತಾಯಿ ಅವನಿಗೆ ಎರಡನೇ ಹೆಂಡತಿ. ಮದುವೆ ಯಾದ ಆರು ವರ್ಷಕ್ಕೆ ಮೊದಲ್ನೇ ಹೆಂಡತಿ ಸತ್ತಳಂತೆ. ಅವಳಿಗೆ ಮಕ್ಕಳಿರಲಿಲ್ಲ. ಒಬ್ಬ ತಂಗೀಗೆ ಮದುವೆ ಮಾಡಿದ್ದೀನಿ, ಇನ್ನೊಬ್ಬಳು ಆಗಲೇ ಮದುವೆಗೆ ಬಂದವಳೆ."

"ಈಗ ನೀವಿರೋ ಮನೆ ಸ್ವಂತದ್ದಾ ಅಥವಾ ಬಾಡಿಗೇದಾ ? ಎಷ್ಟು ದೊಡ್ಡದಾಗಿದೆ ?"

"ಸ್ವಂತ ಮನೆ ಸಾರ್. ನಮ್ಮ ತಾತ ಕಟ್ಟಿದ್ದು. ಅಷ್ಟೇನೂ ದೊಡ್ಡದಲ್ಲ."

"ನಿಮ್ಮ ಮನೇನ ನಾನು ನೋಡಬೇಕಲ್ಲ ರಾಮಣ್ಣ"

"ಓ ಅದಕ್ಕೇನು ನಡೀರಿ. ನೀವು ನಮ್ಮ ಮನೇಗೆ ಬರೋದು ನಮ್ಮ ಭಾಗ್ಯ.

ಆದರೆ ನಮ್ಮ ಮನೆ ನೋಡೋವಂಥಾದ್ದೇನಲ್ಲ" ಆತ ಸಂಕೋಚಪಟ್ಟ. ಆತನಿಗೆ ಸಮಾಧಾನ ಹೇಳಿ ಡಾ॥ ಮೂರ್ತಿ ಆತನ ಮನೆಗೆ ಹೊರಟರು.

ಹಳೇ ಕಾಲದ ಮಾದರಿಯ ಮನೆ. ಬಾಗಿಲು ದಾಟಿದ ಕೂಡಲೇ, ದೊಡ್ಡ ಅಂಗಳ. ಅಲ್ಲಿ ಎಮ್ಮೆ ಹಸುಗಳನ್ನು ಕಟ್ಟಿದ್ದರು. ಒಂದೆಡೆ ಹುಲ್ಲು, ಇನ್ನೊಂದೆಡೆ ಸೌದೆ ಪೇರಿಸಿದ್ದರು. ಅಂಗಳ ದಾಟಿದ ಮೇಲೆ ಒಂದು ಸಣ್ಣ ಹಾಲ್. ಎಡಪಕ್ಕದಲ್ಲಿ ಅಡುಗೆ ಮನೆ. ಬಲ ಪಕ್ಕದಲ್ಲಿ ಒಂದು ಚಿಕ್ಕ ಗೂಡಿನಂತಹ ಉಗ್ರಾಣ, ಹಿಂದಕ್ಕೆ ಹಿತ್ತಲು. ಹಾಲಿನಲ್ಲ ಚಾಪೆ ಹಾಕಿ, ಕುಳಿತುಕೊಳ್ಳಿ ಎಂದು ಉಪಚರಿಸಿದ. ತನ್ನ ಹೆಂಡತಿ, ತಂದೆ ತಾಯಿಯರನ್ನು ಕರೆದು ಪರಿಚಯ ಮಾಡಿಸಿದ. ತಟ್ಟೆಯಲ್ಲಿ ಬಾಳೆಹಣ್ಣು ಹಾಲು ತಂದಿಟ್ಟ. ಬಾಯಿ ತುಂಬಾ ಉಪಚಾರ ಮಾಡಿದ, ಶಿಷ್ಟಾಚಾರದ ಮಾತುಗಳಾದ ಮೇಲೆ, ಡಾ॥ ಮೂರ್ತಿ ರಾಮಣ್ಣನನ್ನು "ಮನೆ ತುಂಬಾ ಚಿಕ್ಕದಲ್ಲ, ನೀವು ಗಂಡ ಹೆಂಡತಿ ಎಲ್ಲಿ ಮಲಗ್ತೀರಿ ?" ಎಂದು ವಿಚಾರಿಸಿದರು. ಆತ ಮುಜುಗರ ಪಡುತ್ತಾ, 'ಇಲ್ಲೇ ಈ ಹಾಲ್‌ನಲ್ಲೇ' ಎಂದ. ಅವರೆಲ್ಲಾ ಎಲ್ಲಿ ಮಲಗ್ತಾರೆ ಎಂದಾಗ ಅವರೂ ಇಲ್ಲೇ ಮಲಗ್ತಾರೆ ಎಂದ. ಒಂದು ಬಿದಿರಿನ ತಡಿಕೆಯನ್ನು ಮರೆ ಮಾಡಿ ಗಂಡಹೆಂಡತಿಗೆ ಸ್ವಲ್ಪ ಪ್ರೈವೆಸಿ ಸಿಗುವ ಹಾಗೆ ಮಾಡಲಾಗುತ್ತದೆ ಎಂದು ತಿಳಿಯಿತು. ಡಾ॥ ಮೂರ್ತಿ ತಾನಿನ್ನು ಬರುತ್ತೇನೆ ಎಂದು ಎದ್ದರು. ರಾಮಣ್ಣ ಅವರನ್ನು ಹಿಂಬಾಲಿಸಿದ.

ನಾಚಿಕೆ

ಮತ್ತೆ ಐ. ಬಿ. ಯ ರೂಮಿನಲ್ಲಿ ಕುಳಿತು ಡಾ॥ ಮೂರ್ತಿ ನುಡಿದರು, "ರಾಮಣ್ಣ ನೀನು ಹೊಸದಾಗಿ ಮದುವೆಯಾದವನು. ಹೆಂಡತಿಯೊಂದಿಗೆ ಏಕಾಂತದಲ್ಲಿ ಮಾತನಾಡಬೇಕು, ಒಡನಾಡಬೇಕು ಅಂತ ಆಸೆ ಇಲ್ಲವೇ ? ಈ ಅನುಕೂಲ ನಿನಗಿದೆಯೆ ?"

"ಎಲ್ಲಿ ಬರಬೇಕು ಸಾರ್. ನಮ್ಮ ಮನೆ ನೋಡಿದಿರಲ್ಲ. ಕೋಳಿ ಗೂಡು. ಪಿಸುಗುಟ್ಟಿದರೂ ಎಲ್ಲರಿಗೆ ಕೇಳಿಸುತ್ತೆ."

"ನೀವು ಮಲಗೋದಕ್ಕೆ ಪ್ರತ್ಯೇಕವಾದ ರೂಮಿಲ್ಲ. ಒಂದು ತಡಿಕೆ ಮರೆ ಮಾಡಿಕೊಳ್ತೀರಿ. ಹೀಗೆ ಮಲಗೋದಿಕ್ಕೆ ಏನನ್ಸುತ್ತೆ ?"

"ಸಾರ್ ನಿಜ ಹೇಳಬೇಕಂದ್ರೆ, ನನಗೆ ಸಾಯೋವಷ್ಟು ನಾಚಿಕೆ ಆಗುತ್ತೆ. ಪಕ್ಕದಲ್ಲೇ ತಂಗಿ ತಾಯಿ ಮಲಗಿರ್ತಾರೆ. ನಾವು ಜೋರಾಗಿ ಉಸಿರುಬಿಟ್ಟರೂ, ಅವರಿಗೆ ಕೇಳಿಸತ್ತೆ. ಗಿರಿಜಳ ಪಕ್ಕದಲ್ಲಿ ಮಲಗಿಕೊಂಡರೆ. ನಾವು ಮಾತಾಡೋದು ಮತ್ತೆ ಸಂಭೋಗ ಮಾಡುವಾಗ ಏನಾದ್ರೂ ಶಬ್ದ ಆದರೆ ಅದೂ ಅವರಿಗೆ ಕೇಳಸತ್ತೆ

ಅಂತ ನಾಚಿಕೆ ಆಗತ್ತೆ. ಶರೀರವನ್ನೆಲ್ಲಾ ಒಂದು ಹಿಡಿ ಮಾಡ್ಕೊಂಡು ಮಲಗ್ತೀನೆ. ಪಾಪ ಅವಳಿಗೆ ನನಗಿಂತಲೂ ಜಾಸ್ತಿ ನಾಚಿಕೆ. ಆಸೆಯಾಗಿ ನಾನೇನಾದರೂ ಸ್ವಲ್ಪ ಹತ್ತಿರ ಹೋದ್ರೆ. ಅವಳ ಮೈ ಮುಟ್ಟಿದರೆ ಸಾಕು, ಅಯ್ಯೋ ಮೆಲ್ಲಗೆ, ಕೇಳಿ ಸ್ಕೊಂಡಾರು ಅಂತಾಳೆ. ಆಗ ಮನಸ್ನಲ್ಲಿ ಹುಟ್ಟಿದ ಆಸೆ ಬಯಕೆಗಳೆಲ್ಲ ಅಲ್ಲೇ ಸತ್ತು ಹೋಗ್ತವೆ. ನಮ್ಮ ಆಸೆ ಬಯಕೆಗಳೆಲ್ಲ ತೀರೋದು ನಾವು ಅವಳ ಮನೇಗೆ ಹೋದಾಗ, ಅಳಿಯ ಬಂದರು ಅಂತ ಒಂದು ರೂಮನ್ನೇ ನಮಗೆ ಬಿಟ್ಟುಕೊಡ್ತಾರೆ. ಅವಳ ತಾಯಿ ಮನೆ ದೊಡ್ಡದಾಗಿದೆ. ಅಲ್ಲಿ ನಾವು ಏನು ಮಾಡಿದರೂ ಯಾರಿಗೂ ಕೇಳಿಸೊಲ್ಲ. ಮೈ–ಮನಸ್ಸು ಉಲ್ಲಾಸವಾಗಿರತ್ತೆ."

o o o o

ಸೂಕ್ತ ರೀತಿಯಲ್ಲಿ ಲೈಂಗಿಕ ಚಟುವಟಿಕೆ ನಡೆಸಲು. ಅದರಿಂದ ಸಂತೋಷ ತೃಪ್ತಿ ಪಡೆಯಲು ಸೂಕ್ತ ಅನುಕೂಲಕರ ವಾತಾವರಣವೂ ಮುಖ್ಯ. ಗಂಡ ಹೆಂಡತಿಯರಿಗೆ ಸಾಕಷ್ಟು ಪ್ರೈವೆಸಿ ಇರಬೇಕು. ಏಕಾಂತವಾಗಿ ಪರಸ್ಪರ ಮಾತಾಡಲು ಒಡನಾಡಲು ಸೌಲಭ್ಯವಿರಬೇಕು. ವಾತಾವರಣದಲ್ಲಿ ಅಡಚಣೆಗಳಿದ್ದು, ಪ್ರೈವಸಿ ಇಲ್ಲದೇ ಹೋದರೆ, ಗಂಡನಾಗಲೀ ಹೆಂಡತಿಯಾಗಲೀ ಸಂಕೋಚದ ಸ್ವಭಾವದವರಾದರೆ, ಅಂತಹ ವಾತಾವರಣದಲ್ಲಿ ಲೈಂಗಿಕ ಚಟುವಟಿಕೆ ನಡೆಸುವುದು ಅವರಿಗೆ ಅಸಾಧ್ಯವಾಗುತ್ತದೆ. ಮಾನಸಿಕವಾದ ಹಿಂಜರಿಕೆಯಿಂದ ನರಮಂಡಲದ ಮೇಲೆ ಪರಿಣಾಮವಾಗಿ, ಶಿಶ್ನ ಉದ್ರೇಕಗೊಳ್ಳುವುದಿಲ್ಲ. ರಾಮಣ್ಣನ ತೊಂದರೆಗೆ ಇದೇ ಕಾರಣವಾಗಿತ್ತು.

ಡಾ॥ ಮೂರ್ತಿ ಇದನ್ನು ಅವನಿಗೆ ವಿವರಿಸಿದರು. ಮಾಟ ಮಂತ್ರಕ್ಕೂ ಅವನ ಷಂಡತನಕ್ಕೂ ಯಾವ ಸಂಬಂಧವೂ ಇಲ್ಲ. ಈಗಾಗಲೇ ಆತ ನಿರ್ಧರಿಸಿರುವಂತೆ, ಬೇರೆ ಒಂದು ಮನೆ ಮಾಡಿ, ಗಂಡ ಹೆಂಡತಿ ಪ್ರತ್ಯೇಕವಾಗಿ, ಸಾಕಷ್ಟು ಏಕಾಂತದ ಸೌಲಭ್ಯದೊಂದಿಗೆ ವಾಸಮಾಡುವಂತೆ ಸಲಹೆ ಇತ್ತರು.

ಅವಳಿಗೆ ಅರ್ಥವಾಗದ ಅವನ ನಡತೆ

"ಕಳೆದ ಒಂದು ತಿಂಗಳಿನಿಂದ ಡಾಕ್ಟ್ರೇ, ದಿನಕ್ಕೆ ಎರಡು ಸಲ, ಮೂರು ಸಲ ಪ್ರಜ್ಞೆ ತಪ್ಪಿ ಹೋಗ್ತದೆ. ಸುಸ್ತಾದವಳ ಹಾಗೆ ಮಲಗಿಕೊಂಡುಬಿಡ್ತಾಳೆ. ಎಷ್ಟು ಅಲುಗಿಸಿದರೂ ಮಾತಾಡೋದಿಲ್ಲ. ಕಣ್‌ಬಿಡೋದಿಲ್ಲ. ಒಂದೊಂದ್ ಸಲ ಊಂ ಊಂ ಅಂತ ನರಳ್ತಾಳೆ. ಒಳಗೆ ಅದೇನು ನೋವೋ ಆ ಭಗವಂತನಿಗೆ ಗೊತ್ತು. ಹಾಗೇ ಹತ್ತು ನಿಮಿಷ ಪ್ರಜ್ಞೆ ಇಲ್ದೆ ಬಿದ್ದಿರ್ತಾಳೆ. ಆಮೇಲೆ ನಿಧಾನ ವಾಗಿ ಕಣ್ಣು ಬಿಡ್ತಾಳೆ. ಯಾಕಮ್ಮ ಏನಾಗತ್ತೆ ನಿನಗೆ ಅಂದರೆ ಅವಳು 'ನನಗೇನಾಯ್ತು, ನಾನ್ಯಾಕೆ ಹೀಗೆ ಮಲಗಿದೀನಿ. ತಲೆಯಾಕೆ ಭಾರವಾಗಿದೆ ಅಂತಾಳೆ. ನನಗೆ ಬಹಳ ಭಯ ಆಗ್ಬಿಟ್ಟಿದೆ ಡಾಕ್ಟ್ರೆ. ತಲೆ ಒಳಗೆ ಏನಾಗಿದೆ ಅಂತ ನೀವು ಪರೀಕ್ಷೆಮಾಡಿ, ಎಕ್ಸ್‌ರೇ ತೆಗೆದು ನೋಡಿ. ಇವಳು ಒಂದು ಮಗುವಿನ ತಾಯಿ. ನನ್ನ ಒಬ್ಬಳೇ ಮಗಳು, ಇವಳ ಕಷ್ಟವನ್ನು ಪರಿಹರಿಸಿ ಕೊಡಿ" ಎಂದರು ಸುನಂದಮ್ಮ.

"ಪ್ರಜ್ಞೆ ತಪ್ಪಿದಾಗ ಇವಳ ಕೈಕಾಲುಗಳು ಅದುರುತ್ತವೆಯೆ ? ನಾಲಗೆ ಕಚ್ಚಿ ಕೊಂಡು ರಕ್ತ ಬರೋದು, ಬುರುಗು ಬರೋದು ಆಗುತ್ತಾ ?" ಡಾ॥ ಮೂರ್ತಿ ಪ್ರಶ್ನಿಸಿದರು.

"ಇಲ್ಲ ಡಾಕ್ಟ್ರೇ ಅದೊಂದೂ ಆಗೊಲ್ಲ. ಆದರೆ ಆಗ ಕೈಕಾಲುಗಳು ಬಿಗಿ ಯಾಗಿರುತ್ವೆ."

"ದಿನಕ್ಕೆ ಎರಡು ಮೂರು ಸಲ ಬರುತ್ತೆ ಅಂದ್ರೆ ಇದು ಹಗಲುಹೊತ್ತು ಬರುತ್ತಾ ಅಥವಾ ರಾತ್ರಿ ಹೊತ್ತು ಬರುತ್ತಾ ? ಯಾವಾಗ್ಲಾದ್ರೂ ನಿದ್ರೆಮಾಡೋ ವಾಗ ಬಂದಿದೆಯಾ ?"

"ಹೆಚ್ಚು ಸಲ ಬಂದಿರೋದು ಹಗಲು ಹೊತ್ತಿನಲ್ಲೇ ಡಾಕ್ಟ್ರೇ. ರಾತ್ರಿಹೊತ್ತು ಬಂದಿರೋದು ನನಗೆ ತಿಳಿದ ಹಾಗೆ ಒಟ್ಟು ಮೂರೇ ಸಲ ; ಏಳೆಂಟು ಗಂಟೆ ಸುಮಾರಿಗೆ. ಆದರೆ ನಿದ್ರೆ ಮಾಡೋವಾಗ ಬಂದಿಲ್ಲ."

"ಯಾರು ಇಲ್ಲದೇ ಇದ್ದಾಗ ಆಕೆ ಒಂಟಿಯಾಗಿದ್ದಾಗ ಪ್ರಜ್ಞೆ ತಪ್ಪಿದೆಯೇ ?"

"ನಾವು ಅವಳ್ನ ಒಂಟಿಯಾಗಿ ಬಿಟ್ಟೇ ಇಲ್ಲ. ಈ ಖಾಯಿಲೆ ಶುರುವಾದ

ಕೂಡಲೇ, ಇವಳ ಯಜಮಾನರು ನಮಗೆ ಬಂದು ಹೇಳಿದರು. ಅಲ್ಲಿಂದ ಇವಳನ್ನ ಒಂದು ನಿಮಿಷ ಒಂಟಿಯಾಗಿರೋದಿಕ್ಕೆ ಬಿಟ್ಟಿಲ್ಲ. ಯಾವಾಗಲೂ ಯಾರಾದರೂ ಜೊತೇಲಿದ್ದೇ ಇರ್ತೇವೆ. ಮಲಗುವಾಗ ಕೂಡ ನಾನು ಇಲ್ಲ ಇವಳ ಅಜ್ಜಿ ಜೊತೇಲೇ ಮಲಗ್ತೇವೆ."

"ಪ್ರಜ್ಞೆ ತಪ್ಪುತ್ತಲ್ಲ, ಅದು ಇದ್ದಕ್ಕಿದ್ದಂತೆ ದಿಢೀರ್ ಅಂತ ಆಗಿ, ಆಕೆ ಧೊಪ್ ಅಂತ ಬೀಳ್ತಾಳಾ? ಹಾಗೆ ಬಿದ್ದು ಏನಾದರೂ ಗಾಯ ಆಗಿದೆಯಾ?"

"ಇಲ್ಲ ಡಾಕ್ಟ್ರೇ ಹಾಗೆ ನಿಂತ ನಿಲುವಿನಲ್ಲಿ ಜ್ಞಾನ ತಪ್ಪಿಲ್ಲ, ಬಿದ್ದಿಲ್ಲ. ಖಾಯಿಲೆ ಬರ್ತಿದ್ದ ಹಾಗೆ ನನಗೇನೋ ಆಗ್ತಿದೆ ಅಂತಾಳೆ. ಮುಖ ನೋವಿನಿಂದ ಕಿವುಚಿಕೊಳ್ಳುತ್ತೆ. ಆಗ ನಾವು ತಕ್ಷಣ ಅವಳ್ನ ಮಲಗಿಸಿ ಬಿಡ್ತೇವೆ. ಬೀಳೋದಿಕ್ಕೆ ಅವಕಾಶಾನೇ ಕೊಟ್ಟಿಲ್ಲ."

ಮೊದಲ ಬಾರಿ

"ಈ ಖಾಯಿಲೆ ಹೇಗೆ ಶುರುವಾಯಿತು? ಮೊಟ್ಟ ಮೊದಲನೇ ಸಾರಿ ಬಂತಲ್ಲ, ಅದು ಯಾವ ಸಂದರ್ಭದಲ್ಲಿ ಬಂತು. ಆಗ ಏನೇನಾಯ್ತು ಗೊತ್ತೇ?"

"ಒಂದು ತಿಂಗಳ ಹಿಂದೆ ಉಷಾ ಚೆನ್ನಾಗೇ ಇದ್ಳು ಡಾಕ್ಟ್ರೆ. ಇವಳ ಗಂಡನ ಮನೆ ಇರೋದು ಹೊಸಕೋಟೇಲಿ, ಮೊದಲನೇ ಸಾಗಿ ಪ್ರಜ್ಞೆ ತಪ್ಪಿದ್ದು ಗಂಡನ ಮನೇಲಿ. ಆ ದಿನ ಭಾನುವಾರ ಬೆಳಿಗ್ಗೆ ಎದ್ದು, ತಿಂಡಿ ಕಾಫಿ ಮಾಡಿ, ಗಂಡನಿಗೆ ಮಗೂಗೆ ಕೊಟ್ಟು ತಾನೂ ತಿಂದು ಕುಳಿತಿದ್ದಳಂತೆ. ಹಾಗೇ ಬಂದು ಬಿಟ್ಟಿದೆ. ದಿವಾಕರನಿಗೆ ಅದನ್ನು ನೋಡಿ ಗಾಭರಿ ಆಗಿದೆ. ಓಡಿ ಹೋಗಿ ಡಾಕ್ಟ್ರನ್ನು ಕರೆದು ತಂದು ತೋರ್ಸಿದಾನೆ. ಅವರು ಪರೀಕ್ಷೆ ಮಾಡಿ ನೋಡಿ ಏನೂ ಭಯ ಇಲ್ಲ. ಬಹುಶಃ ವೀಕ್‌ನೆಸ್‌ನಿಂದ ಹೀಗಾಗಿದೆ ಅಂತ ಹೇಳಿ ಇಂಜೆಕ್ಷನ್‌ನಿಂದ ಕೊಟ್ರಂತೆ. ಒಂದೈದು ನಿಮಿಷದಲ್ಲೇ ಸರಿಹೋದಳು. ಮನೇಲಿ ಅವಳಿಗೆ ಉಪಚಾರ ಮಾಡೋದಿಕ್ಕೆ ಯಾರೂ ಇಲ್ಲ. ಉಷಾಳ ಅತ್ತೆ ಮಾವ ಹಳ್ಳೀಲಿದ್ದಾರೆ. ಹೀಗಾಗಿ ದಿವಾಕರ ಬಂದು ನನ್ನನ್ನು ಕರೆದುಕೊಂಡು ಹೋದ. ಆ ದಿನ ಮತ್ತೆ ಮಾರನೇ ದಿನ ಉಷಾ ಚೆನ್ನಾಗೇ ಇದ್ಳು. ಡಾಕ್ಟರು ಬರೆದುಕೊಟ್ಟ ಮಾತ್ರೆ, ಟಾನಿಕ್ ತಗೊಂಡ್ಳು. ನಾವು ಇನ್ನೇನೂ ಭಯ ಇಲ್ಲ. ಖಾಯಿಲೆ ವಾಸಿಯಾಯ್ತು ಅಂತ ಅಂದುಕೊಂಡ್ವಿ. ಆದರೆ ಮರುದಿವಸ ಎರಡು ಸಾರಿ ಪ್ರಜ್ಞೆ ತಪ್ಪಿ ಮಲಗಿದಳು. ಪುನಃ ಡಾಕ್ಟರು ಬಂದು ಇನ್‌ಜೆಕ್ಷನ್ ಕೊಟ್ರು. ಅಕ್ಕಪಕ್ಕದೋರು ಇದು ಖಾಯಿಲೆ ಅಲ್ಲ ಯಾವುದೋ ಗ್ರಹಚೇಷ್ಟೆ. ಒಳ್ಳೇ ಕಡೆ ಶಾಸ್ತ್ರ ಕೇಳಿ, ಪೂಜೆ ಮಂತ್ರ ಹಾಕ್ಸಿ ಅಂದ್ರು. ನಾವು ಇರಬಹುದೇನೋ ಅಂತ ಹಾಗೇ ಮಾಡಿದ್ವಿ. ಶಾಸ್ತ್ರದವನು 'ಇದು ಭೂತ ಚೇಷ್ಟೆ.

ಇವಳ ಗ್ರಹಗತಿ ಚೆನ್ನಾಗಿಲ್ಲ' ಅಂತ ಹೇಳ್ದ. ನಾವು ಮೂರು ನಾಲ್ಕು ಕಡೆ ಮಂತ್ರ ತಂತ್ರ ಮಾಡಿಸಿದ್ವಿ. ನಮ್ಮ ಮನೆ ದೇವರಿಗೆ ಹರಕೆ ಕಟ್ಟಿದೆವು. ಏನೂ ಪ್ರಯೋಜನ ಆಗ್ಲಿಲ್ಲ, ನಮ್ಮ ಕರ್ಮ ಸವೆದಿಲ್ಲ ಅಂತ ಕಾಣುತ್ತೆ..."

ಅನ್ಯೋನ್ಯ ದಾಂಪತ್ಯ

"ಗಂಡ ಹೆಂಡತಿ ಹೇಗಿದ್ದಾರೆ? ಅನ್ಯೋನ್ಯವಾಗಿ ಸಂತೋಷವಾಗಿದ್ದಾರಾ?"

"ನಾವು ಕಂಡಹಾಗೆ ಅನ್ಯೋನ್ಯವಾಗಿದ್ದಾರೆ ಡಾಕ್ಟ್ರೆ, ಉಷಾ ತಾನೇ ಇಷ್ಟ ಪಟ್ಟು, ಮದುವೆ ಆದ್ರೆ ಇವನನ್ನೇ ಅಂತ ಹಠಮಾಡಿ. ದಿವಾಕರನನ್ನು ಲಗ್ನ ಮಾಡ್ಕೊಂಡಳು. ಈಗ ಮುದ್ದಾದ ಮೂರು ವರ್ಷದ ಮಗು ಇದೆ. ಅವನಿಗೆ ಬರೋ ಸಂಬಳ, ಹಳ್ಳಿಯ ಹೊಲ ಗದ್ದೆಯಿಂದ ಬರೋ ವರಮಾನ, ಹೊಟ್ಟೆ ಬಟ್ಟೆಗೆ ಆಗಿ ಮಿಗುತ್ತೆ. ಯಾವ ಕೊರತೇನೂ ಇಲ್ಲ. ನಾನು ಚೆನ್ನಾಗಿದ್ದೇನಮ್ಮ, ನನ್ನನ್ನು ಕಂಡ್ರೆ ಅವರಿಗೆ ಬಹಳ ಪ್ರೀತಿ, ನಾನು ಅದೃಷ್ಟವಂತೆ ಅಂತ ಉಷಾ ಹೇಳ್ತಿರ್ತಾಳೆ. ಹೀಗೆ ಅವಳು ಸುಖವಾಗಿರೋದನ್ನು ನೋಡಿ, ಯಾರ ಕೆಟ್ಟ ಕಣ್ಣು ಅವಳ ಮೇಲೆ ಬಿತ್ತೋ ಏನೋ ಈ ಖಾಯಿಲೆ ಬಂದು ಬಿಟ್ಟಿದೆ."

"ಉಷಾ ಪ್ರಜ್ಞೆ ತಪ್ಪಿದಾಗ, ನಿನಗೆ ಏನಾಗುತ್ತೆ, ಹೇಳ್ತೀಯಾ?" ಎಂದು ಅದುವರೆಗೆ ಮಾತಾಡದೆ ಸುಮ್ಮನೆ ಕುಳಿತಿದ್ದಾಕೆಯನ್ನು ವಿಚಾರಿಸಿದರು.

"ಹೀಗೇ ಆಗುತ್ತೆ ಅಂತ ಸ್ಪಷ್ಟವಾಗಿ ಹೇಳೋದಿಕ್ಕೆ ಆಗೋದಿಲ್ಲ ಸಾರ್. ಏನೋ ಒಂದು ರೀತಿ ತಲೆಭಾರ ಅನ್ಸತ್ತೆ. ಎದೆಯಲ್ಲಿ ಏನೋ ಒಂಥರ ಸಂಕಟ ಆಗತ್ತೆ. ಮಾತಾಡೋಣ ಅಂದ್ರೆ ಧ್ವನಿಯೇ ಹೊರಡಲ್ಲ. ಆಮೇಲೆ ಏನಾಗತ್ತೊ ನನಗೆ ಗೊತ್ತಾಗಲ್ಲ."

"ಈಗ ಒಂದು ಕೆಲಸ ಮಾಡು. ಖಾಯಿಲೆ ಬಗ್ಗೆ ಯೋಚನೆ ಮಾಡು, ಶುರೂನಲ್ಲಿ ಏನೇನಾಗತ್ತೆ ಜ್ಞಾಪಿಸ್ಕೋ. ಹಾಗೆ ಮಾಡಿದಾಗ, ಖಾಯಿಲೆ ಕಾಣಿಸಿ ಕೊಳ್ಳುತ್ತೆ. ಅದನ್ನು ನೋಡಿ, ಪರೀಕ್ಷೆ ಮಾಡಿ ಏನು ಅಂತ ನಿರ್ಧಾರ ಮಾಡ ಬಹುದು. ಸರಿಯಾದ ಚಿಕಿತ್ಸೆ ಕೊಡೋದಕ್ಕೆ ಸಾಧ್ಯವಾಗತ್ತೆ" ಡಾ॥ ಮೂರ್ತಿ ಸೂಚಿಸಿದರು.

ಉಷಾ ತಲೆಯಾಡಿಸಿ ಆಗಲಿ ಎಂದಳು. ಕುರ್ಚಿಯಲ್ಲಿ ನಿಶ್ಚಲವಾಗಿ ಕುಳಿತಳು. ಡಾ॥ ಮೂರ್ತಿ ಮೃದುವಾದ ಧ್ವನಿಯಲ್ಲಿ 'ಈಗ ನೀನು ಖಾಯಿಲೆ ಬಗ್ಗೆ ಯೋಚನೆ ಮಾಡ್ತಾ ಇದ್ದೀಯ...' ಈಗ ತಲೆ ಭಾರವಾಗಿ ಕಾಣಿಸ್ತಾ ಇದೆ. ಎದೆಯೊಳಗೆ ಏನೋ ಸಂಕಟ...' ಎಂದು ಸೂಚನೆ ಕೊಡತೊಡಗಿದರು. ಕೆಲವಾರು ಸೆಕೆಂಡು ಗಳಲ್ಲಿ ಉಷಾಳ ಕಣ್ಣುಗಳು ಮುಚ್ಚಿಕೊಂಡವು. ಅವಳ ದೇಹ ನಿಧಾನವಾಗಿ

ಕೆಳಸರಿದು ನೆಲದಮೇಲೆ ಉರುಳಿಕೊಂಡಿತು. ಮುಷ್ಟಿಯನ್ನು ಗಟ್ಟಿಯಾಗಿ ಹಿಡಿದು ಕೊಂಡಳು. ಸ್ವಲ್ಪ ಹೊತ್ತು ನರಳಿದಳು. ಸುನಂದಮ್ಮ ಅದನ್ನು ನೋಡಿ 'ಹೀಗೇ ಡಾಕ್ಟ್ರೇ ಇದೇ ರೀತಿ ಬರೋದು' ಎಂದರು. ಡಾ॥ ಮೂರ್ತಿ ಅವಳ ಕೈಕಾಲುಗಳ ರಿಫ್ಲೆಕ್ಸಸ್ ಪರೀಕ್ಷಿಸಿದರು. ಬೆಳಕುಬಿಟ್ಟು ಕಣ್ಣಿನ ಪಾಪೆಯ ಪ್ರತಿಕ್ರಿಯೆಯನ್ನು ನೋಡಿದರು. ಎಲ್ಲವೂ ಸರಿ ಇತ್ತು. ಹುಬ್ಬಿನ ನಡುವಿನ ಹಣೆಯ ಭಾಗವನ್ನು ಒತ್ತುತ್ತಾ 'ಉಷಾ ಎಚ್ಚರ ಮಾಡಿಕೋ ಖಾಯಿಲೆಯನ್ನು ನೋಡಿ ಆಯಿತು. ಎಲ್ಲಿ ಕಣ್ಣು ತೆಗೆ' ಎಂದು ಸೂಚನೆ ಕೊಡುತ್ತಿದ್ದಂತೆ ಆಕೆ ಕಣ್ಣು ಬಿಟ್ಟಳು. ಎದ್ದು ಕುಳಿತುಕೊಳ್ಳಲು ಆಕೆಗೆ ಸಹಾಯ ಮಾಡಿದರು. ಉಷಾಳಿಗೆ ಬರುತ್ತಿರುವುದು 'ಉನ್ಮಾದದ ಎಚ್ಚರ ತಪ್ಪುವಿಕೆ' ಎಂಬುದು ಸ್ಪಷ್ಟವಾಗಿತ್ತು. ಆಕೆಯ ಮನಸ್ಸಿನಲ್ಲಿ ಹೇಳಿಕೊಳ್ಳಲಾಗದ ಆದರೆ ಸಾಕಷ್ಟು ನೋವುಂಟು ಮಾಡುವ ಯಾವುದೋ ಸಮಸ್ಯೆ ಇದೆ ಎಂಬುದನ್ನು ಅದು ಸೂಚಿಸಿತ್ತು. ಚಿಕಿತ್ಸೆಗಾಗಿ ಅವಳನ್ನು ಆಸ್ಪತ್ರೆಗೆ ದಾಖಲು ಮಾಡಿದರು. "ಸುನಂದಮ್ಮ, ನೀವೇನೂ ಭಯ ಪಡಬೇಡಿ, ಇದು ಮೂರ್ಛೆ ರೋಗವಲ್ಲ. ಯಾವುದೋ ಕಾರಣದಿಂದ ಉಷಾಳ ಮನಸ್ಸಿಗೆ ನೆಮ್ಮದಿ ಇಲ್ಲವಾಗಿದೆ. ಮಾನಸಿಕ ನೋವಿದೆ, ಅದರ ಪರಿಣಾಮವಾಗಿ ಆಕೆಗೆ ಪ್ರಜ್ಞೆ ತಪ್ಪುವ ಈ ತೊಂದರೆ ಕಾಣಿಸಿಕೊಂಡಿದೆ. ತಾಯಿಯಾದ ನಿಮ್ಮೊಂದಿಗೂ ಆಕೆ ತನ್ನ ಸಮಸ್ಯೆಯನ್ನು, ನೋವಿನ ವಿಚಾರವನ್ನು ಹೇಳಿದಿರಬೇಕಾದರೆ, ಏನೋ ಪ್ರಬಲ ಕಾರಣ ಇರಬೇಕು. ಈ ಸಮಸ್ಯೆ ಏನು, ನೋವು ಏಕೆ ಅಂತ ತಿಳಿದು ಕೊಂಡು ಅದಕ್ಕೆ ತಕ್ಕ ಪರಿಹಾರ ಮಾಡಿದರೆ ಖಾಯಿಲೆ ಗುಣವಾಗತ್ತೆ. ಆಕೆಯೊಂದಿಗೆ ಮಾತನಾಡಿ, ಆಕೆಯ ನೋವನ್ನು ಅರ್ಥ ಮಾಡಿಕೊಳ್ಳೋದಿಕ್ಕೆ ಪ್ರಯತ್ನ ಪಡೋಣ ಎಂದು ವಿವರಿಸಿದರು.

ನಾಲ್ಕು ದಿವಸಗಳು ಕಳೆದವು, ಉಷಾ ಆಸ್ಪತ್ರೆಯಲ್ಲಿ ನಗುನಗುತ್ತಾ ಓಡಾಡಿ ಕೊಂಡಿದ್ದಳು. ಮತ್ತೆ ಅಟ್ಯಾಕ್ ಬಂದಿರಲಿಲ್ಲ. ದಿವಾಕರ ಒಮ್ಮೆ ಬಂದು ಡಾ॥ ಮೂರ್ತಿಯವರನ್ನು ಕಂಡ. ಆತನ ಪ್ರಕಾರವೂ ಉಷಾಳಿಗೆ ಯಾವ ಸಮಸ್ಯೆಯೂ ಇರಲಿಲ್ಲ. ತಾನು ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವುದಾಗಿ ಆಕೆಗೆ ಯಾವ ಕೊರತೆಯೂ ಆಗದಿರುವುದಾಗಿ, ತಾನು ಶಕ್ತಿಮೀರಿ ಶ್ರಮ ಪಡು ತ್ತಿರುವುದಾಗಿ ಹೇಳಿದ. ತಾವು ಒಬ್ಬರನ್ನೊಬ್ಬರು ಮೆಚ್ಚಿ ಮದುವೆಯಾದವರು. ಹೆಚ್ಚೂ ಕಡಿಮೆ ಸಮಾನ ಅಭಿರುಚಿ. ಹೀಗಾಗಿ ಯಾವ ಮನಸ್ತಾಪಕ್ಕೂ ಅವಕಾಶ ಇಲ್ಲ ಎಂದ. ಆದ್ದರಿಂದ ಮಾನಸಿಕ ಕಾರಣದಿಂದ ಆಕೆಗೆ ಖಾಯಿಲೆ ಬಂದಿರಲು ಸಾಧ್ಯ ಇಲ್ಲ. ಇದು ನರಗಳ ವೀಕ್‌ನೆಸ್‌ನಿಂದ ಬಂದಿರಬೇಕು. ನರಗಳಿಗೆ ಒಳ್ಳೆಯ ಶಕ್ತಿ

ದಾಯಕ ಟಾನಿಕ್ ಕೊಟ್ಟರೆ ಸರಿ ಹೋಗುತ್ತದೆ' ಎಂದ. ಡಾ॥ ಮೂರ್ತಿ ಮುಗುಳ್ನಕ್ಕರೇ ವಿನಃ ಮಾತಾಡಲಿಲ್ಲ.

ಚಿಂದಿಚಿಂದಿಯಾದ ಕತೆ

ಐದನೇ ದಿವಸ ಬೆಳಿಗ್ಗೆ ಡಾ॥ ಮೂರ್ತಿ ಆಸ್ಪತ್ರೆಯ ತಮ್ಮ ಕೊಠಡಿಗೆ ಬರುತ್ತಿದ್ದಂತೆ ಸ್ಟಾಫ್ ನರ್ಸ್ ನರ್ಮದಾ ಅವರನ್ನು ಕಾಣಲು ಬಂದಳು, 'ಏನು ಸಿಸ್ಟರ್, ಉಷಾ ಹೇಗಿದ್ದಾಳೆ. ಏನಾದರೂ ಅಟ್ಯಾಕ್ ಬಂದಿತ್ತೆ' ಎಂದರು. 'ಇಲ್ಲ ಸಾರ್. ಅಟ್ಯಾಕ್ ಬಂದಿಲ್ಲ. ಆದರೆ ನಿನ್ನೆ ಒಂದು ವಿಚಿತ್ರ ವರ್ತನೆ ತೋರಿಸಿದ್ದಾಳೆ. ಅದನ್ನು ನಿಮ್ಮ ಗಮನಕ್ಕೆ ತರೋಣ ಅಂತ ಬಂದೆ. ನಿನ್ನೆ ಈ ಮ್ಯಾಗಜೀನನ್ನು ಓದಲು ಆಕೆಗೆ ಕೊಟ್ಟಿದ್ದೆ, ಈ ಕಥೆಯ ಹಾಳೆಗಳನ್ನು ಹರಿದು ಚಿಂದಿ ಮಾಡಿದ್ದಾಳೆ' ಎಂದಳು. ಮ್ಯಾಗಜಿನ್‌ನ ಇನ್ನೊಂದು ಪ್ರತಿತರಿಸಿ ಡಾ॥ ಮೂರ್ತಿ ಆ ಕಥೆಯನ್ನು ಓದಿದರು. ಅದರಲ್ಲಿ ಮದುವೆಯಾದ ಕಥಾ ನಾಯಕಿ, ಗಂಡನಿದ್ದೂ ಮತ್ತೊಬ್ಬನಲ್ಲಿ ಅನುರಕ್ತಳಾಗುತ್ತಾಳೆ. ಸಾಮಾಜಿಕ ಹಾಗೂ ನೈತಿಕ ದೃಷ್ಟಿಯಿಂದ ತಪ್ಪು ಎಂದು ಗೊತ್ತಿದ್ದರೂ, ಅವನೊಂದಿಗೆ ದೈಹಿಕ ಸಂಪರ್ಕ ಮಾಡುತ್ತಾಳೆ. ತಾನು ಮಾಡಿದ್ದು ಸರಿ ಎಂದು ಸಾಧಿಸುತ್ತಾಳೆ. ತನ್ನ ಗಂಡ ಇದನ್ನು ಒಪ್ಪಬೇಕು ಎಂದು ವಾದಿಸುತ್ತಾಳೆ.

ಸಂದರ್ಶನ ಸಮಯದಲ್ಲಿ ಮೂರ್ತಿಯವರು ಉಷಾಳ ಆರೋಗ್ಯದ ಬಗ್ಗೆ ವಿಚಾರಿಸಿದರು. ವಾರ್ಡಿನಲ್ಲಿ ಹೇಗೆ ಕಾಲ ಕಳೆಯುತ್ತಿದ್ದಾಳೆ ಎಂದು ಕೇಳಿದರು. ಮ್ಯಾಗಜೀನ್ ತೋರಿಸಿ ಈ ಕಥೆಯನ್ನು ಓದಿದ್ದೀಯಾ ಎಂದು ಕೇಳಿದರು.

"ಸಾರಿ ಸಾರ್, ನೀವು ಈ ಪ್ರಶ್ನೆ ಏಕೆ ಕೇಳುತ್ತಿದ್ದೀರಿ ಅಂತ ನನಗೆ ಗೊತ್ತು. ಈ ಪತ್ರಿಕೆಯ ಹಾಳೆಗಳನ್ನು ಕೋಪದ ಭರದಲ್ಲಿ ಹರಿದು ಹಾಕಿಬಿಟ್ಟೆ. ದಯವಿಟ್ಟು ಕ್ಷಮಿಸಿ."

"ಅಷ್ಟು ಕೋಪ ಬರುವಂಥಾದ್ದು ಏನಿದೆ ಅದರಲ್ಲಿ ?"

"ಇನ್ನೇನು ಸಾರ್, ಹೆಣ್ಣಾದವಳು ಆ ರೀತಿ ಮಾಡುವುದು ಸಾಧ್ಯವೇ ಇಲ್ಲ. ಕಥೆ ಬರೆದಿರುವವನಿಗೆ ತಲೆ ಕೆಟ್ಟಿರಬೇಕು. ಇಲ್ಲವೇ ಆತ ಸ್ತ್ರೀದ್ವೇಷಿ ಇರಬೇಕು."

"ಹೆಣ್ಣಾದರೇನು, ಗಂಡಾದರೇನು ಇಬ್ಬರೂ ಮನುಷ್ಯರೇ. ಆಸೆ, ಬಯಕೆ, ಮೋಹ, ದೌರ್ಬಲ್ಯಗಳು ಇಬ್ಬರಲ್ಲೂ ಇರುತ್ತವೆ."

"ನಾನು ಒಪ್ಪುವುದಿಲ್ಲ ಸಾರ್. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಈ ರೀತಿ ಮಾಡಿ, ತಾನು ಮಾಡಿದ್ದು ಸರಿ ಎಂದು ವಾದಿಸುವುದು ಸಾಧ್ಯವಿಲ್ಲ. ಒಬ್ಬನನ್ನು ಗಂಡನೆಂದು ಆಯ್ಕೆ ಮಾಡಿಕೊಂಡ ಮೇಲೆ ಅವನಿಗೆ ಪೂರ್ಣ ನಿಷ್ಠೆ ತೋರಿಸುತ್ತಾಳೆ.

ಆದರೆ ಗಂಡು ಇಂತಹ ನಿಷ್ಠೆಯನ್ನು ತೋರಿಸುವುದಿಲ್ಲ. ಉದಾಹರಣೆಗೆ ನನ್ನ ಜೀವನ" ಉಷಾ ಮಾತು ನಿಲ್ಲಿಸಿ, ತಲೆತಗ್ಗಿಸಿದಳು.

ಅವರೇ ಹೇಳಿದ್ದು

"ಯಾಕೆ ನಿಲ್ಲಿಸಿಬಿಟ್ಟೆ ಉಷಾ ಮುಂದುವರೆಸು. ನಿನ್ನ ಜೀವನದ ಸಮಸ್ಯೆಯನ್ನು ಹೇಳು. ನಿನ್ನ ಮನಸ್ಸನ್ನು ಕೊರೆಯುತ್ತಿರುವ ವಿಚಾರವನ್ನು ಮುಚ್ಚಿಡದೆ ಹೇಳು."

ಉಷಾ ಬಿಕ್ಕಳಿಸಿ ಅಳತೊಡಗಿದಳು. 'ನಾನು ಮೆಚ್ಚಿ ಮದುವೆಯಾದವರೇ ನನಗೆ ಮೋಸ ಮಾಡಿದ್ದಾರೆ. ನನ್ನ ಸಮಸ್ಯೆಗೆ ಪರಿಹಾರ ಇಲ್ಲ ಸಾರ್. ಯಾರೊಂದಿಗೂ ಹೇಳಿಕೊಳ್ಳಲಾಗದೆ, ಅನುಭವಿಸುತ್ತಾ, ಕೊರಗಿ, ಕೊರಗಿ ಸಾಯುವುದೇ ನನ್ನ ಹಣೆಬರಹ ಅಂತ ಕಾಣುತ್ತೆ. ಈ ದಿನ ನನ್ನ ಸಮಸ್ಯೆಯನ್ನು ನಿಮಗೆ ಹೇಳ್ತೀನೆ ಸಾರ್. ದಿವಾಕರ್‌ನನ್ನು ಮೆಚ್ಚಿ ಮದುವೆಯಾದೆ. ನಮ್ಮ ಅಂತಸ್ತು, ನನ್ನ ರೂಪಕ್ಕೆ ಇನ್ನೂ ಒಳ್ಳೆಯ ಗಂಡು ಸಿಗುತ್ತೆ, ದುಡುಕಬೇಡ ಅಂತ ತಂದೆ ತಾಯಿ ಹೇಳಿದರೂ ಕೇಳದೆ, ಇವರನ್ನೇ ಆಯ್ಕೆ ಮಾಡಿಕೊಂಡೆ. ಮದುವೆ ಸಮಾರಂಭವೊಂದರಲ್ಲಿ ಪರಿಚಯವಾಗಿ ಇವರ ಮಾತಿನ ಮೋಡಿ, ಹಾಸ್ಯ ಪ್ರವೃತ್ತಿಗೆ ಮರುಳಾದೆ. ಇಂತಹ ಸ್ವಭಾವದ ವ್ಯಕ್ತಿ ಗಂಡನಾಗಿ ದೊರೆತರೆ, ಜೀವನ ಸಂತೋಷ ಸಾಗರವಾಗತ್ತೆ ಅಂತ ನಂಬಿದೆ. ಪತ್ರ ವ್ಯವಹಾರ ಮಾಡಿ, ನಮ್ಮಿಬ್ಬರದು ಅನೇಕ ವಿಚಾರಗಳಲ್ಲಿ ಸಮಾನ ಅಭಿರುಚಿ ಅಂತ ಗೊತ್ತಾದಾಗ, ಮದುವೆಯಾಗಲು ನಿರ್ಧರಿಸಿದೆವು. ಈ ನಿರ್ಧಾರ ಒಳ್ಳೆಯ ನಿರ್ಧಾರವಾಗಿತ್ತು ಅಂತ ಇತ್ತೀಚಿನವರೆಗೂ ತಿಳಿದಿದ್ದೆ. ಮದುವೆಯಾದ ನಾಲ್ಕು ವರ್ಷ ಇವರೊಂದಿಗೆ ನಾನು ಸುಖ ಸಂತೃಪ್ತಿಯಿಂದ ಸಂಸಾರ ಮಾಡಿದೆ. ಪ್ರೀತಿಸುವ ರಸಿಕ ಗಂಡ, ಮುದ್ದಾದ ಮಗು, ಸಾಕಷ್ಟು ವರಮಾನ; ಸುಖ ಸಂಸಾರಕ್ಕೆ ಇನ್ನೇನು ಬೇಕು ಹೇಳಿ. ಎರಡು ತಿಂಗಳ ಹಿಂದೆ ನನ್ನ ಈ ಸುಖ, ಕೇವಲ ಭ್ರಮೆ ಅಂತ ಗೊತ್ತಾಯ್ತು. ಕಳೆದ ಒಂದು ವರ್ಷದಿಂದ ತಿಂಗಳಿಗೆ ಒಂದು ಸಲ, ಎರಡು ಸಲ 'ಕೆಲಸ ಇದೆ' ಎಂದು ಬೆಂಗಳೂರಿಗೆ ಹೋಗಿ ಒಂದು ರಾತ್ರಿ ಇದ್ದು ಬರುತ್ತಿದ್ದುದರ ಗುಟ್ಟು ನನಗೆ ತಿಳಿಯಿತು. ಅಲ್ಲಿ ಇವರು ಇನ್ನೊಂದು ಸಂಸಾರ ಮಾಡುತ್ತಿದ್ದಾರೆಂದು ತಿಳಿದು, ನಾನು ಭೂಮಿಗೆ ಇಳಿದು ಹೋದೆ. ಇದನ್ನು ಯಾರೊಂದಿಗೆ ಹೇಳಲಿ? ಯಾವ ಬಾಯಿಂದ ನನ್ನ ಗಂಡ ಇನ್ನೊಬ್ಬಳೊಂದಿಗೆ ಮಲಗುತ್ತಾನೆ ಎಂದು ಹೇಳಲಿ. ನಮ್ಮ ಮಗಳು ಸುಖವಾಗಿದ್ದಾಳೆ ಅಂತ ನೆಮ್ಮದಿಯಿಂದ ಬದುಕುತ್ತಿರುವ ನನ್ನ

ತಂದೆ ತಾಯಿಗೆ ಈ ವಿಚಾರ ಹೇಳಿ, ಅವರ ನೆಮ್ಮದಿಯನ್ನು ಹಾಳು ಮಾಡಲೇ, ಹೀಗಾಗಿ ಯಾರೊಂದಿಗೂ ನಾನು ಬಾಯಿ ಬಿಟ್ಟಿಲ್ಲ.

"ದಿವಾಕರ್, ಇನ್ನೊಬ್ಬಳೊಂದಿಗೆ ಇಲ್ಲಿ ಇನ್ನೊಂದು ಸಂಸಾರ ನಡೆಸುತ್ತಿದ್ದಾನೆ ಅಂತ ನಿನಗೆ ಹೇಗೆ ತಿಳಿಯಿತು ? ಯಾರು ಹೇಳಿದ್ದು ? ಇದೆಲ್ಲ ನಿಜವಲ್ಲದಿರಬಹುದು."

"ಇದನ್ನು ನನ್ನವರೆ ನನಗೆ ಹೇಳಿದ ಮೇಲೆ ಇನ್ನೇನೂ ಉಳಿದಿಲ್ಲ ಸಾರ್. ಆಕೆ ಪದ್ಮ ಅಂತ. ಇವರ ಸಹಪಾಠಿ ಆಗಿದ್ದಳಂತೆ. ಮದುವೆಯಾಗಿ ಎರಡು ವರ್ಷದಲ್ಲೇ ಗಂಡ ಸತ್ತು ದಿಕ್ಕಿಲ್ಲದವಳಾಗಿದ್ದಾಳಂತೆ, ಒಂದು ಮಗು ಬೇರೆ ಇದೆಯಂತೆ. "ದಿಕ್ಕಿಲ್ಲದ ಅವಳಿಗೆ ನನ್ನನ್ನು ಬಿಟ್ಟರೆ ಇನ್ಯಾರೂ ಇಲ್ಲ. ಯಾವ ಋಣಾನುಬಂಧವೋ ಏನೋ ಅವಳು ತನ್ನನ್ನು ನನಗೆ ಒಪ್ಪಿಸಿಕೊಂಡಿದ್ದಾಳೆ, ಇಷ್ಟಾದ ಮೇಲೆ ನಾನು ಅವಳ ಕೈ ಬಿಡುವಂತಿಲ್ಲ. ನಾನು ನಿನ್ನನ್ನೂ ನೋಡಿಕೊಳ್ಳುತ್ತೇನೆ. ಅವಳನ್ನೂ ಸಾಕುತ್ತೇನೆ. ಇದಕ್ಕೆ ನೀನು ಒಪ್ಪಬೇಕು' ಅಂತ ಒತ್ತಾಯ ತಂದಿದ್ದಾರೆ. 'ಕಷ್ಟದಲ್ಲಿರೋ ಆಕೆಗೆ ನೀವು ದುಡ್ಡು ಕೊಡಿ, ಬೇಕಾದ ಸಹಾಯ ಮಾಡಿ, ನಾನು ಬೇಡ ಅಂತ ಹೇಳೋಲ್ಲ. ಆದರೆ ಅವಳ ಜವಾಬ್ದಾರಿಯನ್ನು ನೀವು ಏಕೆ ಹೊರಬೇಕು, ನಿಮ್ಮನ್ನು ಆವಳೊಂದಿಗೆ ಹಂಚಿಕೊಳ್ಳಲು ನಾನು ತಯಾರಿಲ್ಲ' ಎಂದೆ. ಅದಕ್ಕೆ ಅವರು 'ನೀನು ಮೊದಲು ಬಂದವಳು, ನಿನಗೆ ಸಿಗಬೇಕಾದ ಪ್ರಾಮುಖ್ಯತೆಗೆ ನಾನು ಮುಕ್ಕು ಮಾಡೋದಿಲ್ಲ. ನೀನು ಸ್ವಲ್ಪ ಮಟ್ಟಿನ ತ್ಯಾಗ ಮಾಡಬೇಕು. ಪದ್ಮಳೊಂದಿಗೆ ನನ್ನ ಸಂಬಂಧವನ್ನು ಒಪ್ಪಿಕೊಳ್ಳುವ ದೊಡ್ಡ ಗುಣವನ್ನು ನೀನು ತೋರಿಸಬೇಕು. ಗಂಡನಾಗಿ ಹೀಗೆ ಮಾಡು ಅಂತ ಆಜ್ಞೆ ಮಾಡ್ತಾ ಇಲ್ಲ; ಕೋರಿಕೊಳ್ತಾ ಇದ್ದೇನೆ' ಅಂತ ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ. ನನಗೆ ಏನು ಮಾಡ್ಬೇಕು ಅಂತ ಗೊತ್ತಾಗ್ತಾ ಇಲ್ಲ. ಒಮ್ಮೆ ಅವರ ಮೇಲೆ ಅಸಾಧ್ಯ ಕೋಪ ಬರುತ್ತೆ. ನನಗೆ ಇಂತಹ ವಂಚನೆ ಮಾಡಿದರಲ್ಲ ಅಂತ. ಇನ್ನೊಮ್ಮೆ ಅನುಕಂಪ ಬರುತ್ತೆ. ಯಾವುದೋ ಒಂದು ದೌರ್ಬಲ್ಯಕ್ಕೆ ಈಡಾಗಿ, ಆಕೆಯೊಂದಿಗೆ ಸಂಬಂಧ ಮಾಡಿ ಕಷ್ಟ ಅಂತ ತಿಳಿದರೂ, ಅವಳ ಜವಾಬ್ದಾರಿ ಹೊರೋದಿಕ್ಕೆ ಸಿದ್ಧವಾಗಿದ್ದಾರಲ್ಲ ಅಂತ. ಈ ಗೊಂದಲದಲ್ಲಿ ನನ್ನ ಮನಸ್ಸು ಹಿಂಡಿ ಹಿಪ್ಪೆಯಾಗಿ ಹೋಗಿದೆ. ಆದರಿಂದ ಹೊರಬರೋ ಮಾರ್ಗ ಯಾವುದು ಅಂತ ಗೊತ್ತಾಗ್ತಿಲ್ಲ..."

ಮುಕ್ತ ಚರ್ಚೆ

ಈ ಬಗೆಯ ಮಾನಸಿಕ ಆಂದೋಳನಕ್ಕೆ ಸಿಕ್ಕಿದ್ದ ಉಷಾ ಉನ್ಮಾದ ಮನೋ

ಬೇನೆಗೆ ತುತ್ತಾಗಿದ್ದಳು. ಹೇಳಲಾಗದ, ಅನುಭವಿಸಲಾಗದ ನೋವಿನಿಂದ ಮುಕ್ತಳಾಗಲು ಪ್ರಜ್ಞೆತಪ್ಪುವ ಚಿಹ್ನೆಯ ಮೂಲಕ ಸಹಾಯ ಯಾಚಿಸುತ್ತಿದ್ದಳು.

ನಂತರದ ಚಿಕಿತ್ಸಾ ಸಂದರ್ಶನಗಳಲ್ಲಿ ಈ ಸಮಸ್ಯೆಯ ಮುಕ್ತ ಚರ್ಚೆಗೆ ಡಾ॥ ಮೂರ್ತಿ ಅವಕಾಶ ಮಾಡಿ ಕೊಟ್ಟರು. ಪರಸ್ಪರ ಚರ್ಚಿಸಿ, ಈ ಗೋಜಲಿನಿಂದ ಹೊರಬರಲು ಪ್ರೋತ್ಸಾಹಿಸಿದರು. ಸಮಸ್ಯೆಯನ್ನು ಕೇವಲ ಭಾವನಾತ್ಮಕ ದೃಷ್ಟಿಯಿಂದ ನೋಡದೆ, ವಾಸ್ತವಿಕ ಅಂಶಗಳನ್ನು ಗಮನಿಸಿ, ಜಾರಿಗೆ ತರಬಹುದಾದಂತಹ ಇಬ್ಬರಿಗೂ ಒಪ್ಪಿಗೆಯಾಗುವಂತಹ, ಪರಿಹಾರ ಸೂತ್ರವನ್ನು ರೂಪಿಸಲು ನೆರವಾದರು. ಸಾಕಷ್ಟು ಚರ್ಚೆಯಾದ ನಂತರ ಉಷಾ ದಿವಾಕರ ಒಂದು ನಿರ್ಧಾರಕ್ಕೆ ಬಂದರು. 'ದಿವಾಕರ ಅವಳೊಂದಿಗೆ ದೈಹಿಕ ಸಂಬಂಧವನ್ನು ಮುಂದುವರೆಸಬಾರದು. ಒಳಿತನ್ನು ಬಯಸುವ ಸ್ನೇಹಿತನಂತೆ ಆಕೆಗೆ ಸ್ವಾವಲಂಬಿಯಾಗಲು ಸಹಾಯ ಮಾಡಬೇಕು. ಉಷಾ ಕೂಡ ಇದರಲ್ಲಿ ನೆರವಾಗಬೇಕು. ತಮ್ಮ ನಡುವೆ ಮತ್ತೆ ಈ ಬಗೆಯ ಬಿರುಕು ಬರದಂತೆ. ದಿವಾಕರ ಉಷಾಳೊಂದಿಗೆ ಪ್ರಾಮಾಣಿಕವಾಗಿ ವರ್ತಿಸಿ, ಆಕೆಯ ವಿಶ್ವಾಸವನ್ನು ಮರಳಿ ಸಂಪಾದಿಸಬೇಕು. ಈ ಇಡೀ ಪ್ರಕರಣದಿಂದ ಉಂಟಾದ ಕಹಿ ನೆನಪನ್ನು ನಿವಾರಿಸಿಕೊಳ್ಳಲು ಇಬ್ಬರೂ ಪ್ರಯತ್ನಿಸಬೇಕು,'

ಇದಾದ ನಂತರ, ಉಷಾಳಿಗೆ ಮತ್ತೆ ಉನ್ಮಾದದ ತೊಂದರೆ ಕಾಣಿಸಿಕೊಳ್ಳಲಿಲ್ಲ ಎಂಬುದು ಅದರ ನಿರ್ಧಾರ, ಪ್ರಯತ್ನದ ಸಫಲತೆಗೆ ಸಾಕ್ಷಿಯಾಯಿತು.

ಆತಂಕ, ಅನುಮಾನ-ಸಂತೋಷಕ್ಕೆ ಅಡ್ಡಿ

ಲಾಲ್‌ಬಾಗ್‌ನಲ್ಲಿ ಒಂದು ಸಂಜೆ. ಪ್ರಭಾಕರ್, ಲಲಿತ ತಮ್ಮ ಐದು ವರ್ಷದ ಮಗ ವಿನಯ್‌ನೊಡನೆ ಸುತ್ತಾಡುತ್ತಿದ್ದರು. ವಿನಯನಿಗೆ ಹೂವಿನ ಗಡಿಯಾರ ತೋರಿಸಿ, ಅವನಿಂದ ಜಿಂಕೆಗಳಿಗೆ ಹುಲ್ಲನ್ನು ತಿನ್ನಿಸಿ ಬಳಿಕ ಐಸ್‌ಕ್ರೀಮ್ ಸೇವಾರ್ಥ ನಡೆಸಿ ತೃಪ್ತಿಯಾದ ಮೇಲೆ, ಸಂಜೆಯ ಬೆಳಕಿನಲ್ಲಿ ಮಿನುಗುತ್ತಿದ್ದ ಹಸಿರು ಗಿಡ ಮರಗಳನ್ನು ನೋಡುತ್ತಾ ನಡೆದಿದ್ದರು. ವಿವಿಧ ಬಣ್ಣಗಳ ಹೂಗಳನ್ನು ನೋಡಿ ಆನಂದಿಸುತ್ತಿದ್ದ ಪ್ರಭಾಕರನ ಕಣ್ಣುಗಳಿಗೆ, ಹಸಿರು ಬೆಂಚಿನ ಮೇಲೆ ಕುಳಿತಿದ್ದ ದೇವೇಂದ್ರ ಕಾಣಿಸಿಕೊಂಡ. ಆರು ತಿಂಗಳಷ್ಟೇ ಹಿಂದೆ ಮದುವೆಯಾದ ಇವನು, ಈ ಕಾಲದ ಈ ಸಮಯದಲ್ಲಿ, ಈ ಸ್ಥಳದಲ್ಲಿ ಒಂಟಿಯಾಗಿ ಕುಳಿತಿರುವುದನ್ನು ಕಂಡ ತನ್ನ ಕಣ್ಣುಗಳನ್ನು ನಂಬಲು ಪ್ರಭಾಕರ ಹಿಂಜರಿದ. ಕಣ್ಣುಜ್ಜಿಕೊಂಡು ಮತ್ತೆ ನೋಡಿದ. ಆತ ದೇವೇಂದ್ರನೇ, ಮತ್ತಾರೂ ಅಲ್ಲ. ಹತ್ತಿರ ಹೋಗಿ ನಿಂತರೂ, ಆತನ ದೃಷ್ಟಿ ಎಲ್ಲೋ ನೆಟ್ಟಿದೆ. ಅವನ ಭುಜವನ್ನು ಮುಟ್ಟಿದಾಗ ಎಚ್ಚರಗೊಂಡು, ಈ ಲೋಕಕ್ಕೆ ಇಳಿದ. ಇವರನ್ನು ನೋಡಿ ಮುಗುಳ್ನಕ್ಕ.

"ಏನಯ್ಯಾ ಲಾಲ್‌ಬಾಗ್‌ನಲ್ಲಿ ಕುಳಿತು ಯೋಗ ನಿದ್ರೆ ಮಾಡುತ್ತಿದ್ದೀಯಾ ?" ಪ್ರಭಾಕರ್ ನಗೆಯಾಡಿದ.

"ಯೋಗನೂ ಇಲ್ಲ, ನಿದ್ರೆಯೂ ಇಲ್ಲ. ಹೀಗೇ ಬೇಜಾರಾಯಿತು, ಬಂದು ಕುಳಿತೆ. ನಮಸ್ಕಾರ ಅತ್ತಿಗೆ" ಎಂದು ಲಲಿತಳನ್ನು ಮಾತಾಡಿಸಿ, ವಿನಯನ ಕೆನ್ನೆ ಸವರಿದ.

"ಯಾಕೋ ಒಬ್ಬನೇ ಬಂದಿದ್ದೀಯಾ ? ಎಲ್ಲೋ ನಿನ್ನ ಹೆಂಡತಿ ?"

"ಇಲ್ಲವಯ್ಯಾ, ತನ್ನ ಸಿಸ್ಟರ್ ಮನೆಗೆ ಹೋಗಿದ್ದಾಳೆ. ಮೂರು ದಿನ ಆಯ್ತು."

"ಹಾಗೋ ಸಮಾಚಾರ. ಅದಕ್ಕೆ ದೇವೇಂದ್ರರ ಮುಖ ಬಾಡಿಹೋಗಿದೆ. ವಿರಹ ವೇದನೆಯಿಂದ ಜರ್ಝರಿತವಾಗಿದೆ"

"ಅಂಥದ್ದೇನೂ ಇಲ್ಲಪ್ಪ. ನಾಳೆ ವಾಪಸ್ ಬರ್‍ತಿದ್ದಾಳೆ. ಇಷ್ಟು ಬೇಗ ರ್‍ತಾಳಲ್ಲಾ ಅನ್ನೋ ಚಿಂತೆ ಅಷ್ಟೇ"

"ಏನು ಇಷ್ಟು ಬೇಗ ನಿಮ್ಮಿಬ್ಬರ ನಡುವಿನ ಹನಿ ಮೂನ್ ಫೇಸ್ ಮುಗಿದು ೋಯಿತೇ? ಆಗಲೇ ಒಬ್ಬರ ಸಾನ್ನಿಧ್ಯ ಇನ್ನೊಬ್ಬರಿಗೆ ಬೇಸರಬರುವಂತಾಗಿ ೋಗಿದೆಯೇ ?" ಲಲಿತ ನುಡಿದಳು.

"ಹಾಗೇ ಅನ್ನಸ್ತೆ ಅತ್ತಿಗೆ. ನಮಗೆ ಜೀವನದಲ್ಲಿ ಆಸಕ್ತೀನೇ ಇಲ್ಲದ ಹಾಗೆ ಗ್ಬಿಟ್ಟಿದೆ. ಈ ಸೌಭಾಗ್ಯಕ್ಕೆ ನಾವು ಅಷ್ಟೊಂದು ಕಷ್ಟ ಪಟ್ಟು ಮದುವೆ ಮಾಡಿ ೂಳ್ಳಬೇಕಾಗಿತ್ತೆ ಅಂತ ನನ್ನನ್ನು ನಾನೇ ಕೇಳಿಕೊಳ್ಳೋ ಹಾಗಾಗಿದೆ"

ದೇವೇಂದ್ರ ಶಮಂತಕರದು ಅಂತರ್ಜಾತೀಯ ಪ್ರೇಮ ವಿವಾಹ. ಎರಡೂ ುನೆಗಳವರ ಉಗ್ರ ವಿರೋಧದ ನಡುವೆ, ಬಹಳ ಪ್ರಯಾಸದಿಂದ ಸ್ನೇಹಿತರುಗಳ ರವಿನಿಂದ ವಿವಾಹ ನಡೆದಿತ್ತು. ಯಾವ ಕ್ಷಣ ಏನಾಗಿಬಿಡುತ್ತದೋ, ಯಾವ ುನೆಯವರು ಏನು ಅಡ್ಡಿ ತರುತ್ತಾರೋ ಎಂಬ ಆತಂಕ ಪ್ರತಿ ಕ್ಷಣ ಅವರನ್ನು ಾಡಿತ್ತು. ಈ ವಿವಾಹ ನಡೆಯದಂತೆ ತಡೆಯಲು ಗಂಡಿನ ತಂದೆ ತಾಯಿಗಳು, ೆಣ್ಣಿನ ತಂದೆ ತಾಯಿಗಳು ಸಾಕಷ್ಟು ಪ್ರಯತ್ನಿಸಿ, ಕೊನೆಗೆ ವಿಫಲರಾದರು. ಎಲ್ಲ ರೋಧಿಗಳ ನಡುವೆ, ರಿಜಿಸ್ಟ್ರಾರ್ ಸಮ್ಮುಖದಲ್ಲಿ ದೇವೇಂದ್ರ ಶಮಂತಕರು ಗಂಡ ೆಂಡತಿಯರೆಂದು ಘೋಷಿತರಾದಾಗ, ಅವರಿಗಿಂತ ವಿವಾಹದ ಪೌರೋಹಿತ್ಯ ವಹಿ ದ್ದ ಸ್ನೇಹಿತರು ಹೆಚ್ಚು ಸಂಭ್ರಮ ಪಟ್ಟಿದ್ದರು. ಪರಸ್ಪರ ಒಲಿದು, ಒಂದಾಗಲು ುಡಿಯುತ್ತಿದ್ದ ಈ ಪ್ರೇಮಿಗಳನ್ನು ನಾವು ಒಂದುಗೂಡಿಸಿದೆವಲ್ಲಾ ಎಂಬ ತೃಪ್ತಿ ವರಿಗೆ ಸಿಕ್ಕಿತ್ತು. ಪ್ರಭಾಕರನೂ ಈ ಮದುವೆಗೆ ದುಡಿದಿದ್ದ. ದೇವೇಂದ್ರ ುತ್ತು ಅವನು ಕಾಲೇಜಿನಲ್ಲಿ ಸಹಪಾಠಿಗಳು. ದೇವೇಂದ್ರ ಡಿಗ್ರಿ ಮುಗಿಸಿ ಬ್ಯಾಂಕಿ ಲಿ ನೌಕರಿ ಸಂಪಾದಿಸಿದ್ದರೆ, ಪ್ರಭಾಕರ ತಾನೇ ಒಂದು ಟ್ಯುಟೋರಿಯಲ್ಸ್ ನಡೆ ಲು ಪ್ರಾರಂಭಿಸಿದ್ದ. ವೃತ್ತಿ ಬೇರೆ ಬೇರೆ ಆದಾಗ, ಭೇಟಿ ಆಗುವುದು ರಜಾದಿನಗ ಲ್ಲಿ ಅಥವಾ ಸಮಾರಂಭಗಳಲ್ಲಿ. ಕಳೆದ ಎರಡು ತಿಂಗಳಿಂದ ಕೆಲಸದ ಒತ್ತಡದಲ್ಲಿ ್ರಭಾಕರ ಅವನನ್ನು ನೋಡಿರಲಿಲ್ಲ.

"ಯಾಕೋ, ಆಗಲೇ ಶಮಂತಕಳ ಜೊತೆಯಲ್ಲಿ ಜಗಳ ಆಡಿದ್ದೀಯಾ ?" ್ರಭಾಕರ ಕೇಳಿದ.

"ಇಲ್ಲಪ್ಪ ಜಗಳ ಆಡಿಲ್ಲ"

"ನಿನ್ನ ಮನಸ್ಸಿಗೆ ಬೇಜಾರು ಹಾಗೋ ಹಾಗೇ ನಡೆದುಕೊಂಡಿದಾಳಾ ?"

"ಇಲ್ಲ, ನನ್ನನ್ನು ಕಂಡರೆ ಅವಳಿಗೆ ಬಹಳ ಪ್ರೀತಿ. ನನ್ನ ಬೇಕು ಬೇಡಗಳನ್ನು ಹಳ ಮುತುವರ್ಜಿಯಿಂದ ನೋಡಿಕೊಳ್ತಾಳೆ."

"ಮತ್ತೆ ಮನೆಯನ್ನು ಸರಿಯಾಗಿ ಇಟ್ಟುಕೊಳ್ಳದೆ, ದುಂದು ವೆಚ್ಚಮಾಡಿ ಬೇಜಾರು ಮಾಡಿದಾಳಾ ?"

"ಇಲ್ಲ. ಹಣದ ವಿಚಾರದಲ್ಲಿ ನನಗಿಂತಲೂ ಆಕೆ ಹೆಚ್ಚು ಜಾಣತನ ತೋರಿಸ್ತಾಳೆ. ಇಷ್ಟು ಚಿಕ್ಕ ವಯಸ್ಸಿಗೆ ಇವಳಿಗೆ ಎಷ್ಟೊಂದು ಅನುಭವ, ಬುದ್ಧಿ ಇದ ಯಪ್ಪ ಅಂತ ಆಶ್ಚರ್ಯ ಆಗುತ್ತೆ."

"ಮತ್ತೇನು ಗುನುಗು ನಿನಗೆ ? ನಿನ್ನ ಮನೇವರಾಗಲೀ, ಅವಳ ಮನೇವ ರಾಗಲೀ ಏನಾದರೂ ಹೊಸ ಪ್ರಾಬ್ಲಮ್ ತಂದಿಟ್ಟಿದ್ದಾರಾ ?"

"ಇಲ್ಲಪ್ಪಾ, ಅವಳ ಮನೆಯವರು ಈಗಾಗಲೇ ಸಾಕಷ್ಟು ರಾಜಿ ಆಗಿದಾರೆ. ಆಕೆಯ ಸಿಸ್ಟರ್ ನಮ್ಮ ಮನೆಗೆ ಬಂದು ಹೋಗಿದಾರೆ. ನಮ್ಮ ಮನೆಯವರು ನಾನು ಕಾಗದ ಬರೆದರೆ, ಉತ್ತರ ಬರೆಯೋವಷ್ಟು ಮೆತ್ತಗಾಗಿದಾರೆ."

"ಹಾಗಾದ್ರೆ ಯಾಕೋ ಅವಳ ಮೇಲೆ ಬೇಜಾರು ಮಾಡ್ಕೊಂಡಿದೀಯಾ ? ಅಂಥಾ ಒಳ್ಳೇ ಹುಡುಗೀನ ನೋಯಿಸ್ಲಿ ಅಂತಾ ಏನೋ, ನಾವೆಲ್ಲ ನಿಂತು ಮದುವೆ ಮಾಡಿದ್ದು ?"

"ಅವಳು ನನಗೆ ಬೇಜಾರು ಮಾಡಿಲ್ಲವೋ. ನಾನು ಅವಳಿಗೆ ಬೇಜಾರು ಮಾಡ್ತಾ ಇದೀನಿ. ಅದಕ್ಕೇ ನನಗೆ ದುಃಖ."

ಅಸಹಾಯಕ

"ನೀನ್ಯಾಕೆ ಬೇಜಾರು ಮಾಡ್ತೀಯಾ? ಯಾವ ಮೂಲೆ ಮುಕ್ಕಾಗಿದೆ ನಿನಗೆ?"

"ಕಾರಣ ನನ್ನ ಹತೋಟಿಲಿಲ್ಲ. ನಾನೇನು ಮಾಡಲಿ ? ನಾನು ಅಸಹಾಯಕ ನಾಗಿದೀನಿ."

"ಏನೋ ಹಾಗಂದ್ರೆ ? ಏನಾದರೂ ಸೆಕ್ಷುಯಲ್ ಪ್ರಾಬ್ಲಮ್ಸ್ ಇದ ಯೇನೋ ?"

"ಹೌದು" ಎಂದು ತಲೆ ತಗ್ಗಿಸಿದ.

"ಲಲಿತ, ನೀನು ವಿನಯನನ್ನು ಸ್ವಲ್ಪ ಸುತ್ತಾಡಿಸಿಕೊಂಡು ಬಾ. ಇವನ ಪ್ರಾಬ್ಲಮ್ ಏನು ಅಂತ ಇವನು ಹೇಳ್ಲಿ" ಎಂದು ಅವರನ್ನು ಕಳುಹಿಸಿ, "ಹೇಳೊ" ಎಂದ ಪ್ರಭಾಕರ.

"ಬೇಗ ವೀರ್ಯಸ್ಖಲನವಾಗಿಬಿಡುತ್ತೆ. ಹೀಗಾಗಿ ನನಗೂ ತೃಪ್ತಿ ಇಲ್ಲ ; ಅವಳಿಗೂ ಇಲ್ಲ. ಮದುವೆಯಾದಾಗಿನಿಂದ ಈ ಪ್ರಾಬ್ಲಮ್ ಇದೆ, ಈ ದಿನ ಸರಿ ಹೋಗಬಹುದು ನಾಳೆ ಸರಿ ಹೋಗಬಹುದುಅಂತ ನಿರೀಕ್ಷೆ ಮಾಡ್ದೆ. ಪ್ರಾಬ್ಲಮ್

ಹಾಗೆ ಉಳಿದುಕೊಂಡು ಬಿಟ್ಟಿದೆ. ನನಗೆ, ನನಗಿಂತ ಅವಳಿಗೆ ಬಹಳ ನಿರಾಶೆ ಆಗಿದೆ." ದೇವೇಂದ್ರ ತನ್ನ ಸಮಸ್ಯೆಯನ್ನು ಹೇಳಿಕೊಂಡ,

"ಡಾಕ್ಟರಿಗೆ ತೋರಿಸಿದೆಯಾ? ಏನಾದರೂ ಚಿಕಿತ್ಸೆ ಮಾಡಿಸಿದೆಯಾ?"

"ಎರಡು ತಿಂಗಳ ಹಿಂದೆ ನಮ್ಮ ಫ್ಯಾಮಿಲಿ ಡಾಕ್ಟರಿಗೆ ನನ್ನ ಪ್ರಾಬ್ಲಮ್ ಹೇಳ್ದೆ. ಅವರು ಏನೂ ವರಿ ಮಾಡ್ಬೇಡಿ. ಈ ಮಾತ್ರೆ ತಗೊಳ್ಳಿ ಅಂತ ಕೆಲವು ಮಾತ್ರೆಗಳನ್ನು ಬರೆದುಕೊಟ್ಟರು, ಒಂದು ತಿಂಗಳು ತಿಂದೆ. ಏನೂ ಪ್ರಯೋಜನ ಆಗ್ಲಿಲ್ಲ. ಬಹಳ ಬೇಗ ಸ್ಖಲನವಾಗಿಬಿಡತ್ತೆ. ಎಷ್ಟು ಕಂಟ್ರೋಲ್ ಮಾಡೋದಕ್ಕೆ ಪ್ರಯತ್ನಿಸಿದರೂ ಆಗೋದಿಲ್ಲ. ಆಗ ಅವಳ ಮುಖ ನೋಡಬೇಕು; ನಿರಾಶೆಯಿಂದ ಕಪ್ಪಿಟ್ಟು ಹೋಗಿರುತ್ತೆ. ಪಾಪ ಅವಳೇ ನನಗೆ ಸಮಾಧಾನ ಮಾಡ್ತಾಳೆ. ಯೋಚನೆ ಮಾಡಬೇಡಿ. ವೀಕ್‌ನೆಸ್‌ಗೆ ಈ ರೀತಿ ಆಗಬಹುದು ಅಂತ ಕಾಣತ್ತೆ. ಸರಿಹೋಗುತ್ತೆ ಅಂತಾಳೆ. ಏನು ವೀಕ್‌ನೆಸ್ಸೋ ಏನೋ. ನನಗೇನಾಗಿದೆ ಧಾಡಿ. ಚೆನ್ನಾಗೇ ಇದ್ದೇನಲ್ಲಾ. ಆದರೂನೂವೇ ಒಳ್ಳೇ ಟಾನಿಕ್ ಬರೆಸಿಕೊಂಡು, ಕುಡೀತಾ ಇದೀನಿ, ವ್ಯಾಯಾಮ ಮಾಡ್ತಾ ಇದೀನಿ. ಯೋಗಾಸನಗಳನ್ನೂ ಹಾಕ್ತಾ ಇದೀನಿ. ಹೋದ ತಿಂಗಳು ಒಬ್ಬ ಸೆಕ್ಸ್ ಸ್ಪೆಶಲಿಸ್ಟ್, ಅದೇ ಪೇಪರ್‌ನಲ್ಲಿ ಬರತ್ತಲ್ಲ, ಕನ್ಸಲ್ಟ್ ಮಾಡ್ದೆ. ಆತ ಏನೋ ಒಂದಷ್ಟು ಮುಲಾಮು, ಪುಡಿ ಕೊಟ್ಟ, ಒಂದಷ್ಟು ದುಡ್ಡು ಕಿತ್ತ. ಇದನ್ನು ಉಪಯೋಗಿಸಿ, ಸರಿಹೋಗುತ್ತೆ ಅಂದ. ಏನೆಲ್ಲಾ ಮಾಡಿದರೂ ಈ ಪ್ರಾಬ್ಲಮ್ ಸಾಲ್ವ್ ಆಗ್ಲಿಲ್ಲ. ಹೀಗಾಗಿ ಬದುಕೇ ಬೇಡವಾಗಿಬಿಟ್ಟಿದೆ. ಏನಾದ್ರೂ ತೆಕ್ಕೊಂಡು ಪ್ರಾಣ ಬಿಟ್ಟುಬಿಡೋಣ ಅನ್ಸತ್ತೆ."

"ಛೆ ಛೇ. ಹಾಗೆಲ್ಲ ಯೋಚಿಸಬೇಡ. ಪ್ರತಿಯೊಂದು ಸಮಸ್ಯೆಗೂ ಒಂದು ಪರಿಹಾರ ಇದ್ದೇ ಇರತ್ತೆ. ಇದಕ್ಕೆ ಏನು ಕಾರಣ ಅಂತ ಡಾಕ್ಟರನ್ನು ಕೇಳಿದೆಯಾ?"

"ಕೇಳಿದೆನಪ್ಪಾ, ಅವರೇನೂ ಹೇಳ್ಲಿಲ್ಲ. ವೀಕ್‌ನೆಸ್ ಅಷ್ಟೇ. ನೀವು ಗಾಬರಿ ಆಗ್ಬೇಡಿ ಅಂದ್ರು. ಆ ಸೆಕ್ಸ್ ಸ್ಪೆಷಲಿಸ್ಟ್ ಪ್ರಕಾರ ಇದು ಸ್ವಪ್ನದೋಷ. ಆದರೆ ನನಗೆ ಅನ್ಸುತ್ತೆ, ಇದು ಚಿಕ್ಕ ವಯಸ್ಸಿನಲ್ಲೆ ಎರಡು ಮೂರು ವರ್ಷ ಹಸ್ತ ಮೈಥುನ ಮಾಡ್ಕೊಳ್ತಿದ್ದೆ. ಅದ್ರಿಂದ ಹೀಗಾಗಿರಬಹುದಾ ಅಂತ ಒಂದು ಅನುಮಾನ."

"ಇರಲಾರದು. ಹಸ್ತ ಮೈಥುನ ಸಹಜ ಸ್ವಾಭಾವಿಕ ಚಟುವಟಿಕೆ. ಅದರಿಂದ ಯಾವ ಹಾನಿಯೂ ಇಲ್ಲ ಅಂತ ಸೈಂಟಿಫಿಕ್ ಲಿಟರೇಚರ್‌ನಲ್ಲಿ ನಾನು ಓದಿದೀನಿ, ಒಂದು ಕೆಲಸ ಮಾಡು. ನನಗೆ ಒಬ್ಬ ಮನೋ ವೈದ್ಯರ ಪರಿಚಯ ಇದೆ.

ಅವರನ್ನು ಕಂಡು ಸಲಹೆ ಪಡಿ. ಸುಮ್ಮನೆ ಹೀಗೆ ಕುಳಿತು ಚಿಂತೆ ಮಾಡಿದರೆ, ನಿನ್ನ ಸಮಸ್ಯೆ ಬಗೆಹರಿಯೋಲ್ಲ."

"ಥ್ಯಾಂಕ್ಸ್, ಈಗ ನನ್ನ ಮನಸ್ಸಿನ ಭಾರ ಅರ್ಧ ಕಡಿಮೆಯಾಯಿತು. ಕೆಸರಿನಲ್ಲಿ ಕಾಲು ಹೂತು ಹೋದ ಹಾಗೆ, ನನ್ನ ಮನಸ್ಸು ಸಮಸ್ಯೆಯಲ್ಲಿ ಸಿಕ್ಕಿಕೊಂಡು ಏನು ಮಾಡ್ಬೇಕು ಅಂತಾನೇ ತೋಚಿರಲಿಲ್ಲ." ಎಂದ ದೇವೇಂದ್ರ ಸ್ವಲ್ಪ ಗೆಲುವಾದ.

o o o o

"ನಾನು ನಿಮಗೆ ಕೆಲವು ವೈಯುಕ್ತಿಕ ಪ್ರಶ್ನೆಗಳನ್ನು ಕೇಳ್ತೀನಿ. ನೀವು ಸಂಕೋಚಪಟ್ಕೊಳ್ಳದೆ. ಉತ್ತರಿಸಬೇಕು. ಹೇಗಪ್ಪಾ ಮಾತಾಡೋದು ಅಂತ ಹಿಂಜರಿಬಾರದು." ಡಾ॥ ಮೂರ್ತಿ ಹೇಳಿದಾಗ ದೇವೇಂದ್ರ ಶಮಂತಕರು ಆಗಲಿ ಎಂದು ತಲೆಯಾಡಿಸಿದರು. "ನೀವು ಇಷ್ಟಪಟ್ಟು ಒಬ್ಬರನೊಬ್ಬರು ಪ್ರೀತಿಸಿ ಮದುವೆಯಾದವರು. ಅಂದರೆ ಮದುವೆಗೆ ಮೊದಲು ಪರಸ್ಪರ ಪರಿಚಯವಿದ್ದವರು. ಮದುವೆಗೆ ಮುನ್ನ ಲೈಂಗಿಕ ಸಂಪರ್ಕ ಮಾಡಿದ್ದಿರಾ ?"

ಇಬ್ಬರೂ ಇಲ್ಲ ಎಂದು ತಲೆ ಆಡಿಸಿದರು. "ಲೈಂಗಿಕ ಸಂಪರ್ಕ ಮಾಡಲಿಲ್ಲ ಸಾರ್. ಆದರೆ ಅಪ್ಪಿಕೊಳ್ಳೋದು. ಮುತ್ತಿಡೋದು ಮಾಡಿದ್ದೆವು." ಎಂದ ದೇವೇಂದ್ರ.

"ಮದುವೆ ಆದ ಮೇಲೆ ಲೈಂಗಿಕ ಕ್ರಿಯೆ ಬಗ್ಗೆ ಏನು ಭಾವನೆಗಳಿದ್ದುವು ಹೇಳ್ತೀರಾ ?"

"ನನಗೆ ಲೈಂಗಿಕ ಕ್ರಿಯೆ ಬಗ್ಗೆ ಆಸಕ್ತಿ ಇತ್ತು. ಆದರೆ ನಾನು ಹೇಗೆ ಮಾಡುತ್ತೇನೋ ಏನೋ. ನನ್ನಿಂದ ಈಕೆಗೆ ಪೂರ್ಣ ತೃಪ್ತಿ ಸಂತೋಷ ಸಿಗುತ್ತೋ ಇಲ್ಲವೋ ಎಂಬ ಅನುಮಾನ ಇತ್ತು..." ದೇವೇಂದ್ರ ನುಡಿದ.

ಅಳುಕು

"ಈ ಅನುಮಾನ ಬರಲು ಕಾರಣ ಏನಾದರೂ ಇತ್ತೇ"

"ಇತ್ತು ಸಾರ್. ನಾನು 16ನೇ ವರ್ಷದಿಂದ 18 ವರ್ಷ ವಯಸ್ಸಿನವರೆಗೆ ಸುಮಾರು ಎರಡು ವರ್ಷ ಕಾಲ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದೆ. ಆಮೇಲೆ ಅದನ್ನು ಪೂರ್ಣ ನಿಲ್ಲಿಸಿಬಿಟ್ಟೆ. ಹಸ್ತ ಮೈಥುನದಿಂದ ನನ್ನ ಲೈಂಗಿಕ ಶಕ್ತಿ ಕಡಿಮೆಯಾಗಿರಬಹುದು ; ಆದರಿಂದ ಚೆನ್ನಾಗಿ ಸಂಭೋಗ ಮಾಡಲು ಆಗತ್ತೋ ಇಲ್ಲವೋ ಅನ್ನೋ ಅಳುಕಿತ್ತು."

"ಶಮಂತಕ, ನಿಮಗೆ ಯಾವ ಭಾವನೆಗಳಿದ್ದುವು ?"

"ನನಗೆ ಕುತೂಹಲವಿದ್ದರೂ, ಭಯ ಇತ್ತು"

"ಭಯ ಇರಲು ಏನು ಕಾರಣ ಹೇಳ್ತೀರಾ ?"

"ಪ್ರಾರಂಭದಲ್ಲಿ ಸಂಭೋಗದಿಂದ ಹೆಣ್ಣಿಗೆ ತುಂಬಾ ನೋವಾಗುತ್ತೆ ಅಂತ ಕೇಳಿದ್ದೆ. ನನಗೂ ಹಾಗೇ ನೋವಾಗುತ್ತೇನೋ ಅನಿಸಿತ್ತು. ಅಲ್ಲದೇ ಕೂಡಲೇ ಗರ್ಭಧಾರಣೆ ಆಗುವುದು ಬೇಡವಾಗಿತ್ತು."

"ಮೊದಲ ಸಾರಿ ಸಂಭೋಗ ಮಾಡಿದಾಗ ನಿಮ್ಮಗಳ ಅನುಭವ ಹೇಗಿತ್ತು ?"

"ಒಂದು ರೀತಿ ಭ್ರಮನಿರಸನವಾಯ್ತು. ನಾನು ನಿರೀಕ್ಷಿಸಿದ್ದೇ ಒಂದು. ಆದ ಅನುಭವವೇ ಒಂದು, ನಾನು ಆದರಿಂದ ಎಂತಹ ಅನುಭವವನ್ನು ನಿರೀಕ್ಷಿಸಿ ದ್ದೆನೋ ಅದು ಸಿಗದೆ ನಿರಾಶೆ ಆಯಿತು," ಎಂದ ದೇವೇಂದ್ರ.

"ನನಗೆ ಏನೂ ಅನಿಸಲಿಲ್ಲ ಅಂತ ಅಂದರೆ ನೀವು ನಂಬ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ ಸಾರ್. ಅದು ಮುಗಿದಾಗ, ಇಷ್ಟಕ್ಕೆ ಜನ ಎಷ್ಟೊಂದು ಹಾತೊರೀತಾರೆ ; ಏನು ಕಥೆ ಎನಿಸಿತು. ಅದರಲ್ಲಿ ನನಗೆ ಯಾವ ಆಕರ್ಷಣೆಯೂ ಕಾಣಲಿಲ್ಲ" ಎಂದಳು ಶಮಂತಕ.

"ದೇವೇಂದ್ರ, ನಂತರದ ದಿನಗಳಲ್ಲಿ, ಸಂಭೋಗ ಮಾಡುವ ಮೊದಲು, ನಿಮ್ಮ ಮನಸ್ಸಿಗೆ ಬರುತ್ತಿದ್ದ ಭಾವನೆಗಳೇನು ?"

"ಮೊದಲ ಸಲದ ಅನುಭವದಿಂದ, ಆಮೇಲೆ ಪ್ರತಿ ಸಾರಿ ಮಾಡುವಾಗಲೂ, ಹಿಂದಿನ ಸಲದಂತೆ ಬೇಗ ವೀರ್ಯಸ್ಖಲನವಾಗಿಬಿಡಂತ್ತೇನೋ. ನಾನು ಮತ್ತೆ ವಿಫಲ ನಾದರೆ, ಈಕೆ ಏನೆಂದುಕೊಳ್ಳುತ್ತಾಳೆ. ಸುಖ ಕೊಡದ ನನ್ನನ್ನು ಆಕ್ಷೇಪಿಸಬಹುದು. ನನ್ನ ಪುರುಷತ್ವವನ್ನು ಶಂಕಿಸಬಹುದು. ಆಗ ಎಂಥ ಅವಮಾನ, ಇತ್ಯಾದಿ ಯೋಚನೆಗಳಿಂದ ತಲೆ ಬಿಸಿಯಾಗಿಬಿಡುತ್ತಿತ್ತು. ನೆಮ್ಮದಿ ಇರುತ್ತಿರಲಿಲ್ಲ. ಹೀಗಾಗಿ ಕೆಲವು ಸಲ ನಾನು ಪೆದ್ದು ಪೆದ್ದಾಗಿ ನಡೆದುಕೊಳ್ಳುತ್ತಿದ್ದೆ. ಈಗಲೂ ಅಷ್ಟೆ, ರಾತ್ರಿ ಬಂದಿತೆಂದರೆ ಆತಂಕ ಶುರುವಾಗುತ್ತೆ."

ಡಾ॥ ಮೂರ್ತಿ ಮುಗುಳ್ನಕ್ಕರು. "ನಿಮ್ಮ ಸಮಸ್ಯೆಗೆ ಉತ್ತರ ನಿಮ್ಮ ಭಾವನೆ, ಧೋರಣೆಗಳಲ್ಲೇ ಇದೆ ಎಂದರೆ ನಿಮಗೆ ಒಗಟಿನಂತೆ ಕಾಣ ಬಹುದು. ಶೀಘ್ರ ವೀರ್ಯಸ್ಖಲನಕ್ಕೆ ಮನಸ್ಸಿನ ಉದ್ವೇಗವೇ ಕಾರಣ ಎಂದು ವೈಜ್ಞಾನಿಕವಾಗಿ ಸಾಬೀತಾಗಿದೆ. ಯಾವುದೇ ಕಾರಣದಿಂದ ಮನಸ್ಸಿನ ನೆಮ್ಮದಿ ಇಲ್ಲದೆ, ನಾವು ಆತಂಕಕ್ಕೀಡಾದರೆ, ಆತಂಕದ ಪರಿಣಾಮ ಮಿದುಳಿನ ಸ್ವಾಯತ್ತ ನರವ್ಯವಸ್ಥೆಯ ಅನುವೇದಕ ನರ ಪ್ರಚೋದನೆಗೊಳ್ಳುತ್ತದೆ. ಈ ಅನುವೇದಕ ನರ ಪ್ರಚೋದನೆಗೊಂಡಾಗ, ಇತರ ಪರಿಣಾಮಗಳೊಂದಿಗೆ, ವೀರ್ಯ ಸ್ಖಲನವಾಗಿ, ಜನನಾಂಗದ ಉದ್ರೇಕ ಇಳಿದುಹೋಗುತ್ತದೆ. ಹೆಚ್ಚು ಮಾನಸಿಕ ಉದ್ವೇಗ, ಒತ್ತಡದಿಂದ, ಹೆಚ್ಚು ಅನುವೇದಕ ನರ ಪ್ರಚೋದನೆ ; ಪರಿಣಾಮ,

ಬೇಗ ವೀರ್ಯಸ್ಖಲನ. ದೇವೇಂದ್ರ, ನಿಮ್ಮ ಮನಸ್ಸಿನಲ್ಲಿದ್ದ, ಹಸ್ತಮೈಥುನದ ಬಗ್ಗೆ ಅನವಶ್ಯಕ ಆತಂಕ, ಭಯ, ಅನುಮಾನದಿಂದ ಉಂಟಾದ ಮಾನಸಿಕ ಒತ್ತಡದಿಂದ ಶೀಘ್ರ ವೀರ್ಯಸ್ಖಲನವಾಯ್ತು. ಶಮಂತಕಳ ಮನಸ್ಸಿನಲ್ಲಿದ್ದ ಸಂಭೋಗದ ಬಗ್ಗೆ ಭಯ, ಪರೋಕ್ಷವಾಗಿ ವಾತಾವರಣದಲ್ಲಿ ಮತ್ತಷ್ಟು ಒತ್ತಡ ವನ್ನು ಹೆಚ್ಚಿಸುವುದಕ್ಕೆ ನೆರವಾಯ್ತು. ಒಂದು ಸಾರಿ ಬೇಗ ವೀರ್ಯಸ್ಖಲನವಾದಾಗ, ಮುಂದಿನ ಸಲ ಹೀಗೇ ಆಗುತ್ತೇನೋ ; ಆದರೆ ಮುಂದೇನು ಗತಿ ಎಂಬ ಆತಂಕ ಶುರುವಾಗುತ್ತೆ. ಮನಸ್ಸಿನ ಒತ್ತಡ ಜಾಸ್ತಿಯಾಗುತ್ತೆ. ಪರಿಣಾಮ ಮತ್ತಷ್ಟು ಶೀಘ್ರವಾಗಿ ವೀರ್ಯ ಸ್ಖಲನ. ಇದೊಂದು ವಿಷಚಕ್ರವಾಗುತ್ತದೆ. ಇದರಿಂದ ಲೈಂಗಿಕ ಚಟುವಟಿಕೆ ಸಂತೋಷ, ತೃಪ್ತಿಯನ್ನು ತರುವ ಬದಲು, ಆತಂಕ ನಿರಾಶೆ ಯನ್ನು ತರುತ್ತೆ. ಈ ವಿಷಚಕ್ರದಿಂದ ಹೊರಬರುವುದು ಕಷ್ಟವಾಗುತ್ತೆ." ಎಂದರು.

ಮೊದಲ ಹೆಜ್ಜೆ

"ಅಂದರೆ ಇದಕ್ಕೆ ಪರಿಹಾರವಿಲ್ಲವೇ ಸಾರ್ ?"

"ಖಂಡಿತ ಇದೆ. ಮನಸ್ಸಿನ ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಿ ಕೊಳ್ಳುವುದು ಮೊದಲ ಹಜ್ಜೆ. ಮನಸ್ಸು ನೆಮ್ಮದಿಯಿಂದಿದ್ದಾಗ, ಅನುವೇದಕ ನರ ಪ್ರಚೋದನೆಗೊಳ್ಳುವುದಿಲ್ಲ. ಅದರ ಬದಲು ಜನನಾಂಗವನ್ನು ಉದ್ರೇಕಿಸುವ ಮತ್ತು ವೀರ್ಯ ಸ್ಖಲನವನ್ನು ಮುಂದೂಡುವ ಉಪಾನುವೇದಕ ನರ ಉತ್ತೇಜಿತ ಗೊಳ್ಳುತ್ತದೆ. ಆಗ ತೃಪ್ತಿಕರ ಲೈಂಗಿಕ ಕ್ರಿಯೆ ನಡೆಸುವುದು ಸಾಧ್ಯವಾಗುತ್ತದೆ. ಮನುಷ್ಯನ ಲೈಂಗಿಕ ಬೆಳವಣಿಗೆಯಲ್ಲಿ ಸಹಜವಾದ ಮತ್ತು ಸ್ವಾಭಾವಿಕವಾದ ಹಸ್ತಮೈಥುನದಿಂದ ಯಾವ ಹಾನಿಯೂ ಇಲ್ಲ. ಅದರಿಂದ ಲೈಂಗಿಕ ದೌರ್ಬಲ್ಯ ಬರುವುದಿಲ್ಲ. ಆದ್ದರಿಂದ ನೀವು ಹಸ್ತಮೈಥುನದ ಬಗ್ಗೆ ಭಯಬಿಟ್ಟು, ಮನಸ್ಸಿನ ಅಳುಕನ್ನು ನಿವಾರಿಸಿಕೊಳ್ಳಬೇಕು. ಹೊಂದಾಣಿಕೆಯಿಂದ ಲೈಂಗಿಕ ಚಟುವಟಿಕೆ ನಡೆಸಿ, ಪರಸ್ಪರ ಸುಖ ಪಡೆಯಲು ಅಭ್ಯಾಸಬೇಕು. ಅಂತೆಯೇ ಇದಕ್ಕೆ ಸಮಯ ಬೇಕಾಗುತ್ತದೆ. ಪೂರ್ಣ ಹೊಂದಾಣಿಕೆ ಸಾಧಿಸಲು ಕೆಲವುಸಲ, ಕೆಲವಾರು ತಿಂಗಳುಗಳೆ ಬೇಕಾಗುತ್ತದೆ. ಗಂಡ ಹೆಂಡತಿ ಸಹನೆಯಿಂದ ಪ್ರೀತಿ ವಿಶ್ವಾಸದಿಂದ, ಹಂತ ಹಂತವಾಗಿ ಇದನ್ನು ಸಾಧಿಸಬೇಕು. ಲೈಂಗಿಕ ಕ್ರಿಯೆ ಬಗ್ಗೆ ಅಜ್ಞಾನ ಎಷ್ಟು ಹಾನಿ ಕರವೋ, ಉತ್ಪ್ರೇಕ್ಷಿತ ಕಲ್ಪನೆಯೂ ಅಷ್ಟೇ ಹಾನಿಕರ. ಮನಸ್ಸಿಗೆ ಹಿತವಾಗುವ ಹಾಗೆ, ವಾತಾವರಣವನ್ನು ಸಿದ್ಧಗೊಳಿಸಿ, ಗಡಿಬಿಡಿ ಇಲ್ಲದೆ, ಶಾಂತತೆಯಿಂದ ಲೈಂಗಿಕ ಕ್ರಿಯೆ ನಡೆಸಿ."

“ವೀರ್ಯ ಸ್ಖಲನ ಬೇಗ ಆಗದಂತೆ ಮಾಡುವ ಔಷಧಿ ಇಲ್ಲವೇ ?”

“ಪರಿಣಾಮಕಾರಿ ಔಷಧಿ ಇಲ್ಲ. ಔಷಧಿಗಿಂತ, ಪ್ರಪಂಚದಾದ್ಯಂತ ‘ಸ್ಟಾಪ್
ಡ್ ಸ್ಟಾರ್ಟ್’ ವಿಧಾನವನ್ನು ಶೀಘ್ರ ವೀರ್ಯಸ್ಖಲನಕ್ಕೆ ಚಿಕಿತ್ಸಾ ವಿಧಾನವಾಗಿ
ಸಲಾಗುತ್ತಿದೆ. ಡಾ॥ ಮಾಸ್ಟರ್ಸ್ ಮತ್ತು ಜಾನ್ಸನ್ನರ ಈ ವಿಧಾನದಲ್ಲಿ,
ರಾಮವಾಗಿ ಮಲಗಿರುವ ಗಂಡಸ ಜನನಾಂಗವನ್ನು ಹೆಂಡತಿ ತನ್ನ ಕೈಯಿಂದ
ಟ್ಟಿ ಪ್ರಚೋದಿಸಲು ಪ್ರಾರಂಭಿಸುತ್ತಾಳೆ. ಗಂಡು ಈ ಸ್ಪರ್ಶಸುಖವನ್ನು
ುಭವಿಸುತ್ತಾ ಇನ್ನೇನು ವೀರ್ಯ ಸ್ಖಲನವಾಗುತ್ತದೆ ಎನಿಸಿದಾಗ, ಪ್ರಚೋದನೆ
ನ್ನು ನಿಲ್ಲಿಸಲು ಸಂಗಾತಿಗೆ ಹೇಳುತ್ತಾನೆ. ಆಗ ವೀರ್ಯ ಸ್ಖಲನವಾಗುವುದಿಲ್ಲ.
ವು ನಿಮಿಷಗಳು ಕಳೆದ ಮೇಲೆ, ಆಕೆ ಮತ್ತೆ ಪ್ರಚೋದನೆ ಮಾಡುತ್ತಾಳೆ ಹೀಗೆ
ಧ್ಯವಾದಷ್ಟು ಕಾಲ ವೀರ್ಯ ಸ್ಖಲನವನ್ನು ಮುಂದೂಡಲು ದಂಪತಿಗಳು ಪ್ರಯತ್ನಿ
ತ್ತಾರೆ. ಈ ಅವಧಿಯಲ್ಲಿ ಸಂಭೋಗ ನಿಷಿದ್ಧ. ಹೀಗೆ ಕೆಲವಾರು ದಿನಗಳು
ಂದ ಪ್ರಚೋದನೆ ಮಾಡಿ ನಿಲ್ಲಿಸಿ, ವೀರ್ಯ ಸ್ಖಲನವನ್ನು ಕೆಲವು ನಿಮಿಷಗಳವರೆಗೆ
ದಂತೆ ನೋಡಿಕೊಂಡ ಮೇಲೆ, ಸಂಭೋಗ ಮಾಡಲು ಹೇಳಲಾಗುತ್ತದೆ. ಕ್ರಮ
ಗಿ ಈ ಚಿಕಿತ್ಸೆಯನ್ನು ಮಾಡಿಕೊಂಡರೆ, ಶೀಘ್ರ ವೀರ್ಯಸ್ಖಲನದ ಸಮಸ್ಯೆ ಪರಿಹಾರ
ಗುತ್ತದೆ. ಪ್ರಾರಂಭದಲ್ಲಿ ಹತೋಟಿಗೆ ಮೊದಲೇ ವೀರ್ಯಸ್ಖಲನವಾದರೆ,
ತಿಸಬೇಕಿಲ್ಲ. ವಿಫಲತೆಯೇ ಯಶಸ್ಸಿನ ಮೆಟ್ಟಿಲು ಎನ್ನುವುದನ್ನು ಮರೆಯ
ರದು. ನೀವು ಈ ವಿಧಾನವನ್ನು ಅಭ್ಯಾಸ ಮಾಡಿ. ಖಂಡಿತ ನಿಮಗೆ ಯಶಸ್ಸು
ುತ್ತದೆ. ನಿಮಗೆ ಒಳಿತಾಗಲಿ ಎಂದು ಡಾ॥ ಮೂರ್ತಿ ಹಾರೈಸಿದರು.

ಬಿಡಿಸಲಾಗದ ಒಗಟಿನಂತಾದ ಹೆಂಡತಿ

ಅಪರೂಪಕ್ಕೆ ನಾಲ್ಕು ಜನ ಮಿತ್ರರು ಒಟ್ಟಿಗೆ ಸೇರಿದುದರ ಸಂಭ್ರಮ ವಾತಾವರಣದಲ್ಲಿ ದಟ್ಟವಾಗಿತ್ತು. ಡಾ॥ ಮೂರ್ತಿಯವರ ಕಾಲೇಜು ಸಹಪಾಠಿಗಳು ಮತ್ತು ಆತ್ಮೀಯ ಸ್ನೇಹಿತರಾದ ಡಾ॥ ನಿರಂಜನ್ ರೆಡ್ಡಿ, ಡಾ॥ ಶ್ಯಾಮಲ ಮತ್ತು ಡಾ॥ ಅರುಣ್, ಮೂರ್ತಿಯವರ ಮನೆಯಲ್ಲಿ ಸೇರಿದ್ದರು. ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ, ಐದಾರು ವರ್ಷಗಳು ದಿನಕ್ಕೆ ಎಂಟು ಗಂಟೆಗಳ ಕಾಲ ಜೊತೆಯಲ್ಲಿದ್ದು ಅನ್ಯೋನ್ಯತೆ ಬೆಳಿಸಿಕೊಂಡಿದ್ದರೂ, ಡಿಗ್ರಿ ಪಡೆದು ವೃತ್ತಿಯನ್ನು ನಡೆಸಲು ಪ್ರಾರಂಭಿಸುತ್ತಿದ್ದಂತೆ ಬೇರೆ ಬೇರೆಯಾಗಿದ್ದರು. ಡಾ॥ ಮೂರ್ತಿ ಮನೋವೈದ್ಯರಾದರೆ, ಡಾ॥ ರೆಡ್ಡಿ ಎಂ. ಎಸ್. ಮಾಡಿ ಸರ್ಜನ್ ಆದರು. ಡಾಕ್ಟರ್ ಶ್ಯಾಮಲ ಸಹಜವಾಗಿ ಪ್ರಸೂತಿ ಶಾಸ್ತ್ರದಲ್ಲಿ ಪರಿಣತೆಯಾದರು. ಡಾ॥ ಅರುಣ್ ಅನಿಸ್ತೀಸಿಯಾ ತಜ್ಞರಾದರು. ಬೇರೆ ಬೇರೆ ಆಸ್ಪತ್ರೆ, ಊರುಗಳಲ್ಲಿ ಕೆಲಸ ಮಾಡುತ್ತಾ ಇದ್ದು, ಒಟ್ಟಿಗೆ ಸೇರುವುದು ನಿಜಕ್ಕೂ ಅಪರೂಪವೇ. ಸಂಬಂಧ ಏನಿದ್ದರೂ ಆಗೊಮ್ಮೆ ಈಗೊಮ್ಮೆ ಬರೆಯುವ ಪತ್ರದ ಮುಖಾಂತರ ಮಾತ್ರ ಕೆಲಸದ ಒತ್ತಡದಲ್ಲಿ ಅದೂ ಕ್ರಮವಾಗಿ ನಡೆಯದು. ಬೆಂಗಳೂರಿನಲ್ಲಿ ಡಾಕ್ಟರ್ ಶ್ಯಾಮಲರ ತಂಗಿಯ ಮದುವೆ ನಡೆದು, ನಾಲ್ವರು ಮಿತ್ರರು ಒಟ್ಟಿಗೆ ಸೇರು ವಂತಾಗಿತ್ತು. ಕಾಲೇಜು ದಿನಗಳು, ಅಧ್ಯಾಪಕರು, ಸಹಪಾಠಿಗಳು, ಆಗಿನ ತಮ್ಮ ಅನುಭವಗಳನ್ನು ಹೇಳಿಕೊಂಡು ಹಿಂದಿನ ವಿದ್ಯಾರ್ಥಿ ಜೀವನದ ಕ್ಷಣಗಳನ್ನು ಮೆಲುಕು ಹಾಕಿದರು. ಆ ದಿನಗಳನ್ನು ನೆನೆಸಿಕೊಂಡರೆ ಮನಸ್ಸಿಗೆ ಎಷ್ಟೊಂದು ಆಹ್ಲಾದವಾಗುತ್ತದೆ, ವಿದ್ಯಾರ್ಥಿ ಅವಧಿ, ಬಾಳಿನ ಸುವರ್ಣಾವಧಿ ಎಂದು ಬಣ್ಣಿಸಿದರು. ಈಗಿನ ಒತ್ತಡ; ಗಲಾಟೆ ಗಡಿಬಿಡಿ, ಜವಾಬ್ದಾರಿ, ದಿನ ಬೆಳಗಾದರೆ ರೋಗಿಗಳನ್ನು ನೋಡುವುದು, ಚಿಕಿತ್ಸೆ ಮಾಡುವುದು, ಆಸ್ಪತ್ರೆ ಮನೆಗೆ ಸುತ್ತುವುದು ಹೇಗೆ ಬದುಕು ವೈವಿಧ್ಯತೆ ಇಲ್ಲದೆ ಬರಡಾಗಿದೆ ಎಂದು ಹೇಳಿಕೊಂಡರು. ಜೊತೆ ಮದುವೆಯಾಗಿ ಮಡದಿ, ಮಕ್ಕಳು ಸಂಸಾರದ ಜವಾಬ್ದಾರಿ, ನೆತ್ತಿಯ ಮೇಲಿ ಕತ್ತಿಯಂತೆ ತೂಗುತ್ತಾ ಹೇಗೆ ಆತಂಕಕ್ಕೆ ಕಾರಣವಾಗಿದೆ ಎಂಬುದನ್ನು ತೋ

ಕೊಂಡರು. ತಮ್ಮ ವೃತ್ತಿಜೀವನದ ಕೆಲವು ಅಹಿತ ಅನುಭವಗಳನ್ನು, ಸೋಲು ಗಳನ್ನು ಹೇಳಿಕೊಂಡು ಸಮಾಧಾನಪಟ್ಟರು.

ವೈದ್ಯರಿಗೂ ಖಾಯಿಲೆ

"ಮೂರ್ತಿ, ನಮ್ಮ ಜೀವನ ಇಷ್ಟೇ. ರೋಗ-ರೋಗಿ-ಚಿಕಿತ್ಸೆ ಇದರ ಸುತ್ತಲೇ ತಿರುಗುತ್ತಿರುತ್ತದೆ. ಜನಗಳ ಪಾಲಿಗೆ ನಾವು ವೈದ್ಯರೆಂದರೆ ಏನೋ ವೈಭೋಗದ ಜೀವನ ನಡೆಸುತ್ತೇವೆ ಎಂಬ ಕಲ್ಪನೆ ಇದೆ. ನಮಗೆ ಜ್ವರವೋ ತಲೆನೋವೋ, ಬಂದರೆ, ಔಷಧ ತಿನ್ನುವುದನ್ನು ಕಂಡರೆ, ಏನು ಡಾಕ್ಟರೇ ನೀವೂ ಔಷಧ ತಿನ್ನು ತ್ತೀರಾ; ನಿಮಗೂ ಖಾಯಿಲೆ ಬರುತ್ತಾ' ಅಂತ ಕೇಳ್ತಾರೆ. ಡಾಕ್ಟರು ಅತಿಮಾನವರು ಅವರಿಗೆ ನಮ್ಮ ಹಾಗೆ ಖಾಯಿಲೆ ಬರುವುದೆಂದರೇನು ಎಂದು ಅವರ ಎಣಿಕೆ. ಆದರೆ ನಾವೂ ಮನುಷ್ಯರು ಎಂಬುದು ಅವರಿಗೆ ಗೊತ್ತಿಲ್ಲ..." ಡಾ॥ ಅರುಣ್ ನಕ್ಕರು.

"ಡಾಕ್ಟರೆಂದರೆ. ಅವರಲ್ಲಿ ಹೇರಳ ಹಣ ಇರುತ್ತೆ ಅಂತ ಇನ್ನೊಂದು ನಂಬಿಕೆ ಇದೆ. ಸರ್ಕಾರಿ ನೌಕರಿಯಲ್ಲಿದ್ದು ಪ್ರಾಮಾಣಿಕವಾಗಿ ಕೆಲಸ ಮಾಡಿದ್ರೆ, ಬರೋ ಸಂಬಳದಲ್ಲಿ ಒಂದು ಸ್ಕೂಟರ್ ಇಟ್ಕೊಳ್ಳೋದಕ್ಕೂ ಯೋಚನೆ ಮಾಡಬೇಕಾಗುತ್ತೆ. ಮಗುವನ್ನು ಸರ್ಕಾರಿ ಶಾಲೆಗೆ ಕಳುಹಿಸಬೇಕೇ ಹೊರತು. ಪ್ರೈವೇಟ್ ಸ್ಕೂಲಿಗೆ ಕಳುಹಿಸಲು ಸಾಧ್ಯವಿಲ್ಲ. ಖಾಯಿಲೆ ಇದ್ದಾಗ 'ಡಾಕ್ಟ್ರೇ ನೀವೇ ದೇವರು' ಅನ್ನೋ ಜನ, ಖಾಯಿಲೆ ವಾಸಿಯಾದ ಮೇಲೆ, ಮರೆತು ಬಿಡ್ತಾರೆ. 'ಡಾಕ್ಟರುಗಳಿಗೇನು ಗುನುಗು. ಪೇಷೆಂಟುಗಳ ಹತ್ರ ದುಡ್ಡು ಕೀಳ್ತಾರೆ' ಅಂತ ದೂರುತ್ತಾರೆ. ಮಧ್ಯ ರಾತ್ರಿಯಲ್ಲಿ ಎಬ್ಬಿಸಿ ಕರಕೊಂಡು ಹೋಗಿ, ಆಮೇಲೆ ಮುಖ ತೋರಿಸೊಲ್ಲ. ರೋಗಿ ಹೇಗಿದ್ದಾನೆ ಅಂತ ಬಂದು ಹೇಳೋದಿಲ್ಲ. ಬೆಳಿಗ್ಗೆ ಎದ್ದು ಪ್ರೈವೇಟ್ ಡಾಕ್ಟರಿಗೆ ತೋರಿಸಿ ಹಣ ತೆರುತ್ತಾರೆ. ಇದನ್ನು ನೋಡಿ ಬೇಜಾರಾಗಿ "ನಾನು ಬರೋದಿಲ್ಲ, ನಿಮ್ಮ ಪ್ರೈವೇಟ್ ಡಾಕ್ಟರನ್ನು ಕರೆದುಕೊಂಡು ಹೋಗಿ" ಅಂದ್ರೆ, ಎಮರ್ಜೆನ್ಸಿ ಅಂತ ಕರೆದರೆ ಡಾಕ್ಟರು ಬರ್ಲಿಲ್ಲ. ಈ ಸರ್ಕಾರಿ ಡಾಕ್ಟರಿಗೆ ರೋಗಿ ಗಿಂತ ನಿದ್ರೆಯೇ ಹೆಚ್ಚು ಮುಖ್ಯ" ಅಂತ ಮೂಗರ್ಜಿ ಬರೀತಾರೆ. ಬೇಡಪ್ಪಾ ಈ ವೃತ್ತಿ. ನಾನು ನನ್ನ ಮಗನನ್ನು ಖಂಡಿತ ಮೆಡಿಕಲ್‌ಗೆ ಸೇರ್ಸೊಲ್ಲ" ಎಂದರು ಡಾ॥ ಶ್ಯಾಮಲ.

"ಹೋಗ್ಲಿ ಬಿಡಿ, ನಮ್ಮ ಗೋಳು ಇದ್ದದ್ದೇ, ನಾವು ಶರೀರಕ್ಕೆ ಖಾಯಿಲೆ ಬಂದ್ರೆ ಚಿಕಿತ್ಸೆ ಕೊಡ್ತೇವೆ. ರೋಗಿಗಳ ಬಾಹ್ಯ ನಡೆವಳಿಕೆ, ಮಾತುಗಳಷ್ಟೇ ನಮಗೆ ಪರಿಚಯ. ಮೂರ್ತಿ ನೀನು ಮನೋವೈದ್ಯ. ರೋಗಿಯ ಮನಸ್ಸಿನ ಉದ್ವೇಗಗಳ, ಆಳ ವಿಸ್ತಾರಗಳನ್ನೂ ಅರ್ಥ ಮಾಡ್ಕೊಂಡು, ಅದರಲ್ಲಿರೋ

ನ್ಯೂನತೇನಾ ಕಂಡು ಹಿಡಿದು ಸರಿಪಡಿಸುವವನು. ಈ ಹೊತ್ತು ಒಂದು ಇಂಟೆರೆಸ್ಟಿಂಗ್ ಕೇಸ್ ಬಗ್ಗೆ ಹೇಳು, ಕೇಳಿ ಸಂತೋಷಪಡ್ತೇವೆ. ನೀವೇನಂತೀರಾ...?" ಗೆಳೆಯರನ್ನು ಪ್ರಶ್ನಿಸಿದರು ಡಾ॥ ರೆಡ್ಡಿ.

ಅನುಭವಕ್ಕೆ ಬಂದದ್ದು

"ಹೌದೌದು, ಮೂರ್ತಿಯ ಅನುಭವ ಕೇಳೋದು ಒಳ್ಳೆಯ ಕಥೆ ಕೇಳ್ದ ಹಾಗಿರತ್ತೆ. ಜೊತೆಗೆ ತಿಳಿದುಕೊಳ್ಳಬೇಕಾದ ಮಾಹಿತೀನೂ ಇರುತ್ತೆ. ಹೇಳು ಮೂರ್ತಿ" ಎಂದರು ಡಾ॥ ಅರುಣ್.

"ನೀವೆಲ್ಲ ಸೇರ್ಕೊಂಡು ನನ್ನ ಹೊಗಳ್ತಿದ್ದೀರಿ. ಎಷ್ಟಾದರೂ ಆತ್ಮೀಯ ಸ್ನೇಹಿತರಲ್ಲವೇ, ನೀವಲ್ಲದೆ ಇನ್ಯಾರು ನನ್ನನ್ನು ಹೊಗಳಬೇಕು. ಆಯ್ತು. ಐದು ವರ್ಷದ ಹಿಂದೆ ನನ್ನ ಅನುಭವಕ್ಕೆ ಬಂದ ಒಂದು ಕೇಸನ್ನು ಹೇಳ್ತೇನೆ, ಇಂಟೆರೆಸ್ಟಿಂಗ್ ಆಗಿಲ್ಲದಿದ್ರೆ ಆಮೇಲೆ ನನ್ನನ್ನು ಬೈಯಬೇಡಿ" ಎಂದರು ಡಾ॥ ಮೂರ್ತಿ.

ಒಂದು ದಿನ ವಾರ್ಡ್ ರೌಂಡ್ಸ್ ಮುಗಿಸಿ ಆಫೀಸ್ ರೂಮಿನಲ್ಲಿ ಕುಳಿತಿದ್ದೆ. ಸುಮಾರು ಮೂವತ್ತೈದು ವರ್ಷ ವಯಸ್ಸಿನ ವ್ಯಕ್ತಿ ಬಂದ. ಆತನ ಹೆಸರು ಅಂಜನಪ್ಪ ಅಂತ. ವೃತ್ತಿಯಲ್ಲಿ ಇಂಜನೀಯರ್. "ಡಾಕ್ಟರೇ ನಾನು ನಿಮ್ಮನ್ನು ನಂಬಿ ಬಂದಿದೀನಿ. ನೀವು ನನ್ನ ಸಮಸ್ಯೆಯನ್ನು ಪರಿಹಾರ ಮಾಡಬೇಕು. ನೀವು ಕೈ ಬಿಟ್ಟರೆ ನನಗೆ ಸಾವೇ ಗತಿ. ಏನಾದರೂ ಮಾಡಿಕೊಂಡು ಸತ್ತುಹೋಗ್ತೇನೆ" ಎಂದು ಅಳ ತೊಡಗಿದ. "ನೀವು ವಿದ್ಯಾವಂತರು. ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ. ಹೀಗೆ ಮಕ್ಕಳ ಹಾಗೆ ಅಳುವುದೇ. ಧೈರ್ಯ ತಂದುಕೊಳ್ಳಿ. ನನ್ನಿಂದ ನಿಮಗೆ ಸಹಾಯ ಆಗೋದಾದರೆ ಖಂಡಿತ ಮಾಡ್ತೇನೆ" ಅಂತ ಸಮಾಧಾನ ಮಾಡಿದ ಮೇಲೆ ಸುಧಾರಿಸಿ ಕೊಂಡ. ನಂತರ ತನ್ನ ಕಥೆ ಹೇಳೋದಿಕ್ಕೆ ಪ್ರಾರಂಭಿಸಿದ...

"ಸಾರ್, ನಾನು ಬಡತನದಲ್ಲಿ ಹುಟ್ಟಿ ಬೆಳೆದೋನು. ತಂದೆ ತಾಯಿ ತಮ್ಮ ಹೊಟ್ಟೆಬಟ್ಟೆ ಕಟ್ಟಿ ನನ್ನನ್ನು ಓದಿಸಿದರು. ನಾನು ಚೆನ್ನಾಗಿ ಓದ್ತಿದ್ದರಿಂದ ಸ್ಕಾಲರ್ ಷಿಪ್ ಸಿಕ್ತು, ಪಿ.ಯು.ಸಿ.ಯಲ್ಲಿ ಒಂಭತ್ತನೇ ರ್‍ಯಾಂಕ್ ಬಂದೆ. ಇಂಜನೀಯರಿಂಗ್‌ಗೆ ಸೀಟು ಸಿಕ್ತು. ಬ್ಯಾಂಕ್‌ನಲ್ಲಿ ಸಾಲ ಮಾಡಿ ಓದಿದೆ. ಡಿಗ್ರಿ ಮುಗಿಸ್ದಾಗ, ಅದೃಷ್ಟಕ್ಕೆ ತಕ್ಷಣ ಕೆಲಸವೂ ಸಿಕ್ತು. ಜೀವನದಲ್ಲಿ ಒಂದು ಮುಖ್ಯ ಹಂತವನ್ನು ಮುಟ್ಟಿದೆ. ಅದುವರೆಗೆ ನಾನು ಇದೀನಾ ಇಲ್ಲವಾ ಅಂತ ವಿಚಾರಿಸದಿದ್ದ, ಗುರುತು ಪರಿಚಯ ಇದ್ದೋರು, ಇಲ್ಲದೋರು ಹೆಣ್ಣು ಕೊಡೋದಿಕ್ಕೆ ನಾಮುಂದು, ತಾಮುಂದು ಅಂತ ಮುಂದೆ ಬಂದರು. ಇಷ್ಟು ವರದಕ್ಷಿಣೆ ಕೊಡ್ತೇವೆ. ಇಂತಹ ಉಡುಗೊರೆ ಕೊಡ್ತೇವೆ ನಮ್ಮ ಮಗಳನ್ನು ಮದುವೆಯಾಗಿ ನಮ್ಮನ್ನು ಉದ್ಧರಿಸಬೇಕು ಅಂತ

ಕೃತಕ ವಿನಯವನ್ನೂ ವಿಶ್ವಾಸವನ್ನೂ ತೋರಿಸಿ ಬಂದವರನ್ನು ದೊಡ್ಡ ನಮಸ್ಕಾರ ಹಾಕಿ ಹೊರಹಾಕಿದೆ. ನಾನೇ ಹುಡುಕಿ, ನಮ್ಮಂತೆ ಕೆಳಮಧ್ಯಮ ವರ್ಗದ ಕುಟುಂಬದ ಹುಡುಗಿಯನ್ನು ಆಯ್ಕೆ ಮಾಡಿ ಮದುವೆ ಮಾಡಿಕೊಂಡು ಜೀವನದಲ್ಲಿ ಸೆಟ್ಲ್ ಆದೆ. ಭಾಮ ಅಂದ್ರೆ ನನ್ನ ಹೆಂಡತಿ ನನ್ನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಬಿ.ಎ. ಗ್ರಾಜುಯೇಟ್ ಆದರೂ, ಜಂಬ ಪಡದೆ ಎಲ್ಲರೊಂದಿಗೆ ಚೆನ್ನಾಗಿ ಹೊಂದಿಕೊಂಡಳು. ನನ್ನ ತಂದೆ ತಾಯಿಗೆ ಅಚ್ಚುಮೆಚ್ಚಾದಳು. ನನ್ನ ಮನಸ್ಸನ್ನು ಸಂಪೂರ್ಣವಾಗಿ ಗೆದ್ದಳು. ಈಗ ನಮಗೆ ಮೂರು ವರ್ಷದ ಮಗುವಿದೆ. ಹೀಗೆ ಎಲ್ಲ ಸುಸೂತ್ರವಾಗಿ ನಡೆದು, ನನ್ನಂತಹ ಅದೃಷ್ಟವಂತ ಇಲ್ಲ ಅಂತ ತೃಪ್ತಿಯಿಂದ ಇದ್ದೆ. ಈ ಒಂದು ವರ್ಷದಿಂದೀಚೆಗೆ ಭಾಮಾ ಸಂಪೂರ್ಣವಾಗಿ ಬದಲಾಗಿದ್ದಾಳೆ. ನನಗೆ ಒಂದು ರೀತಿ ಹಿಂಸೆ ಕೊಡೋದಿಕ್ಕೆ ಶುರು ಮಾಡಿದಾಳೆ. ಗಂಡಸಾಗಿ ನಾನು ಅವಮಾನ, ಸೋಲಿನಿಂದ ಕುಗ್ಗಿ ಕೊರಗುವ ಹಾಗೆ ಮಾಡಿದ್ದಾಳೆ" ಅಂತ ಹೇಳಿದ.

ಯಾವ ಬಗೆಯ ಹಿಂಸೆ ?

ಅವನ ಮಾತು ನನಗೆ ಒಗಟಾಗಿ ಕಂಡಿತು. "ನಿನ್ನ ಮನಸ್ಸಿಗೆ ಇಷ್ಟೊಂದು ಅವಮಾನ, ಸಂಕಟ ಆಗೋ ಹಾಗೆ, ಏನು ಮಾಡ್ತಾಳೆ. ಯಾವ ಬಗೆಯ ಹಿಂಸೆ ಕೊಡ್ತಾಳೆ ಹೇಳು" ಎಂದೆ.

"ಭಾಮ ಅತಿಕಾಮಿಯಾಗಿದಾಳೆ ಸಾರ್. ದಿನಕ್ಕೆ ಎರಡು ಮೂರು ಬಾರಿ ಸಂಭೋಗ ಮಾಡೋಣ ಅಂತ ಒತ್ತಾಯ ಮಾಡ್ತಾಳೆ. ಅದಕ್ಕೆ ಹೊತ್ತೂ ಗೊತ್ತೂ ಇರೋದಿಲ್ಲ. ಈ ಹಿಂದೆ ಹೀಗಿರಲಿಲ್ಲ. ಎಲ್ಲ ಗಂಡ ಹೆಂಡತಿಯರ ಥರ ಇದ್ದೆವು. ವಾರಕ್ಕೆ ಎರಡು ಅಥವಾ ಮೂರು ಸಲ ಲೈಂಗಿಕ ಕ್ರಿಯೆ ನಡೆಸುತ್ತಿದ್ದೆವು. ಲೈಂಗಿಕ ಚಟುವಟಿಕೆಯಲ್ಲಿ ನಾನೇ ಲೀಡ್ ಮಾಡ್ಬೇಕಿತ್ತು. ತಾನು ಮುಂದುವರೆಯಲು ಅಥವಾ ಬೇಕು ಅಂತ ಕೇಳೋದಿಕ್ಕೆ ಸಂಕೋಚಪಟ್ಟುಕೊಳ್ತಿದ್ದಳು. ಆದರೆ ಲೈಂಗಿಕ ಕ್ರಿಯೆಯಲ್ಲಿ ಸಂಪೂರ್ಣವಾಗಿ ಸಹಕರಿಸುತ್ತಿದ್ದಳು. ನನಗೆ ಸಂತೋಷ ಕೊಟ್ಟು, ತಾನೂ ಸಂತೋಷಪಡ್ತಿದ್ದಳು. ಈಗ ಅದು ತದ್ವಿರುದ್ಧವಾಗಿ ಬಿಟ್ಟಿದೆ. ನಾಚಿಕೆ ಸಂಕೋಚವಿಲ್ಲದೆ ಲೈಂಗಿಕ ಕ್ರಿಯೆಗೆ ಆಹ್ವಾನಿಸುತ್ತಾಳೆ. ನನಗೆ ಮನಸಿಲ್ಲದೆ, ಈ ದಿನ ಬೇಡ ಅಂದರೆ, 'ಯಾಕೆ ಬೇಡ. ಏನಾಗಿದೆ ನಿಮಗೆ. ನನಗೆ ಬೇಕು. ಬನ್ನಿ ಮಾಡೋಣ' ಅಂತ ಬಲವಂತ ಮಾಡ್ತಾಳೆ. ಆಗಲೂ ನಾನು ಸಿದ್ಧವಾಗದಿದ್ದರೆ, ನನ್ನನ್ನು ಷಂಡ ಅಂತ ಜರೀತಾಳೆ. ಗಂಡು ರೂಪಿನ ಹೆಣ್ಣು, ಶಿಖಂಡಿ ಅಂತಾಳೆ. ಹೆಂಡತಿಯ ಬಯಕೆಯನ್ನು ಪೂರೈಸಲಾಗದ ನೀವು ಎಂತಹ

ಗಂಡಸು ಅಂತ ಹೀಗಳೀತಾಳೆ. ಅಳಲು ಪ್ರಾರಂಭಿಸ್ತಾಳೆ. ನನ್ನನ್ನು ಕಂಡ್ರೆ ನಿಮಗೆ ಪ್ರೀತಿ ಇಲ್ಲ ಅಂತ ದೂರ್ತಾಳೆ. ಬರ್ತಾ ಬರ್ತಾ ಅವಳ ಬಯಕೆ ಹೆಚ್ಚಾಗ್ತಾ ಇದೆಯೇ ಹೊರತು ಕಮ್ಮಿ ಆಗ್ತಾ ಇಲ್ಲ. ಈ ಆರು ತಿಂಗಳಿಂದ ಹೆಚ್ಚೂ ಕಡಿಮೆ ಪ್ರತಿದಿನ ಬೆಳಿಗ್ಗೆ ಏಳುವ ಮೊದಲು ಒಂದು ಸಲ ಸಂಭೋಗ ಮಾಡಲೇಬೇಕಾಗಿದೆ. ರಾತ್ರಿಗಿಂತ ಹಗಲು ಹೊತ್ತಿನಲ್ಲೇ ಅವಳ ಬೇಡಿಕೆ ಒತ್ತಾಯ ಜಾಸ್ತಿ. ಯಾಕೆ ಹೀಗೆ ಅಂತ ಅರ್ಥ ಆಗ್ತಾ ಇಲ್ಲ. ಈ ಮೂರು ತಿಂಗಳಲ್ಲಿ ಅವಳ ವರ್ತನೆ ಸಹಿಸೋದಿಕ್ಕೆ ಆಗದಷ್ಟು ಮಟ್ಟಿಗೆ ಹಾಳಾಗಿದೆ ಸಾರ್. ನಾನು ಆಫೀಸಿನಲ್ಲಿ ಕೆಲಸ ಮಾಡ್ತಿರೋವಾಗ ನನಗೆ ಫೋನ್ ಮಾಡ್ತಾಳೆ. ನನಗೆ ಹೇಗೇಗೋ ಆಗ್ತಿದೆ. ಮೈಗೆ ಉಶಾರಿಲ್ಲ ಬೇಗ ಬನ್ನಿ ಅಂತಾಳೆ. ಮೊದಲ ಸಾರಿ ಈ ರೀತಿ ಫೋನ್ ಬಂದಾಗ, ನನಗೆ ಗಾಬರಿ ಆಗಿ ಮಾಡೋ ಕೆಲಸ ಬಿಟ್ಟು, ಮನೆಗೆ ಓಡಿಹೋದೆ. ಅಲ್ಲಿ ಇವಳು ಹಾಯಾಗಿ ಮಲಗಿದಾಳೆ. ಏನು ಏನಾಯ್ತು, ಡಾಕ್ಟರನ್ನು ಕಂಡೆಯಾ ಅಂತ ನಾನು ವಿಚಾರಿಸಿದರೆ, ಅದಳು ಮುಸಿ ಮುಸಿ ನಗ್ತಾಳೆ. ಏನಿಲ್ಲಾರಿ. ಯಾಕೋ ನೀವು ಬೇಕು ಅಂತ ಅನಿಸ್ತು. ಬನ್ನಿ ಸಂಭೋಗ ಮಾಡೋಣ ಅಂತಾಳೆ. ಅವಳ ಈ ಚಾಳಿಯನ್ನು ಕಂಡು, ಅವಳು ಫೋನ್ ಮಾಡಿದಾಗ, ನಾನು ಫೋನ್ ಎತ್ತಲಿಲ್ಲ. ಆಗ ಅವಳು ನಮ್ಮ ಚೀಫ್‌ಗೆ, ಬೇರೆ ಕೊಲೀಗ್ಸ್‌ಗೆ ಫೋನ್ ಮಾಡೋದು; ನನಗೆ ಮೈ ಉಶಾರಿಲ್ಲ. ತಲೆ ಸುತ್ತಿ ಬಿದ್ದುಬಿಟ್ಟಿದೇನೆ. ನನ್ನ ಹಸ್ಬೆಂಡ್‌ನ ತಕ್ಷಣ ಕಳುಹಿಸಿಕೊಡಿ ಅಂತ ಹೇಳೋದು. ಅವರು ನನ್ನನ್ನು ಕರೆದು ಮಿ॥ ಅಂಜನಪ್ಪ, ನಿಮ್ಮ ಮಿಸೆಸ್‌ಗೆ ಮೈಗೆ ಉಶಾರಿಲ್ಲವಂತೆ. ಅವರನ್ನು ನೀವು ನೆಗ್ಲೆಟ್ ಮಾಡ್ತಿದ್ದೀರಂತೆ. ಹೋಗಿ ನೋಡಿ ಎನ್ನುವುದು ನಡೆದಿದೆ. ಈಗೀಗ ಅವರಿಗೂ ಈ ಫೋನ್ ಕರೆಗಳಲ್ಲಿ ಬೇರೆ ಏನೋ ಅರ್ಥ ಇದೆ ಅಂತ ಗೊತ್ತಾಗಿ, ನನ್ನನ್ನು ನೋಡಿ ಮುಸಿ ಮುಸಿ ನಗ್ತಾರೆ. ಅಂಜನಪ್ಪನ ಹೆಂಡತಿಗೆ ಅವನನ್ನು ಬಿಟ್ಟಿರೋದು ಸಾಧ್ಯವಿಲ್ಲ ಅಂತ ಕಾಣತ್ತೆ. ವಿರಹ ವೇದನೆ ಅಂತ ನನ್ನ ಹಿಂದೆ ಮಾತಾಡ್ಕೊಂಡು ನಗುತ್ತಾರೆ. ನನಗೆ ತಲೆ ಎತ್ತಿ ತಿರುಗಾಡದ ಹಾಗೆ ಆಗಿದೆ ಸಾರ್. ಭಾಮಿನಿಗೆ ಬುದ್ಧಿ ಹೇಳಿದೆ. ಹೀಗೆಲ್ಲ ಮಾಡಿ ನನ್ನ ಮಾನ ಕಳೀಬೇಡ ಅಂತ ಕೇಳ್ಕೊಂಡೆ. ಗದರಿಸಿದೆ, ಬೆದರಿಸಿದೆ. ಒಂದೆರಡು ಸಲ ಹೊಡೆದೂಬಿಟ್ಟಿದೇನೆ. ನೀನು ಹೀಗೆ ಮಾಡೋದನ್ನು ಮುಂದುವರಿಸಿದ್ರೆ ನಾನು ಊರು ಬಿಟ್ಟು ದೇಶಾಂತರ ಹೋಗಿಬಿಡ್ತೇನೆ ಅಂತ ಬೆದರಿಕೆ ಹಾಕ್ದೆ. ಅದು ಒಂದು ವಾರ ಕೆಲಸಮಾಡಿತು. ಆಮೇಲೆ ನಾಯಿಬಾಲ ಡೊಂಕು ಅಂತ ಗೊತ್ತಲ್ಲ. ಹಾಗೆ ಮತ್ತೆ ತನ್ನ ಚಾಳಿಯನ್ನು ಶುರುಮಾಡಿದಳು. ಇತ್ತೀಚೆಗೆ 'ನೀವು ನನ್ನ ಜೊತೆ ಸಂಭೋಗ ಮಾಡ್ದೇ ಹೋದರೆ, ನಾನು ಬೇರೆ ಗಂಡಸಿನ ಹತ್ರ ಹೋಗಬೇಕಾಗುತ್ತೆ. ಅದಕ್ಕೆ ನೀವು ಅವಕಾಶ ಕೊಡೊಲ್ಲ ಅಂತ ಅಂದುಕೊಂಡಿದೇನೆ' ಅಂತ ನನಗೆ

ಬೆದರಿಕೆ ಹಾಕಿದಾಳೆ ಸಾರ್. ಇದು ನನ್ನ ಸಮಸ್ಯೆ. ನೀವು ನನ್ನ ಹೆಂಡತಿಯನ್ನು ಪರೀಕ್ಷಿಸಬೇಕು. ಅವಳ ಈ ಅತಿಕಾಮಕ್ಕೆ ಕಾರಣ ಕಂಡು ಹಿಡಿದು, ತಕ್ಕ ಚಿಕಿತ್ಸೆ ಮಾಡಬೇಕು" ಅಂದ.

ಕುತೂಹಲ

"ಭಾಮಾ ನಿಮ್ಮನ್ನು ನೋಡ್ತೋದಿಕ್ಕೆ ಬಂದಳೇ ಮೂರ್ತಿ? ಅವಳ ಈ ನಡವಳಿಕೆಗೆ ಏನು ಕಾರಣ. ಆಕೆಗೆ ನಿಂಫೋಮೇನಿಯಾ (ಅತಿ ಕಾಮಾಸಕ್ತಿ) ಇತ್ತೋ?" ಎಂದರು ಡಾ॥ ಶ್ಯಾಮಲ.

"ಶ್ಯಾಮಲ, ಸ್ವಲ್ಪ ನಿಧಾನಿಸ್ತೀರಾ? ಮೂರ್ತಿ ಅದನ್ನೇ ಹೇಳೋದಿಕ್ಕೆ ಹೊರಟಿದಾನೆ. ಅಷ್ಟರಲ್ಲೇ ಎಷ್ಟು ಆತುರವಪ್ಪಾ. ನನ್ನ ಹೆಂಡತೀನೂ ಹೀಗೆ. ಹೆಂಗಸರೇ ಹೀಗೆ ಅಂತ ಕಾಣತ್ತೆ..." ಡಾ॥ ಅರುಣ್ ನಗೆಯಾಡಿದರು.

"ಏನು ನಿಮಗೆ ಕ್ಯೂರಿಯಾಸಿಟಿ ಇಲ್ಲವೇ. ಭಾಮಾಗೆ ಏನಾಗಿದೆ ಅಂತ ತಿಳಿದುಕೊಳ್ಳೋದಿಕ್ಕೆ ನಿಮ್ಮ ಮನಸ್ಸು ತುಡೀತಾ ಇಲ್ಲವೇ. ನೀವು ಗಂಡಸರು, ಆಸೆ ಇದ್ದರೂ ಹೇಳ್ಕೊಳ್ಳೋದಿಲ್ಲ. ನಾವು ಬಾಯಿ ಬಿಟ್ಟು ಹೇಳಿ ಬಿಡ್ತೇವೆ. ಅಷ್ಟೇ ವ್ಯತ್ಯಾಸ" ಡಾ॥ ಶ್ಯಾಮಲ ಪ್ರತಿಭಟಿಸಿದರು.

"ಆಯಿತು ನಿಮ್ಮ ಜಗಳ ನಿಲ್ಲಿಸ್ತೀರಾ. ಮೂರ್ತಿ ಮುಂದೇನಾಯ್ತು ಹೇಳು" ಎಂದರು ರೆಡ್ಡಿ.

"ನಾನು ಮುಂದುವರೆಸಬಹುದೇ...?" ಎಂದು ಡಾ॥ ಮೂರ್ತಿ ಅವರತ್ತ ನೋಡಿ ಮುಗುಳ್ನಕ್ಕರು. ನನ್ನ ಅಣತಿಯಂತೆ ತನ್ನ ಹೆಂಡತಿಯನ್ನು ಕರೆತರಲು ಪ್ರಯತ್ನಿಸುವುದಾಗಿಯೂ, ಆದರೆ ಆಕೆ ಬರುತ್ತಾಳೋ. ಇಲ್ಲವೋ ಹೇಳಲಾರೆ ಎಂದರೂ, ಮೂರು ದಿನಗಳಾದ ನಂತರ ಆತ ಹೆಂಡತಿಯೊಂದಿಗೆ ನನ್ನನ್ನು ನೋಡಲು ಬಂದ. ನನಗೆ ವೀಕ್‌ನೆಸ್ ಇದೆ ಎಂದು ತೋರಿಸಲು ಹೋಗಿದ್ದೆ ಡಾಕ್ಟರು ನಿನ್ನನ್ನು ನನ್ನ ತೊಂದರೆ ಬಗ್ಗೆ ವಿಚಾರಿಸಲು ಬರಹೇಳಿದ್ದಾರೆ ಅಂತ ಒಪ್ಪಿಸಿ ಕರೆತಂದಿದೀನಿ ಸಾರ್. ನೀವೂ ಹಾಗೆ ಹೇಳಿ ಎಂದು ನನ್ನ ಹತ್ತಿರ ಪಿಸುಗುಟ್ಟಿದ.

ನಾನು ಭಾಮಳ ಜೊತೆ ಸಂದರ್ಶನ ನಡೆಸಿದೆ. ಪ್ರಾರಂಭದಲ್ಲಿ ಕಪ್ಪೆಚಿಪ್ಪಿನಂತೆ ನಿಗೂಢವಾಗಿದ್ದವಳು ಕ್ರಮೇಣ ತನ್ನ ಮನಸ್ಸನ್ನು ತೆರೆದಿಟ್ಟಳು. ತಾನು ತನ್ನ ಗಂಡನನ್ನು ಪದೇ ಪದೇ ಲೈಂಗಿಕ ಕ್ರಿಯೆಗೆ ಒತ್ತಾಯಿಸುತ್ತಿದ್ದುದನ್ನು ಒಪ್ಪಿಕೊಂಡಳು. ಆದರೆ ಅದಕ್ಕೆ ಕಾರಣ ಅತಿಯಾದ ಲೈಂಗಿಕ ಆಸಕ್ತಿ ಬಯಕೆ ಅಲ್ಲ; ಗಂಡನ ಮೇಲಿನ ಅಪನಂಬಿಕೆಯೇ ಅವಳನ್ನು ಈ ರೀತಿ ಮಾಡಲು ಪ್ರಚೋದಿಸಿತು

ಎಂದಳು. ಮೊದಲಿನಿಂದಲೂ ಆಕೆ, ತಾನು ಆಂಜನಪ್ಪನಿಗೆ ತಕ್ಕ ಹೆಂಡತಿ ಅಲ್ಲ ಎಂಬ ಕೀಳರಿಮೆಯನ್ನು ಬೆಳೆಸಿಕೊಂಡಳು. ಆತ ತನ್ನ ಇಡೀ ಕೆರಿಯರ್‌ನಲ್ಲಿ ರ್ಯಾಂಕ್ ವಿದ್ಯಾರ್ಥಿ. ತಾನೋ ಅಲ್ಲಲ್ಲಿ ಕುಂಟಿಕೊಂಡು, ಹೇಗೋ ಬಿ.ಎ. ಪಾಸ್ ಮಾಡಿದವಳು. ಆತ ಸ್ಫುರದ್ರೂಪಿ, ದೃಢಕಾಯ. ತಾನು ತೆಳ್ಳಗೆ, ಅಷ್ಟೊಂದು ಆಕರ್ಷಣೀಯವಾಗಿಲ್ಲ ಇತ್ಯಾದಿ. ಹೀಗಾಗಿ ತನ್ನೆಲ್ಲ ಜಾಣ್ಮೆ ಸಾಮರ್ಥ್ಯಗಳನ್ನು ಬಳಸಿಕೊಂಡು ಆತನನ್ನು ಮೆಚ್ಚಿಸಲು ಪ್ರಯತ್ನಿಸಿದ್ದಳು. ಅದರಲ್ಲಿ ಯಶಸ್ವಿಯೂ ಆದಳು. ಪ್ರೀತಿ ವಿಶ್ವಾಸದಿಂದ ಗಂಡನನ್ನು ಗೆದ್ದಳಾದರೂ, ತನ್ನ ರೂಪದ ಕೊರತೆ ಬಗ್ಗೆ ಅವಳ ಮನಸ್ಸು ಯಾವಾಗಲೂ ಅವಳನ್ನು ಚುಚ್ಚುತ್ತಲೇ ಇತ್ತು. ತಾನು ಹೀಗಿರುವಾಗ, ಬೇರೆ ಯಾವಳಾದರೂ ಸುಂದರವಾದ ಹೆಣ್ಣು ತನ್ನ ಗಂಡನನ್ನು ಆಕರ್ಷಿಸಿ ತನ್ನ ಬುಟ್ಟಿಗೆ ಹಾಕಿಕೊಳ್ಳಬಹುದು. ಆಗ ತನ್ನ ಗತಿ ಏನು ಎಂಬುದು ಅವಳ ಮನಸ್ಸನ್ನು ಕೊರೆಯುತ್ತಲೇ ಇತ್ತು. ಒಂದು ವರ್ಷದ ಹಿಂದೆ, ಒಮ್ಮೆ ಗಂಡ ಹೆಂಡತಿ ವಾಕಿಂಗ್ ಹೋಗುತ್ತಿದ್ದಾಗ. ಮಾದಕ ಸೌಂದರ್ಯದ ಯುವತಿ ಯೊಬ್ಬಳು ಎದುರು ಬಂದಾಗ, ಆಂಜನಪ್ಪ ಸಹಜವಾಗಿ ಅವಳತ್ತ ದೃಷ್ಟಿಸಿ ನೋಡಿದ್ದ. ಅವಳು ಮರೆಯಾಗುವವರೆಗೆ ಅವಳ ಉಬ್ಬು ತಗ್ಗುಗಳತ್ತ ಕಣ್ಣಾಡಿ ಸಿದ್ದ. 'ನೋಡಿದೆಯಾ, ಅವಳು ಎಷ್ಟು ಸೆಕ್ಸಿಯಾಗಿ ಕಾಣ್ತಾಳೆ. ಗಂಡಿನಲ್ಲಿ ಬಯ ಕೆಯ ಬೆಂಕಿ ಹಚ್ಚುತ್ತಾಳೆ' ಎಂದಿದ್ದ. ಅಲ್ಲಿಂದೀಚೆಗೆ ಭಾಮಳ ಮನಸ್ಸಿನಲ್ಲಿ ಒಂದು ರೀತಿಯ ಆಂದೋಳನ ಶುರುವಾಯ್ತು. ರೂಪದಿಂದ ತಾನು ಗಂಡನನ್ನು ಗೆಲ್ಲಲು ಅಥವಾ ಸದಾ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಯಾವಳಾದರೂ ಬೆಡಗಿ ಬಂದು ಅವನನ್ನು ವಶಪಡಿಸಿಕೊಳ್ಳುವುದು ಖಂಡಿತ. ಇದನ್ನು ಹೇಗಾದರೂ ತಡೆಯಬೇಕು ಎಂದು ನಿರ್ಧರಿಸಿದಳು. ನಂತರ ಆಂಜನಪ್ಪ ಬೇರೆ ಹೆಂಗಸಿನೊಡನೆ, ಅದರಲ್ಲೂ ಹರೆಯದ ಸುಂದರ ಯುವತಿಯರೊಂದಿಗೆ ಮಾತಾಡುವುದನ್ನು ಕಂಡರೆ ಅವಳ ಹೃದಯ ಪಟಪಟನೆ ಬಡಿದುಕೊಳ್ಳುತ್ತಿತ್ತು. ಆ ಹೆಂಗಸು ಅವನನ್ನು ಲೈಂಗಿಕವಾಗಿ ಆಕರ್ಷಿಸಿಬಿಡಬಹುದು ಎಂದು ಹೆದರುತ್ತಿದ್ದಳು. ಕೊನೆಗೆ ಅವಳಿಗೆ ಒಂದು ಉಪಾಯ ಹೊಳೆಯಿತು. ತನ್ನ ಗಂಡನನ್ನು ಪದೇ ಪದೇ ತನ್ನೊಂದಿಗೆ ಲೈಂಗಿಕ ಕ್ರಿಯೆಗೆ ಒಳಪಡಿಸಿದರೆ, ಆತನ ಆಸೆ ಬಯಕೆ ತೃಪ್ತಿಯಾಗಿ, ಶಾರೀರಕವಾಗಿ ಸುಸ್ತಾಗುತ್ತಾನೆ. ಆಗ ಬೇಕೆಂದರೂ ಬೇರೆ ಹೆಂಗಸಿನೊಂದಿಗೆ ಲೈಂಗಿಕ ಕ್ರಿಯೆ ನಡೆಸಲು ಶಕ್ತಿ ಉಳಿದಿರುವುದಿಲ್ಲ. ಆದ್ದರಿಂದ ಬೆಳಿಗ್ಗೆ ಮತ್ತು ಹಗಲು ಹೊತ್ತಿನಲ್ಲಿ ಆತನನ್ನು ಸಂಭೋಗಕ್ಕೆ ಕರೆಯತೊಡಗಿದಳು. ತನ್ನೊಂದಿಗೆ ಸಂಭೋಗ ಮಾಡಿ ಹೋದರೆ, ಕೆಲವು ಘಂಟೆಗಳ ಕಾಲ, ಮತ್ತೊಂದು ಹೆಣ್ಣಿನೊಂದಿಗೆ ಆತ ಕೂಡಲಾರ

ಎಂದು ಅವಳ ವಿಕೃತ ಮನಸ್ಸು ಲೆಕ್ಕಹಾಕಿತ್ತು! ಅದನ್ನು ಜಾರಿಗೆ ತಂದು ಗಂಡನ ಪಾಲಿಗೆ ಬಗೆಹರಿಯದ ಸಮಸ್ಯೆಯಾಗಿದ್ದಳು.

ಮಾತ್ಸರ್ಯ ಸ್ಥಿತಿ

"ಅಬ್ಬಾ, ಮನಸ್ಸಿನ ವ್ಯವಹಾರಗಳು ಕೆಲವು ಸಲ ನಂಬುವುದಕ್ಕೆ ಆಗದಷ್ಟು ವಿಚಿತ್ರವಾಗಿರುತ್ತವೆ. ನಾನು ಈ ಕಾರಣವನ್ನು ಊಹಿಸಿರಲೂ ಇಲ್ಲ" ಎಂದು ಉದ್ಗರಿಸಿದರು ಶ್ಯಾಮಲ.

"ಈ ಸ್ಥಿತಿಗೆ ಏನು ಹೆಸರು ಮೂರ್ತಿ. ಆಕೆಗೆ ಏನು ಚಿಕಿತ್ಸೆ ಕೊಟ್ಟೆ. ಆಕೆ ಸರಿಹೋದಳೇ ?" ಡಾ॥ ರೆಡ್ಡಿ ಪ್ರಶ್ನಿಸಿದರು.

ಇದನ್ನು 'ಪೆರನಾಯ್ಡ್ ಜೆಲಸಿ ಸ್ಟೇಟ್' (ಸಂಶಯ ಮಾತ್ಸರ್ಯ ಸ್ಥಿತಿ) ಎನ್ನಬಹುದು ತನ್ನಲ್ಲಿಯ ಕೊರತೆಗಳು, ಇತಿಮಿತಿಗಳಿಂದ ಕೀಳರಿಮೆ ಬೆಳೆಸಿಕೊಂಡ ವ್ಯಕ್ತಿ, ಯಾವುದೋ ಒಂದು ಘಟನೆಯ ತರುವಾಯ ಸಂಶಯ ಪ್ರವೃತ್ತಿ ಬೆಳೆಸಿಕೊಳ್ಳುತ್ತಾನೆ. ಆಂಜನಪ್ಪ ಬೆಡಗಿಯೊಬ್ಬಳನ್ನು ದೃಷ್ಟಿಸಿ, ಆಕೆ ಸೆಕ್ಸಿಯಾಗಿದ್ದಾಳೆ ಎಂದಾಗ, ತಾನು ಸೌಂದರ್ಯವತಿಯಲ್ಲ ಎಂದು ತಿಳಿದಿದ್ದ ಭಾಮಳ ಮನಸ್ಸಿನಲ್ಲಿ ಅನುಮಾನದ ಅಂಕುರವಾಯಿತು. ಈ ಅನುಮಾನ ಅವಳ ವಿಚಿತ್ರ ವರ್ತನೆಗೆ ದಾರಿ ಮಾಡಿಕೊಟ್ಟಿತು. ಪದೇ ಪದೇ ಗಂಡನನ್ನು ಸಂಭೋಗಕ್ಕೆ ಎಳೆದು ಆತನನ್ನು 'ಹತೋಟಿ'ಯಲ್ಲಿಡಲು ಪ್ರಯತ್ನಿಸಿದಳು. ಈ ಅನುಮಾನ, ಅಭದ್ರತೆ ಭಾವನೆಯಿಂದ ಆಕೆ ತೀವ್ರ ಬಗೆಯ ಆತಂಕ, ಮನೋಕ್ಲೇಶಕ್ಕೆ ಒಳಗಾಗಿದ್ದಳು. ಆಕೆಗೆ ಶಮನಕಾರಿ ಮಾತ್ರೆಗಳನ್ನು ಸೇವಿಸಲು ಕೊಟ್ಟೆ. ಆಕೆಯ ಕೀಳರಿಮೆ ಭಾವನೆಗಳು ಮತ್ತು ವಿಚಿತ್ರ ಲೈಂಗಿಕ ಚಟುವಟಿಕೆಯ ಕಾರಣವನ್ನು ವಿವರಿಸಿ, ಮಾನಸಿಕ ಧೋರಣೆಯನ್ನು ಬದಲಿಸಿಕೊಳ್ಳಲು ಹಾಗೂ ಗಂಡನ ಬಗ್ಗೆ ವಿಶ್ವಾಸ ತಾಳಲು ಪ್ರೋತ್ಸಾಹಿಸಿದೆ. ಮೂರು ತಿಂಗಳ ಕಾಲದ ಮನೋಚಿಕಿತ್ಸೆಯಿಂದ ಕ್ರಮೇಣ ಸರಿಹೋದಳು. ಈಗ ಗಂಡ ಹೆಂಡತಿ ಅನ್ಯೋನ್ಯವಾಗಿದ್ದಾರೆ" ಎಂದರು.

"ನಿಮ್ಮ ಹರಟೆ ಮುಗಿಯಿತೇ. ಅಡುಗೆ ಸಿದ್ಧವಾಗಿದೆ, ಊಟಕ್ಕೆ ಬರ್ತೀರಾ" ಎಂದು ಡಾ॥ ಮೂರ್ತಿಯವರ ಹೆಂಡತಿ ಬಂದು ಕರೆದಾಗ, ನಾಲ್ವರು ಮಿತ್ರರೂ ಎದ್ದು ಊಟದ ಮನೆಗೆ ನಡೆದರು.

ಅಂಗಡಿಯಿಂದ ಮಾಯವಾದ ಹಣ

ಅಂದು ಭಾನುವಾರ. ಆಸ್ಪತ್ರೆಯ ಡ್ಯೂಟಿ ಇಲ್ಲದ್ದರಿಂದ ತಿಂಡಿತಿಂದು ತಮ್ಮ ಸ್ನೇಹಿತ ಬ್ರಹ್ಮಯ್ಯನವರ ಮನೆಗೆ ಡಾ॥ ಮೂರ್ತಿ ಹೊರಟರು. ಇಬ್ಬರದೂ ಹಳೆಯ ಪರಿಚಯ. ತಂದೆ ತಾಯಂದಿರ ಕಾಲದಿಂದಲೂ ಈ ಎರಡು ಕುಟುಂಬಗಳ ನಡುವೆ ಸ್ನೇಹ ಸಂಬಂಧವಿದೆ. ಪುರುಸೊತ್ತಾದಾಗಲೆಲ್ಲ ಮೂರ್ತಿ ಬ್ರಹ್ಮಯ್ಯನವರನ್ನು ಕಂಡುಬರುತ್ತಾರೆ. ಅವರೂ ಅಷ್ಟೆ. ಪರಸ್ಪರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತಾರೆ. ಬ್ರಹ್ಮಯ್ಯನವರ ಮನೆ ಬಾಗಿಲು ತೆರೆದೇ ಇರುವುದನ್ನು ಕಂಡು, ಮೂರ್ತಿ ನೇರವಾಗಿ ಮನೆಯೊಳಕ್ಕೆ ಹೋದರು. ಬ್ರಹ್ಮಯ್ಯ ಏರಿದ ಧ್ವನಿಯಲ್ಲಿ ತಮ್ಮ ದೊಡ್ಡಪ್ಪನ ಮಗ ವಿಶ್ವನನ್ನು ತರಾಟೆಗೆ ತೆಗೆದುಕೊಂಡಿದ್ದರು. ಅವನು ತಲೆತಗ್ಗಿಸಿ ನಿಂತುಕೊಂಡಿದ್ದ. “ಲೆಕ್ಕದಲ್ಲಿ ಒಂದೂವರೆ ಸಾವಿರ ರೂಪಾಯಿ ವ್ಯತ್ಯಾಸವಿದೆ. ಒಂದು, ಎರಡು ರೂಪಾಯಲ್ಲ. ಅಷ್ಟೊಂದು ಹಣ ಎಲ್ಲಿ ಹೋಯಿತು, ಏನು ಮಾಡಿದೆ, ನೀನು ಇಷ್ಟೊಂದು ಉದಾಸೀನ ಮನಸ್ಸಿನವನು, ನಿಷ್ಪ್ರಯೋಜಕ ಅಂತ ನಾನು ತಿಳಿದಿರಲಿಲ್ಲ. ನೀನು ಈ ರೀತಿ ಅಂಗಡಿ ವಹಿವಾಟು ನಡೆಸಿದರೆ ಒಂದು ವರ್ಷದೊಳಗಾಗಿ ದಿವಾಳಿ ಎದ್ದು, ಕೈಯಲ್ಲಿ ಚಿಪ್ಪು ಹಿಡಿದು ಭಿಕ್ಷೆ ಬೇಡಬೇಕಾಗುತ್ತದೆ...” ಬ್ರಹ್ಮಯ್ಯನವರ ಮಾತಿನ ಪ್ರವಾಹ ಹರಿದಿತ್ತು. ಅವರದ್ದು ದೊಡ್ಡ ವಹಿವಾಟು. ಹಳ್ಳಿಯಲ್ಲಿ ಹೊಲಗದ್ದೆ, ಈ ಊರಿನಲ್ಲಿ ಅಕ್ಕಿಗಿರಣಿ, ಒಂದು ಬಸ್ ಇದೆ. ಸಾಕಷ್ಟು ಅನುಕೂಲವಾಗಿದ್ದಾರೆ. ಜಾಣ್ಮೆಯಿಂದ ವ್ಯವಹಾರ ಮಾಡುತ್ತಾ, ಸರೀಕರ ಎದುರು ಗಟ್ಟಿಗರೆನಿಸಿಕೊಂಡಿದ್ದಾರೆ. ತಂದೆ ಇಲ್ಲದ ವಿಶ್ವನನ್ನು ಅವರೇ ಸಾಕುತ್ತಿದ್ದಾರೆ. ಅವನನ್ನು ಓದಿಸಿ ಡಾಕ್ಟರೋ, ಇಂಜನಿಯರೋ ಮಾಡಬೇಕೆಂಬ ಮನೆಯವರ ಆಸೆಗೆ ವಿಶ್ವನೇ ತಣ್ಣೀರು ಎರಚಿದ್ದ. ಎಸ್ಸೆಸ್ಸೆಲ್ಸಿಯಲ್ಲಿ ಒಂದು ಸಲ, ಪಿ.ಯು.ಸಿ.ಯಲ್ಲಿ ಎರಡು ಸಲ ಫೇಲಾದಾಗ ಅವರು ತಮ್ಮ ಆಸೆಯನ್ನು ಬಿಟ್ಟಿದ್ದರು.

ವಿಶ್ವನಿಗೆ ಓದಬೇಕೆನ್ನುವ ಆಸೆಗಿಂತ, ಕಾಲೇಜಿಗೆ ಹೋಗುತ್ತಾ, ವಿದ್ಯಾರ್ಥಿ ಎನಿಸಿಕೊಳ್ಳುವ ಚಪಲವೇ ಜಾಸ್ತಿಯಾಗಿ ಬಿ. ಎ. ಗೆ ಸೇರಿಕೊಂಡ. ಮೂರು ವರ್ಷ

ಳಲ್ಲಿ ಹೇಗೋ ಮುಗಿಸಿದ. ಮುಂದೆ ಏನು ಎಂದು ಅವನು ತಲೆಕೆಡಿಸಿಕೊಳ್ಳಲಿಲ್ಲ. ಬ್ರಹ್ಮಯ್ಯ ತಲೆತುರಿಸಿಕೊಳ್ಳಬೇಕಾಯ್ತು. ಅವನನ್ನು ಹೀಗೇ ಉಂಡಾಡಿಯಾಗಿ ಬಿಟ್ಟರೆ, ತಮ್ಮ ಮನೆಯವರು ಇಷ್ಟು ವರ್ಷ ಗಳಿಸಿದ್ದನ್ನೆಲ್ಲಾ ಈತ ನೀರಿನಲ್ಲಿ ಬಿದ್ದ ಬೆಲ್ಲದಂತೆ ಕರಗಿಸಿ ಬಿಟ್ಟಾನು ಎಂದು ಹೆದರಿದರು. ತಮ್ಮ ನೆರಳಿನಲ್ಲಿ ಆದರೆ ತನ್ನ ಜವಾಬ್ದಾರಿಯಲ್ಲಿ ವ್ಯಾಪಾರ ಮಾಡುವಂತೆ ವ್ಯವಸ್ಥೆ ಮಾಡಿಕೊಟ್ಟರು. ಇಪ್ಪತ್ತು ಸಾವಿರ ರೂಪಾಯಿ ಬಂಡವಾಳ ಹಾಕಿ, ಚಿಕ್ಕದಾಗಿ ಒಂದು ಡಿಪಾರ್ಟ್‌ಮೆಂಟಲ್ ಸ್ಟೋರ್ ಹಾಕಿಕೊಟ್ಟರು. ತಮ್ಮ ನಂಬುಗೆಯ ವ್ಯಕ್ತಿಯನ್ನು ಮೇನೇಜರ್ ಆಗಿ ಕೊಟ್ಟು, ಅಂಗಡಿ ನಡೆಸು, ವ್ಯಾಪಾರದ ಒಳಗುಟ್ಟನ್ನು ಕಲಿತುಕೋ, ಸಂಪಾದಿಸು ವುದನ್ನು ಕಲಿ ಎಂದು ತಾಕೀತು ಮಾಡಿದರು.

ಒಂದು ವರ್ಷದ ನಂತರ

ಇದಾಗಿ ಒಂದು ವರ್ಷ ಕಳೆಯಿತು. ವಿಶ್ವ ಅವರ ನಿರೀಕ್ಷೆಯ ಮಟ್ಟಕ್ಕೆ ಬರದೇಹೋದರೂ 'ಪರವಾಗಿಲ್ಲ' ಎನ್ನುವ ಹಾಗೆ ವ್ಯವಹಾರವನ್ನು ನಿರ್ವಹಿಸಿದ. ನಮ್ಮ ವಿಶ್ವ ಪರವಾಗಿಲ್ಲ ಮೂರ್ತಿ. ಅವನು ಇಷ್ಟುಮಾಡುವ ಹಾಗಾದನಲ್ಲ. ಇನ್ನೊಂದೆರಡು ವರ್ಷ ಹೀಗೇ ಮುಂದುವರಿದರೆ....' 'ವ್ಯಾಪಾರದಲ್ಲಿ ಖದೀಮ ಆಗ್ತಾನೆ' ಎಂದು ಮೂರ್ತಿಯವರು ಮಾತನ್ನು ಪೂರ್ಣಮಾಡಿದಾಗ ಬ್ರಹ್ಮಯ್ಯ ನಕ್ಕಿದ್ದರು. ವಿಶ್ವ ವಯಸ್ಸಿಗೆ ತಕ್ಕಂತೆ, ಆ ವಯಸ್ಸಿನ ಹುಡುಗರು ಮಾಡುವಂತೆ ಶೋಕಿ ಮಾಡ್ತಾನೆ. ವಾರಕ್ಕೆ ಎರಡು ಪಿಕ್ಚರ್ ನೋಡ್ತಾನೆ. ಬಟ್ಟೆಗಳಿಗೆ ಅಲಂ ಕಾರ ಸಾಧನೆಗಳಿಗೆ ಧಾರಾಳವಾಗಿ ಖರ್ಚು ಮಾಡ್ತಾನೆ. ಪಾಕೆಟ್‌ಮನಿ ಅಂತ ತಿಂಗ ಳಿಗೆ ಮುನ್ನೂರು ರೂಪಾಯಿ ಕೊಡ್ತಾರೆ. ಆದರೆ ದೊಡ್ಡವರ ಕಣ್ಣಿಗೆ ಕಾಣೋ ಹಾಗೆ ಯಾವ ಕೆಟ್ಟ ಚಾಳಿಯನ್ನೂ ಹಚ್ಚಿಕೊಂಡಿಲ್ಲ. ಡಾ॥ ಮೂರ್ತಿಯರನ್ನು ಕಂಡರೆ ಸಲಿ ವಿಶ್ವಾಸ. 'ಅಂಕಲ್ ಹೇಗಿದ್ದೀರಾ ನಮ್ಮ ಅಣ್ಣನಿಗೆ ಸಂಪಾದನೆ ಹುಚ್ಚು. ಎಷ್ಟು ಶ್ರಮ ಪಡ್ತಾರೆ, ನೀವಾದರೂ ಬುದ್ಧಿ ಹೇಳಿ' ಅಂತಾನೆ. 'ಅಂಕಲ್ ಒಂದೊಂದು ಸಲ ನಮ್ಮ ಮನಸ್ಸು ನಮ್ಮ ಆಧೀನದಲ್ಲಿರೊಲ್ಲ ಏಕೆ? ಆಸೆಗಳು, ಆಲೋಚನೆಗಳು ಹೇಗೆ ಮನಸ್ನಲ್ಲಿ ಹುಟ್ಟುತ್ವೆ ಹೇಳಿ' ಅಂತ ಪ್ರಶ್ನೆ ಮಾಡ್ತಾನೆ. 'ಅಂಕಲ್ ನಿಮ್ಮ ಆಸ್ಪತ್ರೇಲಿರೋ ರೋಗಿಗಳ ಲೂಸಾಗಿರೋ ತಲೆಗಳನ್ನು ನೀವು ಹೇಗೆ ಟ್ರೀಟ್ ಮಾಡ್ತೀರಿ' ಅಂತ ತಮಾಷೆ ಮಾಡ್ತಾನೆ. 'ಅಂಕಲ್ ಯಾವಾಗಲೂ ನೀವು ಬುದ್ಧಿಭ್ರಮಣೆಗೆ ಒಳಗಾದವರ ಜೊತೇಲೇ ಇರ್ತೀರಾ. ಅವರನ್ನು ಸರಿಪಡಿ ಸೋದಿಕ್ಕೆ ಪ್ರಯತ್ನಿಸ್ತೀರಾ. ತುಂಬಾ ಶ್ರಮ ಅಲ್ಲವಾ? ಆದರಿಂದ ನಿಮ್ಮ ಆರೋ

ಗ್ಯವೇ ಕೆಟ್ಟರೆ ಏನು ಗತಿ' ಅಂತ ಅವರ ಬಗ್ಗೆ ಕಾಳಜಿಮಾಡ್ತಾನೆ. ಚುರುಕಾದ ಯುವಕ. ವಯಸ್ಸು ಈಗ 22 ಅಥವಾ 23 ವರ್ಷ ಇರ್ಬೇಕು.

"ಏನಪ್ಪಾ ಬೆಳಿಗ್ಗೆ ಎದ್ದು ತಮ್ಮನ ಮೇಲೆ ಯುದ್ಧ ಡಿಕ್ಲೇರ್ ಮಾಡಿದ್ದೀಯಾ, ಏನಾಯ್ತು, ಬಡಪಾಯಿ ಏನು ಮಾಡಿದ ?" ಎಂದರು ಮೂರ್ತಿ.

"ಓಹೋ... ಬಾ ಮೂರ್ತಿ. ನೀನು ಬಂದದ್ದೇ ನನಗೆ ತಿಳಿಯಲಿಲ್ಲ. ಕೂತ್ಕೋ. ಹೋಗೋ... ಡಾಕ್ಟರ್ ಅಂಕಲ್‌ಗೆ ಟಿಫನ್ ತರೋದಿಕ್ಕೆ ಹೇಳೋ" ಎಂದರು ಬ್ರಹ್ಮಯ್ಯ.

"ಬೇಡಪ್ಪಾ, ಈಗತಾನೇ ಟಿಫನ್ ಮುಗಿಸಿ ಮನೆಯಿಂದ ಬರ್‍ತಾ ಇದ್ದೇನೆ."

"ಇರಲಿ. ನಮ್ಮನೇಲಿ ಇಂಡ್ಲಿ ಸಾಂಬಾರ್ ಮಾಡಿದ್ದಾಳೆ, ಸ್ವಲ್ಪ ರುಚಿನೋಡು" ಎಂದು ಉಪಚಾರ ಮಾಡಿದರು.

"ಏನು ವಿಶ್ವನ ಮೇಲೆ ಅಷ್ಟೊಂದು ಜೋರು ಮಾಡ್ತಿದ್ದೆಯಲ್ಲಾ, ಏನು ಸಮಾಚಾರ ?"

"ಏನು ಸಮಾಚಾರ ಅಂತ ಹೇಳ್ಲಿ ಮೂರ್ತಿ. ಅವನು ದಾರಿ ತಪ್ಪಿದಾನೆ ಅಂತ ನನಗನ್ನಿಸತ್ತೆ. ನಿನ್ನೆ ಲೆಕ್ಕ ಬುಕ್ಕುಗಳನ್ನು ಚೆಕ್ ಮಾಡ್ದಾಗ ಒಂದೂವರೆ ಸಾವಿರ ರೂಪಾಯಿ ಡಿಫರೆನ್ಸ್ ಬಂದಿದೆ. ಅಷ್ಟೊಂದು ಹಣ ಏನಾಯ್ತು ಅನ್ನೋದಕ್ಕೆ ದಾಖಲೆ ಇಲ್ಲ. ಪದಾರ್ಥಗಳು ಸೇಲ್ ಆಗಿವೆ. ಆದರೆ ಕ್ಯಾಷ್ ಇಲ್ಲ. ಇವನು ನನಗೆ ಗೊತ್ತಿಲ್ಲ ಅಂತಾನೆ. ನಾನು ತಲೆಚಚ್ಚಿಕೋಬೇಕಷ್ಟೆ."

ಮದುವೆ ವಯಸ್ಸೆ ?

"ಇಷ್ಟಕ್ಕೆ ನೀನು ಬೇಜಾರು ಮಾಡ್ಕೊಳ್ಳೋದಾ ? ಇನ್ನೊಂದು ಸಾರಿ ಚೆಕ್ ಮಾಡಿಸು. ಹಣ ಎಲ್ಲೂ ಹೋಗಿರಲಾರದು."

"ಇಲ್ಲ ಮೂರ್ತಿ, ನಮ್ಮ ಸುಬ್ರಹ್ಮಣ್ಯಮ್ ನೋಡಿದ ಮೇಲೆ, ಅವನ ಕಣ್ಣು ತಪ್ಪಿಸಿ, ಹಣದ ಲೆಕ್ಕ ಇರೋದಿಕ್ಕೆ ಸಾಧ್ಯವಿಲ್ಲ. ನನಗೆ ಈ ವಿಷಯ ಹೇಳೋದಿಕ್ಕೆ ಮೊದಲು ಮೂರು ಮೂರು ಸಾರಿ ನೋಡಿದ್ದಾನೆ. ಇದಲ್ಲದೆ, ಈ ಮೂರು ನಾಲ್ಕು ತಿಂಗಳಲ್ಲಿ ಹತ್ತು ಹದಿನೈದು ದಿನಕ್ಕೊಂದು ಸಾರಿ, ವಿಶ್ವ ಅಂಗಡಿಯನ್ನು ಕೆಲಸಗಾರರಿಗೇ ಬಿಟ್ಟು ಮೂರು ನಾಲ್ಕು ಘಂಟೆ ಎಲ್ಲೋ ಹೋಗ್ತಿದಾನೆ. ಎಲ್ಲಿಗೆ ಹೋಗ್ತಿಯೋ ಅಂದರೆ ಅದಕ್ಕೂ ಮಾತಿಲ್ಲ. ಒಟ್ಟಿನಲ್ಲಿ ಅವನ ಮನಸ್ಸಿನಲ್ಲಿ ಏನಿದೆ, ಅವನೇನು ಮಾಡ್ತಿದಾನೆ ಅಂತ ನನಗೆ ಗೊತ್ತಾಗ್ತಾ ಇಲ್ಲ. ಅವನ ಅಮ್ಮ, ನನ್ನ ಹೆಂಡತಿ ಮಾಮೂಲಿನಂತೆ, ಅವನಿಗೊಂದು ಮದುವೆ ಮಾಡಿಬಿಡೋಣ, ಸಂಸಾರದ

ವಾಬ್ದಾರಿ ಬಂದರೆ ಸರಿಹೋಗ್ತಾನೆ ಅಂತ ಹೇಳ್ತಿದ್ದಾರೆ. ವಿಶ್ವನಿಗೆ ಮದುವೆ ಾಡೋ ವಯಸ್ಸೆ, ನೀನೇ ಹೇಳು."

"ಆಯ್ತು, ನೀನು ಚಿಂತೆ ಮಾಡಬೇಡ. ನಾನು ವಿಶ್ವನ ಜೊತೆ ಮಾತಾಡ್ತೇನೆ. ವನ ತೊಂದರೆ ಏನು ಅಂತ ತಿಳಿದು ಕೊಳ್ತೇನೆ" ಎಂದರು ಮೂರ್ತಿ.

o o o o

"ಅಂಕಲ್, ನನ್ನನ್ನು ಕರೆದ್ರಂತೆ..." ವಿಶ್ವ ಒಳ ಬಂದು ನುಡಿದ.

"ಬಾ ವಿಶ್ವ ಕೂತುಕೋ. ನಾನು ನಿನ್ನ ಅಣ್ಣನಿಗೆ ಸ್ನೇಹಿತ. ಅಂದರೆ ನಗೂ ಸ್ನೇಹಿತನೇ. ಅಂಕಲ್ ಅಂತ ಕರೆದು ವಿಶ್ವಾಸ ತೋರಿಸ್ತೀಯಾ, ಜೊತೆಗೆ ಾನು ಡಾಕ್ಟರು. ಆದ್ದರಿಂದ, ಯಾವ ಸಂಕೋಚವಿಲ್ಲದೆ, ನೀನು ನನ್ನೊಂದಿಗೆ ಾತಾಡಬೇಕು. ನಮ್ಮಿಬ್ಬರ ನಡುವೆ ನಡೆದ ಮಾತುಕತೆ ನಮ್ಮಲ್ಲೇ ಇರತ್ತೆ. ನಿನ್ನ ನುಮತಿ ಇಲ್ಲದೆ, ನೀನು ಹೇಳುವ ಯಾವುದೇ ವಿಷಯವನ್ನೂ ನಾನು ನಿನ್ನ ಅಣ್ಣ ಗೆ ಹೇಳೋದಿಲ್ಲ. ನಿನ್ನ ಸಮಸ್ಯೆ ಏನು, ಈ ಹಣ ಏನಾಯ್ತು. ನೀನು ಆಗಾಗ್ಗೆ ಂಗಡಿಯಿಂದ ಮಾಯವಾಗಿ ಎಲ್ಲಿಗೆ ಹೋಗ್ತಿಯಾ? ಹೇಳು. ನೀನು ಯಾವು ಾದರೂ ತೊಡಕಿನಲ್ಲಿ ಸಿಕ್ಕಿಹಾಕಿಕೊಂಡಿದ್ದರೆ, ನಾನು ಕೈಲಾದ ಸಹಾಯಮಾಡ್ತೇನೆ ಥವಾ ನಿನಗೆ ಸಹಾಯ ಸಿಗುವ ವ್ಯವಸ್ಥೆ ಮಾಡ್ತೇನೆ" ಎಂದರು ಡಾ॥ ಮೂರ್ತಿ.

ಾನೇ ಮಾಡಿದ್ದು'

"ನನ್ನನ್ನು ಅಪಾರ್ಥ ಮಾಡಿಕೊಳ್ದೆ, ನನ್ನ ಸಮಸ್ಯೆ ಹೇಳಿಕೊಳ್ಳೋದಕ್ಕೆ ಅವ ಶ ಮಾಡಿಕೊಟ್ಟಿದ್ದಕ್ಕೆ ಥ್ಯಾಂಕ್ಸ್ ಅಂಕಲ್, ನೀವು ಡಾಕ್ಟರು. ನೀವು ಸಹಾಯ ಾಡ್ತೀರಿ ಅಂತ ನಂಬಿ ನಾನು ಈ ಹೊತ್ತು ಎಲ್ಲವನ್ನೂ ಹೇಳಿಬಿಡ್ತೇನೆ. ಅಣ್ಣನಿಗೆ ಾತ್ರ ಇದನ್ನು ಹೇಳಬೇಡಿ. ನಾನು ಮೊದಲೆ ನಿಮ್ಮ ಹತ್ರ ಬರದೆ ದೊಡ್ಡ ತಪ್ಪು ಾಡಿದೆ. ನೀವು ನನ್ನ ಅಣ್ಣನ ಸ್ನೇಹಿತರು. ನಿಮಗೆ ನನ್ನ ಸಮಸ್ಯೆಯನ್ನು ಳಿದರೆ ಅದು ಅಣ್ಣನಿಗೆ ಗೊತ್ತಾಗಿ ಬಿಡುತ್ತೆ ಅನ್ನೊ ಹೆದರಿಕೆ ಇತ್ತು. ಆದರೆ ನ್ಮ ಸಹಾಯವನ್ನು ತೆಗೆದುಕೊಳ್ಳದೆ ನಾನು ನನ್ನ ನೆಮ್ಮದಿಯನ್ನು ಹಾಳುಮಾಡಿ ಾಡೆ. ನನ್ನನ್ನು ಕ್ಷಮಿಸಿ ಅಂಕಲ್. ಒಂದೂವರೆ ಸಾವಿರ ರೂಪಾಯಿ ಎಲ್ಲೂ ೋಗಿಲ್ಲ. ನಾನೇ ಖರ್ಚು ಮಾಡಿದ್ದೇನೆ."

"ಯಾತಕ್ಕೆ, ಯಾವುದಕ್ಕಾಗಿ?"

"ನನ್ನ ಟ್ರೀಟ್‌ಮೆಂಟ್‌ಗೋಸ್ಕರ. ಡಾಕ್ಟರ ಫೀಸ್‌ಗಾಗಿ."

“ನಿನ್ನ ಟ್ರೀಟ್‌ಮೆಂಟ್...? ಏನು ಖಾಯಿಲೆ? ಯಾವ ಡಾಕ್ಟರ್ ನಿನ್ನನ್ನು ನೋಡ್ತಿದ್ದಾರೆ?”

“ಹೇಳೋದಿಕ್ಕೆ ನಾಚಿಕೆ ಆಗತ್ತೆ ಅಂಕಲ್. ಇವನು ಎಂಥಾ ಮನುಷ್ಯ ಅಂತ ತಿಳ್ಕೋತೀರೋ ಏನೋ. ನನಗೆ ಏ.ಡಿ. ಖಾಯಿಲೆ ಇದೆಯಂತೆ. ನನ್ನ ವೀರ್ಯ ನೀರಾಗಿ ಹೋಗ್ತಿದೆಯಂತೆ. ಸರಿಯಾದ ಚಿಕಿತ್ಸೆ ತೆಗೆದುಕೊಳ್ಳದೇ ಹೋದರೆ ನಾನು ನಪುಂಸಕನಾಗಿ ಬಿಡ್ತೇನಂತೆ...”

“ಯಾರು ಹೇಳಿದ್ದು ಹಾಗಂತ?”

“ಠಕ್ಕರ್ ಡಿಸ್ಪೆನ್ಸರಿಯ ಡಾ|| ವೈದ್ಯಕೇಸರಿ.”

“ವಿಶ್ವ, ನಿನ್ನ ಬುದ್ಧಿ ಸ್ಥಿಮಿತದಲ್ಲಿದೆ ತಾನೇ. ಆ ಡಿಸ್ಪೆನ್ಸರಿಗೆ ಹೋಗಿ, ಆ ಖೊಟ್ಟಿ ವೈದ್ಯನನ್ನೇಕೆ ನೋಡಿದೆ. ಈ ಊರಿನಲ್ಲಿ ಕ್ವಾಲಿಫೈಡ್ ಡಾಕ್ಟರುಗಳಿಗೆ ಬರವೇ? ಶುದ್ಧ ಮೂರ್ಖನಂತೆ ನಡೆದುಕೊಂಡಿದ್ದೀಯ.”

“ಮೂರ್ಖತನದ ಕೆಲಸ ಮಾಡಿದೆ ಅಂತ ಈಗ ಗೊತ್ತಾಗ್ತಿದೆ ಅಂಕಲ್. ಆಗ ನನಗೆ ಗೊತ್ತಿಲ್ಲದೆ, ಡೆಸ್ಪರೇಟ್ ಆಗಿ ಅಲ್ಲಿಗೆ ಹೋದೆ. ಇದಾದದ್ದು ಹೀಗೆ: ನಾಲ್ಕು ತಿಂಗಳ ಹಿಂದೆ ನನ್ನ ಸ್ನೇಹಿತರು, ಒಬ್ಬ ಹುಡುಗಿಯನ್ನು ನನಗೆ ಪರಿಚಯಿಸಿದರು. ನೋಡೋದಿಕ್ಕೆ ಚೆನ್ನಾಗಿದ್ದಳು. ನಾನು ನಿನ್ನ ಲವ್ ಮಾಡ್ತೇನೆ ಎಂದಳು. ನಾನು ಅದನ್ನು ನಂಬಿದೆ. ಪರಿಚಯವಾದ ಎರಡನೇ ಭೇಟಿಯಲ್ಲೇ, ನನ್ನನ್ನು ಶರೀರ ಸಂಪರ್ಕಕ್ಕೆ ಪ್ರಚೋದಿಸಿದಳು. ಕಷ್ಟ ಇದೆ, ತುರ್ತಾಗಿ ಬೇಕು ಅಂತ ಐದುನೂರು ರೂಪಾಯಿ ಕೇಳಿದಳು. ಕೊಟ್ಟೆ. ಆಮೇಲೆ ಗೊತ್ತಾಯಿತು. ಈ ರೀತಿ ಅವಳು ಬಹಳ ಮಂದಿಗೆ ಮಾಡಿದಾಳೆ ಅಂತ. ಹತ್ತಾರು ಜನರ ಜೊತೆ ಮಲಗಿದ ಅವಳಿಂದ ನನಗೆ ಏನಾದರೂ ಲೈಂಗಿಕ ಖಾಯಿಲೆ ಅಂಟಿಕೊಂಡಿದೆಯೇನೋ ಅನ್ನೋ ಭಯ ಶುರುವಾಯ್ತು. ಏ.ಡಿ. ಆಗಿ ನನ್ನ ಜೀವನವೇ ಹಾಳಾಗುತ್ತೆ ಅನ್ನೋ ಭೀತಿ ಮೆಟ್ಟಿಕೊಂಡಿತು. ಪರಿಚಿತ ಡಾಕ್ಟರನ್ನ ಅಥವಾ ನಿಮ್ಮನ್ನು ನೋಡೋದಿಕ್ಕೆ ನಾಚಿಕೆ ಆಯ್ತು. ನನ್ನ ಈ ಕೆಟ್ಟ ಕೆಲಸ ನಿಮಗೆ ಗೊತ್ತಾಗೋದು ಬೇಡ ಅನಿಸ್ತು. ಪೇಪರ್‌ನಲ್ಲಿ ಠಕ್ಕರ್ ಡಿಸ್ಪೆನ್ಸರಿಯ ಜಾಹಿರಾತು ನೋಡಿದೆ. ಅಲ್ಲಿ ಹೋದೆ. ಅಲ್ಲಿನ ವೈದ್ಯ ನನ್ನ ಮೂತ್ರ ಪರೀಕ್ಷೆ ಮಾಡಿ, ನಿನಗೆ ಏ.ಡಿ. ಆಗಿದೆ. ಆಗಲೇ ನಿನ್ನ ವೀರ್ಯ ನೀರಾಗಿ ಹೋಗ್ತಾ ಇದೆ. ನೀನು ನನ್ನಲ್ಲಿಗೆ ಬಂದಿದ್ದಕ್ಕೆ ಸರಿಹೋಯಿತು. ತಡವಾಗಿದ್ದರೆ ನೀನು ನಪುಂಸಕನಾಗಿಬಿಡ್ತಿದ್ದೆ. ನಾನು ನಿನಗೆ ಸರಿಯಾದ ಔಷಧಿ ಕೊಡ್ತೇನೆ, ಖಾಯಿಲೆಯನ್ನು ಬುಡಸಹಿತ ಕಿತ್ತುಬಿಡ್ತೇನೆ. ಜೊತೆಗೆ ನಿನ್ನ ಲೈಂಗಿಕ ಸಾಮರ್ಥ್ಯ ಮರಳಿ ಬರೋ ಹಾಗೆ ಮಾಡ್ತೇನೆ. ಆದರೆ ಚಿಕಿತ್ಸೆ ಖರ್ಚು ಆರುನೂರು ರೂಪಾಯಿ ಆಗತ್ತೆ. ಔಷಧಿಯನ್ನು ತಯಾರು ಮಾಡಬೇಕಾದ್ದರಿಂದ ನೀನು

ಡ್ಡನ್ನು ಮೊದಲೇ ಕೊಡಬೇಕು ಅಂದ. ನಾನು ವಾಸಿಯಾದರೆ ಸಾಕು ಅಂತ ಡ್ಡು ಕೊಟ್ಟೆ. ಆತ, ಜನನಾಂಗಕ್ಕೆ ಹಚ್ಚಿಕೊಳ್ಳೋದಿಕ್ಕೆ ಮುಲಾಮು ಕೊಟ್ಟ. ನ್ನೋದಿಕ್ಕೆ ಕೆಲವು ಮಾತ್ರೆಗಳು, ಚೂರ್ಣ ಕೊಟ್ಟ. ಒಂದು ತಿಂಗಳು ಉಪ ೋಗಿಸಿ ಮತ್ತೆ ಬಾ. ಅಷ್ಟರೊಳಗೆ ಸರಿಹೋಗಿರತ್ತೆ ಅಂದ. ನಾನು ಒಂದು ಂಗಳ ತನಕ ಅವನು ಕೊಟ್ಟ ಮಾತ್ರೆ ಔಷಧ ತಿಂದೆ. ನಾನು ಸರಿಹೋದೆನೆ ಅಂತ ತಿದಿನ ಪರೀಕ್ಷೆ ಮಾಡತೊಡಗಿದೆ. ಮೊದಲು ಲೈಂಗಿಕ ವಿವರಣೆ ಇರೋ ಪುಸ್ತಕ ನ್ನು ಓದಿದರೆ, ಜನನಾಂಗ ಉದ್ರೇಕವಾಗೋದು. ಈಗ ಆಗೋದಿಲ್ಲ. ಅಕಸ್ಮಾತ್ ದರೂ ಎಲ್ಲೋ ಸ್ವಲ್ಪ ಆಗುತ್ತೆ."

ಟ್ರಾಂಗ್ ಔಷಧಿ !

ಒಂದು ತಿಂಗಳಾದ ಮೇಲೆ ಮತ್ತೆ ಅವನಲ್ಲಿಗೆ ಹೋಗಿ ಚಿಕಿತ್ಸೆಯಿಂದ ಏನೂ ಪಯೋಗ ಆಗಿಲ್ಲ. ಜನನಾಂಗ ಉದ್ರೇಕವಾಗೊಲ್ಲ ಅಂದೆ. ಅವನು ಮತ್ತೊಮ್ಮೆ ರೀಕ್ಷೆ ಮಾಡಿ, ಖಾಯಿಲೆ ಆಳವಾಗಿ ಬೇರೂರಿಬಿಟ್ಟಿದೆ. ಇನ್ನೂ ಸ್ಟ್ರಾಂಗ್ ಆದ ಷಧ ಕೊಡಬೇಕು, ಅದಕ್ಕೆ ಐನೂರು ರೂಪಾಯಿ ಆಗತ್ತೆ. ಈ ಸಲ ವಾಸಿ ಯಾಗೋದು ಗ್ಯಾರಂಟಿ ಎಂದ. ನಾನು ಕೊಟ್ಟೆ. ದುಡ್ಡು ಕಳಕೊಂಡದ್ದೇ ಲಾಭ ಯ್ತು ಅಂಕಲ್. ನನಗೆ ಲೈಂಗಿಕ ಖಾಯಿಲೆ ಅಂಟಿಕೊಂಡಿದೆ. ನಾನು ಷಂಡ ಗಿಬಿಡುತ್ತೇನೆ. ನಾನೇ ನನ್ನ ಕೈಯಾರ ನನ್ನ ಜೀವನವನ್ನು ಹಾಳುಮಾಡಿಕೊಂಡೆ. ಗ ನೀವೇ ದಾರಿ ತೋರಿಸಬೇಕು. ಈ ಖಾಯಿಲೆಯಿಂದ ನನ್ನನ್ನು ಬಿಡುಗಡೆ ಾಡಬೇಕು. ಇಲ್ದಿದ್ರೆ ನಾನೂ ಏನಾದರೂ ತೆಗೆದುಕೊಂಡು ಪ್ರಾಣ ಬಿಡ್ತೇನೆ" ಂದು ಬಿಕ್ಕಿದ.

"ವಿಶ್ವ, ನಿನಗೆ ಆ ಹುಡುಗಿಯ ಸಂಪರ್ಕವಾದ ಮೇಲೆ, ಜನನಾಂಗದ ಮೇಲೆ ಯವಾಗಿತ್ತೇ ? ಜನನಾಂಗದ ಮೂಲಕ ಬಿಳುಪು ಅಥವಾ ಕೀವು ಹೋಗಿತ್ತೇ ? ೂತ್ರ ಹೋಗುವಾಗ ಉರಿಯಾಗುತ್ತಿತ್ತೇ ?

"ಇಲ್ಲ ಅಂಕಲ್, ಅದೊಂದೂ ನನಗೆ ಆಗಿರಲಿಲ್ಲ"

"ಅಂದರೆ ನಿನಗೆ ಸೋಂಕಾಗಿರುವ ಸಂಭವ ಕಡಿಮೆ. ಆ ನಿನ್ನ ವೈದ್ಯಕೇಸರಿ ನ್ನ ಜನನಾಂಗವನ್ನು ಪರೀಕ್ಷೆ ಮಾಡಿದನೇ, ನಿನ್ನ ರಕ್ತ ಪರೀಕ್ಷೆ ಮಾಡಿದನೆ ?

"ಇಲ್ಲ ಅಂಕಲ್. ಆತ ನನ್ನ ಮೂತ್ರ, ವೀರ್ಯಗಳನ್ನು ಪರೀಕ್ಷೆಗಾಗಿ ತೆಗೆದು ಂಡ. ರಿಪೋರ್ಟ್ ಏನೂ ಕೊಡ್ಲಿಲ್ಲ."

"ಲೈಂಗಿಕ ಖಾಯಿಲೆಗಳಾದ ಸಿಫಿಲಿಸ್ ಅಥವಾ ಗೊನೋರಿಯಾ ರೋಗ

ನಿರ್ಧಾರಕ್ಕೆ ಜನನಾಂಗವನ್ನು ಪರೀಕ್ಷಿಸಬೇಕು. ಅದರ ಮೇಲೆ ವ್ರಣವೇನಾದರೂ ಆಗಿದೆಯಾ ನೋಡಬೇಕು. ಜನನಾಂಗದಿಂದ ಬಿಳುಪು ಅಥವಾ ಇನ್ನಾವುದೇ ಬಗೆಯ ದ್ರವ ಬರುತ್ತಿದ್ದರೆ ಅದನ್ನು ತೆಗೆದು ರೋಗಾಣುಗಳಿಗಾಗಿ ಪರೀಕ್ಷಿಸಬೇಕು. ರಕ್ತ ಪರೀಕ್ಷೆ ಮಾಡಿ ಸಿಫಿಲಿಸ್ ರೋಗ ಇದೆಯೋ ಎಂದು ಪತ್ತೆ ಮಾಡಬಹುದು. ಈಗಲೂ ಕಾಲ ಮಿಂಚಿಲ್ಲ. ರಕ್ತ ಪರೀಕ್ಷೆ ಮಾಡಿಸೋಣ. ಅದು ನೆಗೆಟಿವ್ ಎಂದು ಬಂದರೆ ನಿನಗೆ ಸೋಂಕಾಗಿಲ್ಲ ಅಂತ ಖಾತ್ರಿ ಆಗತ್ತೆ. ಅಥವಾ ಪಾಸಿಟಿವ್ ಎಂದು ಬಂದರೆ ಏನಂತೆ? ಒಂದು ಕೋರ್ಸ್ ಆಂಟಿಬಯಾಟಿಕ್ ಔಷಧ ಕೊಟ್ಟರೆ, ಸೋಂಕು ಕ್ಲಿಯರ್ ಆಗತ್ತೆ. ಇನ್ನು ವೀರ್ಯ ನೀರಾಗುವುದು ಅದೆಲ್ಲ ಆ ವೈದ್ಯ ಕೇಸರಿಯ ಬುರುಡೆ. ನಿನ್ನಂತಹ ಅಮಾಯಕರು ಸಿಕ್ಕಿದರೇ ತಾನೇ, ಅವನಿಗೆ ದುಡ್ಡು ಸಿಗೋದು. ನಿನ್ನ ಅಜ್ಞಾನ, ಭಯ, ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡು, ನಿನ್ನಿಂದ ಚಿಕಿತ್ಸೆಯ ನೆಪದಲ್ಲಿ ಹಣ ದೋಚಿದ್ದಾನೆ. ನೀನು ಹಣ ಕಳೆದುಕೊಂಡಿದ್ದಲ್ಲದೆ, ನನಗೆ ಖಾಯಿಲೆ ಇದೆ, ನಾನು ಷಂಡನಾಗುತ್ತೇನೆ ಎನ್ನುವ ಅನುಮಾನದ ರೋಗವನ್ನು ಸೃಷ್ಟಿಕೊಂಡು ನರಳುವಂತಾಗಿದೆ. ಈ ಕ್ಷಣವೇ ಭಯವನ್ನು ಬಿಡು. ಈಹೊತ್ತೇ ರಕ್ತ ಪರೀಕ್ಷೆ ಮಾಡಿಸೋಣ. ಅನುಮಾನ ಪರಿಹಾರವಾಗತ್ತೆ" ಎಂದರು.

ಅತಿಯಾದ ಭಯ

"ಅಂಕಲ್, ಈಗ ಲೈಂಗಿಕ ಭಾವನೆ ಬಂದಾಗ. ಜನನಾಂಗ ಉದ್ರೇಕವಾಗೋದಿಲ್ಲ ಏಕೆ? ನನಗೆ ಖಾಯಿಲೆ ಇಲ್ಲದೇ ಹೋದರೆ. ಉದ್ರೇಕವಾಗಬೇಕಲ್ಲ."

"ಅತಿಯಾದ ಭಯ, ಅನುಮಾನಕ್ಕೀಡಾದ ನಿನ್ನ ಮನಸ್ಸಿಗೆ ಆದ ಅಹಿತ ಪರಿಣಾಮದ ಫಲಿತಾಂಶ ಇದು. ಪ್ರಥಮ ಚುಂಬನ ದಂತಭಗ್ನ ಅಂತ ಅಂದ ಹಾಗೆ ನಿನ್ನ ಮೊದಲ ಲೈಂಗಿಕ ಸಂಪರ್ಕದಿಂದ ಇಷ್ಟೊಂದು ಹಗರಣವಾಗಿರೋವಾಗ, ಲೈಂಗಿಕ ಕ್ರಿಯೆ ಎಂದರೆ ನಿನ್ನ ಮನಸ್ಸು ಬೆಚ್ಚಿ ಬೀಳುವಂತಾಗಿದೆ. ಅದು ನರಮಂಡಲದ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡಿ, ಜನನಾಂಗ ಉದ್ರೇಕವಾಗದಂತೆ ತಡೆದಿದೆ. ಆದರೆ ಇದು ತಾತ್ಕಾಲಿಕ. ಭಯ, ಅನುಮಾನ ಹೋಗುತ್ತಿದ್ದಂತೆ. ಅದು ಸರಿಹೋಗುತ್ತದೆ. ಯೋಚಿಸಬೇಡ."

"ಅಂಕಲ್ ಈಗ ನನ್ನ ಮನಸ್ಸಿಗೆ ನೆಮ್ಮದಿ ಸಿಕ್ಕಿತು. ಈ ಮೂರು ನಾಲ್ಕು ತಿಂಗಳು, ನಾನು ಪಟ್ಟ ವೇದನೆ, ಹಿಂಸೆ ನನ್ನ ಶತ್ರುವಿಗೂ ಬೇಡ. ನಿಮಗೆ ನಾನು ಯಾವ ರೀತಿ ಕೃತಜ್ಞತೆ ತೋರಿಸಬೇಕೋ ನನಗೆ ತಿಳಿಯದು" ಎಂದ.

ನಂತರ ಪರೀಕ್ಷೆಗಳಿಂದ ಅವನಿಗೆ ಯಾವ ಸೋಂಕೂ ಆಗಿಲ್ಲ ಎಂದು ತಿಳಿದು ಬಂತು. ವಿಶ್ವ ಗೆಲುವಾದ. ಅಣ್ಣನಿಗೆ ತಾನೇ ಹಣವನ್ನು ಬಳಸಿಕೊಂಡಿರುವುದಾಗಿ ತಿಳಿಸಿ ಮತ್ತೆ ಅಂತಹ ಕೆಲಸವನ್ನು ಮಾಡುವುದಿಲ್ಲ ಎಂದು ತಪ್ಪೊಪ್ಪಿಕೊಂಡ. ಈಗ ಪೂರ್ಣ ಮನಸ್ಸಿನಿಂದ ಚೆನ್ನಾಗಿ ವ್ಯಾಪಾರ ಮಾಡುತ್ತಿದ್ದಾನೆ. ಬ್ರಹ್ಮಯ್ಯನವರಿಂದ ಶಾಭಾಷ್ ಎನಿಸಿಕೊಂಡಿದ್ದಾನೆ.

ತಂದೆಯ ರೋಗ, ಮಗುವಿಗೆ ಮೃತ್ಯು

ಬೆಳಗಿನ ಎಳೆಬಿಸಿಲು ಆಸ್ಪತ್ರೆಯ ಅಂಗಳದಲ್ಲಿ ನಲಿದಾಡುತ್ತಿತ್ತು. ಆಸ್ಪತ್ರೆಯ ಮುಂಭಾಗದಲ್ಲಿ ಬೆಳೆದ ಚಿಗುರು ಹುಲ್ಲಿನ ಗರಿಗಳು, ಗಿಡಗಳ ಎಲೆ ಹೂಗಳು. ಮುಂಜಾನೆ ಬಿದ್ದ ತುಂತುರು ಮಳೆಯಲ್ಲಿ ನೆನೆದು, ಮುತ್ತಿನಾಭರಣ ಧರಿಸಿ, ಸಿಂಗಾರ ಗೊಂಡಿದ್ದುವು. ತೀಡಿ ಬಂದ ತಂಗಾಳಿಗೆ ತೊನೆದಾಡಿ ಬಂದವರಿಗೆ ಸ್ವಾಗತ ಬಯ ಸುತ್ತಿದ್ದುವು.

ರೋಗಿಗಳಿಗೆ ಬೆಳಗಿನ ತಿಂಡಿಯನ್ನು ತಂದುಕೊಡುವ ಬಂಧುಗಳ, ಮನೆಯ ವರ ಓಡಾಟ. ಬೆಳಗಿನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ನರ್ಸ್‌ಗಳ, ಸಹಾಯಕರ ಕಲರವ ವಾರ್ಡ್‌ಗಳಲ್ಲಿ ತುಂಬಿತ್ತು.

ಇಲ್ ಬೇಬಿ ವಾರ್ಡ್‌ನ ಆರನೇ ಬೆಡ್ಡಿನ ಮೇಲೆ ತಲೆ ತಗ್ಗಿಸಿ ಕುಳಿತಿದ್ದ ಕುಸುಮಳಿಗೆ ಬೆಳಕು ಮೂಡುವ ಬದಲು ಕತ್ತಲೆಯೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎನಿಸಿತ್ತು. ನೋವು. ನಿರಾಶೆ, ದುಃಖ, ಅವಮಾನಗಳಿಂದ ಆಕೆ ಜರ್ಝರಿತಳಾ ಗಿದ್ದಳು. ಹತ್ತಾರು ಕಡೆಯಿಂದ ಬೀಸಿ ಬರುವ ಚಾಟಿಗಳ ಏಟಿನಿಂದ ತತ್ತರಿಸುವ ಬಡಪಾಯಿಯಂತಾಗಿದ್ದಳು. ಆಕೆಯ ಮನಸ್ಸು ಮೌನವಾಗಿ ರೋಧಿಸುತ್ತಿತ್ತು.

ಕುಸುಮ ಯೋಚಿಸಿದಳು. ಒಂದು ದಿನದೊಳಗೆ ಅದೆಷ್ಟು ವ್ಯತ್ಯಾಸ, ಹಿಂದಿನ ದಿನ ಬೆಳಿಗ್ಗೆ ಆಕೆ ಅದೆಷ್ಟು ಆಸೆಗಳನ್ನು ತನ್ನ ಹೃದಯದಲ್ಲಿ ಹೊತ್ತು ಬಂದಿದ್ದಳು. ಮನೆಯಲ್ಲೇ ನೋವು ಕಾಣಿಸಿಕೊಂಡಾಗ, ಆಸ್ಪತ್ರೆಗೆ ಬರುತ್ತಿದ್ದಂತೆ ನೋವು ಹೆಚ್ಚಾಗತೊಡಗಿದಾಗ, ಆ ನೋವಿನಲ್ಲೂ, ಮುದ್ದು ಮಗುವೊಂದು, ಇನ್ನು ಕೆಲವೇ ಘಂಟೆಗಳಲ್ಲಿ ತನ್ನ ಮಡಿಲನ್ನು ತುಂಬಲಿದೆ ಎಂದು ಹಿಗ್ಗಿದಳು. ಬರಲಿರುವ ತನ್ನ ಮಗುವಿನ ಬಗ್ಗೆ ನೂರಾರು ರಂಗುರಂಗಿನ ಕನಸುಗಳನ್ನು ಕಟ್ಟಿದ್ದಳು. ಆಕೆಯ ಪತಿ ಶಂಕರ್ ಎತ್ತರ ನಿಲುವಿನ ವಿಶಾಲ ಭುಜಗಳ ಲಕ್ಷಣವಾದ ವ್ಯಕ್ತಿ. ಇನ್ನು ತಾನು ಕುಸುಮದಷ್ಟೇ ಕೋಮಲ, ಆಕರ್ಷಕ ರೂಪವುಳ್ಳವಳು. ತಮಗೆ ಜನಿಸಲಿರುವ ಮಗುವಿನ ಅಂದ ಚೆಂದ, ರೂಪುರೇಖೆಗಳನ್ನು ಊಹಿಸಿ, ಚಿತ್ರಿಸಿಕೊಂಡು, ಸಂಭ್ರಮ ಪಟ್ಟಿದ್ದಳು.

ಮೊದಲಿನಿಂದಲೂ ಅಷ್ಟೆ. ಆಕೆಗೆ ಮಕ್ಕಳೆಂದರೆ ಪ್ರಾಣ. ಚಿಕ್ಕಂದಿನಲ್ಲಿ ಆಕೆಯ ಮೆಚ್ಚಿನ ಆಟ ತಾಯಿ ಮಗುವಿನ ಆಟ. ಬೊಂಬೆಯನ್ನು ಮಗುವಿನಂತೆ ಎತ್ತಿಕೊಂಡು, ಸ್ನಾನ ಮಾಡಿಸಿ, ಬಟ್ಟೆ ಹಾಕಿ, ತಿಂಡಿ ತಿನ್ನಿಸಿ, ಲಾಲಿ ಹಾಡಿ, ಮಲಗಿಸುವ ಆಟದಲ್ಲಿ ತನ್ನನ್ನು ತಾನೇ ಮರೆಯುತ್ತಿದ್ದಳು. ತಂದೆತಾಯಿಯರಿಗೆ ಆಕೆ ಒಬ್ಬಳೇ ಮಗಳಾದ್ದರಿಂದ ತಂಗಿ, ತಮ್ಮಂದಿರನ್ನು ಎತ್ತಿಕೊಂಡು ಆಡಿಸುವ ಅವಕಾಶ ವಿರದಿದ್ದರೂ, ಬೆಳೆದು ದೊಡ್ಡವಳಾಗುತ್ತಿದ್ದಂತೆ, ಕೇರಿಯಲ್ಲಿ ಯಾರ ಮನೆಯಲ್ಲಿ ಪುಟ್ಟ ಪಾಪವಿದ್ದರೆ, ಹೋಗಿ ಎತ್ತಿಕೊಂಡು ಆಟವಾಡುತ್ತಿದ್ದಳು.

ಕಂದನ ಕನಸು

ಮದುವೆಯಾಗಿ, ತಾನು ಹೊರಗಡೆ ಆಗದೆ, ಗರ್ಭ ನಿಂತಿದೆ ಎಂದು ಗೊತ್ತಾದಾಗ, ಆವಳಿಗೆ ಸ್ವರ್ಗವೇ ಕೈಗೆ ಸಿಕ್ಕಂತಾಯಿತು. ತನ್ನ ಬಹು ದಿನಗಳ ಕನಸು, ನನಸಾಗುತ್ತದೆ; ಬಟ್ಟಲುಗಣ್ಣುಗಳ, ಸೇಬಿನಂಥ ಕೆನ್ನೆಯ, ಹವಳದಂಥ ತುಟಿಗಳ ಮುದ್ದು ಕಂದನ ತಾಯಿಯಾಗುತ್ತೇನೆ ಎಂದು ಸಂತೋಷಪಟ್ಟಳು. ಹೀಗೆ ತಾನು ಬಯಸಿ, ಬಯಸಿ ತಾಯಿ ಆದಾಗ, ದೇವರು ತನಗೆ ಈ ರೀತಿ ನಿರಾಶೆಯನ್ನುಂಟು ಮಾಡಬಹುದೇ ಕುಸುಮ ಬಿಕ್ಕಿದಳು. ಕೆನ್ನೆಯ ಮೇಲೆ ಕಣ್ಣೀರು ಹರಿಯಿತು.

ಕುಸುಮಳ ತಂದೆ ತಾಯಿಗಳಿಗೆ ಆಕೆಗೆ ಬೇಗ ಮದುವೆ ಮಾಡಿಬಿಡಬೇಕು ಎಂದು ಆಸೆಯಿದ್ದರೂ. ಹಳ್ಳಿಯೊಂದರಲ್ಲಿ ಪ್ರೈಮರಿ ಶಾಲಾ ಮಾಸ್ತರಾಗಿದ್ದ ಈಶ್ವರಯ್ಯನವರ ಆರ್ಥಿಕ ಸ್ಥಿತಿ ಅದಕ್ಕೆ ಪ್ರತಿಕೂಲವಾಗಿತ್ತು. ಬರುವ ಸೊಸೆ. ಭಾಗ್ಯಲಕ್ಷ್ಮಿಯಾಗಿಯೇ ಬರಬೇಕೆಂದು ಬಯಸುವ ಅತ್ತೆ ಮಾವಂದಿರೇ ಎಲ್ಲೆಡೆ ಇರುವಾಗ, ಬಡ ಮಾಸ್ತರರ ಮಗಳನ್ನು ಸೊಸೆಯಾಗಿ ಸ್ವೀಕರಿಸಲು ಯಾರೂ ಬರದಿದ್ದಾಗ, ಈಶ್ವರಯ್ಯನವರು ಏನುತಾನೇ ಮಾಡಿಯಾರು ? ತಮ್ಮ ಮಗಳು ಗುಣವತಿ ಸೌಮ್ಯ, ಸುಲಕ್ಷಣೆ ಎಂದು ತಿಳಿದಿದ್ದರೂ, ಮದುವೆ ಮಾರುಕಟ್ಟೆಯಲ್ಲಿ ಅವುಗಳಿಗೆ ಯಾವ ಬೆಲೆಯೂ ಇಲ್ಲದ್ದನ್ನು ಕಂಡು ಅಸಹಾಯಕರಾಗಿದ್ದರು. ಕೊನೆಗೆ ಕುಸುಮಳ ಕಂಕಣಬಲ ಒದಗಿಬಂತೋ ಅಥವಾ ಈಶ್ವರಯ್ಯನವರಿಗೆ ಕನ್ಯಾದಾನ ಮಾಡುವ ಪುಣ್ಯ ಲಭಿಸಿತೋ ಏನೋ. ಬೆಂಗಳೂರಿನಲ್ಲಿ ಪುಟ್ಟ ದಿನಸಿ ಅಂಗಡಿ ಇಟ್ಟುಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ಬಹುದೂರದ ಸಂಬಂಧಿ ಶಂಕರ ಕುಸುಮಳನ್ನು ಮದುವಯಾಗಲು ಒಪ್ಪಿ ಬಂದಿದ್ದ.

ಮದುವೆ ಸಿದ್ಧತೆ ನಡೆಯುತ್ತಿದ್ದಾಗ ಶಂಕರನ ನಡತೆಯ ಬಗ್ಗೆ ಒಡಕು ಮಾತು ಕೇಳಿಬಂತು. ಅವನಿಗೆ ಹೆಣ್ಣಿನ ಶೋಕಿ ಇದೆ ಎಂದು ಯಾರೋ ಈಶ್ವರಯ್ಯನವರ ಕಿವಿಗೆ ಸುದ್ದಿ ಹಿಂಡಿದರು. ಚಿಂತಿತರಾಗಿ ಅವರು ತಮ್ಮ ಹಿತೈಷಿಗಳೊಂದಿಗೆ ಇದರ

ಬಗ್ಗೆ ಪ್ರಸ್ತಾಪ ಮಾಡಿದಾಗ, 'ಶಂಕರ ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡ. ಸ್ವಲ್ಪ ಸ್ವಚ್ಛಂದವಾಗಿ ಬೆಳೆದಿದ್ದಾನೆ. ಸಂಗದೋಷದಿಂದ ಈ ವಯಸ್ಸಿನಲ್ಲಿ ಸ್ವಲ್ಪ ದಾರಿ ತಪ್ಪಿರಬಹುದು. ಹೆಂಡತಿ ಮನೆಗೆ ಬಂದರೆ. ಸಂಸಾರದ ಜವಾಬ್ದಾರಿ ಹೊತ್ತರೆ ಸರಿಹೋಗುತ್ತಾನೆ. ತನ್ನ ಪ್ರೀತಿ, ಜಾಣ್ಮೆಯಿಂದ ಕುಸುಮ ಆತನನ್ನು ಹತೋಟಿಯಲ್ಲಿಟ್ಟರಾಯಿತು.' ಎಂದು ಸಮಾಧಾನ ಮಾಡಿದರು.

ಸುಮುಹೂರ್ತವೊಂದರಲ್ಲಿ ಕುಸುಮ ಶಂಕರನ ಮಡದಿಯಾದಳು. ಕುಸುಮ ಆತನ ಮನೆ ತುಂಬಿದಂತೆ, ಆತ ಇವಳ ಮನತುಂಬಿದ. ಕುಸುಮಳ ಬಾಳ ಬಟ್ಟಲಲ್ಲಿ ಜೇನು ತುಂಬಿದ.

'ಇಲ್ಲ. ಅದು ಜೇನಲ್ಲ. ನಿನ್ನೆಯವರೆಗೆ ಜೇನು ಎಂದು ತಿಳಿದದ್ದು ಕಾರ್ಕೋಟಕ ವಿಷ. ತನ್ನ ಆಸೆ ಆಕಾಂಕ್ಷೆಗಳು ಮತ್ತು ಬದುಕನ್ನು ಸುಟ್ಟು ಬೂದಿ ಮಾಡಿದ ಪಾಷಾಣ ಎನಿಸಿ ಕುಸುಮ ಮುಖ ಮುಚ್ಚಿಕೊಂಡು ಅತ್ತಳು.

ವಿಕಾರ ಮಗು

ಕುಸುಮ ಬೆಚ್ಚಿ ಕಣ್ಣು ತೆರೆದಳು. ಅವಳು ಹೆತ್ತ ಮಗು ಅಳುತ್ತಿತ್ತು. ಅದರತ್ತ ನೋಡಿದಳು. ತಮ್ಮ ದಾಂಪತ್ಯ ಜೀವನದ ಸಂತೋಷದ ಫಲವಾಗಬೇಕಿದ್ದ ಅದು ಈಗ ಅವಳ ಪತಿಯ ಪಾಪದ ಕೂಸು. ವಿಕಾರದ ಪ್ರತಿರೂಪ. ಸಣಕಲು ಕೈ ಕಾಲುಗಳು. ತೋಳುಗಳಲ್ಲಿ ತೊಡೆಗಳಲ್ಲಿ ಇಳಿಬಿದ್ದ ಒಣಗಿಹೋದ ಚರ್ಮದ ಮಡಿಕೆಗಳು. ಸಣ್ಣ ಕುಪ್ಪೆಯಂತಿರುವ ಮೂಗು. ಮುಖದ ಮೇಲೆ ಅಂಗೈ ಅಂಗಾಲಿನ ತುಂಬ ಬಿಳಿ ಮತ್ತು ಕಂದು ಬಣ್ಣದ ಗುಂಡಗಿರುವ ಕುರುಗಳು. ಅಸಹ್ಯವೆನಿಸಿ ಮುಖ ತಿರುಗಿಸಿದಳು. ಇಂತಹ ಮಗು ಹುಟ್ಟಿತಾದರೂ ಏಕೆ ? ಅದನ್ನು ನೋಡಿದರೆ ಭೂಮಿಯ ಮೇಲಿನ ಅದರ ಋಣ ಇನ್ನು ಕೆಲವೇ ಘಂಟೆಗಳು ಎನಿಸುತ್ತದೆ. ಈ ಭಾಗ್ಯಕ್ಕೆ ಇದನ್ನು ಭೂಮಿಗೆ ತರಲು ತಾನು ಪಟ್ಟ ವೇದನೆ ನೆನಸಿಕೊಂಡಾಗ ಪ್ರಾಣ ಹೋದಂತಾಯ್ತು.

ಅವಳಿಗೆ ತಾನು ಆಸ್ಪತ್ರೆಗೆ ಬಂದದ್ದು ತಿಳಿದಿತ್ತೇ ವಿನಃ ಉಳಿದೆಲ್ಲವೂ ಅಸ್ಪಷ್ಟ. ಅವಳಿಗೆ ಅರಿವಿದ್ದದ್ದು ಒಂದೇ 'ನೋವು'. ದೇಹದ ಕೆಳಭಾಗವನ್ನು ಕಾಣದ ಕೈಯೊಂದು ತಿರುಚಿ ಎಳೆದಂತೆ ಅನುಭವ. ಪ್ರತಿಯೊಂದು ನರವನ್ನು ಮುಳ್ಳಿನಿಂದಲೋ ಸೂಜಿಯಿಂದಲೋ ಚುಚ್ಚಿದಂತೆ ಭಾಸ. ಒಮ್ಮೊಮ್ಮೆ ತಡೆಯಲಾಗದೆ ಚೀರುತ್ತಿದ್ದಳು. ಒಂದು ಜೀವ ಹೊರಬರಬೇಕಾದರೆ. ಮತ್ತೊಂದು ಜೀವಕ್ಕೆ ಈ ಯಮಯಾತನೆಯೇ ಎಂದು ನರಳಿದ್ದಳು. ನೋವಿನ ಪ್ರಪಂಚದ ಅಡ್ಡಗಲ ಉದ್ದ ಆಳಗಳನ್ನು ಕಂಡು

ುಂದಿದ್ದಳು. ಈ ಅಪಾರ ನೋವಿನ ಅನುಭವದ ಫಲಿತಾಂಶ, ಮತ್ತೆ ನೋವು, ುರಾಶೆ ಅವಮಾನ.

ಅವಳಿಗೆ ತಿಳಿವು ಮೂಡಿದಾಗ ಇದೇ ಬೆಡ್ಡಿನ ಮೇಲಿದ್ದಳು. ತನ್ನ ಪಕ್ಕದಲ್ಲಿ ಮಗುವನ್ನು ತಂದು ಮಲಗಿಸುತ್ತಿದ್ದ ನರ್ಸನ್ನು ಕೇಳಿದ್ದಳು, 'ಎಂಥದು ಮಗು?'

'ನಿಮ್ಮ ಪಾಪಕ್ಕೆ ಈ ಪ್ರಶ್ನೆ ಬೇರೆ ಕೇಡು' ಮುಖಕ್ಕೆ ರಾಚಿದಂತೆ ಉತ್ತರಿಸಿ ಅಲ್ಲಿ ನಿಲ್ಲದೆ ಹೊರಟು ಹೋಗಿದ್ದಳು ನರ್ಸ್. ಕುಸುಮಳಿಗೆ ಅಳು ಬಂತು. ಏಕೆ ಂಗೆ ಎಂದುಕೊಂಡಳು. ಬಟ್ಟೆ ಸರಿಸಿ ಮಗುವನ್ನು ನೋಡಿದಾಗ, ಭೂಮಿಗೆ ಇಳಿದುಹೋದಳು. 'ಈ ಕುರೂಪಿ ಮಗುವನ್ನು ನಾನು ಹೆತ್ತೆನೆ' ಎಂದು ತನ್ನನ್ನೇ ಪ್ರಶ್ನಿಸಿಕೊಂಡಳು. ಆಸ್ಪತ್ರೆಗಳಲ್ಲಿ ಮಕ್ಕಳು ಬದಲಾಯಿಸಿಹೋಗುವ ಪ್ರಕರಣ ಗಳನ್ನು ಕೇಳಿದ್ದಳು. ಹಾಗೇನಾದರೂ ಆಗಿದೆಯೇ. ನರ್ಸನ್ನು ವಿಚಾರಿಸೋಣ ಬೆಂದರೆ ಆಗಲೇ ಆಕೆ ಸಿಡುಕಿ ಹೋಗಿದ್ದಾಳೆ. ಅಮ್ಮ ಎಲ್ಲಿ ಹೋದಳು. ಬಂದಾಗ ೇಳಬೇಕು' ಎಂದುಕೊಂಡಳು.

ಸ್ವಲ್ಪ ಹೊತ್ತಿನಲ್ಲಿ ದೊಡ್ಡ ಡಾಕ್ಟರ್ ಹದಿನೈದು ವಿದ್ಯಾರ್ಥಿಗಳೊಂದಿಗೆ ಆಕೆಯ ಬಳಿ ಬಂದಾಗ ಕುಸುಮ ನಾಚಿದಳು. 'ಇದೊಂದು ಒಳ್ಳೆಯ ಕೇಸ್, ಪರೀಕ್ಷೆ ಮಾಡಿ ಚರ್ಚೆ ಮಾಡೋಣ' ಎಂದು ಅವರು ಹೇಳಿದ ನಂತರ ವಿದ್ಯಾರ್ಥಿ ಗಳ ಪ್ರಶ್ನೆಗಳಿಗೆ ಸಂಕೋಚದಿಂದಲೇ ಉತ್ತರಿಸಿದಳು. 'ನಿಮ್ಮ ಯಜಮಾನರು ಬೇರೆ ಹೆಂಗಸರ ಸಂಪರ್ಕ ಮಾಡುವಂಥವರೇ' ಎಂಬ ಅವರ ಪ್ರಶ್ನೆಗೆ 'ನನಗೆ ಗೊತ್ತಿಲ್ಲ' ಎಂದಳು. ವಿದ್ಯಾರ್ಥಿಗಳು ತನ್ನನ್ನು ತನ್ನ ಮಗುವನ್ನು ಒಂದು ರೀತಿ ರುಲ್ಲಿ ನೋಡುವುದನ್ನು ಕಂಡು, ಭೂಮಿ ಬಾಯಿ ತೆರೆದು ತನ್ನನ್ನು ನುಂಗಬಾರದೆ ಎಂದುಕೊಂಡಳು. ಮಗು ವಿಕಾರವಾಗಿ ಹುಟ್ಟಿರುವುದು ನನ್ನ ತಪ್ಪೆ? ದೇವರು ಂಗೆ ಸೃಷ್ಟಿಸಿದ್ದಾನೆ ಎಂದು ಸಮಾಧಾನ ಮಾಡಿಕೊಂಡಳು. ಆದರೂ ನೆಮ್ಮದಿ ಇಲ್ಲ. ನಾನು ಆರೋಗ್ಯವಾಗಿದ್ದೇನೆ. ಅವರಿಗೂ ಯಾವ ಖಾಯಿಲೆಯೂ ಇದ್ದಂತಿಲ್ಲ. ಈ ಮಗು ಏಕೆ ಹೀಗೆ ಹುಟ್ಟಿತು. ಬಿಡಿಸಲಾಗದ ಸಮಸ್ಯೆ ರಾಯಿತು.

ಾಪದ ಫಲ

ಎಲ್ಲರೂ ಹೊರಟುಹೋದಾಗ, ಕೊನೆಯಲ್ಲಿ ಮಗುವನ್ನು ಪರೀಕ್ಷಿಸುತ್ತಿದ್ದ ವಿದ್ಯಾರ್ಥಿನಿಯೊಬ್ಬಳನ್ನು ಕುಸುಮ ಕೇಳಿದಳು. 'ಮಗು ಏಕೆ ಹೀಗಿದೆ, ಏನು ಖಾಯಿಲೆ ಇದಕ್ಕೆ' ಆ ವಿದ್ಯಾರ್ಥಿನಿ ತಲೆ ಎತ್ತಿ ಕುಸುಮಳನ್ನು ನೋಡಿದಳು. ಆಕೆಯ ಮುಖದಲ್ಲಿ ಮನೆ ಮಾಡಿದ್ದ ನೋವು, ಸಂಕೋಚ, ಆತಂಕಗಳನ್ನು ಕಂಡು

'ಅಮ್ಮ, ನಿನ್ನ ಮಗುವಿಗೆ ಆಗರ್ಭ ಸಿಫಿಲಿಸ್ ರೋಗವಿದೆ. ಸಿಫಿಲಿಸ್ ಒಂದು ಲೈಂಗಿಕ ರೋಗ. ಲೈಂಗಿಕ ಸಂಪರ್ಕದಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ನಿಮ್ಮ ಯಜಮಾನರು ಬೇರೆ ಯಾರಿಂದಲೋ ಇದನ್ನು ಪಡೆದಿದ್ದಾರೆ. ನಿಮಗೆ ಅಂಟಿಸಿದ್ದಾರೆ. ನೀವು ಚಿಕಿತ್ಸೆ ಮಾಡಿಸಿಕೊಳ್ಳದಿದ್ದರಿಂದ ರೋಗಾಣುಗಳು ಗರ್ಭ ಕೋಶ ಸೇರಿ, ಅಲ್ಲಿ ಬೆಳೆಯುತ್ತಿದ್ದ ಮಗುವಿಗೆ ಹಾನಿ ಉಂಟುಮಾಡಿದೆ, ತಾಯಿಗೆ ಸಿಫಿಲಿಸ್ ಇದ್ದು, ಆಕೆ ಗರ್ಭವತಿಯಾದರೆ ಗರ್ಭಪಾತವಾಗುತ್ತದೆ ಅಥವಾ ಮಗು ಗರ್ಭದಲ್ಲೇ ಸತ್ತು, ಹುಟ್ಟುತ್ತದೆ ಅಥವಾ ಬದುಕಿ ಹೊರಬಂದರೆ, ಶಾರೀರಕ ನ್ಯೂನತೆಗಳಿಂದ ನರಳುತ್ತದೆ' ಎಂದಳು.

'ನನಗೆ ಯಾವ ಖಾಯಿಲೆಯ ಚಿನ್ಹೆಯೂ ಇರಲಿಲ್ಲ. ಚೆನ್ನಾಗಿಯೇ ಇದ್ದೆ ನಲ್ಲ' ಕುಸುಮಳ ಧ್ವನಿ ಕೂಗಿತ್ತು.

'ಹೆಂಗಸರಲ್ಲಿ, ಈ ರೋಗದ ಲಕ್ಷಣವೇ ಹಾಗೆ. ಜನನಾಂಗದಲ್ಲಿ ಮೊದಲು ಕಾಣಿಸಿಕೊಳ್ಳುವ ವ್ರಣ ನೋವುಂಟುಮಾಡುವುದಿಲ್ಲ. ಎಚ್ಚರಿಕೆಯಿಂದ ಗಮನಿಸದಿದ್ದರೆ, ವ್ಯಕ್ತಿಗೆ ಅದರ ಅರಿವೇ ಇರುವುದಿಲ್ಲ. ರೋಗಾಣುಗಳು ಕ್ರಮೇಣ ಶರೀರವನ್ನೆಲ್ಲಾ ವ್ಯಾಪಿಸುತ್ತವೆ. ನೀವು ಗರ್ಭಧಾರಣೆ ಅವಧಿಯಲ್ಲಿ ವೈದ್ಯರನ್ನು ಕಂಡು ರಕ್ತ ಪರೀಕ್ಷೆ ಮಾಡಿಸಿಕೊಳ್ಳಲಿಲ್ಲವೇ.'

'ಇಲ್ಲ. ಏನೂ ತೊಂದರೆ ಇಲ್ಲದ್ದರಿಂದ ನಾನು ಡಾಕ್ಟರಲ್ಲಿಗೆ ಹೋಗಲೇ ಇಲ್ಲ. ಈಗ ಈ ಮಗುವಿಗೆ ಚಿಕಿತ್ಸೆ ಮಾಡಲು ಸಾಧ್ಯವಿಲ್ಲವೇ.'

'ಮಗು ಉಳಿಯುವ ಸಾಧ್ಯತೆ ಕಡಿಮೆ ಅಮ್ಮ. ಚಿಕಿತ್ಸೆ ಕೊಟ್ಟು ಉಳಿಸಿದರೂ, ಆರೋಗ್ಯ ಭಾಗ್ಯವಿಲ್ಲದ ಅದರ ಶರೀರದಲ್ಲಿ ಏನಾದರೂ ಕುಂದು ಕೊರತೆ ಇದ್ದು ನರಳುವಂತಾಗುತ್ತದೆ. ನೀವು ಮತ್ತು ನಿಮ್ಮ ಯಜಮಾನರು ಇಬ್ಬರೂ ಸರಿಯಾಗಿ ಚಿಕಿತ್ಸೆ ಮಾಡಿಸಿಕೊಳ್ಳಿ' ಎಂದಳು.

ಕುಸುಮಳ ಮನಸ್ಸಿನಲ್ಲಿ ದೊಡ್ಡ ಬಿರುಗಾಳಿ ಎದ್ದಿತು. ತಾನು ಯಾರನ್ನು ಮದುವೆಯಾಗಿ, ಯಾರಿಗೆ ತನ್ನ ತನು ಮನಗಳನ್ನು ಸಮರ್ಪಣೆಯ ಭಾವನೆಯಿಂದ ಅರ್ಪಿಸಿಕೊಂಡಿದ್ದಳೋ ಆತನಿಂದಲೇ ತನಗೆ ಈ ಅನ್ಯಾಯ ನಡೆಯಿತೇ. ದೇಹದ ಬಯಕೆಯನ್ನು ತೀರಿಸಿಕೊಳ್ಳುವುದಕ್ಕೆ ಹೋಗಿ, ಖಾಯಿಲೆ ಅಂಟಿಸಿಕೊಂಡು, ಚಿಕಿತ್ಸೆ ಪಡೆಯದೆ, ತನ್ನ ಹೆಂಡತಿಯ ಜೀವನವನ್ನೇ ಹಾಳು ಮಾಡುವಂಥ ದುರ್ಬುದ್ಧಿ ಆತನಿಗೇಕೆ ಬಂತು ? ಆತನ ರೋಗ ತಮ್ಮ ಮಗುವಿಗೆ ಮೃತ್ಯುವಾಯಿತಲ್ಲ ಆತ ಕೊಲೆಗಡುಕ. ಅಂಥವನೊಂದಿಗೆ ತಾನು ಸಂಸಾರ ಮಾಡಬೇಕು. ಅದರ ಬದಲು ಸಾಯುವುದೇ ಒಳ್ಳೆಯದಲ್ಲವೇ ಎಂದು ಯೋಚಿಸಿದಳು. ಯೋಚ

ಾಡಿದಷ್ಟೂ, ತಾನು ಸಾಯುವುದೇ ಸರಿ ಎಂಬ ಭಾವನೆ ಬಲವಾಯಿತು. ವೃಥ ರ್ಾರದಿಂದ ಆಕೆಯ ಮುಖ ಕಠಿಣವಾಯಿತು.

o o o

"ಡಾಕ್ಟ್ರೇ ನನ್ನನ್ನು ಸಾಯಿಸಿಬಿಡಿ. ನನ್ನ ಮಗುವನ್ನು ಆಹುತಿ ತೆಗೆದು ಂಡ ಭಯಂಕರ ರೋಗಕ್ಕೆ ಆಶ್ರಯ ಕೊಟ್ಟಿರುವ ಈ ದೇಹ ನಾಶವಾದರೇ ಂದ. ನನ್ನಂಥವಳು ಬದುಕಿರಬಾರದು." ಕುಸುಮ ದೊಡ್ಡ ದನಿಯಲ್ಲಿ ತ್ತಳು.

"ನೀನು ಅಷ್ಟು ನಿರಾಶಳಾಗುವ ಕಾರಣವಿಲ್ಲಮ್ಮ. ಈ ಮಗು ಹೀಗಾಗಿ ತ್ತಿದ್ದು ದುರದೃಷ್ಟ. ನಿನ್ನ ಪತಿ ಪರೋಕ್ಷವಾಗಿ ಇದಕ್ಕೆ ಕಾರಣನಾದರೂ. ರವಾಗಿ, ಮನಃಪೂರ್ವಕವಾಗಿ ಇದಕ್ಕೆ ಕಾರಣನಾಗಿಲ್ಲ. ನನ್ನಲ್ಲಿ ಆತ ಎಲ್ಲ ನ್ನೂ ಹೇಳಿಕೊಂಡು ಪಶ್ಚಾತ್ತಾಪ ಪಟ್ಟಿದ್ದಾನೆ. 'ಮದುವೆಗೆ ಮುನ್ನ ಒಂದೆ ತು ಸಾರಿ, ಬೇರೆ ಹೆಂಗಸರ ಸಂಪರ್ಕ ಮಾಡಿದ್ದೆ, ಸ್ವಲ್ಪ ದಿವಸಗಳ ನಂತರ ನನಾಂಗದ ಮೇಲೆ ವ್ರಣ ಕಾಣಿಸಿಕೊಂಡಾಗ ನಾಚಿಕೆ, ಭಯದಿಂದ ಕುಗ್ಗಿ ೋದೆ. ಪರಿಚಯವಿದ್ದ ಡಾಕ್ಟರಲ್ಲಿಗೆ ಹೋಗಿ ಚಿಕಿತ್ಸೆ ಪಡೆಯಲು ತುಂಬಾ ಂಕೋಚವಾಯಿತು. ಕೊನೆಗೆ ಸ್ನೇಹಿತನೊಬ್ಬನ ಸಲಹೆಯಂತೆ ಕೆಲವು ಮಾತ್ರೆ ನ್ನು ಅಂಗಡಿಯಲ್ಲಿ ಕೊಂಡು ತಿಂದೆ. ಕೆಲವು ದಿವಸಗಳಲ್ಲಿ ವ್ರಣ ಮಾಯ್ದಿತು. ರೆ ಯಾವ ತೊಂದರೆಯೂ ಇಲ್ಲದ್ದನ್ನು ಕಂಡು, ಖಾಯಿಲೆ ವಾಸಿಯಾಯಿ ದು ಕೊಂಡೆ. ಆದೇ ಕೊನೆಯಾಯಿತು. ಬೇರೆ ಹೆಂಗಸರ ಹತ್ತಿರ ಹೋಗುವ ಪ್ಪನ್ನು ನಾನು ಮಾಡಲಿಲ್ಲ. ಕುಸುಮಳಿಗೆ ನಾನು ಮೋಸ ಮಾಡಿಲ್ಲ. ಪ್ರಾಮಾ ಕವಾಗಿ ನಡೆದುಕೊಂಡಿದ್ದೇನೆ. ಆದರೆ ರೋಗ ನನ್ನ ಶರೀರದಲ್ಲಿ ಉಳಿದು, ದರಿಂದ ಆಕೆ ರೋಗಪೀಡಿತಳಾಗಿದ್ದಲ್ಲದೆ, ನಮ್ಮ ಮಗು ಅದಕ್ಕೆ ಬಲಿಯಾಗಿದ್ದು ನಗೆ ಬಹಳ ದುಃಖ ತಂದಿದೆ. ನಾನು ಪಾಪಿ. ಕುಸುಮ ಯಾವ ಶಿಕ್ಷೆ ಕೊಟ್ಟರೂ ನುಭವಿಸೋದಿಕ್ಕೆ ನಾನು ತಯಾರಾಗಿದ್ದೇನೆ. ನನ್ನ ಅರ್ಥಮಾಡಿಕೊಳ್ಳಲು ಗೆ ಹೇಳಿ' ಎಂದಿದ್ದಾನೆ. ಈಗಲೂ ಕಾಲ ಮಿಂಚಿಲ್ಲ. ನಿನಗೆ ಮತ್ತು ಶಂಕರ್‌ಗೆ ಂದು ಕೋರ್ಸ್ ಟ್ರೀಟ್‌ಮೆಂಟ್ ಕೊಟ್ಟರೆ ಕಾಯಿಲೆಯನ್ನು ಬೇರು ಸಹಿತ ತ್ತಿಹಾಕಬಹುದು. ಆಮೇಲೆ ನೀವು ಆರೋಗ್ಯವಾಗಿರುತ್ತೀರಿ. ಆರೋಗ್ಯ ತ ಮಗುವಿನ ಜನ್ಮ ಕೊಡುತ್ತೀರಿ. ಒಂದು ಬಾರಿ ಆದ ತಪ್ಪು, ನಂತರ ುವಳಿಕೆ ಇಲ್ಲದೆ ಆದ ಅಪಚಾರಕ್ಕೆ ನೀವು ದೊಡ್ಡ ಬೆಲೆ ತೆತ್ತಿದ್ದೀರಿ. ಅಷ್ಟೇ ಕು. ಇನ್ನಷ್ಟು ಶಿಕ್ಷೆ ವಿಧಿಸಿಕೊಳ್ಳುವುದು ಬೇಡ. ಪ್ರಾಣ ಕಳೆದುಕೊಳ್ಳುವ

ಮಾತು ಬೇಡ. ಧೈರ್ಯವಾಗಿರು. ಕಾಯಿಲೆಯನ್ನು ಗುಣ ಮಾಡಿಕೊಡುವ ಜವಾಬ್ದಾರಿ ನಮ್ಮದು. ಮುಂದಿನ ಜೀವನವನ್ನು ಚೆನ್ನಾಗಿ ನಡೆಸುವ ಜವಾಬ್ದಾರಿ ನಿಮ್ಮಿಬ್ಬರದು. ತಿಳಿಯಿತೆ" ಎಂದರು ಡಾ॥ ಮೂರ್ತಿ.

ಪಶ್ಚಾತ್ತಾಪದಿಂದ ಬೆಂದು, ಕೈ ಕಟ್ಟಿಕೊಂಡು ನಿಂತಿದ್ದ ತನ್ನ ಪತಿಯತ್ತ ಕಣ್ಣಾಡಿಸಿದಳು ಕುಸುಮ. 'ನನ್ನನ್ನು ನಂಬು. ನನಗೆ ನೀನು ಬೇಕು. ನಿನ್ನ ಸುಖವೇ ನನ್ನ ಸುಖ' ಇತ್ಯಾದಿ ಭರವಸೆಗಳನ್ನು ಅವನ ಮುಖದಲ್ಲಿ ಕಂಡು, ಅವಳಲ್ಲಿ ಮತ್ತೆ ಚೈತನ್ಯ, ಸಮಾಧಾನದ ನಗು ಕಾಣಿಸಿತು.

ಹುಡುಗಿಯನ್ನು ಕೆಣಕಿದ ಮುದುಕ

ಸಂಜೆ ಐದೂವರೆ ಗಂಟೆ ಸಮಯ. ಕುಮಾರಸ್ವಾಮಿ ತನ್ನ ಹೆಂಡತಿ ಪೂರ್ಣಿಮಳೊಂದಿಗೆ ತಿರುಗಾಡಲು ಹೊರಟ. ಎಂದಿನಂತೆ ಪೂರ್ಣಿಮ ತನ್ನ ಮಾತಿನ ಕೊರೆತವನ್ನು ಪ್ರಾರಂಭಿಸಿದಳು. ಸ್ವಾಮಿ ಅವಳು ಹೇಳಿದ್ದಕ್ಕೆಲ್ಲ ಹೂಂ ಗುಟ್ಟುತ್ತಾ ನಡೆದಿದ್ದರೂ, ಆತನ ಮನಸ್ಸು ಏನನ್ನೋ ಯೋಚಿಸುವುದರಲ್ಲಿ ಮಗ್ನ ವಾಗಿತ್ತು.

"ಏನೂಂದ್ರೆ ನಾನು ಹೇಳಿದ್ದು ಕೇಳಿಸ್ತಾ ? ಏನು ಹೇಳಿದೆ ಹೇಳಿ ನೋಡೋಣ" ಪೂರ್ಣಿಮ ಗಂಡ ತನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿಲ್ಲ ಎಂಬ ಅನುಮಾನದಿಂದ ಕೇಳಿದಳು.

"ಆಂ... ನೀನು ನಿನ್ನ ಚಿಕ್ಕಪ್ಪನ ಮಗಳ ವಿಚಾರ ಹೇಳುತ್ತಿದ್ದೆ...." ಸ್ವಾಮಿ ತಡವರಿಸಿ ಉತ್ತರಿಸಿದ.

"ಅಯ್ಯೋ ರಾಮ, ನಾನು ಅವಳ ವಿಚಾರ ಹೇಳಿ ಮುಗಿಸಿ ಐದು ನಿಮಿಷ ಆಯ್ತು. ಈಗ ನಮ್ಮ ಗೋದಾಳ ಗಂಡನ ವಿಚಾರ ಹೇಳ್ತಿದ್ದೆ. ನಿಮ್ಮೊಂದಿಗೆ ಕಷ್ಟ ಸುಖ ಹೇಳ್ಕೊಳ್ಳೋಣ ಅಂದ್ರೆ ನಿಮಗೆ ಉದಾಸೀನ... ಹೋಗ್ರಿ... ನಾನು ನಿಮ್ಮೊಂದಿಗೆ ಮಾತಾಡೊಲ್ಲ. ನಿಮಗೆ ಹೇಳೋದೂ, ಗೋಡೆಗೆ ಹೇಳೋದೂ ಎರಡೂ ಒಂದೇ..." ಪೂರ್ಣಿಮ ಕೋಪಿಸಿಕೊಂಡಳು.

"ಇಲ್ಲವೇ ಮಾರಾಯ್ತಿ. ಆಫೀಸಿನ ಯಾವುದೋ ವಿಚಾರ ಜ್ಞಾಪಕಕ್ಕೆ ಬಂದು, ಕಡೆಯಲ್ಲಿ ನೀನು ಹೇಳ್ತಿದ್ದ ವಿಚಾರ ನನ್ನ ಗಮನಕ್ಕೆ ಬರ್ಲಿಲ್ಲ. ಏನು ಗೋದಾಳ ಗಂಡನ ಸಮಾಚಾರ ? ಮತ್ತೆ ಹೆಂಡತಿಗೆ ಸುಳ್ಳು ಹೇಳಿ ಎಲ್ಲಿಗಾದರೂ ಹೋಗಿ ಬಂದನೇ ?"

"ಹೋಗ್ರಿ ನಾನು ಹೇಳೋಲ್ಲ. ನಾನು ಪಕ್ಕದಲ್ಲಿರೋವಾಗ, ನಿಮ್ಮ ಜೊತೇಲಿ ಮಾತಾಡ್ತಾ ಇರೋವಾಗ ಆಫೀಸಿನ ಯಾವ ವಿಚಾರ ನಿಮ್ಮ ಮನಸ್ಸಿಗೆ ಬಂತು. ಅದು ನನಗಿಂತ ಹೆಚ್ಚೇ ?"

"ಇಲ್ಲವೇ. ಈ ಪ್ರಪಂಚದಲ್ಲಿ ನಿನಗಿಂತ ಹೆಚ್ಚಿನ ವಸ್ತು, ವಿಷಯ ಯಾವುದೂ ಇಲ್ಲ."

"ಬಾಯಲ್ಲಿ ಹಾಗೆ ಹೇಳ್ತೀರ ಅಷ್ಟೇ. ಆದರೆ ನನ್ನನ್ನು ಕಂಡರೆ ನಿಮಗೆ ಉಪೇಕ್ಷೆ. ಈ ದಡ್ಡಿ ಏನೋ ಬಡಬಡಿಸ್ತಾಳೆ. ಅವಳ ಮಾತು ಏನು ಕೇಳೋದು ಅಂತ ತಾತ್ಸಾರ ನಿಮಗೆ"

ಗಲಾಟೆ

ಅವಳಿಗೆ ಉತ್ತರಿಸಬೇಕು ಎನ್ನುವಷ್ಟರಲ್ಲಿ ರಸ್ತೆಯ ಬದಿಯಲ್ಲಿ ಜನರ ಒಂದು ಸಣ್ಣ ಗುಂಪು ಸ್ವಾಮಿಯ ಗಮನ ಸೆಳೆಯಿತು, ಜನ ಯಾರನ್ನೋ ಬೈಯುತ್ತಿರುವಂತೆ ಕಂಡಿತು. ಏನು ನೋಡೋಣ ಎಂದು ಅತ್ತ ಹೆಜ್ಜೆ ಹಾಕಿದ.

"ಅಯ್ಯೋ ನಮಗ್ಯಾಕೆ ಬನ್ರಿ" ಎನ್ನುತ್ತಲೇ ಪೂರ್ಣಿಮಳೂ ಅವನ ಹಿಂದೆ ಹೋದಳು.

"ವಯಸ್ಸಾಗಿದೆ, ತಲೆ ಬೆಳ್ಳಗಾಗಿದೆ, ಈ ವಯಸ್ಸಲ್ಲಿ ಈ ಮುದುಕನಿಗೆ ಚಪಲವೆ" ಗುಂಪಿನ ಒಬ್ಬಾತ ಹೇಳುತ್ತಿದ್ದ.

"ಏನು, ಏನು ಮಾಡಿದ ?" ಎಂದು ಇನ್ನೊಬ್ಬ ಕೇಳುತ್ತಿದ್ದ.

"ಫುಟ್‌ಪಾತ್ ಮೇಲೆ ತನ್ನ ಪಾಡಿಗೆ ತಾನು ಹೋಗೋದು ಬಿಟ್ಟು, ನೋಡಿ, ಆ ಹೆಂಗಸಿನ ಕೈ ಹಿಡಿದು ಎಳೆದನಂತೆ. ಅವಳು ಕಾಲಿನ ಚಪ್ಪಲಿಯನ್ನು ಕೈಯಲ್ಲಿ ಹಿಡಿದು ನಿಂತಿದ್ದಾಳೆ."

"ಛೆ, ಛೆ ಕಲಿಗಾಲ. ಈ ಮುದುಕನಿಗೇನು ಬಂತು ಕೇಡು" ಎಂದು ಉದ್ಗರಿಸಿದ ಮತ್ತೊಬ್ಬ. "ಹೂಂ ಮತ್ತೆ, ಮುದಿತನದಲ್ಲೇ ಚಪಲ ಜಾಸ್ತಿ" ಎಂದು ಮುಸಿ ಮುಸಿ ನಕ್ಕ ಮಗದೊಬ್ಬ. ಗುಂಪಿನಲ್ಲಿದ್ದವರು ತಲಾ ಒಂದೊಂದು ರೀತಿಯಲ್ಲಿ ಮಾತಾಡುತ್ತಾ, ತಮಾಷೆ ನೋಡುತ್ತಿದ್ದರು. ಸ್ವಾಮಿ ಜಾಗ ಮಾಡಿಕೊಂಡು ಗುಂಪಿನೊಳಗೆ ಹೋಗಿ ಆ ಮುದುಕ ಹೇಗಿರಬಹುದು ಎಂದು ನೋಡಿದ. ತನ್ನ ಕಣ್ಣುಗಳನ್ನೇ ನಂಬದಾದ. ತನ್ನ ಸ್ನೇಹಿತ ಮೋಹನನ ತಂದೆ ನರಸಿಂಹಮೂರ್ತಿಗಳು. ಬೆಪ್ಪಾಗಿ ನಿಂತಿದ್ದಾರೆ. ಏನೋ ಹೇಳಲು ಪ್ರಯತ್ನಿಸುತ್ತಿದ್ದಾರೆ. ಆಕೆ, ಆ ಹೆಂಗಸು ತಾರಕ ಸ್ವರದಲ್ಲಿ ಕಿರಿಚಾಡುತ್ತಿದ್ದಾಳೆ. "ನಿನಗೆ ನಾಚಿಕೆ ಆಗೋದಿಲ್ಲವೇ. ನನ್ನ ತಂದೆ ಇದ್ದಂಗಿದ್ದೀಯಾ. ಮಾಡೋದು ಈ ಕಚಡಾ ಕೆಲಸ. ಥೂ... ನಿನ್ನಂಥವರನ್ನು ಏನು ಮಾಡ್ಬೇಕು ಅಂದ್ರೆ..." ಇತ್ಯಾದಿ ಅವಳ ಮಾತಿನ ಪ್ರವಾಹ ಹರಿದಿತ್ತು.

"ನರಸಿಂಹಮೂರ್ತಿಗಳು.... ನೀವು... ಇಲ್ಲಿ... ಏನಾಯ್ತು, ಯಾಕೆ ಇವರು ್ನನ್ನು ಹೀಗೆ ಬೈತಿದ್ದಾರೆ ?" ಎಂದು ವಿಚಾರಿಸಿದ.

ಆವರು ಬಾಯಿಬಿಡುವ ಮೊದಲೇ, ಆ ಹೆಂಗಸು 'ಏನ್ರೀ ಈ ಮುದುಕ ್ಯವರೇನ್ರಿ. ಏನಾಗಿದೆ ಇವರಿಗೆ. ಹೆಣ್ಣುಮಕ್ಕಳು ಮಾನವಾಗಿ ರಸ್ತೇಲಿ ತಿರು ೋದು ಬೇಡವೇ ?' ಎಂದು ಸ್ವಾಮಿಯನ್ನು ತರಾಟೆಗೆ ತೆಗೆದುಕೊಂಡಳು. ಮಾಡಿದರು ಎಂದು ವಿಚಾರಿಸಿದಾಗ, ನರಸಿಂಹಮೂರ್ತಿ ಹತ್ತು ಹದಿನೈದು ುಷಗಳ ಕಾಲ ಆಕೆಯನ್ನು ಹಿಂಬಾಲಿಸಿ, ಕೊನೆಗೆ ಭುಜದ ಮೇಲೆ ಕೈಹಾಕಿದ್ದ . ಆಕೆ ದುರ್ಗಾವತಾರ ತಾಳಿದ್ದಳು.

ಸ್ವಾಮಿ ತನ್ನ ಬುದ್ಧಿಯನ್ನೆಲ್ಲ ಖರ್ಚು ಮಾಡಿ, ಆಕೆಯನ್ನು ಸಮಾಧಾನ ಡಿ ಕಳುಹಿಸುವಷ್ಟರಲ್ಲಿ ಸುಸ್ತಾದ. 'ಆಯ್ತು ನಾನಾಗಿದ್ದಕ್ಕೆ ಬಿಟ್ಟಿದ್ದೇನೆ. ೆಯಾರಾದರೂ ಆಗಿದ್ರೆ, ಬಡಿದು ಪೋಲೀಸ್‌ನೋರಿಗೆ ಹಿಡಿದು ಕೊಡ್ತಿದ್ದರು. ್ೕ ಬುದ್ಧಿ ಕಲ್ತುಕೊಳ್ಳೋದಿಕ್ಕೆ ಇವರಿಗೆ ಹೇಳಿ. ಇಲ್ದಿದ್ರೆ ಯಾರಾದರೂ ಲು ಮುರಿತಾರೆ" ಎಂದು ಹೂಂಕರಿಸಿ ಹೋದಳು. ಗುಂಪೂ ಕರಗಿತು.

ತು ಕೇಳದ ಮನಃಸ್ಥಿತಿ

"ನರಸಿಂಹಮೂರ್ತಿಯವರೇ ಬನ್ನಿ. ಮನೆಗೆ ಹೋಗೋಣ" ಎಂದ ಸ್ವಾಮಿ. ುವರೆಗೂ ದೂರದಲ್ಲಿದ್ದ ಪೂರ್ಣಿಮ ಇವರನ್ನು ಸೇರಿಕೊಂಡಳು. 'ಓ, ನರಸಿಂಹ ರ್ತಿ ಅವರು. ಇದೇನು ಇಲ್ಲಿದ್ದಾರೆ. ಇವರಿಗೆ ಏನಾಯ್ತು, ಏನು ಗಲಾಟೆ' ಳು.

"ಏನೂ ಇಲ್ಲ ಪೂರ್ಣಿಮ. ಯಾವುದೊ ಹೆಂಗಸು ಇವರನ್ನು ತಪ್ಪಾಗಿ ್ಮಾಡಿಕೊಂಡು ಗಲಾಟೆ ಎಬ್ಬಿಸಿದ್ದಳು ಅಷ್ಟೆ. ಬನ್ನಿ ಅಂಕಲ್. ನಮ್ಮ ಮನೆಗೆ ೕಗೋಣ."

"ಇಲ್ಲ ನಾನು ಬರೊಲ್ಲ. ನಾನು ಮನೆಗೆ ಹೋಗಬೇಕು" ಎಂದರು ಆ ್ರು.

"ಮುಂದಿನ ಬಸ್ ಆರೂವರೆಗೆ ಇರೋದು. ನಾನು ನಿಮ್ಮ ಮಗನ ಸ್ನೇಹಿತ, ಾರಸ್ವಾಮಿ. ಈಕೆ ನನ್ನ ಹೆಂಡತಿ. ಆರು ತಿಂಗಳ ಹಿಂದೆ ನಿಮ್ಮ ಮನೆಗೆ ುದ್ದೆವು. ನೆನಪಿದೆ ಅಲ್ಲವೆ ?"

"ಇರಬಹುದು. ನಾನೇಕೆ ನಿಮ್ಮ ಮನೆಗೆ ಬರಬೇಕು. ನಾನು ನಡಕೊಂಡೇ ಮನೆಗೆ ಹೋಗ್ತೇನೆ. ನನ್ನ ಬಲವಂತ ಮಾಡೋದಿಕ್ಕೆ ನೀವ್ಯಾರು ?"

"ಅಂಕಲ್, ನಿಮ್ಮ ಮನೆ ಇಲ್ಲಿಂದ ಆರು ಕಿಲೋಮೀಟರ್ ಆಗುತ್ತೆ. ನಡೆ

ಯೋದಿಕ್ಕೆ ಕಷ್ಟವಾಗತ್ತೆ. ನನ್ನ ಮಾತು ಕೇಳಿ" ಎಂದು ಸ್ವಾಮಿ ಅವರ ಕೈ ಹಿಡಿದು ಕೊಂಡ.

"ಇಲ್ಲ ಬಿಡು... ನಾನು ಹೋಗ್ತೇನೆ" ಎಂದು ಕೈ ಕೊಸರಿಕೊಂಡರು. ಅವರು ತನ್ನ ಮಾತನ್ನು ಕೇಳುವ ಮನೋಸ್ಥಿತಿಯಲ್ಲಿಲ್ಲ ಎಂಬುದನು ಸ್ವಾಮಿ ಅರ್ಥಮಾಡಿಕೊಂಡ.

"ಪೂರ್ಣಿಮಾ, ನೀನು ಮನೆಗೆ ಹೋಗು. ನಾನು ಇವರನ್ನು ಮನೆ ತಲುಪಿಸಿ ಬರ್‍ತೀನಿ" ಎಂದು ನರಸಿಂಹಮೂರ್ತಿ ಬೇಡ ಬೇಡ ಎನ್ನುತ್ತಿದ್ದರೂ, ಒತ್ತಾಯದಿಂದ ಆಟೋ ಒಂದರಲ್ಲಿ ಕೂರಿಸಿ ತಾನೂ ಹತ್ತಿ, ಅವರ ಪಕ್ಕದಲ್ಲಿ ಕುಳಿತ.

ಅವರ ಮನೆ ತಲುಪಿದಾಗ, ಅವರ ಹೆಂಡತಿ ಸಾಕಮ್ಮನವರು ಗೇಟಿನ ಬಳಿಯಲ್ಲೇ ನಿಂತಿದ್ದರು. ಆಟೋದಿಂದ ಇಳಿದ ಗಂಡನನ್ನು ನೋಡಿ ಸಮಾಧಾನದ ಉಸಿರು ಬಿಟ್ಟರು. ಸ್ವಾಮಿಯನ್ನು ಕಂಡು 'ಬಾಪ್ಪ, ತುಂಬಾ ಅಪರೂಪವಾಗಿಬಿಟ್ಟೆ. ಇವರು ನಿನಗೆ ಎಲ್ಲಿ ಸಿಕ್ಕಿದರು. ಬಾ ಒಳಗೆ ಬಾ' ಎಂದು ಸ್ವಾಗತಿಸಿದರು. ನರಸಿಂಹ ಮೂರ್ತಿ ಯಾರನ್ನೂ ಕಾಯದೆ, ನೇರವಾಗಿ ತಮ್ಮ ಕೋಣೆಗೆ ಹೋಗಿ, ಹಾಸಿಗೆಯ ಮೇಲೆ ಮಲಗಿ ಮುಸುಕು ಹಾಕಿಕೊಂಡುಬಿಟ್ಟರು.

ಕುಮಾರಸ್ವಾಮಿ ತಾನು ಅವರನ್ನು ಕಂಡ ಸಂದರ್ಭ ಪರಿಸ್ಥಿತಿಯನ್ನು ಸಾಕಮ್ಮನವರಿಗೆ ವಿವರಿಸಿ, 'ಅಮ್ಮಾ, ಇವರಿಗೇನಾಗಿದೆ. ಆರು ತಿಂಗಳ ಹಿಂದೆ ನಾವಿಲ್ಲಿಗೆ ಬಂದಿದ್ದಾಗ, ಚೆನ್ನಾಗಿದ್ದರಲ್ಲ. ನನ್ನನ್ನು ಎಷ್ಟು ವಿಶ್ವಾಸದಿಂದ ಮಾತಾಡಿಸಿದ್ದರು' ಎಂದು ಕೇಳಿದ.

ವಿಚಿತ್ರ ವರ್ತನೆ

ಸಾಕಮ್ಮ ಅಳಲು ಶುರುಮಾಡಿದರು. ಕಣ್ಣೀರು ಒರೆಸಿಕೊಳ್ಳುತ್ತಾ 'ನಾನು ಏನು ಹೇಳಲಪ್ಪ. ಈ ನಾಲ್ಕು ತಿಂಗಳುಗಳಿಂದ ಅವರ ವರ್ತನೆ ದಿನದಿನಕ್ಕೆ ವಿಚಿತ್ರವಾಗ್ತಿದೆ. ಮೊದಮೊದಲು ಮಾತು ಜಾಸ್ತಿ ಮಾಡಿದರು. ಬಾಯಿಗೆ ಬಂದದ್ದೇ ಮಾತು. ಸಿಟ್ಟು ಬಂದರೆ ಕೆಟ್ಟ ಮಾತಾಡೋದು. ಚೆನ್ನಾಗಿದ್ದಾಗ ಒಂದು ರೂಪಾಯಿ ಖರ್ಚು ಮಾಡಲು ಹತ್ತು ಸಲ ಯೋಚನೆ ಮಾಡ್ತಿದ್ದೋರು, ವಿವೇಚನೆ ಇಲ್ದೆ ಹಣ ಖರ್ಚು ಮಾಡೋಕೆ ಶುರುಮಾಡಿದರು. ನೀವು ಮಾಡೋ ತಿಂಡಿ ಚೆನ್ನಾಗಿಲ್ಲ, ಅಡುಗೆ ಚೆನ್ನಾಗಿರೋಲ್ಲ ಅಂತ ಹೋಟೆಲಿಗೆ ಹೋಗಿ ತಿನ್ನೋದಿಕ್ಕೆ ಪ್ರಾರಂಭಿಸಿದರು. ಅವರ ಮೊದಲಿನ ಗಾಂಭೀರ್ಯವೇ ಇಲ್ಲ. ಹುಡುಗರ ಥರ ಚೆಲ್ಲು ಚೆಲ್ಲಾಗಿ ಆಡೋಪರು. ಜೊತೆಗೆ ಮರೆವು ಬೇರೆ. ಈ ನಾಲ್ಕು ತಿಂಗಳಲ್ಲಿ ಐದು ಜೊತೆ ಚಪ್ಪಲಿಗಳನ್ನು ಕಳೆದಿದ್ದಾರೆ. ಹಾಕ್ಕೊಂಡು ಹೋಗೋದು, ಎಲ್ಲೋ

ಬಿಟ್ಟು ಮನೆಗೆ ಬರೋದು. ಅವರ ಕನ್ನಡಕ, ಬಟ್ಟೆಗಳನ್ನು ಹುಡುಕಿಕೊಡೋದಿಕ್ಕೇ ಸದಾ ಇಬ್ಬರು ಇರಬೇಕು. ಕೆಲವು ಸಲ ನಮಗೇ ಮುಜುಗರ ಆಗೋ ಹಾಗೆ ನಡೆ ಕೊಳ್ತಾರೆ. ಈ ಒಂದು ತಿಂಗಳಿಂದೀಚೆಗೆ, ಮನೆ ಬಿಟ್ಟು ಹೊರಟೋಗ್ತಾರೆ. ಗಂಟೆಗಟ್ಟಳೆ ಆದರೂ ವಾಪಸ್ ಬರೋಲ್ಲ. ಗೊತ್ತು ಗುರಿ ಇಲ್ಲದೆ ಅಲೀತಾರೆ. ನಡೆಯೋವಾಗ ಸುಮ್ಮನೆ ಇರೊಲ್ಲ. ದಾರೀಲಿ ಹೋಗೋ ಬರೋ ಹೆಂಗಸರನ್ನು ದೃಷ್ಟಿಸಿ ನೋಡೋದು, ನಗೋದು, ಇದನ್ನು ಜನ ತಪ್ಪರ್ಥ ಮಾಡಿಕೊಳ್ತಾರೆ ಅನ್ನೋದು ತಿಳಿಯೋದಿಲ್ಲ. ಬೈಸ್ಕೊಳ್ತಾರೆ. ಇವರ ಈ ವರ್ತನೆ ನೋಡಿ, ಯಾರಾದರೂ, ಏನಾದರೂ ತೊಂದರೆ ಮಾಡಿಯಾರು ಅಂತ ನನಗೆ ಹೆದರಿಕೆ. ಹೀಗೆ ಮಾಡ್ಬೇಡಿ ಅಂದರೆ, ಇಲ್ವಲ್ಲಾ ನಾನೇನೂ ಮಾಡೊಲ್ವಲ್ಲ ಅಂತಾರೆ. ಅವರ ಗ್ರಹಗತಿ ಚೆನ್ನಾಗಿಲ್ಲ ಅಂತ ಕಾಣತ್ತೆ. ಯಾಕೆ ಹೀಗಾಯ್ತೋ ಆ ದೇವರಿಗೆ ಗೊತ್ತು, ಎಂದು ಬಿಕ್ಕಳಿಸಿದರು.

"ಅಪ್ಪ ಬಂದ್ರೇನಮ್ಮಾ..." ಅಂತ ಕೇಳ್ಕೊಂಡು ಒಳಬಂದ ಮೋಹನ, ಸ್ವಾಮಿಯನ್ನು ನೋಡಿ 'ಓ ಸ್ವಾಮಿ, ಯಾವಾಗ ಬಂದೆ' ಎಂದ.

"ನಿಮ್ಮ ತಂದೆಯನ್ನು ತಮ್ಮ ಮನೆ ಹತ್ರ ಕಂಡು, ವಾಪಸ್ ಕರೆದುಕೊಂಡು ಬಂದಿದ್ದಾನಪ್ಪ, ಸ್ವಾಮಿ. ಇಲ್ದಿದ್ರೆ, ನಿಮ್ಮ ತಂದೆಯನ್ನು ಪೋಲೀಸ್ನೋರು ಹಿಡಿದಿಟ್ಟಿರೋರು ಅಂತ ಕಾಣತ್ತೆ" ಎಂದರು ಸಾಕಮ್ಮ.

"ಥ್ಯಾಂಕ್ಸ್ ಸ್ವಾಮಿ. ಈ ಹೊತ್ತು ಮಧ್ಯಾಹ್ನ ಊಟ ಮಾಡಿ ಮನೆ ಬಿಟ್ಟೋರು, ಐದು ಘಂಟೆ ಆದರೂ ಬರದಿದ್ದುದನ್ನು ನೋಡಿ, ಎಲ್ಲಿ ಹೋದರೋ, ಏನಾದರೋ ಅಂತ ಹೆದರಿಕೆ ಶುರುವಾಗಿ ಹುಡುಕೋದಕ್ಕೆ ನಾನು ಒಂದು ಕಡೆ, ನನ್ನ ಹೆಂಡತಿ ಒಂದು ಕಡೆ ಹೋದ್ವಿ. ಇತ್ತೀಚೆಗೆ ಅವರ ಬುದ್ಧಿ ಸ್ತಿಮಿತದಲ್ಲಿಲ್ಲ ಅನ್ಸತ್ತೆ. ವಿಚಿತ್ರವಾಗಿ ಆಡ್ತಾರೆ. ಅವರ ಸಿಟ್ಟು, ಕೋಪ, ಮರೆವು, ಮಾತು ಎಲ್ಲವನ್ನೂ ಹೇಗೋ ತಡಕೋಬಹುದು. ಆದರೆ ಒಂದು ನಡೆವಳಿಕೆ ಮಾತ್ರ ನಾವು ತಲೆತಗ್ಗಿಸೋ ಹಾಗೆ ಮಾಡಿಬಿಟ್ಟಿದೆ. ಹೊರಗಡೆ ಹೋದರೆ ಅವರು ದಾರೀಲಿ ಹೋಗೊ ಹೆಂಗಸರನ್ನೆಲ್ಲಾ ನೋಡ್ತಾ ನಿಲ್ಲೋದು, ಕೆಲವು ಸಾರಿ ಅವರ ಹಿಂದೆ ಸುಮ್ಮನೆ ಹೋಗೋದು ನಮ್ಮ ಪರಿಚಯದವರು 'ನೋಡ್ರಿ, ನಿಮ್ಮ ತಂದೆ ಹೀಗೆ ಮಾಡಿದರು' ಅಂತ ಹೇಳಿದರೆ ನಮಗೆ ನಾಚಿಕೆಯಿಂದ ಸಾಯುವಷ್ಟು ಹಿಂಸೆ ಆಗತ್ತೆ"

"ಡಾಕ್ಟರಿಗೆ ತೋರಿಸಲಿಲ್ಲವೇ ?"

"ತೋರಿಸಿದೆನಪ್ಪ. ವಯಸ್ಸಾದ ಮೇಲೆ ಕೆಲವರು ಹೀಗಾಡ್ತಾರೆ. ಅದಕ್ಕೆ ಏನೂ ಮಾಡೋಕಾಗಲ್ಲ. ಹಾಗೂ ತೊಂದರೆ ಜಾಸ್ತಿ ಆದರೆ, ಒಂದು ಸಲ ಮೆಂಟಲ್ ಆಸ್ಪತ್ರೆಗೆ ತೋರಿಸಿ ಅಂದರು. ಮೆಂಟಲ್ ಆಸ್ಪತ್ರೆಗೆ ಹೇಗಪ್ಪಾ ಹೋಗೋದು

ಅಂತ ಹಿಂದೇಟು ಹಾಕಿದೆ. ಆದರೆ ಇವರ ಸ್ಥಿತಿ ಬಿಗಿಡಾಯಿಸ್ತಿದೆ. ಏನು ಮಾಡ್ಬೇಕು ಅಂತ ತೋಚ್ತಾ ಇಲ್ಲ."

"ಮೋಹನ, ಈ ವಿಚಾರದಲ್ಲಿ ಉದಾಸೀನ ಮಾಡಬೇಡ. ಶರೀರಕ್ಕೆ ಖಾಯಿಲೆ ಬಂದ ಹಾಗೆ. ನಮ್ಮ ಮಿದುಳಿಗೂ ಖಾಯಿಲೆ ಬರುತ್ತದೆ. ಆಗ ನಮ್ಮ ಮಾತು, ವರ್ತನೆ ಏರುಪೇರಾಗತ್ತೆ. ನಿಮ್ಮ ತಂದೇನ ಮನೋ ವೈದ್ಯರಿಗೆ ತೋರಿಸೋಣ" ಎಂದು ಒಪ್ಪಿಸಿದ ಸ್ವಾಮಿ.

o o o

"ಬನ್ನಿ ಮೋಹನ್, ಕುಮಾರಸ್ವಾಮಿ, ಕುಳಿತುಕೊಳ್ಳಿ. ನಿನ್ನೆಗೆ ರಕ್ತ, ಮಿದುಳು ದ್ರುವದ ಪರೀಕ್ಷೆ. ಮಿದುಳಿನ ಸ್ಕ್ಯಾನಿಂಗ್ ಎಲ್ಲ ಮುಗಿದು ರಿಪೋರ್ಟ್ ಕೂಡ ಬಂದಿದೆ. ನಿಮ್ಮ ನರಸಿಂಹಮೂರ್ತಿಯವರ ತೊಂದರೆ ಏನು ಅಂತ ಅರ್ಥವಾಗ್ತಾ ಇದ" ಎಂದರು ಡಾ॥ ಮೂರ್ತಿ.

"ರಿಪೋರ್ಟ್ ಏನಂತ ಬಂದಿದೆ ಸಾರ್? ಇದು ಖಾಯಿಲೆಯೇ? ಏನು ಖಾಯಿಲೆ? ವಾಸಿಯಾಗುತ್ತಾ?" ಮೋಹನ ಆತಂಕದಿಂದ ಪ್ರಶ್ನಿಸಿದ.

ಮಿದುಳು ನಶಿಸುವ ಖಾಯಿಲೆ

"ಮೋಹನ್, ನಿಮ್ಮ ತಂದೆ, ಮಿದುಳು ನಶಿಸಿ ಹೋಗುವ ಖಾಯಿಲೆಗೆ ತುತ್ತಾಗಿದ್ದಾರೆ. ಮನುಷ್ಯನ ಮಿದುಳಲ್ಲಿ ಕೋಟ್ಯಾಂತರ ನರಕೋಶಗಳಿದ್ದಾವೆ. ಕೆಲವರಲ್ಲಿ, ಮಧ್ಯವಯಸ್ಸು ಅಥವಾ ಇಳಿವಯಸ್ಸಿನ ನಂತರ, ಅವು ವಿನಾಕಾರಣ ನಶಿಸಿ, ನಾಶವಾಗೋದಕ್ಕೆ ಪ್ರಾರಂಭವಾಗುತ್ತೆ. ಆಗ ಸಹಜವಾಗಿ ಮಿದುಳಿನ ಕೆಲಸ ಕಾರ್ಯಗಳೆಲ್ಲ ಅಸ್ತವ್ಯಸ್ತಗೊಳ್ಳುತ್ತವೆ. ಯಾವ ಭಾಗ ಹೆಚ್ಚು ಹಾನಿಗೀಡಾಗಿದೆ ಎನ್ನೋದರ ಮೇಲೆ, ಖಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಸ್ಥಿತಿಯನ್ನು 'ಡೆಮೆನ್ಷಿಯ' ಎಂದು ಕರೆಯುತ್ತಾರೆ. ಮಿದುಳು ಈ ರೀತಿ ನಶಿಸೋದಿಕ್ಕೆ ಪ್ರಚೋದನೆ ಮಾಡೋ ಕೆಲವು ಕಾರಣಗಳನ್ನು ವೈದ್ಯಕೀಯ ವಿಜ್ಞಾನ ಪತ್ತೆ ಹಚ್ಚಿದೆ. ಅದಕ್ಕೆ ಈಗ ಚಿಕಿತ್ಸಾ ಸೌಲಭ್ಯವೂ ಇದೆ. ಬೇಗ ಗುರುತಿಸಿ ಚಿಕಿತ್ಸೆ ಕೊಟ್ಟರೆ, ಮಿದುಳು ಹಾಳಾಗೋದನ್ನು ತಡೆಗಟ್ಟಬಹುದು. ಉದಾ–ಮಿದುಳಿನ ಸಿಫಿಲಿಸ್ ಅಥವಾ ಕ್ಷಯರೋಗ, ಮಿದುಳಿನಲ್ಲಿ ಗೆಡ್ಡೆ ಬೆಳೆದುಕೊಳ್ಳೋದು, ಮಿದುಳಿಗೆ ಪೌಷ್ಠಿಕಾಂಶದ ಕೊರತೆ, ಮಿದುಳಿನ ರಕ್ತನಾಳಗಳು ಒಡೆದು ರಕ್ತಸ್ರಾವ ಆಗೋದು ಇತ್ಯಾದಿ. ಇನ್ನು ಕೆಲವು ಕಾರಣಗಳನ್ನು ನಾವಿನ್ನೂ ಅರ್ಥಮಾಡಿಕೊಂಡಿಲ್ಲ. ಹೀಗಾಗಿ ಅವನ್ನು ತಡೆಗಟ್ಟೋದಕ್ಕೆ ನಿರ್ದಿಷ್ಟವಾದ ಚಿಕಿತ್ಸೆ ಏನೂ ಇಲ್ಲ. ಈ ಖಾಯಿಲೆಗಳನ್ನು 'ಡಿಜೆನೆರೇಟಿವ್' ಖಾಯಿಲೆಗಳು ಅಂತ ಕರೀತಾರೆ. ದುರಾದೃಷ್ಟದಿಂದ ನಿಮ್ಮ

ತಂದೆ ಈ ಬಗೆಯ ಡೀಜೆನರೇಟಿವ್ ಖಾಯಿಲೆಗೆ ಒಳಗಾಗಿದ್ದಾರೆ ಅವರ ಮಿದುಳಿನ ಮುಂಭಾಗ ನಶಿಸಿ, ನಾಶವಾಗ್ತಾ ಇದೆ. ಅದಕ್ಕೇ ಅವರ ಮಾತು, ವರ್ತನೆ, ಸಾಮಾಜಿಕ ನಡವಳಿಕೆ. ನೆನಪಿನ ಶಕ್ತಿ ಹಾಳಾಗ್ತಾ ಇದೆ. ಇದನ್ನು ತಡೆಯೋದಕ್ಕೆ ಆಗದೇ ಹೋಗಬಹುದು. ಇವರು ಇರೋತನಕ ಜೋಪಾನವಾಗಿ ಮಗುವಿನಂತೆ ಅವರನ್ನು ನೋಡ್ಕೊಬೇಕಾಗುತ್ತೆ. ಗೊತ್ತು ಗುರಿ ಇಲ್ಲದೆ ಅಡ್ಡಾಡೋದು ಇತ್ಯಾದಿ ಬೇಡದ ನಡೆವಳಿಕೆಗಳನ್ನು ಶಮನಕಾರಿ ಮಾತ್ರೆಗಳಿಂದ ಖಂಡಿತ ಕಡಿಮೆ ಮಾಡಬಹುದು. ಇದರಿಂದ ಅವರನ್ನು ಮನೇಲಿಟ್ಟುಕೊಂಡು ನೋಡ್ಕೊಳ್ಳೋದು ಸುಲಭವಾಗತ್ತೆ. ಇಷ್ಟಲ್ಲದೆ ಹೆಚ್ಚಿನ ಪ್ರಯೋಜನ ಉಂಟುಮಾಡೋ ಚಿಕಿತ್ಸೆಯಾಗಲಿ, ಔಷಧವಾಗಲಿ ಸದ್ಯಕ್ಕೆ ಲಭ್ಯವಿಲ್ಲ."

"ಮಿದುಳು ನಶಿಸಿಹೋಗೋದನ್ನು ತಡೆಗಟ್ಟೋದಕ್ಕೆ ಸಾಧ್ಯವೇ ಇಲ್ಲವೇ ಸಾರ್ ?" ಸ್ವಾಮಿ ಪ್ರಶ್ನಿಸಿದ.

"ಇಲ್ಲ ಕುಮಾರ್. ಇಲ್ಲಿ ನರಕೋಶಗಳು ನಶಿಸಿ, ನಿಷ್ಕ್ರಿಯವಾಗೋದಕ್ಕೆ ನಿರ್ದಿಷ್ಟವಾದ ಕಾರಣ ಏನು ಅಂತ ಗೊತ್ತಿಲ್ಲ. ಆದ್ದರಿಂದ ಅದರ ಹತೋಟಿ ಸಾಧ್ಯವಾಗೋದಿಲ್ಲ. ಒಳ್ಳೆಯ ಪೌಷ್ಟಿಕ ಆಹಾರ, ದೈಹಿಕ ಚಟುವಟಿಕೆ, ಅವರ ಮಿದುಳಿಗೆ ಹೊರೆಯಾಗದಂತಹ ಮಾನಸಿಕ ಚಟುವಟಿಕೆಯಿಂದ, ಅವರು ಇರುವಷ್ಟು ದಿವಸ ಅರ್ಥಪೂರ್ಣವಾಗಿ ಬದುಕುವ ಹಾಗೆ ಮಾಡಬಹುದು."

"ನೀವು ಹೇಗೆ ನೋಡ್ಕೊಳ್ಳಿ ಅಂತಿರೋ ಹಾಗೆ ಅವರನ್ನು ನೋಡ್ಕೊಳ್ತೇವೆ ಸಾರ್. ಆದರೆ ಮಜುಗರ ಉಂಟುಮಾಡೋ ಅವರ ನಡವಳಿಕೆಯನ್ನು ನಿಲ್ಲಿಸಿ ಕೊಡಿ" ಎಂದ ಮೋಹನ.

ಡಾ॥ ಮೂರ್ತಿ, ಶಮನಕಾರಿ ಮಾತ್ರೆಗಳನ್ನು ಬರೆದುಕೊಟ್ಟರು. ನರಸಿಂಹ ಮೂರ್ತಿಯವರನ್ನು ಹೇಗೆ ನೋಡಿಕೊಳ್ಳಬೇಕೆಂದು ಮನೆಯವರಿಗೆ ತಿಳಿವಳಿಕೆ ಕೊಟ್ಟರು.

ಮಿದುಳಿನ ನಶಿಸುವ ರೋಗಗಳು ವೈದ್ಯಕೀಯ ವಿಜ್ಞಾನಕ್ಕೆ ಇಂದಿಗೂ ಸವಾಲಾಗಿ ಉಳಿದಿವೆ. ಅದನ್ನ ಅರ್ಥಮಾಡಿಕೊಂಡು, ಹತೋಟಿಗೆ ತರಲು ಅಧ್ಯಯನಗಳು ನಿರಂತರವಾಗಿ ನಡೆದಿವೆ.

"ಆ ಮಾತುಗಳು...."

ಆ ಮಾತುಗಳು.

ಅಂದು ಅವಳಾಡಿದ ಮಾತುಗಳು ನನ್ನ ಕಿವಿಯಲ್ಲಿ ಇಂದಿಗೂ ಕುಣಿಯುತ್ತಲೇ ಇವೆ.

ಆ ಮಾತುಗಳು ಕಕ್ಕಿದ ನಂಜನ್ನು ನಾನು ಅರಗಿಸಿಕೊಳ್ಳಲಾಗಲಿಲ್ಲ. ನನ್ನನ್ನು ಅವು ಅಣುಅಣುವಾಗಿ ಕೊಲ್ಲುತ್ತಿವೆ.

ಅವಳು ಆ ಮಾತುಗಳನ್ನಾಡಿ ನಾಲ್ಕು ವರ್ಷಗಳೇ ಕಳೆದುಹೋಗಿದೆ. ಈ ಅವಧಿಯಲ್ಲಿ ಅವಳ ಮತ್ತು ನನ್ನ ಜೀವನದಲ್ಲಿ ಎಷ್ಟೋಂದು ಘಟನೆಗಳು ನಡೆದು ಹೋಗಿವೆ. ತಾನಾಡಿದ ಮಾತುಗಳನ್ನು ಅವಳು ಮರೆತುಹೋಗಿರಬೇಕು ಆದರೆ ನಾನು...?

ಚೂಪಾದ ಅಸ್ತ್ರದಿಂದ ದೇಹಕ್ಕೆ ಆದ ಗಾಯ ಕೆಲವು ದಿನಗಳಲ್ಲಿ ಮಾಯು ತ್ತದೆ. ಆದರೆ ಮಾತಿನ ಕೂರಲಗಿನಿಂದ ಮನಸ್ಸಿಗಾದ ಗಾಯ ಮಾಯುವುದಿಲ್ಲ. ಇಂದಿಗೂ ಅದರಿಂದ ನೋವಿನ ರಕ್ತ ಜಿನುಗುತ್ತಲೇ ಇದೆ. ಅದನ್ನು ಒರೆಸಬಲ್ಲ ಅವಳು ನನ್ನಿಂದ ದೂರವಾಗಿದ್ದಾಳೆ. ನನ್ನನ್ನು ನೋಡುವುದಿಲ್ಲ, ಸಂಬಂಧ ಹರಿದು ಹೋಯಿತು. ಅವನೊಂದಿಗೆ ಏನು ಮಾತು ಎಂದಿದ್ದಾಳೆ.

ನಾನು ಅನುಭವಿಸುತ್ತಿರುವ ನೋವು, ಸಂಕಟದ ಅರಿವು ಅವಳಿಗೆ ಒಂದಿಷ್ಟೂ ಇಲ್ಲ. ಅವಳು ನನ್ನ ಒಡಹುಟ್ಟಿದವಳು. ಒಬ್ಬಳೇ ತಾಯಿಯ ರಕ್ತವನ್ನು ಹಂಚಿ ಕೊಂಡು ಹುಟ್ಟಿದೆವು. ಒಬ್ಬ ತಂದೆ ತಾಯಿಯ ಪ್ರೀತಿ ಮಮತೆಯನ್ನು ಉಂಡು ಬೆಳೆದೆವು. ನನಗಿಂತ ಆಕೆ ಎರಡು ವರ್ಷ ದೊಡ್ಡವಳಾದರೂ ನೋಡಿದವರು ಅವಳಿ ಜವಳಿ ಮಕ್ಕಳು ಎನ್ನುವಂತೆ ಇದ್ದೆವು.

ಈ ನನ್ನ ಅಕ್ಕ ಲಕ್ಷ್ಮಿ ಆಡಿದ ಆ ಮಾತುಗಳು...

"ಛೀ ಅಸಹ್ಯವಾಗುತ್ತೆ ಮನೆಯಲ್ಲಿ ಬೆಳೆದು ನಿಂತ ನಾವಿಬ್ಬರು ಹುಡುಗಿಯರು ಮದುವೆ ಇಲ್ಲದೆ ನಿಂತಿರುವಾಗ, ನಿನಗೆ ಮ ದು ವೆ ಮಾಡಿಕೊಳ್ಳುವ ಅವಸರ. ಹೆಂಡತಿಯ ಮಗ್ಗುಲಿನಲ್ಲಿ ಮಲಗುವ ಆಸೆ. ನಾಚಿಕೆಯಾಗುವುದಿಲ್ಲವೇ ನಿನಗೆ?

ಹದ ತೀಟೆ ಜಾಸ್ತಿಯಾದಾಗ ನಾಚಿಕೆ ಎಲ್ಲಿಂದ ಬರಬೇಕು... ಹೋಗು ಮದುವೆ ಾಡಿಕೊಂಡು ಮಜಾಮಾಡು, ತೀಟೆ ತೀರಿಸಿಕೋ, ನಮ್ಮ ಚಿಂತೆ ನಿನಗ್ಯಾಕೆ..."

ಅವಳ ಈ ಮಾತುಗಳನ್ನು ನೆನೆಸಿಕೊಂಡ ಕೂಡಲೇ ನನ್ನ ಮೈಮೇಲೆ ಮುಳ್ಳು ೇಳುತ್ತವೆ. ಮೈಯಿಂದ ರಕ್ತವೆಲ್ಲಾ ಹೊರಕ್ಕೆ ಹರಿದು ಹೋದಂತಾಗುತ್ತದೆ. ೇಹದ ನರನರಗಳನ್ನೆಲ್ಲಾ ಸೂಜಿಯಿಂದ ಸಿಗಿದಂತಾಗುತ್ತದೆ.

ಲಕ್ಷ್ಮಿಯಾಗಲೀ, ನನ್ನ ತಂಗಿ ಸರಸ್ವತಿಯಾಗಲೀ ನನ್ನ ಉದ್ದೇಶವನ್ನು ಅರ್ಥ ಾಡಿಕೊಳ್ಳಲೇ ಇಲ್ಲ.

"ಲಕ್ಷ್ಮಿ. ಪ್ರಭಾ ಕೂಡ ನಿನ್ನಂತೆಯೇ ಒಂದು ಹೆಣ್ಣು. ತಂದೆ ತಾಯಿಗಳನ್ನು ಕ್ಕಂದಿನಲ್ಲೇ ಕಳೆದುಕೊಂಡು, ಯಾರಿಗೂ ಬೇಡದವಳಾಗಿ ಸೋದರಮಾವನ ಮನೆ ಲ್ಲಿ ಹೇಗೋ ಜೀವ ಹಿಡಿದು ಬದುಕಿದ್ದಾಳೆ. ಆ ನರಕದಿಂದ ಆದಷ್ಟು ಬೇಗ ವಳನ್ನು ಹೊರತರದಿದ್ದರೆ ಅವಳ ಬಾಳು ಹಾಳಾಗಿ ಹೋಗುತ್ತದೆ. ಅವಳಿಗೆ ಂದು ಹೊಸ ಜೀವನ ಕೊಡಬೇಕೆಂದೇ ನಾನು ಅವಳನ್ನು ಮದುವೆಯಾಗಲು ರ್ಮಾನಿಸಿದ್ದೇನೆ. ನನ್ನನ್ನು ಅರ್ಥಮಾಡಿಕೋ" ಎಂದು ಕೇಳಿಕೊಂಡೆ.

"ಸಾಕು ನಿಲ್ಲಿಸು ರವೀ. ಈ ಬಣ್ಣದ ಮಾತುಗಳನ್ನಾಡಿ ನನ್ನನ್ನು ಮರುಳು ಾಡಬೇಡ. ಈ ಪ್ರಪಂಚದಲ್ಲಿ ಪ್ರಭಾಳಂಥವರು ಸಾವಿರಾರು ಜನ ಇದ್ದಾರೆ. ವರನ್ನೆಲ್ಲಾ ನೀನು ಮದುವೆ ಆಗಲು ಸಾಧ್ಯವೇ. ಪ್ರಭಾಳಿಗೆ ಸಹಾಯಮಾಡೋ ಕ್ಕೆ ನೀನು ಯಾರು ?"

"ಲಕ್ಷ್ಮಿ ನೀನು ಓದಿದವಳು. ಬುದ್ಧಿವಂತೆ. ಪ್ರಪಂಚದಲ್ಲಿರುವ ಕಷ್ಟಪಡು ರುವ ಹುಡುಗಿಯರಿಗೆಲ್ಲಾ ಸಹಾಯ ಮಾಡೋದಿಕ್ಕೆ ನಾನು ಕೃಷ್ಣಪರಮಾತ್ಮ ಲ್ಲ. ಪ್ರಭಾ ತುಂಬಾ ಒಳ್ಳೆಯ ಹುಡುಗಿ. ಜೀವನದಲ್ಲಿ ತುಂಬಾ ನೊಂದಿದ್ದಾಳೆ. ುರೀಕ್ಷಿತವಾಗಿ ನನಗೆ ಪರಿಚಯವಾದಳು. ಅವಳ ನಡೆ ನುಡಿ ನನಗೆ ಇಷ್ಟವಾಗಿದೆ. ್ನ ತಮ್ಮನಿಂದ ಒಂದು ಅಸಹಾಯಕ ತಬ್ಬಲಿ ಹೆಣ್ಣಿನ ಬಾಳು ಹಸನಾಗುವುದು ಗೆ ಇಷ್ಟವಿಲ್ಲವೇ, ಈ ಪುಣ್ಯಕಾರ್ಯದಲ್ಲಿ ನೀನೂ ಭಾಗಿಯಾಗು."

"ಬೇಡಪ್ಪಾ ಬೇಡ. ನೀನೇ ಆ ಎಲ್ಲ ಪುಣ್ಯವನ್ನು ಕಟ್ಟಿಕೊಳ್ಳುವಿಯಂತೆ. ದಲು ನನ್ನ ಮತ್ತು ಸರಸ್ವತಿಯ ಮದುವೆ ನಡೆಯಲಿ. ಆಮೇಲೆ ನೀನು ಆದರ್ಶ ುಷನಾಗಿ ಒಬ್ಬ ಕೀಳು ಜಾತಿಯವಳನ್ನೋ, ವಿಧವೆಯನ್ನೋ ಮದುವೆ ಮಾಡಿ ಂಡು ಮಹಾತ್ಮನಾಗುವೆಯಂತೆ. ಈಗ ಸ್ವಲ್ಪ ವಾಸ್ತವಿಕ ಸ್ಥಿತಿ ಏನು ಅಂತ ಯೋಚನೆ ಡು. ನೀನು ಪ್ರಭಾಳನ್ನು ಮದುವೆಯಾಗಿ ಮನೆಗೆ ಕರೆತರುತ್ತೀಯ. ಅವಳ ಜಾತಿ ರೆ ನಮ್ಮ ಜಾತಿ ಬೇರೆ. ನನ್ನನ್ನು ನೋಡಲು, ಆಮೇಲೆ ಸರಸ್ವತಿಯನ್ನು ೇಡಲು ನಮ್ಮ ಜನ ಬರುತ್ತಾರೆ. ಇಂಥವರ ಮನೆ ಹುಡುಗಿ ಬೇಡ ಅನ್ನುತ್ತಾರೆ.

ಜೊತೆಗೆ ನಿನಗೆ ಹೆಂಗಸರ ಬುದ್ಧಿ ಗೊತ್ತಿಲ್ಲ. ಈ ಪ್ರಭಾ ನಿನಗೇನೋ ಅಣಿಯಾಗಿರ ತ್ತಾಳೆ. ನಮ್ಮನ್ನು ಕಂಡರೆ ಮೂತಿ ತಿರುವುತ್ತಾಳೆ. ಅವಳ ಕೈಕೆಳಗೆ ಅವಳು ಹೇ ದಂತೆ ಕೇಳಿಕೊಂಡಿರಲು ನನಗೆ ಸಾಧ್ಯವಿಲ್ಲ. ನನಗೂ ಸ್ವಾಭಿಮಾನ ಅನ್ನೋ ದಿದೆ."

"ಬೇಡ ಲಕ್ಷ್ಮಿ. ಒಬ್ಬ ಸಾಧಾರಣ ಅವಿವೇಕಿ ಹೆಂಗಸಿನಂತೆ ಮಾತಾಡಬೇಡ ಈ ಮನೆಯ ಹಿರಿಯಳು ನೀನೇ. ಅಪ್ಪ ಅಮ್ಮ ಹೋದಮೇಲೆ ನೀನೇ ಈ ಮನೆಯ ಯಜಮಾನಿ. ಈ ನಿನ್ನ ಸ್ಥಾನಕ್ಕೆ ಸ್ವಲ್ಪವೂ ಚ್ಯುತಿ ಬರೋಲ್ಲ. ಪ್ರಭಾಳಿಗೆ ಇ ನ್ನೆಲ್ಲಾ ಹೇಳಿದ್ದೇನೆ. ನಿಮ್ಮ ಮನೆಯಲ್ಲಿ ನನಗೆ ಆಳಿನ ಸ್ಥಾನ ಕೊಟ್ಟರೆ ಸಾಕು ನಿಮ್ಮೆಲ್ಲರ ಸೇವೆ ಮಾಡಿಕೊಂಡು ಬದುಕಿರುತ್ತೇನೆ ಅಂತ ಹೇಳಿದ್ದಾಳೆ. ಈ ಮದು ವೆಗೆ ಒಪ್ಪಿಗೆ ಕೊಡು."

"ಹಾಗೆ ಹೇಳದೆ ಇನ್ನೇನು ಮಾಡ್ತಾಳೆ ಇಲಿಮರಿಯಾಗಿ ಬಂದು ಆಮೇ ಹುಲಿಮರಿ ಆಗ್ತಾಳೆ. ಈ ಹೊತ್ತು ನಾವು ಅವಳಿಗೆ ಅಯ್ಯೋ ಪಾಪ ಅಂದರೆ ನಾಳೆ ಬೇರೆಯವರು ನಮ್ಮನ್ನು ನೋಡಿ ಅಯ್ಯೋ ಪಾಪ ಅನ್ನೋ ಸ್ಥಿತಿಗೆ ನಮ್ಮನ ನೂಕ್ತಾಳೆ. ನೀನೊಬ್ಬ ಪೆದ್ದ. ಬೆಳ್ಳಗಿರೋದನ್ನೆಲ್ಲಾ ಹಾಲು ಅಂತ ನಂಬ್ತೀಯ ನಿನ್ನನ್ನು ಸುಲಭವಾಗಿ ಬಲೆಯಲ್ಲಿ ಹಾಕ್ಕೊಂಡಿದ್ದಾಳೆ."

"ಲಕ್ಷ್ಮಿ ಸುಮ್ಮನೆ ಬಾಯಿಗೆ ಬಂದದ್ದನ್ನೆಲ್ಲ ಮಾತಾಡಬೇಡ. ಪ್ರಭನ್ನ ನೀನ ಒಂದು ಸಾರಿ ಕೂಡ ನೋಡಿಲ್ಲ. ಆದರೆ ಅವಳ ಬಗ್ಗೆ ಸುಮ್ಮನೆ ವಿಷ ಕಾರ ಇದ್ದೀಯ. ಇದರಿಂದ ನಿನಗೆ ಒಳ್ಳೇದಾಗೋದಿಲ್ಲ" ನನ್ನ ಧ್ವನಿ ಏರಿತ್ತು.

"ನನ್ನ ಮೇಲೆ ಜೋರು ಮಾಡ್ತಿದ್ದೀಯಾ... ಮಾಡು. ಹೆಣ್ಣಿನ ಮೇಲಿ ಆಸೆ ನಿನ್ನ ಹಾಗೆ ಆಡಿಸುತ್ತೆ. ನೋಡೋದಿಕ್ಕೆ ತೆಳ್ಳಗೆ ಬೆಳ್ಳಗೆ ಇದ್ದಾಳೆ ಅಂ ಕಾಣತ್ತೆ. ಮೈಕೈ ತುಂಬಿಕೊಂಡು ನಿನ್ನ ಮೈಯಲ್ಲಿ ಬಯಕೆಯ ಬೆಂಕಿ ಹಚ್ಚಿದ್ದಾಳೆ ಎಷ್ಟಾದರೂ ನೀನು ಗಂಡು ಜಾತಿ. ಸುಖಪಡೋದಿಕ್ಕೆ ತವಕ ಪಡ್ತಾ ಇದ್ದೀಯ ಧಾರಾಳವಾಗಿ, ಈಗಲೇ ಅವಳನ್ನ ಮದುವೆ ಮಾಡ್ಕೊಂಡು ನಿನ್ನ ಆಸೆ ತೀರಿಸ್ಕೋ ನಮ್ಮ ಚಿಂತೆ ನಿನಗ್ಯಾಕೆ"

ಅವಳ ಮಾತಿನ ಹಿಂದಿದ್ದ ವ್ಯಂಗ್ಯ ನನ್ನನ್ನು ತಿವಿಯಿತು. ಸಿಟ್ಟು ಉಕ್ಕಿ ರಿತು. ನನ್ನ ಮದುವೆಯ ನಿರ್ಧಾರದಲ್ಲಿ ಕೇವಲ ಕಾಮಪಿಪಾಸೆಯನ್ನು ಕಾಣ ತ್ತಿದ್ದಾಳೆ. ನನ್ನ ಸದುದ್ದೇಶವನ್ನು ಅವಳಿಗೆ ಅರ್ಥಮಾಡಿಸಬೇಕು. "ಲಕ್ಷ್ಮಿ ಇ ಕೇಳು, ನನ್ನ ದೇಹದ ತೀಟೆ ತೀರಿಸ್ಕೊಳೋದಿಕ್ಕೆ ಪ್ರಭಳನ್ನು ಆತುರದಲ್ಲಿ ಮದು ಆಗ್ತಿದ್ದೀನಿ ಅಂತ ನೀನು ತಪ್ಪು ತಿಳ್ಕೊಂಡಿದ್ದೀಯ. ನಾನು ನನ್ನ ಜವಾಬ್ದಾ

ರುನ್ನೂ ಮರೆತಿಲ್ಲ. ನಿಮ್ಮಿಬ್ಬರ ಮದುವೆ ಮಾಡದೆ, ನಾನು ಮದುವೆಯಾಗಿ ಜಾಮಾಡಬೇಕು ಅನ್ನೋ ತುಚ್ಛ ಆಶೆ ನನ್ನಲ್ಲಿಲ್ಲ. ಪ್ರಭಳನ್ನು ಉಳಿಸಿಕೊಳ್ಳ ೇಕಾದರೆ ನಾನು ಆದಷ್ಟು ಬೇಗ ಅವಳನ್ನು ಮದುವೆ ಮಾಡಿಕೊಳ್ಳಲೇ ಬೇಕು. ುದುವೆ ಮಾಡಿಕೊಳ್ತೀನೆ. ಆದರೆ ನಿಮ್ಮಿಬ್ಬರ ಮದುವೆ ಆಗೋತನಕ ನಾವು ೖಹಿಕ ಸಂಪರ್ಕ ಮಾಡೊಲ್ಲ. ಒಂದೇ ರೂಮಿನಲ್ಲಿ ಮಲಕ್ಕೊಳಲ್ಲ. ಸತ್ತು ಸ್ವರ್ಗ ಲ್ಲಿರೋ ನಮ್ಮ ತಂದೆ ತಾಯಿಯರ ಮೇಲಾಣೆ" ಎಂದು ಕೂಗಿದೆ. ಆವೇಶದಿಂದ ನ್ನ ಇಡೀ ಶರೀರ ನಡುಗುತ್ತಿತ್ತು. ಲಕ್ಷ್ಮಿ ಮತ್ತು ಆಗ ತಾನೇ ಅಲ್ಲಿಗೆ ಬಂದ ರಸ್ವತಿ ಬಿಟ್ಟಬಾಯಿ ಮತ್ತು ಬಿಟ್ಟ ಕಣ್ಣುಗಳಿಂದ ನನ್ನನ್ನೇ ನೋಡುತ್ತಿದ್ದರು.

o o o

ನಾನು ಆದಿನ ಸಂಪಿಗೆಹಳ್ಳಿಯಲ್ಲಿ ಇನ್ಸ್‌ಪೆಕ್ಷನ್ ಮುಗಿಸಿ ಮನೆಗೆ ವಾಪ ್ಸಗುತ್ತಿದ್ದೆ. ಜೀಪ್‌ನಲ್ಲಿ ನಾನು ಮತ್ತು ಡ್ರೈವರ್ ಬಿಟ್ಟರೆ ಇನ್ಯಾರೂ ಇರಲಿಲ್ಲ. ೂರ್ಯಾಸ್ತಮವಾಗಿ ಬೆಳಕು ಕಡಿಮೆಯಾಗುತ್ತಾ ನಡೆದಿತ್ತು. ದಾರಿಯಲ್ಲಿ ನಾಲ್ಕು ಲಿಗಳುಳ್ಳ ದೊಡ್ಡ ಭಾವಿಯೊಂದು ಸಿಗುತ್ತದೆ. ಎಂದೂ ಬತ್ತದ ಭಾವಿ ಎಂದು ಳ್ಳಿಯುವರು ಹೇಳುತ್ತಾರೆ. ಇದಕ್ಕೆ, ಒಂದು ರೋಚಕ ಕಥೆಯುನ್ನೂ ಹೇಳುತ್ತಾರೆ. ದು ನಡೆದದ್ದು ಬಹಳ ಹಿಂದೆಯಂತೆ. ನೀರಿಗೆ ಜನ ಬವಣೆ ಪಡುವುದನ್ನು ಕಂಡ ೂರ ಗೌಡ ದೊಡ್ಡ ಭಾವಿಯನ್ನು ತೋಡಿಸಿದ. ಎಷ್ಟು ಆಳಕ್ಕೆ ಹೋದರೂ ನೀರು ರಲಿಲ್ಲ. ಆದರೆ ಬಲ್ಲವರ ಪ್ರಕಾರ ಅಲ್ಲಿ ದೊಡ್ಡ ನೀರಿನ ಸೆಲೆ ಇದೆ. ಯಾವುದೋ ುಷ್ಟ ಶಕ್ತಿ ಅದು ಹೊರಬಂದಂತೆ ತಡೆಹಾಕಿದೆ. ಗರ್ಭಿಣಿ ಹೆಂಗಸೊಬ್ಬಳನ್ನು ಬಲಿ ೊಟ್ಟರೆ, ದುಷ್ಟಶಕ್ತಿ ತೃಪ್ತಿಗೊಂಡು ದಾರಿ ಬಿಡುತ್ತದೆ ಎಂದರಂತೆ ಶಾಸ್ತ್ರದವರು. ಲಿಕೊಡಲು ಯಾರೂ ಮುಂದೆ ಬರಲಿಲ್ಲ. ಹೇಗೆ ಬಂದಾರು. ಕಡೆಗೆ ಊರ ೌಡನ ಗರ್ಭಿಣಿ ಸೊಸೆಯೇ ಸ್ವಇಚ್ಛೆಯಿಂದ ಆತ್ಮಾರ್ಪಣೆ ಮಾಡಿಕೊಂಡಳಂತೆ. ಾನು ಪತಿವ್ರತೆಯೇ ಆಗಿದ್ದರೆ, ಮನಃಪೂರ್ವಕವಾಗಿ ಯಾವ ಪಾಪವನ್ನೂ ಮಾಡ ವಳೇ ಆಗಿದ್ದರೆ, ಈ ಭಾವಿ ಎಂದೂ ಬತ್ತದಿರಲಿ. ನೀರು ಸಮೃದ್ಧವಾಗಿರಲಿ ಂದು ಅದರೊಳಕ್ಕೆ ಬಿದ್ದು ಸತ್ತಳಂತೆ. ಈ ಕಥೆ ಎಷ್ಟು ನಿಜವೋ, ಎಷ್ಟು ಕಲ್ಪಿ ವೋ ಗೊತ್ತಿಲ್ಲ. ಭಾವಿಯ ನೀರು ಸ್ವಚ್ಛವಾಗಿದ್ದು, ಯಾವತ್ತೂ ಸಮೃದ್ಧಿ ಾಗಿರುತ್ತದೆ. ಈ ಭಾವಿಯ ಬದಿಯಲ್ಲಿ ಯುವತಿಯೊಬ್ಬಳು ಕುಳಿತು ಶೂನ್ಯದತ್ತ ೃಷ್ಟಿಸುತ್ತಿದ್ದುದನ್ನು ಕಂಡು ಜೀಪನ್ನು ನಿಲ್ಲಿಸಲು ಹೇಳಿದೆ. ಆಕೆ ಆತ್ಮಹತ್ಯೆ

ಮಾಡಿಕೊಳ್ಳಲು ಕುಳಿತಿರಬಹುದೇ ಎನ್ನಿಸಿತು. ಹತ್ತಿರ ಹೋಗಿ 'ಕ್ಷಮಿಸಿ ನೀವ್ಯಾರು ಅಂತ ನನಗೆ ಗೊತ್ತಿಲ್ಲ. ಇಷ್ಟು ಹೊತ್ತಿನಲ್ಲಿ ಜನ ಸಂಚಾರವಿಲ್ಲದ ಈ ಸ್ಥಳದಲ್ಲಿ ನೀವು ಕುಳಿತ ರೀತಿಯನ್ನು ನೋಡಿ, ನೀವು ದುಃಖದಲ್ಲಿದ್ದೀರಿ ಅಂತ ತಿಳಿದೆ. ನಿಮ್ಮನ್ನು ಮಾತಾಡಿಸೋಣ ಅನಿಸಿತು' ಎಂದೆ.

ಆಕೆ ನನ್ನತ್ತ ನೋಡಿ 'ನಿಮ್ಮಂಥವರು ಅಪರೂಪ. ಇನ್ನೊಬ್ಬರ ಕಷ್ಟವನ್ನು ನೋವನ್ನೂ ಕಂಡು ಏನೂ ಪ್ರತಿಕ್ರಿಯೆ ತೋರದವರೇ ಈ ಪ್ರಪಂಚದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಿಮ್ಮ ಈ ಮಾನವೀಯ ಗುಣಕ್ಕೆ ನೂರು ನಮಸ್ಕಾರಗಳು' ಎಂದಳು. ಆಕೆಯ ಮಾತಿನ ಧಾಟಿ ಆಕೆ ವಿದ್ಯಾವಂತಳು, ಸುಸಂಸ್ಕೃತಳು ಎಂಬುದನ್ನು ತೋರಿಸಿತ್ತು.

ನಾನು ನನ್ನ ಪರಿಚಯ ಮಾಡಿಕೊಂಡೆ. ಆಕೆ ತನ್ನ ಪರಿಚಯ ಮಾಡಿಕೊಂಡಳು. ತನ್ನ ತಂದೆ ಪೆಥಿಡಿನ್ ಇನ್‌ಜೆಕ್ಷನ್‌ಗೆ ಚಟ ಬೆಳೆಸಿಕೊಂಡು ತನ್ನೆಲ್ಲ ಸಂಪತ್ತನ್ನು ಕಳೆದುಕೊಂಡದ್ದು. ಕೊನೆಗೆ ಬುದ್ಧಭ್ರಮಣೆಗೀಡಾಗಿ ಮದ್ರಾಸ್ ಮಾನಸಿಕ ಆಸ್ಪತ್ರೆಯಲ್ಲಿ ಸತ್ತದ್ದು. ತನ್ನ ತಾಯಿ ಈ ನೋವು ಬಡತನದ ಬೇಗೆಯನ್ನು ತಾಳಲಾರದೆ ಬಾವಿಗೆ ಬಿದ್ದು ಆತ್ಮಹತ್ಯೆಮಾಡಿಕೊಂಡದ್ದು. ತಾನು ಹತ್ತು ವರ್ಷ ವಯಸ್ಸಿನಲ್ಲೇ ತಬ್ಬಲಿಯಾದದ್ದು, ಅನಂತರದ ಎಂಟು ವರ್ಷಗಳ ಕಾಲ ಸೋದರಮಾವನ ಮನೆಯಲ್ಲಿ ಬೇಡದ ವ್ಯಕ್ತಿಯಾಗಿ ಕಾಲಕಸವಾಗಿ ಬದುಕುತ್ತಿರುವುದು. ಎರಡು ಹೊತ್ತಿನ ಊಟ ಎರಡುಜೊತೆ ಬಟ್ಟೆ, ತಲೆಯ ಮೇಲೊಂದು ಸೂರಿಗಾಗಿ ಅವರ ಹಂಗಿನಲ್ಲಿರುವುದು ಎಲ್ಲವನ್ನೂ ಹೇಳಿದಳು. 'ಮನಸ್ಸಿಗೆ ತುಂಬಾ ಬೇಸರವಾದಾಗ ಆತ್ಮಹತ್ಯೆಯ ಯೋಚನೆ ಬರುತ್ತದೆ. ಆಗ ಈ ಭಾವಿಯ ಬಳಿಗೆ ಬಂದು ಕುಳಿತುಕೊಳ್ಳುತ್ತೇನೆ, ಬಿದ್ದು ಸಾಯಬೇಕಂದಲ್ಲ, ರವೀಂದ್ರ ಅವರೇ. ಭಾವಿಗೆ ಬಿದ್ದು ಆತ್ಮಾರ್ಪಣೆ ಮಾಡಿಕೊಂಡ ಆ ಗೌಡರ ಸೊಸೆ ಆತ್ಮಹತ್ಯೆ ಮಾಡಿಕೊಂಡರೂ ಅದಕ್ಕೊಂದು ದೊಡ್ಡ ಉದ್ದೇಶವಿರಬೇಕು. ಆದರಿಂದ ಹತ್ತಾರು ಜನರಿಗೆ ಅನುಕೂಲವಾಗಬೇಕು ಎನ್ನುವ ಬುದ್ಧಿಮಾತನ್ನು ಅನುಸರಿಸಿ ತೋರಿಸಿದ್ದಾಳೆ. ಇಲ್ಲಿ ಬಂದು ಕುಳಿತಾಗ ಈಗಿರುವುದಕ್ಕಿಂತ ಹತ್ತು ಪಟ್ಟು ಹೆಚ್ಚು ಕಷ್ಟ ಬಂದರೂ ಬದುಕಿ ಎದುರಿಸಬೇಕು. ಎನ್ನೋ ಧೈರ್ಯ ಬರುತ್ತದೆ' ಎಂದಳು. ಅವಳ ಮಾತು, ಧೋರಣೆ ನನಗೆ ಹಿಡಿಸಿತು.

ಹೀಗೆ ಪರಿಚಯವಾದ ಪ್ರಭಾ ಕ್ರಮೇಣ ನನ್ನ ಮನಸ್ಸನ್ನು ತುಂಬಿಕೊಂಡಳು. ಅವಳು ನನ್ನ ಜೀವನ ಸಂಗಾತಿಯಾದರೆ ಎಷ್ಟು ಚಂದ ಎಂದು ಯೋಚಿಸತೊಡಗಿದೆ. ನನ್ನ ಆಸೆಯನ್ನು ಅವಳ ಮುಂದೆ ಪ್ರಕಟಿಸಿದಾಗ ಅವಳೂ ಒಪ್ಪಿಕೊಂಡಳು. ಈ

ದುವೆಗೆ ನನ್ನ ಸೋದರ ಮಾವನಾಗಲೀ ಅತ್ತೆಯಾಗಲೀ ಅಡ್ಡಿ ಬರುವುದಿಲ್ಲ. ಸು ಖರ್ಚಿಲ್ಲದೆ ನಾನು ಮನೆಬಿಟ್ಟು ತೊಲಗಿದರೆ ಸಾಕು ಎನ್ನುತ್ತಾರೆ ಎಂದಳು.

ನಮ್ಮ ಪರಿಚಯವಾದ ಆರು ತಿಂಗಳುಗಳ ನಂತರ ದೊಡ್ಡ ಗಂಡಾಂತರವೊಂದು ದುರಾಯಿತು. ಶ್ರೀಮಂತ ವಿಧುರನೊಬ್ಬ ಪ್ರಭಾಳನ್ನು ತನಗೆ ಕೊಟ್ಟು ಮದುವೆ ಾಡಿದರೆ ಅವರಿಗೆ ಸಾಕಷ್ಟು ಹಣ ಆಸ್ತಿ ಕೊಡುವುದಾಗಿ ಹೇಳಿದನಂತೆ. ಸೋದರ ಾವ ಅವಳನ್ನು ಆವನಿಗೆ ಮಾರಲು ಸಿದ್ಧರಾದರು. 'ನೀವು ಎಷ್ಟೇ ಕಷ್ಟವಾದರೂ ಕ್ಷಣ ನನ್ನನ್ನು ಮದುವೆ ಮಾಡಿಕೊಳ್ಳಿ ರವಿ ಇಲ್ಲದಿದ್ದರೆ ನನ್ನನ್ನು ಆ ಶ್ರೀಮಂತನ ೊತ್ತು ಮಾಡಿಬಿಡುತ್ತಾರೆ' ಎಂದಳು. ನಾನು ತಕ್ಷಣ ಒಂದು ನಿರ್ಧಾರಕ್ಕೆ ಬರಲೇ ೇಕಾಯಿತು. ಪಭಾಳನ್ನು ಮದುವೆಯಾಗಲು ನಿರ್ಧರಿಸಿದೆ. ಲಕ್ಷ್ಮಿಯು ಮತ್ತು ನ್ನ ಇತರ ಬಂಧುಗಳ ಇಷ್ಟಕ್ಕೆ ವಿರುದ್ಧವಾಗಿ ರಿಜಿಸ್ಟ್ರಾರ್ ಆಫೀಸಿನಲ್ಲಿ ನಾನು ಭಾ ಸತಿಪತಿಗಳಾದೆವು.

ಮದುವೆ ಆದ ನಂತರ ನನ್ನ ಮತ್ತು ಲಕ್ಷ್ಮಿಯ ನಡುವೆ ನಡೆದ ಮಾತುಕತೆ ನ್ನು ನನ್ನ ವಾಗ್ದಾನವನ್ನು ಪ್ರಭಾಳಿಗೆ ತಿಳಿಸಿದೆ. 'ಪ್ರಭಾ ನೀನು ನನ್ನನ್ನು ಮಿಸಬೇಕು. ನಿನ್ನ ಒಪ್ಪಿಗೆ ಕೇಳದೆ ಲಕ್ಷ್ಮಿಗೆ ಈ ಮಾತು ಕೊಟ್ಟಿದ್ದೇನೆ. ಅವ ಬ್ಬರ ಮದುವೆಯಾಗುವವರೆಗೆ ನಾವು ದೈಹಿಕ ಸಂಪರ್ಕ ಮಾಡುವುದು ಬೇಡ. ೇಹಿತರಂತೆ ಇರೋಣ' ಎಂದೆ. ಅವಳ ಮುಖ ತುಸ ಬಾಡಿದರೂ, 'ಆಯಿತು ರವಿ ನ್ನಿಚ್ಛೆಯೇ ನನ್ನಿಚ್ಛೆ' ಎಂದಳು.

ಇವಳಿಂದಾಗಿ ನನ್ನ ತಮ್ಮ ನನ್ನ ಮಾತು ಮೀರುವಂತಾದ ಎಂಬ ಕೋಪಕ್ಕೋ ನೋ ಲಕ್ಷ್ಮಿ ಪ್ರಭಾಳನ್ನ ಒಪ್ಪಿಕೊಳ್ಳಲೇ ಇಲ್ಲ. ಅವಳೊಂದಿಗೆ ಕೇವಲ ವ್ಯವ ರಿಕ ಸಂಬಂಧವನ್ನು ಮಾತ್ರ ಇಟ್ಟುಕೊಂಡಳು. ಪ್ರಭಾ ಎಷ್ಟೇ ಪ್ರಾಮಾಣಿಕ ಯತ್ನ ಪಟ್ಟರೂ, ಅವಳ ವಿಶ್ವಾಸವನ್ನು ಗಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವಳ ವಿಚಾರಕ್ಕೆ ವಿರುದ್ಧವಾದ ಮದುವೆಯಾದ ನನ್ನನ್ನು ಲಕ್ಷ್ಮಿ ಕ್ಷಮಿಸಲೂ ಇಲ್ಲ. ವಳಿಗೆ ಮದುವೆಯಾಯಿತು. ಇದುವರೆಗೆ ನಮ್ಮ ಮನೆಗೆ ಬಂದಿಲ್ಲ. ಯಾವುದೇ ಪರ್ಕವಿಲ್ಲ. ಹಠವೋ, ತಪ್ಪಿತಸ್ಥ ಭಾವನೆಯೋ ನನಗೆ ತಿಳಿಯದು.

ಪ್ರಭಾ ನಾನು ಒಬ್ಬರನ್ನೊಬ್ಬರು ಚೆನ್ನಾಗಿ ಹೊಂದಿಕೊಂಡೆವು. ಹೆಚ್ಚು ಮೆ ಸಮಾನ ಅಭಿರುಚಿ ಇದ್ದ ನಾವು ಆತ್ಮೀಯ ಸ್ನೇಹಿತರಾದೆವು. ಆಕೆ ನನ್ನ ಮಿಪ್ಯದಲ್ಲಿದ್ದಾಗ ಅಥವಾ ಕಥೆ ಕಾದಂಬರಿ ಸಿನಿಮಾಗಳಲ್ಲಿ ಪ್ರಣಯ ಸನ್ನಿವೇಶ ನ್ನ ಕಂಡಾಗ ನನ್ನನ್ನು ಲೈಂಗಿಕ ಭಾವನೆಗಳು ಕೆರಳಿಸುತ್ತಿದ್ದುವು. ತಕ್ಷಣವೇ ್ಮಿಯ ಆ ತುಚ್ಛೀಕಾರದ ಮಾತುಗಳು ಮತ್ತು ನನ್ನ ಪ್ರತಿಜ್ಞೆ ನೆನಪಿಗೆ ಬಂದು

ಉದ್ರೇಕ ಸರ್ರನೆ ಇಳಿದು ಹೋಗುತ್ತಿತ್ತು. ಹೀಗೆ ನಾನು ಮದುವೆಯಾದರೂ ಬ್ರಹ್ಮಚಾರಿಯಾಗೇ ಉಳಿದೆ. ಆಕೆ ಬೇರೆ ಕೊಠಡಿಯಲ್ಲಿ ಮಲಗುತ್ತಿದ್ದಳು.

ನನ್ನ ಅದೃಷ್ಟವೋ, ಲಕ್ಷ್ಮಿ ಸರಸ್ವತಿಯರ ಅದೃಷ್ಟವೋ, ಎರಡು ವರ್ಷಗಳಲ್ಲಿ ಅವರಿಬ್ಬರಿಗೂ ಯೋಗ್ಯ ಗಂಡುಗಳು ದೊರೆತು ಮದುವೆ ನಡೆದುಹೋಯಿತು. ನನ್ನ ಹೆಗಲ ಮೇಲಿದ್ದ ಅತಿ ದೊಡ್ಡ ಭಾರ ಇಳಿಯಿತು. ಅವರಿಬ್ಬರೂ ತಮ್ಮ ತಮ್ಮ ಗಂಡಂದಿರ ಮನೆಗೆ ಹೊರಟುಹೋದರು.

ಲಕ್ಷ್ಮಿ ಮನೆ ಬಿಟ್ಟು ಹೋದರೂ ನಾನು ಆಕೆಗೆ ಕೊಟ್ಟ ಮಾತನ್ನು ಅಕ್ಷರಷಃ ಪಾಲಿಸಿ ಈಗ ಎಲ್ಲರಂತೆ ದಾಂಪತ್ಯ ಜೀವನ ನಡೆಸಲು ಅವಕಾಶವಿದ್ದರೂ ಅವಳ ಮಾತಿನ ಭೂತ ನನ್ನನ್ನು ಬಿಡದೆ ಬೆನ್ನು ಹತ್ತಿತ್ತು. ಈ ಭೂತದ ಅಸ್ತಿತ್ವದ ಅರಿವು ನನಗಾಗಿದ್ದು ಸರಸ್ವತಿ ಮದುವೆಯಾಗಿ ಹೋದ ಮೇಲೆಯೇ.

ಸರಸ್ವತಿಯ ಮದುವೆಯ ಗದ್ದಲವೆಲ್ಲ ಮುಗಿದು ಮನೆಯಲ್ಲಿ ನಾವಿಬ್ಬರೇ ಉಳಿದೆವು. ಆ ದಿನ ನಾನು ಆಫೀಸ್ ಕೆಲಸ ಮುಗಿಸಿ ಮನೆಗೆ ಬಂದೆ. ಸಂಜೆ ತಿರುಗಾಡಿ ಬಂದು ಹಾಲ್‌ನಲ್ಲಿ ರೇಡಿಯೋ ಕೇಳುತ್ತಾ ಕುಳಿತೆ. ಪ್ರಭಾ ರೂಮಿನಲ್ಲಿ ಸೇರಿಕೊಂಡು ಏನೋ ಮಾಡುತ್ತಿದ್ದಳು. ರಾತ್ರಿ ಊಟ ಮಾಡಲು ಕುಳಿತೆ. ಹಬ್ಬದ ಅಡುಗೆ ಮಾಡಿದ್ದಳು. ಏನು ವಿಶೇಷ ಎಂದೆ. 'ನಿಮಗೆ ಜ್ಞಾಪಕವಿದೆಯೇ, ಈ ದಿನಕ್ಕೆ ಸರಿಯಾಗಿ ಮೂರು ವರ್ಷಗಳ ಹಿಂದೆ ನನ್ನನ್ನು ಭಾವಿ ಕಟ್ಟೆಯ ಬಳಿ ಭೇಟಿ ಮಾಡಿದ್ದಿರಿ. ನಮ್ಮ ಪರಿಚಯವಾದ ವಾರ್ಷಿಕೋತ್ಸವ ಈ ಹೊತ್ತು' ಎಂದಳು. ಆ ದಿನದ ಅನುಭವವನ್ನು ಹೇಳಿಕೊಂಡು ಸಂಭ್ರಮ ಪಟ್ಟೆವು

ಮಲಗುವ ರೂಮಿಗೆ ಬಂದಾಗ ಅಲ್ಲಿನ ವಾತಾವರ್ಣ ನನ್ನನ್ನು ಆನಂದ ಆಶ್ಚರ್ಯಗಳಿಗೆ ದೂಡಿತು. ದಂಪತಿಗಳ ಪ್ರಥಮ ರಾತ್ರಿಯ ಕೋಣೆಯಂತೆ ಸಜ್ಜುಗೊಂಡಿತ್ತು. ಅದರ ಅರ್ಥವಾಗಿ ನಾನು ಪ್ರಭಾಳತ್ತ ನೊಡಿದೆ. ಆಕೆ ನನ್ನ ಎದೆಯಲ್ಲಿ ಮುಖ ಮುಚ್ಚಿಕೊಂಡಳು, 'ಬೇರೆ ಗಂಡ ಹೆಂಡತಿಯರಿಗೆ ಮದುವೆಯಾದ ಕೂಡಲೇ ಪ್ರಥಮ ರಾತ್ರಿಯ ಅನುಭವ ಸಿಗುತ್ತದೆ ನಮಗೆ ಇಷ್ಟು ದಿನಗಳಾದ ನಂತರ ಬಂದಿದೆ. ಹೀಗೆ ಮಾಡಿದ್ದಕ್ಕೆ ನನ್ನ ಮೇಲೆ ಕೋಪವೇ' ಎಂದು ಅವಳ ಮುಖವನ್ನೆತ್ತಿ, ಕಣ್ಣಲ್ಲಿ ಕಣ್ಣಿಟ್ಟು ಕೇಳಿದೆ. ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಕಣ್ಣೀರು ಕೆನ್ನೆಗಳ ಮೇಲುರುಳಿತು. 'ಕೋಪವಿಲ್ಲ ರವಿ. ನಿಮ್ಮ ಬಗ್ಗೆ ನನಗೆ ಇನ್ನಿಲ್ಲದ ಅಭಿಮಾನವಿದೆ. ಸಾಮಾನ್ಯವಾಗಿ ಗಂಡಸರು ಕಾಮಾತುರರು. ಅವರಿಗೆ ಲೈಂಗಿಕ ಬಯಕೆಯನ್ನು ತಡೆ ಹಿಡಿಯಲು ಕಷ್ಟ ಎಂದೇ ಕೇಳಿದ್ದೇನೆ. ಆದರೆ ನೀವು ನಿಮ್ಮ ಅಕ್ಕನಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿರಿ. ಒಂದು ಕ್ಷಣವಾದರೂ ಬಯಕೆ ಸೋಲಲಿಲ್ಲ. ಆಕೆಗೆ ಗೊತ್ತಾಗದಂತೆ ನನ್ನನ್ನು ಸೇರಲು ಅವಕಾಶವಿದ್ದರೂ ನೀವು ಹಾಗೆ ಮಾಡಲಿಲ್ಲ.

ನಮ್ಮ ಆತ್ಮವಿಶ್ವಾಸ ಮತ್ತು ಮನಸ್ಸಿನ ಸಾಮರ್ಥ್ಯ ನನ್ನನ್ನು ಗೆದ್ದಿದೆ' ಎಂದಳು. ಪ್ರಭಾ, ನನ್ನ ಮನಸ್ಸಿನ ಈ ಶಕ್ತಿಯನ್ನು ತಂದುಕೊಟ್ಟಿದ್ದು ಲಕ್ಷ್ಮಿಯ ಆ ಮಾತುಗಳು. ಅಂದು ಅವಳು ನನ್ನನ್ನು ಮೂದಲಿಸಿ ಆಡಿದ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಗುನುಗುಟ್ಟುತ್ತಿವೆ' ಎಂದೆ. 'ಹೋಗಲಿಬಿಡಿ ಈಗ ಎಲ್ಲ ಸರಿಹೋಯಿತಲ್ಲ. ನಮ್ಮ ಸುಖ ಸಂತೋಷಕ್ಕೆ ಇನ್ಯಾವ ಅಡ್ಡಿ ಇಲ್ಲ' ಎಂದು ನನ್ನನ್ನು ಆಲಂಗಿಸಿಕೊಂಡಳು. ಅವಳನ್ನು ಅಪ್ಪಿ ಮುದ್ದಿಸಿದೆ. ನಮ್ಮ ದೇಹಗಳು ಬಿಸಿ ಏರಿತು. ಇಬ್ಬರೂ ಉದ್ರೇಕಗೊಂಡೆವು. ಹಾಸಿಗೆಯ ಮೇಲೆ ಮಲಗಿ ಲೈಂಗಿಕ ಕ್ರಿಯೆಗೆ ಸಜ್ಜಾಗುತ್ತಿದ್ದಂತೆ ಲಕ್ಷ್ಮಿಯ ಮಾತುಗಳು ಕಿವಿಯೊಳಗೆ ಮತ್ತೆ ತೇಲಿ ಬಂದುವು. 'ಈ ಸುಖಕ್ಕೇ ನೀನು ಮದುವೆಯಾದದ್ದು. ನಮ್ಮ ಹಿತವನ್ನು ಕಡೆಗಣಿಸಿ ಬೇಜವಾಬ್ದಾರಿಯಿಂದ ನಡೆದುಕೊಂಡದ್ದು' ತಕ್ಷಣವೇ ನನ್ನ ಉದ್ರೇಕವೆಲ್ಲ ಇಳಿದುಹೋಯಿತು. ನನಗೆ ಸಿಡಿಲು ಬಡಿದಂತಾಯಿತು. ಆಕಾಶದಿಂದ ಧೊಪ್ಪನೆ ಕೆಳಗೆ ಬಿದ್ದಂತಾಯಿತು. ಕಣ್ಣಿಗೆ ಕತ್ತಲಾವರಿಸಿತು ಸಾವರಿಸಿಕೊಂಡೆ. ಆಮೇಲೆ ಏನೇ ಪ್ರಯತ್ನಪಟ್ಟರೂ ಮತ್ತೆ ಉದ್ರೇಕವಾಗಲಿಲ್ಲ. ದುಃಖ ಒತ್ತರಿಸಿ ಬಂತು. ಪ್ರಭಾಳ ಎದೆಯಲ್ಲಿ ಮುಖವಿಟ್ಟು ಕಣ್ಣೀರು ಹಾಕಿದೆ. ಪ್ರಭಾ ನಾನು ಷಂಡನಾಗಿಬಿಟ್ಟೆ ಎಂದು ಬಿಕ್ಕಳಿಸಿದೆ. ಆಕೆ ನನ್ನನ್ನು ಸಮಾಧಾನ ಮಾಡುತ್ತಾ ರವಿ ಏಕೆ ದಿಕ್ಕೆಡುತ್ತೀರಿ ? ಬಹಳ ದಿವಸ ಸಂಯಮದಿಂದ ಇದ್ದುದಕ್ಕೆ ಹೀಗಾಗಿರಬೇಕು. ನಾಳೆ ನಾಡಿದ್ದು ಸರಿಹೋಗಬಹುದು ಎಂದಳು. ಅವಮಾನ ನಾಚಿಕೆ ನಿರಾಸೆಗಳಿಂದ ನಾನು ಕುಗ್ಗಿಹೋದೆ.

ಅನಂತರ ಪ್ರತಿಸಾರಿ ನಾವು ಕೂಡಲು ಪ್ರಯತ್ನ ಪಟ್ಟಾಗಲೆಲ್ಲಾ ವಿಫಲತೆ ಕಟ್ಟಿಟ್ಟ ಬುತ್ತಿಯಾಯಿತು. ಪ್ರತಿ ವಿಫಲತೆ ನನ್ನನ್ನು ಮತ್ತೆ ಮೇಲೇರಲು ಆಗದಾರದ ಪ್ರಪಾತಕ್ಕೆ ನೂಕುತ್ತಾ ಹೋಯಿತು. ಲೈಂಗಿಕ ಆಸೆ ಬಯಕೆಗಳು ಗರಿಗೆದರಿದರೂ, ಪ್ರಭಾಳನ್ನ ನೋಡಿದಾಗ ನನ್ನ ಶರೀರ ಉದ್ರೇಕಗೊಂಡರೂ, ಆಕೆಯನ್ನು ಸ್ಪರ್ಶಿಸುತ್ತಿದ್ದಂತೆ ಉದ್ರೇಕ ಇಳಿದು ಹೋಗುತ್ತಿತ್ತು. ವೈದ್ಯರನ್ನು ಕಾಣಬೇಕೆಂದರೆ ಏನೋ ನಾಚಿಕೆ, ಭಯ. ಪ್ರತಿದಿನ ಅವಮಾನ ಅಸಹಾಯಕತೆ ಹಿಂಸೆಯ ನರಕ.

'ಪ್ರಭಾ ನನ್ನಿಂದಾಗಿ ನಿನಗ್ಯಾವ ಸುಖವಿಲ್ಲ. ಸುಮ್ಮನೆ ನೀನು ನನ್ನಿಂದ ಬೇರೆಯಾಗಿಬಿಡು. ಡೈವೋರ್ಸ್ ಮಾಡಿ ಬೇರೊಬ್ಬನನ್ನು ಮದುವೆಯಾಗಿ ಸುಖವಾಗಿರು' ಎಂದೆ.

ಅವಳು ತೀವ್ರವಾಗಿ ಪ್ರತಿಭಟಿಸಿದಳು. 'ರವೀ ಮತ್ತೆ ಈ ಮಾತಾಡಬೇಡ. ಸಂಭೋಗ ಮಾಡದಿದ್ದರೇನಂತೆ, ನನಗೂ ಅದು ಬೇಕೇ ಬೇಕು ಅನಿಸುವುದಿಲ್ಲ. ಉಳಿದೆಲ್ಲ ರೀತಿಯಿಂದ ನಾವು ಸಂತೋಷವಾಗಿದ್ದೇವಲ್ಲ. ನಮಗೇನು ಕಡಿಮೆಯಾಗಿದೆ' ಎಂದಳು.

'ನಿನಗೆ ಮಗು ಬೇಡವೆ'

ಕ್ಷಣಕಾಲ ಸುಮ್ಮನಿದ್ದಳು. 'ಬೇಡ ರವಿ, ಮಗುವಾಗದಿದ್ದರೆ ಬೇಡ ಹಾಗೂ ಬೇಕೆನಿಸಿದರೆ ಒಂದು ಅನಾಥ ಮಗುವನ್ನು ತಂದು ಸಾಕೋಣ' ಎಂದಳು ಅವಳು ನನಗಾಗಿ ಏನೆಲ್ಲಾ ತ್ಯಾಗವನ್ನು ಮಾಡಲು ಸಿದ್ಧಳಿರುವುದು ಸ್ಪಷ್ಟವಿತ್ತು. ಅದು ನನ್ನ ನೋವನ್ನು ಮತ್ತಷ್ಟು ಹೆಚ್ಚಿಸಿತು.

ಹೊರಗಡೆ ಬೇರೆಯವರ ದೃಷ್ಟಿಯಲ್ಲಿ ನಾವು ಹೇಳಿ ಮಾಡಿಸಿದ ಜೋಡಿ. ಆದರೆ ಒಳಗಡೆ ನಮ್ಮ ದಾಂಪತ್ಯದಲ್ಲಿ ಭರಿಸಲಾಗದ ಕೊರತೆ. ಅದಕ್ಕೆ ಕಾರಣ ನಾನೇ. ಲಕ್ಷ್ಮಿಯ ಮಾತುಗಳನ್ನು ಮರೆಯಬೇಕು. ಆದರೆ ಹೇಗೆ? ಒಂದೆರಡು ದಿನ ಆಲ್ಕೋಹಾಲ್ ಕುಡಿದೆ. ಹೊಟ್ಟೆಗೆ ಬೆಂಕಿ ಬಿದ್ದಂತಾಯಿತು. ಅಮಲು ಏರಿ ಬಡಬಡಿಸಿದೆ ನನ್ನ ಈ ಸ್ಥಿತಿಯನ್ನು ಕಂಡು ಪ್ರಭಾ ನಾನು ಮತ್ತೆ ಕುಡಿಯಬಾರದು ಎಂದು ಆಣೆ ಮಾಡಿಸಿಕೊಂಡಳು. 'ಬನ್ನಿ ಒಳ್ಳೆಯ ಮನೋವೈದ್ಯರನ್ನು ಕಂಡು ಸಲಹೆ ಪಡೆಯೋಣ' ಎಂದಳು. ಮೂರ್ಖನಂತೆ ನಾನು ಒಪ್ಪಲಿಲ್ಲ. ನನಗೇನು ಹುಚ್ಚು ಹಿಡಿದಿದೆಯೇ? ನನಗ್ಯಾಕೆ ಮನೋವೈದ್ಯರ ಗೊಡವೆ ಎಂದು ಸಿಡುಕಿದೆ. ಹೀಗೆ ವಿವೇಚನೆ ಮಾಡುವ ಶಕ್ತಿಯನ್ನು ಕಳೆದುಕೊಂಡೆ. ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆ. ನಾನು ಸತ್ತರೆ ಒಂದಷ್ಟು ದಿನ ಅತ್ತು ಅನಂತರ ಬೇರೊಂದು ಮದುವೆ ಮಾಡಿಕೊಳ್ಳಲು ಆಶಿಸುತ್ತಾಳೆ ಎಂದೆಣಿಸಿದೆ.

"ಮಿಸ್ಟರ್ ರವೀಂದ್ರ ಎಲ್ಲಿ ಕಣ್ಣುಬಿಡಿ. ಈಗ ಹೇಗನ್ನಿಸುತ್ತದೆ" ಯಾರದೋ ಧ್ವನಿ ಕೇಳಿ ಕಣ್ಣು ಬಿಟ್ಟೆ. ಎಲ್ಲವೂ ಹೊಸದು ನಾನೆಲ್ಲಿದ್ದೇನೆ ಎಂದುಕೊಂಡೆ. "ನೀವು ಆಸ್ಪತ್ರೆಯಲ್ಲಿದ್ದೀರಿ. ನಾನು ಡಾ॥ ಆನಂದ. ನಿಮ್ಮ ಅದೃಷ್ಟ ಚೆನ್ನಾಗಿತ್ತು. ನೀರಿಗೆ ಬಿದ್ದರೂ ಸಾಯದೆ ಬದುಕುಳಿದಿರಿ. ವಿದ್ಯಾವಂತರಾಗಿ ನೀವು ಹೀಗೆ ಮಾಡಬಹುದೇ" ಅವರಿಗೆ ನಾನೇನು ಉತ್ತರ ಹೇಳಲಿ.

"ನೋಡಿ ನಿಮ್ಮ ಹೆಂಡತಿ ಪ್ರಭಾ, ಅವರು ನಿಮ್ಮನ್ನು ಉಳಿಸಿಕೊಳ್ಳಲು ಪಟ್ಟ ಕಷ್ಟ ನಮ್ಮೆಲ್ಲರಿಗೆ ಒಂದು ಮಾದರಿ. ಇವರು ನಿಮ್ಮ ಎಲ್ಲ ಸಮಸ್ಯೆಗಳನ್ನು ಹೇಳಿದ್ದಾರೆ. ನಿಮ್ಮ ಎಲ್ಲ ಲೈಂಗಿಕ ಸಮಸ್ಯೆ ಮನೋಜನ್ಯವಾಗಿದ್ದು, ಸೂಕ್ತ ಚಿಕಿತ್ಸೆಯಿಂದ ಗುಣವಾಗುವಂಥದ್ದು. ಮನೋವೈದ್ಯರಿಗೆ ಹೇಳಿದ್ದೇನೆ. ನೀವು ಚೇತರಿಸಿಕೊಂಡ ನಂತರ ಇವರು ನಿಮಗೆ ನೆರವಾಗುತ್ತಾರೆ ಧೈರ್ಯವಾಗಿರಿ."

ಪಕ್ಕಕ್ಕೆ ತಿರುಗಿ ನೋಡಿದೆ. ಪ್ರಭಾಳನ್ನು ಕಂಡೆ ಆಕೆ ಮೃದುವಾಗಿ ನನ್ನ ಕೈಗಳನ್ನು ಒತ್ತಿದಳು. ನನ್ನನ್ನು ಕ್ಷಮಿಸು ಪ್ರಭಾ. ಇನ್ನೆಂದಿಗೂ ಹೀಗೆ ಮಾಡುವುದಿಲ್ಲ. ಕಷ್ಟವನ್ನು ಎದುರಿಸುತ್ತೇನೆ. ನಾನು 'ಬದುಕುತ್ತೇನೆ' ಎಂದೆ.

ಅವಳು ಮುಗುಳ್ನಕ್ಕಳು.

ಭಾಗ - ೨

ಲೈಂಗಿಕಕ್ರಿಯೆ ಮತ್ತು ಮಾನಸಿಕ ಆರೋಗ್ಯ

ಲೈಂಗಿಕ ಆಸೆ ಮತ್ತು ಕ್ರಿಯೆ ನಮ್ಮ ಹುಟ್ಟಾಸೆಗಳಲ್ಲಿ ಒಂದು. ಹಸಿವು ಬಾಯಾ ಕೆ, ನಿದ್ರಗಳಂತೆ ಜೀವನಾವಶ್ಯಕ ಅಗತ್ಯ. ನಮ್ಮ ಸಂತಾನ ಮುಂದು ರೆಯಲು ಇದು ಬಹು ಮುಖ್ಯ. ಪ್ರತಿಯೊಂದು ಜೀವಿಯೂ ತಾನು ಉಳಿಯಲು, ನ್ನ ಸಂತತಿಯನ್ನು ಬೆಳೆಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತದೆ. ಇದು ಪ್ರಕೃತಿ ಯಮ.ಹೀಗೆ ಸಂತಾನೋತ್ಪತ್ತಿಯೇ ಲೈಂಗಿಕ ಕ್ರಿಯೆಯ ಮೂಲೋದ್ದೇಶ.

ಮನುಷ್ಯನಲ್ಲಿ ಸಂತಾನೋತ್ಪತ್ತಿಯ ಜೊತೆಗೆ ಗಂಡು ಹೆಣ್ಣಿನ ನಡುವೆ ಂಧವ್ಯ ಹಾಗೂ ಸುಖಾನುಭವವೂ ಈ ಕ್ರಿಯೆಯಿಂದ ಸಿದ್ಧಿಸುವುದು ಗಮನಾರ್ಹ. ನ ಸಂಖ್ಯಾ ಸ್ಫೋಟದ ಹಿನ್ನೆಲೆಯಲ್ಲಿ, ಆರ್ಥಿಕ ಮತ್ತಿತರ ಕಾರಣಗಳಿಂದ ಸಂತಾನ ಯಂತ್ರಣ ಮಾಡಿ, ಒಂದೋ ಎರಡೋ ಮಕ್ಕಳು ಸಾಕು ಎಂದು ಸಂತಾನೋತ್ಪತ್ತಿಗೆ ಡೆಹಾಕುವ ಈ ಕಾಲದಲ್ಲಿ ಆನಂತರದ ಲೈಂಗಿಕ ಕ್ರಿಯೆ ಮನರಂಜನೆಯ ಸಾಧನವಾಗಿ ಳಿಯುತ್ತದೆ. ನಮ್ಮ ಸಂಸ್ಕೃತಿಯ ಒಂದು ವ್ಯಾಖ್ಯಾನದಂತೆ ಲೈಂಗಿಕಕ್ರಿಯೆ ಯನ್ನು ಕೇವಲ ಸಂತಾನೋತ್ಪತ್ತಿಗಾಗಿ ನಡೆಸಬೇಕು ಎಂಬ ಒಂದು ನಂಬಿಕೆ ಇದೆ. ದನ್ನು ಪಾಲಿಸುವ ಜನ, ಸಂತಾನಕ್ಕೆ ತಡೆ ಮಾಡಿಕೊಂಡ ಮೇಲೆ, ಲೈಂಗಿಕಕ್ರಿಯೆ ಡೆಸುವುದು ದೈಹಿಕ ಕಾಮನೆಗಳಿಗೆ ಶರಣಾದಂತೆ ಎಂಬ ಭಾವನೆಯನ್ನು ಬೆಳೆಸಿ ಕೊಂಡು ಬಳಲುತ್ತಾರೆ. ಇದಲ್ಲದೆ ಯಾವುದೇ ಹಂತದ ವಯಸ್ಸಿನಲ್ಲಿ ಲೈಂಗಿಕ ಯಕೆಗೆ ಪ್ರಾಶಸ್ತ್ಯ ಕೊಡುವುದು, ಮನೋದೌರ್ಬಲ್ಯದ ಸಂಕೇತವೆಂದೂ, ಲೈಂಗಿಕ ಸೆಗಳನ್ನು ಸಂಪೂರ್ಣವಾಗಿ ಹತ್ತಿಕ್ಕುವುದು ಶಕ್ತಿ–ಸಾಧನೆಯ ಲಕ್ಷಣವೆಂದೂ ಪರಿ ಣಿಸಿ, ಜೀವಮಾನವಿಡೀ ಲೈಂಗಿಕ ಬಯಕೆಗೆ ಕಡಿವಾಣ ಹಾಕಲು ಪ್ರಯತ್ನಪಡುತ್ತಾ ೋಲುತ್ತಾ, ತಮ್ಮನ್ನು ತಾವೇ ಹಳಿದುಕೊಳ್ಳುತ್ತಾ ಬದುಕುತ್ತಾರೆ. ಲೈಂಗಿಕತೆಯ ೂರೂ ಉದ್ದೇಶಗಳಿಗೆ ಸಮಾನ ಗಮನ ಕೊಡುವುದು ಅತ್ಯವಶ್ಯಕ.

ಬಂಧ

ಲೈಂಗಿಕ ಆಸೆ, ಕ್ರಿಯೆಗೂ, ಮಾನಸಿಕ ಆರೋಗ್ಯಕ್ಕೂ ಎಡೆಬಿಡದ ನಂಟು,

ಪೂರ್ಣ ಮಾನಸಿಕ ಆರೋಗ್ಯದಿಂದ ತೃಪ್ತಿಕರ ಲೈಂಗಿಕಕ್ರಿಯೆ ಸಾಧ್ಯವಾಗುತ್ತದೆ ; ಹಾಗೆಯೇ ತೃಪ್ತಿಕರ ಲೈಂಗಿಕ ಕ್ರಿಯೆಯಿಂದ ಮಾನಸಿಕ ಆರೋಗ್ಯ ವೃದ್ಧಿಸುತ್ತದೆ. ಈ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

ಲೈಂಗಿಕ ಆಸೆ ಮೂಡುವುದೂ, ಲೈಂಗಿಕಕ್ರಿಯೆಗೆ ನಮ್ಮ ದೇಹ ಸಜ್ಜಾಗುವುದೂ ನಮಗೆ ಹದಿವಯಸ್ಸು ಕಾಲಿಟ್ಟಾಗ. ಹುಡುಗಿಯರಲ್ಲಿ ಹತ್ತರಿಂದ ಹದಿನಾಲ್ಕು ವರ್ಷ ವಯಸ್ಸಿನ ಅವಧಿಯಲ್ಲಿ ಹಾಗೂ ಹುಡುಗರಲ್ಲಿ ಹದಿಮೂರರಿಂದ ಹದಿನಾರು ವರ್ಷ ವಯಸ್ಸಿನಲ್ಲಿ ಲೈಂಗಿಕ ಲಕ್ಷಣಗಳು ಮತ್ತು ಆಸಕ್ತಿ ಕಾಣಿಸಿಕೊಳ್ಳುತ್ತವೆ. ಈ ಅವಧಿಯಲ್ಲಿ ಲೈಂಗಿಕ ಹಾರ್ಮೋನುಗಳಾದ ಗಂಡುಜನಕ, ಬೆದೆಜನಕ ಮತ್ತು ಬಸಿರಣಿಕಗಳು ಸ್ರವಿಸಲ್ಪಟ್ಟು ಪುರುಷ ಲಕ್ಷಣ, ಸ್ತ್ರೀಲಕ್ಷಣಗಳು ಮತ್ತು ಲೈಂಗಿಕ ಆಸಕ್ತಿ ಮೂಡಲು ಕಾರಣವಾಗುತ್ತವೆ. ಹುಡುಗನಲ್ಲಿ ಶಾರೀರಕ ಬೆಳವಣಿಗೆ, ಧ್ವನಿ ಒಡೆಯುವುದು, ಮುಖದ ಮೇಲೆ ಗಡ್ಡ ಮೀಸೆ, ಕಂಕುಳು ಮತ್ತು ಜನನಾಂಗದ ಸುತ್ತ ಕೂದಲುಗಳು, ಜನನಾಂಗ ದೊಡ್ಡದಾಗುವುದು, ನಿಮಿರುವುದು, ವೀರ್ಯೋತ್ಪತ್ತಿ ಪ್ರಾರಂಭವಾಗಿ ಅವಧಿಗೊಂದಾವರ್ತಿ ವೀರ್ಯಸ್ಖಲನವಾಗುವುದು ಪುರುಷ ಲೈಂಗಿಕ ಲಕ್ಷಣಗಳಾದರೆ ; ಹುಡುಗಿಯಲ್ಲಿ ಶಾರೀರಕ ಬೆಳವಣಿಗೆ, ಕೊಬ್ಬು ನಿರ್ದಿಷ್ಟ ದೇಹದ ಭಾಗಗಳಲ್ಲಿ ಶೇಖರವಾಗಿ, ದೇಹದ ಉಬ್ಬು ತಗ್ಗುಗಳಿಗೆ ಕಾರಣವಾಗುವುದು, ಸ್ತನಗಳ ಬೆಳವಣಿಗೆ, ಕಂಕುಳು ಮತ್ತು ಜನನಾಂಗದ ಮೇಲೆ ಕೂದಲುಗಳು, ಋತುಸ್ರಾವ ಸ್ತ್ರೀ ಲೈಂಗಿಕ ಲಕ್ಷಣಗಳು. ಜೊತೆಗೆ ಇಬ್ಬರಲ್ಲೂ ಪರಸ್ಪರ ಆಕರ್ಷಣೆ, ಕುತೂಹಲ, ಲೈಂಗಿಕಾಸಕ್ತಿ ಮೂಡುತ್ತದೆ. ಇಷ್ಟಾದಾಗ ಅವರು ಸಂತಾನೋತ್ಪತ್ತಿಗೆ ಸಜ್ಜುಗೊಂಡಿದ್ದಾರೆ ಎಂದು ಅರ್ಥ. ಕೆಲವು ಬುಡಕಟ್ಟು ಜನರನ್ನು ಬಿಟ್ಟರೆ ಹುಡುಗ–ಹುಡುಗಿ ಈ ರೀತಿ ಲೈಂಗಿಕ ಕ್ರಿಯೆಗೆ ಸಜ್ಜಾಗುವುದಕ್ಕೂ, ಮದುವೆಯಂತಹ ಸಾಮಾಜಿಕ ಒಪ್ಪಂದ ನಡೆದು ಲೈಂಗಿಕಕ್ರಿಯೆ ನಡೆಸುವುದಕ್ಕೂ ಮಧ್ಯೆ ಹಲವು ವರ್ಷಗಳ ಕಾಲಾವಧಿ ಇರುತ್ತದೆ. ನಮ್ಮ ದೇಶದಲ್ಲಿ ಕಾನೂನಿನ ಪ್ರಕಾರ ಹುಡುಗನಿಗೆ 21 ವರ್ಷ ವಯಸ್ಸಾದ ಮೇಲೆ, ಹುಡುಗಿಗೆ 18 ವರ್ಷ ವಯಸ್ಸಾದ ಮೇಲೆ ಮಾತ್ರ ಮದುವೆಯಾಗಲು ಅನುಮತಿ ಇದೆ. ಜೊತೆಗೆ ಪ್ರತಿಯೊಂದು ಸಮಾಜದಲ್ಲೂ ಪ್ರತಿಯೊಂದು ಧರ್ಮದಲ್ಲೂ ಲೈಂಗಿಕ ಆಸೆಯ ಪ್ರಕಟಣೆ ಮತ್ತು ಚಟುವಟಿಕೆಗೆ ನಿರ್ದಿಷ್ಟ ನೀತಿ–ನಿಯಮಗಳಿರುತ್ತವೆ. ಲೈಂಗಿಕ ಸ್ವೇಚ್ಛಾಚಾರಕ್ಕೆ ಸಾಮಾಜಿಕ ಸಮ್ಮತಿ ಸಿಗುವುದಿಲ್ಲ ; ಶಿಕ್ಷೆ ಕಾದಿರುತ್ತದೆ. ಆ ಸಮಾಜದ ಗಂಡುಹೆಣ್ಣುಗಳು ಈ ನಿಯಮ–ನೀತಿಗಳ ಚೌಕಟ್ಟಿನೊಳಗೇ ತಮ್ಮ ಲೈಂಗಿಕ ಆಸೆ, ಚಟುವಟಿಕೆಗಳನ್ನು ನಿಯಂತ್ರಿಸಿ, ನಡೆಸಿ ಸಂತೋಷಪಡುವುದನ್ನು ಕಲಿಯ ಬೇಕಾಗುತ್ತದೆ.

ಸ್ತಮೈಥುನ, ವೀರ್ಯಸ್ಖಲನ

ಹದಿವಯಸ್ಸಿನಲ್ಲಿ ಲೈಂಗಿಕ ಲಕ್ಷಣಗಳು ಮೂಡುತ್ತಿದ್ದಂತೆ, ಲೈಂಗಿಕ ಆಸಕ್ತಿ, ರ್ಷಣೆ ಕಾಣಿಸಿಕೊಳ್ಳುತ್ತಿದ್ದಂತೆ ಜನನಾಂಗ ವ್ಯಕ್ತಿಯ ಗಮನ ಸೆಳೆಯುತ್ತದೆ. ಡುಗನಲ್ಲಿ ಶಿಶ್ನ ದೊಡ್ಡದಾಗಿ ನಿಮಿರುವುದು ಹೊಸ ಅನುಭವವನ್ನು ತರುತ್ತದೆ. ಕೃತಿಯು ಜನನಾಂಗದ ಹಾಗೂ ಸುತ್ತಮುತ್ತಲಿನ ಚರ್ಮದಲ್ಲಿ ಹೆಚ್ಚಿನ ಪ್ರಮಾಣದ ತಂತುಗಳನ್ನು ಅಳವಡಿಸಿದ್ದು, ಈ ಭಾಗವನ್ನು ಸ್ಪರ್ಶಿಸಿದಾಗ, ತೀಡಿದಾಗ, ಸುಕಿದಾಗ ಹಿತವಾಗಿರುತ್ತದೆ. ಲೈಂಗಿಕ ಪ್ರಚೋದನೆ ಸಿಗುತ್ತದೆ. ಹೀಗಾಗಿ ಕ್ತಿ ತನ್ನ ಜನನಾಂಗವನ್ನು ಸ್ಪರ್ಶಿಸುವುದು, ವಿವಿಧ ರೀತಿಯಲ್ಲಿ ಪ್ರಚೋದಿಸುವು ನ್ನು, ಆ ಮೂಲಕ ಸುಖಿಸುವುದನ್ನು ಪ್ರಾರಂಭಿಸುತ್ತಾನೆ. ಇದನ್ನೇ ಹಸ್ತ ಥುನ, ಮುಷ್ಟಿಮೈಥುನ ಎಂದು ಕರೆಯಲಾಗುತ್ತದೆ. ಹಸ್ತಮೈಥುನ ಹುಡುಗಿ ರಲ್ಲೂ ಕಂಡುಬಂದರೂ, ಹುಡುಗರಲ್ಲಿ ಸಾಮಾನ್ಯ. ಪ್ರಪಂಚದಾದ್ಯಂತ ಹದಿ ಯಸ್ಸಿನಲ್ಲಿ ಹಸ್ತಮೈಥುನ ಮಾಡಿಕೊಳ್ಳುವುದು ಕಂಡುಬರುವುದರಿಂದ, ಮನೋ ಜ್ಞಾನಿಗಳ ಪ್ರಕಾರ ಇದು ಸಹಜವಾದ ಸ್ವಾಭಾವಿಕ ಕ್ರಿಯೆ ಎಂದು ಪರಿಗಣಿಸ ಗಿದೆ. ಲೈಂಗಿಕ ಬೆಳವಣಿಗೆಯಲ್ಲಿ ಇದು ಒಂದು ಸಹಜ ಹಂತ ಎನ್ನಲಾಗುತ್ತದೆ. ದರೆ ಹುಡುಗ ಅಥವಾ ಹುಡುಗಿ ಹಸ್ತಮೈಥುನ ಮಾಡಿಕೊಳ್ಳಲಾರಂಭಿಸಿದರೆ, ವರಲ್ಲಿ ಲೈಂಗಿಕ ಆಸಕ್ತಿ ಮೊಳೆತು. ಲೈಂಗಿಕ ಕ್ರಿಯೆಗೆ ಪೂರ್ವ ಸಿದ್ಧತೆ ಮಾಡಿ ಳ್ಳುತ್ತಿದ್ದಾರೆ ಎಂದು ಅರ್ಥ. ಲೈಂಗಿಕ ಕ್ರಿಯೆ ನಡೆಸಲು ಸಂಗಾತಿ ದೊರೆಯುವ ರೆಗೆ, ಹಸ್ತಮೈಥುನ ಮಾಡಿಕೊಳ್ಳುವುದು ಮುಂದುವರೆಯುತ್ತದೆ. ಮದುವೆ ಗಿ ಲೈಂಗಿಕ ಸಂಗಾತಿ ದೊರೆತಮೇಲೂ, ಕಾರಣಾಂತರದಿಂದ ಲೈಂಗಿಕಕ್ರಿಯೆಗೆ ಗಾತಿ ದೊರೆಯದಿದ್ದಾಗ, ತಾತ್ಕಾಲಿಕವಾಗಿ ಹಸ್ತಮೈಥುನ ಮಾಡಿಕೊಂಡು ಕ್ತಿ ಲೈಂಗಿಕ ತೃಪ್ತಿ ಪಡುವುದನ್ನು ಜಗತ್ತಿನಾದ್ಯಂತ ಕಾಣುತ್ತೇವೆ. ಈ ಎಲ್ಲ ಅಂಶ ಂದ ಹಸ್ತಮೈಥುನ ಒಂದು ಸಹಜ, ಅವಶ್ಯಕ ಕ್ರಿಯೆ ಎಂದು ತಿಳಿದು ಬರುತ್ತದೆ. ಸ್ವಪ್ರಚೋದನೆಯನ್ನು ಪ್ರತಿದಿನವೂ ಮಾಡಿಕೊಳ್ಳುವವರುಂಟು. ಹಲವು ದಿನ ಗೊಮ್ಮೆ ಮಾಡಿಕೊಳ್ಳುವವರೂ ಉಂಟು. ಇದು ವ್ಯಕ್ತಿಯ ಮನೋಭಾವಕ್ಕೆ ಟ್ಟಿದ್ದು. ಹೆಚ್ಚಿನ ಜನರು ವಾರಕ್ಕೆ ಎರಡು ಸಲ ಮಾಡಿಕೊಳ್ಳುತ್ತಾರೆ ಎಂದ ಧ್ಯಯನಗಳು ತಿಳಿಸುತ್ತವೆ.

ತ್ಪು ತಿಳುವಳಿಕೆ

ನಮ್ಮ ಸಮಾಜದಲ್ಲಿ ಇಂದಿಗೂ ಹಸ್ತಮೈಥುನ 'ಮಾಡಬಾರದ ಕ್ರಿಯೆ. ದರಿಂದ ಹಾನಿಯುಂಟಾಗುತ್ತದೆ. ಹಸ್ತಮೈಥುನ ಒಂದು 'ಕೆಟ್ಟ ಚಟ.' ಅದಕ್ಕೆ

ಬಿದ್ದರೆ ಆರೋಗ್ಯ ಹಾಳಾಗುತ್ತದೆ. ದೌರ್ಬಲ್ಯ ಬರುತ್ತದೆ. ಲೈಂಗಿಕ ಸಾಮರ್ಥ್ಯ ಕಡಿಮೆಯಾಗುತ್ತದೆ. ಶೀಘ್ರ ವೀರ್ಯ ಸ್ಖಲನ, ಶಿಶ್ನ ನಿಮಿರದಿರುವುದು-ಇತ್ಯಾದಿ ಲೈಂಗಿಕ ದುರ್ಬಲತೆ ಕಾಣಿಸಿಕೊಂಡು ಕೊನೆಗೆ ವ್ಯಕ್ತಿ ಷಂಡನಾಗಿ ಬಿಡುತ್ತಾನೆ" ಎಂಬ ತಪ್ಪುನಂಬಿಕೆ ಎಲ್ಲೆಡೆ ಪ್ರಚಲಿತವಿದೆ. ಈ ನಂಬಿಕೆ ಎಷ್ಟು ತೀವ್ರವಾಗಿದೆ ಎಂದರೆ, ಹಳ್ಳಿ-ಪಟ್ಟಣಗಳಲ್ಲಿ, ಬಡವ-ಶ್ರೀಮಂತರಲ್ಲಿ ವಿದ್ಯಾವಂತ-ಅವಿದ್ಯಾವಂತರಲ್ಲಿ, ಸ್ತ್ರೀ ಪುರುಷರಲ್ಲಿ, ಎಲ್ಲ ವಯಸ್ಸಿನವರಲ್ಲಿ ಇದು ಮನೆ ಮಾಡಿದೆ. ಹದಿವಯಸ್ಸಿಗೆ ಕಾಲಿಟ್ಟ ವ್ಯಕ್ತಿ, ಪ್ರಕೃತಿ ಸಹಜವಾಗಿ, ಲೈಂಗಿಕ ಬೆಳವಣಿಗೆಯ ಸ್ವಾಭಾವಿಕ ಹಂತ ವಾಗಿ, ಹಸ್ತಮೈಥುನ ಮಾಡಿಕೊಂಡಾಗ 'ನಾನು ಮಾಡಬಾರದ್ದನ್ನು ಮಾಡು ತ್ತಿದ್ದೇನೆ. ಈ ಕೆಟ್ಟ ಕೆಲಸವನ್ನು ಮಾಡದೆ, ಆಸೆಯನ್ನು ಹತೋಟಿಯಲ್ಲಿಡಲಾಗದ ನಾನು ಎಂತಹ ದುರ್ಬಲ ವ್ಯಕ್ತಿ. ನಾನೇ ನನ್ನ ಕೈಯಾರ ಅನಾರೋಗ್ಯವನ್ನು, ಲೈಂಗಿಕ ದುರ್ಬಲತೆಯನ್ನು ಆಹ್ವಾನಿಸುತ್ತಿದ್ದೇನೆ' ಎನ್ನುವ ಆಲೋಚನೆಗಳಿಂದ ಭಯಪೀಡಿತ ನಾಗುತ್ತಾನೆ. ತಪ್ಪಿತಸ್ಥ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾನೆ. ಹಸ್ತಮೈಥುನ ಮಾಡಿ ಕೊಳ್ಳದಿರಲು ವಿಫಲ ಪ್ರಯತ್ನ ಮಾಡುತ್ತಾನೆ. ಪ್ರತಿ ಸಾರಿ ಮಾಡಿಕೊಂಡಾಗಲೂ ಭಯ, ಅಸಹಾಯಕತೆಗಳಿಂದ ಕುಗ್ಗಿ ಹೋಗುತ್ತಾನೆ. ಮನೋಕ್ಲೇಶಕ್ಕೆ ತುತ್ತಾಗು ತ್ತಾನೆ. ತನ್ನಲ್ಲಿ ಭರವಸೆ ಕಳೆದುಕೊಳ್ಳುತ್ತಾನೆ. ಹಸ್ತಮೈಥುನ ತಪ್ಪು ಎನ್ನುವ ತಪ್ಪು ನಂಬಿಕೆಯಿಂದುಂಟಾದ ಈ ಭಯ, ಮಾನಸಿಕ ಕ್ಲೇಶದಿಂದ ನರಮಂಡಲದ ಮೇಲೆ ಪರಿಣಾಮವಾಗಿ ಕೆಲವು ಶಾರೀರಕ ಹಾಗೂ ಮಾನಸಿಕ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಸುಸ್ತು, ಆಯಾಸ, ಗಾಬರಿ, ಏಕಾಗ್ರಚಿತ್ತತೆ ಇಲ್ಲದಿರುವುದು, ಮರೆವು, ಶೀಘ್ರ ವೀರ್ಯಸ್ಖಲನ, ಲೈಂಗಿಕ ಕ್ರಿಯೆಯಲ್ಲಿ ನಿರಾಸಕ್ತಿ, ಶಿಶ್ನ ಸರಿಯಾಗಿ ನಿಮಿರದಿರುವುದು ಇತ್ಯಾದಿ ತೊಂದರೆಗಳು ಕಾಣಿಸಿಕೊಂಡಾಗ, ಇವೆಲ್ಲ ಹಸ್ತಮೈಥುನ ದಿಂದಾಗಿಯೇ ಬಂದವು ಎಂದು ತಪ್ಪಾಗಿ ತಿಳಿಯುತ್ತಾನೆ. ಪಶ್ಚಾತ್ತಾಪ ಪಡತೊಡಗು ತ್ತಾನೆ. ತಾನು ನೈತಿಕವಾಗಿ ಹೀನ ಸ್ಥಿತಿಗೆ ಇಳಿದೆನೆಂದು ದುಃಖಿಸುತ್ತಾನೆ. 'ಹಸ್ತ ಮೈಥುನ ನಿಲ್ಲಿಸಲು ನಮ್ಮ ಮದ್ದು ಸೇವಿಸಿ. ಕಳೆದುಹೋದ ಲೈಂಗಿಕ ಸಾಮರ್ಥ್ಯ ಪಡೆಯಲು ನಮ್ಮಲ್ಲಿಗೆ ಬನ್ನಿ' ಎಂದು ಜಾಹೀರಾತು ಕೊಡುವ ಢೋಂಗಿ ವೈದ್ಯರ ಬಲೆಗೆ ಬೀಳುತ್ತಾನೆ. ಹಣ ಮತ್ತು ಆರೋಗ್ಯವನ್ನು ಕಳೆದುಕೊಳ್ಳುತ್ತಾನೆ. 'ಡಾಕ್ಟರೇ ಏನಾದರೂ ಮಾಡಿ ನನ್ನನ್ನು ಕಾಪಾಡಿ, ಹಸ್ತಮೈಥುನ ಕೆಟ್ಟ ಚಟದಿಂದ ನನ್ನನ್ನು ಪಾರುಮಾಡಿ. ಇಲ್ಲದಿದ್ದರೆ ನಾನು ಬದುಕಿ ಉಳಿಯುವುದಿಲ್ಲ' ಎನ್ನುವ ವರಿಗೆ ಲೆಕ್ಕವಿಲ್ಲ.

'ಹಸ್ತಮೈಥುನ ಅನಾರೋಗ್ಯಕಾರಿ, ಹಾನಿಕಾರಿ' ಎಂಬ ಹೇಳಿಕೆಗೆ ಯಾವ ವೈಜ್ಞಾನಿಕ ಆಧಾರವೂ ಇಲ್ಲ. ಲೈಂಗಿಕ ಕ್ರಿಯೆಗೆ ಸಂಗಾತಿ ಇಲ್ಲದಿದ್ದಾಗ ಹಸ್ತ

ಥುನ ನಮ್ಮ ಲೈಂಗಿಕ ಬಯಕೆಯ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು. ಲಭ ಸುರಕ್ಷಿತ ವಿಧಾನ. ಲೈಂಗಿಕ ಕ್ರಿಯೆ ನಡೆಸಲು ಸಂಗಾತಿ ಇದ್ದಾಗಲೂ, ವಿಧ್ಯತೆಗಾಗಿ ಗಂಡ ಹೆಂಡತಿ ಪರಸ್ಪರ ಹಸ್ತಮೈಥುನ ಮಾಡಿಕೊಳ್ಳುವುದು ಲೈಂಗಿಕ ಖವನ್ನು ಹೆಚ್ಚಿಸಲು, ಹೊಸ ಅನುಭವವನ್ನು ಹೊಂದಲು ಸಹಾಯಕವಾಗು ರೆ ಎಂಬುದು ತಜ್ಞರ ಅಭಿಪ್ರಾಯ. ಇದು ಲೈಂಗಿಕ ಚಟುವಟಿಕೆಯ ಏಕತಾನತೆ ನ್ನು ನಿವಾರಿಸಿ. ಲೈಂಗಿಕ ಆಸಕ್ತಿ ಹೆಚ್ಚಿಸಲು ನೆರವಾಗುತ್ತದೆ ಎಂದು ಅನೇಕ ಪತಿಗಳೂ ಒಪ್ಪುತ್ತಾರೆ.

ಆದ್ದರಿಂದ ಹಸ್ತಮೈಥುನ ಮಾಡಿಕೊಂಡಾಗ ಭಯಪಡುವ ಅವಶ್ಯಕತೆ ಇಲ್ಲ. ತಸ್ಥ ಮನೋಭಾವನೆ ಬೆಳೆಸಿಕೊಳ್ಳಬೇಕಾಗಿಲ್ಲ. ಹಸ್ತಮೈಥುನದ ಬಗ್ಗೆ ೋಗ್ಯಕರ ನಿಲುವನ್ನು ತಾಳುವುದರಿಂದ ಮೈಮನಸ್ಸುಗಳಿಗೆ ನೆಮ್ಮದಿ. ಈಗಾಗಲೇ ರುದೀದ ಬಳಲುತ್ತಿರುವವರು ತಮ್ಮ ಭಯಕ್ಕೆ ಕಾರಣವಿಲ್ಲವೆಂದು ತಿಳಿಯಬೇಕು. ನ್ನು ಅರ್ಥಮಾಡಿಕೊಂಡರೂ, ಕೆಲವರ ಅನುಮಾನ ಹೋಗುವುದೇ ಇಲ್ಲ. ನು ಪ್ರತಿದಿನ ಮಾಡಿಕೊಳ್ಳುತ್ತಿದ್ದೇನೆ. ಇದರಿಂದ ತೊಂದರೆ ಇಲ್ಲವೇ' ಎಂದು ುತ್ತಲೇ ಇರುತ್ತಾರೆ 'ನನ್ನ ಮನಸ್ಸು ಯಾವಾಗಲೂ ಅದರ ಬಗ್ಗೆಯೇ ಯೋಚಿ ತ್ತಿರುತ್ತದೆ ಏನು ಮಾಡಲಿ' ಎಂದು ಪೇಚಾಡುತ್ತಾರೆ. ಮಾನಸಿಕ ಸಮಾಧಾನ ಗಿ, ಮನಸ್ಸಿನ ಗಮನವನ್ನು ಇತರ ಚಟುವಟಿಕೆಗಳತ್ತ ಹರಿಸಬಹುದು. ಯಾಮ, ಕ್ರೀಡೆ, ಓದು, ಸಂಗೀತ ಇತ್ಯಾದಿ ಹವ್ಯಾಸಗಳನ್ನು ಇಟ್ಟುಕೊಳ್ಳುವು ಂದ ಸಾಕಷ್ಟು ನೆಮ್ಮದಿ ಸಿಗುತ್ತದೆ. ಮದುವೆಯಾದ ದಂಪತಿಗಳು ಹಸ್ತಮೈಥು ನ್ನು ಲೈಂಗಿಕ ಚಟುವಟಿಕೆಯಲ್ಲಿ ವೈವಿಧ್ಯತೆಗಾಗಿ ಬಳಸಬಹುದು.

ರ್ಯಸ್ಖಲನ

ಹದಿವಯಸ್ಸಿನಲ್ಲಿ. ಲೈಂಗಿಕ ಚೋದನಿಕೆಗಳ ಪ್ರಚೋದನೆಯಿಂದ, ಹುಡುಗನ ಷಣಗಳಲ್ಲಿರುವ ವಿಶೇಷ ಕೋಶಗಳು ವೀರ್ಯಾಣುಗಳನ್ನು ಉತ್ಪತ್ತಿಮಾಡಲು ರಂಭಿಸುತ್ತವೆ. ವೀರ್ಯಾಣುಗಳು ವೀರ್ಯ ನಾಳಗಳ ಮೂಲಕ ಮೇಲೇರಿ, ಮೂತ್ರ ಲದ ಹಿಂದೆ ಇರುವ ವೀರ್ಯ ಚೀಲದಲ್ಲಿ ಸಂಗ್ರಹವಾಗುತ್ತದೆ. ವೀರ್ಯಚೀಲ ಸ್ರವಿ ರಸ, ಪ್ರಾಸ್ಟೇಟ್ ಸ್ರವಿಸುವ ರಸ ಸೇರಿ 'ವೀರ್ಯ' ಎನಿಸಿಕೊಂಡು, ಮೂತ್ರ ದ ಮೂಲಕ ಹೊರಬರುತ್ತದೆ. ಅವಧಿಗೊಂದಾವರ್ತಿ ವೀರ್ಯ ಹೊರಬರುತ್ತದೆ. ಯಲ್ಲಿ ಕನಸು ಬಿದ್ದಾಗ ವೀರ್ಯಸ್ಖಲನವಾಗುವುದು ಸ್ವಾಭಾವಿಕ ಕ್ರಿಯೆ. ವ್ಯಕ್ತಿ ಾತಿಯೊಂದಿಗೆ ಸಂಭೋಗ ಮಾಡಿದಾಗ, ಯೋನಿಯ ಸ್ಪರ್ಶ-ಪ್ರಚೋದನೆ ದ ವೀರ್ಯಸ್ಖಲನವಾಗುತ್ತದೆ. ಅಥವಾ ಸ್ವಪ್ರಚೋದನೆಯಿಂದಲೂ ಆಗುತ್ತದೆ.

ವೀರ್ಯಸ್ಖಲನ ಯಾವುದೇ ಪ್ರಚೋದನೆಯಿಂದಾದರೂ ಒಂದೇ. ವ್ಯತ್ಯಾಸವಿಲ್ಲ. ಸದಾ ಚಟುವಟಿಕೆಯಲ್ಲಿರುವ ವೃಷಣದ ಜೀವಕೋಶಗಳು, ವೀರ್ಯ ಚೀಲ, ಪ್ರಾಸ್ಟೇಟ್ ವೀರ್ಯವನ್ನು ಉತ್ಪಾದಿಸುತ್ತಲೇ ಇರುತ್ತವೆ. ವೀರ್ಯದ ಉತ್ಪತ್ತಿಗೆ ಶರೀರ ವಿಶೇಷ ಶ್ರಮವನ್ನೇನೂ ಪಡಬೇಕಿಲ್ಲ. ವೀರ್ಯ ಹೊರಬರುವುದರಿಂದ ದೇಹದ ಶಕ್ತಿ ಸೋರಿ ಹೋಗುವುದಿಲ್ಲ, ಜೊಲ್ಲು ಗ್ರಂಥಿಗಳು ಜೊಲ್ಲು ರಸವನ್ನು ಸದಾ ಉತ್ಪತ್ತಿ ಮಾಡುವಂತೆ, ಜಠರ ಜೀರ್ಣರಸವನ್ನು ಉತ್ಪತ್ತಿಮಾಡುವಂತೆ, ವೀರ್ಯವೂ ಉತ್ಪತ್ತಿಯಾಗುತ್ತದೆ. ಇದನ್ನು ಎಲ್ಲರೂ ಗಮನಿಸಬೇಕು. ಜನಸಾಮಾನ್ಯರಲ್ಲಿ ಒಂದು ವಿಚಿತ್ರ ನಂಬಿಕೆ ಇದೆ "ವೀರ್ಯ ಅತ್ಯಮೂಲ್ಯವಾದದ್ದು. ವೀರ್ಯದ ಉತ್ಪತ್ತಿಗೆ ದೇಹದ ವಿಪರೀತ ಶ್ರಮಪಡಬೇಕಾಗುತ್ತದೆ. ಒಂದು ತೊಟ್ಟು ವೀರ್ಯ ನಲವತ್ತು ತೊಟ್ಟು ರಕ್ತಕ್ಕೆ ಸಮ. ಆದ್ದರಿಂದ ಅದನ್ನು ಆದಷ್ಟು ನಿಯಮಿತವಾಗಿ, ಸಂತಾನೋತ್ಪತ್ತಿಗೆ ಮಾತ್ರ ಬಳಸಬೇಕು. ಹಸ್ತಮೈಥುನದ ಮೂಲಕ, ಸ್ವಪ್ನಸ್ಖಲನದ ಮೂಲಕ, ಪದೇಪದೇ ಸಂಭೋಗ ಮಾಡುವುದರ ಮೂಲಕ ಕಳೆದುಕೊಳ್ಳಬಾರದು. ವೀರ್ಯವನ್ನು ಹೊರಬಿಡದೆ ದೇಹಲ್ಲೇ ಉಳಿಸಿಕೊಳ್ಳುವ 'ಬ್ರಹ್ಮಚರ್ಯ'ದಿಂದ ಶಕ್ತಿ ವೃದ್ಧಿಸುತ್ತದೆ". ಈ ನಂಬಿಕೆಗೆ ಕಾರಣ ಜೀವಾಂಕುರ ಮಾಡಬಲ್ಲ ವೀರ್ಯಾಣು ವೀರ್ಯದಲ್ಲಿರುವುದರಿಂದ ವೀರ್ಯಕ್ಕೆ ನಮ್ಮ ಪೂರ್ವಿಕರು ವಿಶೇಷ ಪ್ರಾಶಸ್ತ್ಯ ಕೊಟ್ಟರು. ಜೀವಸೃಷ್ಟಿಗೆ ನೆರವಾಗುವ ಈ ದ್ರವವನ್ನು ಸಹಜವಾಗಿ ಅತ್ಯಮೂಲ್ಯ ಎಂದು ಪರಿಗಣಿಸಿದರು. ಅದರಿಂದಾಗಿ ಈ ಎಲ್ಲ ಅತಿರಂಜಿತ ಕಲ್ಪನೆಗಳು ಹುಟ್ಟಿಕೊಂಡವು. ಇದರ ಪರಿಣಾಮ : ಹದಿವಯಸ್ಸಿನವರು ಸಹಜ, ಸ್ವಾಭಾವಿಕವಾಗಿ ಆಗುವ 'ವೀರ್ಯಸ್ಖಲನ'ವನ್ನು ಕಂಡು ಹೌಹಾರುತ್ತಾರೆ. ವೀರ್ಯ ಹೋಗಿ, ನನ್ನ ಶಕ್ತಿಯೇ ಹರಿದುಹೋಗುತ್ತಿದೆ ಎಂದು ಭಯಪೀಡಿತರಾಗುತ್ತಾರೆ. ಇದು ಸಲ್ಲದು. ವೀರ್ಯಸ್ಖಲನವಾಯಿತೆಂದು ಕಳವಳಪಡಬೇಕಿಲ್ಲ.

ಋತುಸ್ರಾವ

ಹದಿವಯಸ್ಸಿನ ಹುಡುಗಿಗೆ ಋತುಸ್ರಾವ ಪ್ರಾರಂಭವಾದಾಗ ಅವಳು 'ದೊಡ್ಡವಳಾದಳು' ಎನ್ನುತ್ತೇವೆ. ಋತುಮತಿಯಾದ ಹುಡುಗಿ, ಸಂತಾನೋತ್ಪತ್ತಿಗೆ ಸಜ್ಜುಗೊಂಡಿದ್ದಾಳೆ ಎಂದು ಅರ್ಥ. ಬಸಿರಣೆಕ ಚೋದನಿಕೆಯಿಂದ, ಫಲಿತಗೊಂಡ ಅಂಡಾಣು ಬಂದರೆ ಅದನ್ನು ಸ್ವೀಕರಿಸಿ, ಭ್ರೂಣ ಬೆಳೆಯಲು ಗರ್ಭಕೋಶ ಸಜ್ಜುಗೊಳ್ಳುತ್ತದೆ. ಉತ್ಪತ್ತಿಯಾದ ಅಂಡಾಣು ಫಲಿತಗೊಳ್ಳದೆ. ಗರ್ಭಕೋಶಕ್ಕೆ ಬಂದು, ಅಲ್ಲಿ ನಿಲ್ಲದೆ ಹೊರ ಹೋಗಿಬಿಡುತ್ತದೆ. ಕೆಲವು ದಿನಗಳ ನಂತರ ಬಸಿರಣೆಕದಉತ್ಪತ್ತಿನಿಂತಾಗ, ಗರ್ಭಕೋಶದ ಒಳಪದರ ಹರಿದುಕೊಂಡು ಹೊರಬರುತ್ತದೆ.

ಕ್ತ ಸ್ರಾವವಾಗುತ್ತದೆ. ಇದೇ ಋತುಸ್ರಾವ. ಸರಾಸರಿ ಇಪ್ಪತ್ತೆಂಟು ದಿವಸ ಗೊಮ್ಮೆ ಗೊಂದಾವರ್ತಿ ಈ ಋತುಸ್ರಾವ ಜರುಗುತ್ತದೆ. ಇದು ಪ್ರತಿಯೊಬ್ಬ ಸ್ತ್ರೀ ಯಲ್ಲೂ ಸ್ವಾಭಾವಿಕವಾಗಿ ನಡೆಯುವ ಕ್ರಿಯೆ.

ಅನೇಕ ಸಮಾಜಗಳಲ್ಲಿ, ಋತುಸ್ರಾವದ ಅವಧಿಯಲ್ಲಿ ಸ್ತ್ರೀ 'ಮೈಲಿಗೆ' ಎನ್ನುವ ನಂಬಿಕೆ, ಆಚರಣೆ ಇದೆ. 'ಆಕೆ ಮುಟ್ಟಿದ ಆಹಾರ ಕೆಟ್ಟು ಹೋಗುತ್ತದೆ. ಆಕೆ ಅಡುಗೆ ಮನೆಗೆ, ದೇವರ ಕೋಣೆಗೆ ಬರಬಾರದು. ಯಾರನ್ನೂ ಮುಟ್ಟಿಸಿಕೊಳ್ಳ ಬಾರದು. ಮೂರು ನಾಲ್ಕು ದಿವಸಗಳ ನಂತರ ಸ್ನಾನಮಾಡಿ ಶುದ್ಧಳಾಗಬೇಕು' ಎಂಬ ಪದ್ಧತಿ ನಮ್ಮಲ್ಲಿದೆ. ಇದಕ್ಕೆ ವೈಜ್ಞಾನಿಕ ಆಧಾರವಿಲ್ಲ. ವಿದ್ಯಾವಂತ ಕುಟುಂಬಗಳಲ್ಲಿ ಋತುಸ್ರಾವವಾಗುತ್ತಿರುವ ಸ್ತ್ರೀ ಹೊರಗೆ ಕೂಡಬೇಕು ಎನ್ನುವ ಸಂಪ್ರದಾಯವನ್ನು ಬಿಟ್ಟುಕೊಡುತ್ತಿರುವುದು ಗಮನಾರ್ಹ. ದುಡಿಯುತ್ತಿರುವ ಮಹಿಳೆಯರು ಅನಿವಾರ್ಯವಾಗಿಯಾದರೂ ಈ ಸಂಪ್ರದಾಯವನ್ನು ಬಿಡುತ್ತಿದ್ದಾರೆ.

ಋತುಸ್ರಾವದ ದಿನಗಳಲ್ಲಿ ಸ್ತ್ರೀ ಕೆಲವು ಶಾರೀರಕ ಹಾಗೂ ಮಾನಸಿಕ ತೊಂದರೆ ಯಿಂದ ಬಳಲುತ್ತಾಳೆ. ತಲೆನೋವು, ಮೈಭಾರ, ಸ್ತನಗಳ ನೋವು, ಸೊಂಟ ಅಥವಾ ಕೆಳಹೊಟ್ಟೆಯ ನೋವು, ಬೇಸರ, ನಿರುತ್ಸಾಹ, ಚಡಪಡಿಕೆ, ಸಿಡುಕುತನ ಇತ್ಯಾದಿ. ಇದಕ್ಕೆ ಏನು ಕಾರಣ ಎನ್ನುವುದು ಸ್ಪಷ್ಟವಾಗಿಲ್ಲದಿದ್ದರೂ, ಋತುಸ್ರಾ ವದ ಬಗ್ಗೆ ಹೆದರಿಕೆ, ಅಸಹ್ಯ ಭಾವನೆ, ಚೋದನಿಕೆಗಳ ಬದಲಾವಣೆ, ಈ ಅವಧಿ ಯಲ್ಲಿ ಶರೀರದಲ್ಲಿ ಶೇಖರವಾಗುವ ನೀರಿನ ಅಂಶಗಳನ್ನು ಇದಕ್ಕಾಗಿ ದೂರಲಾಗು ತ್ತದೆ. ಈ ಅವಧಿಯಲ್ಲಿ ಮನೆಯವರು ಸ್ತ್ರೀಗೆ ಆಸರೆ, ಪ್ರೀತಿ-ವಿಶ್ವಾಸ ತೋರಿಸು ವುದರಿಂದ ಸ್ತ್ರೀಗೆ ಸಮಾಧಾನವಿರುತ್ತದೆ. ಆಕೆಯೂ ಮನಸ್ಸಿಗೆ ಉಲ್ಲಾಸವಾಗು ವಂತಹ ಚಟುವಟಿಕೆಯಲ್ಲಿ (ಓದು/ಸಂಗೀತ/ಆತ್ಮೀಯರೊಂದಿಗೆ ಹರಟೆ) ತೊಡಗು ವುದು ಒಳ್ಳೆಯದು. ಅವಶ್ಯಕತೆ ಬಿದ್ದರೆ ವೈದ್ಯರ ಸಲಹೆ ಪಡೆಯಬಹುದು. ಋತು ಸ್ರಾವದ ಬಗ್ಗೆ ಹದಿವಯಸ್ಸಿನ ಹುಡುಗಿಗೆ ತಾಯಿ, ಅಕ್ಕ ಸರಿಯಾದ ಮಾಹಿತಿನೀಡು ವುದರಿಂದ ಆಕೆಯ ಆತಂಕವನ್ನು, ತೊಂದರೆಗಳನ್ನು ನಿವಾರಿಸಬಹುದು.

ಮುಟ್ಟು ನಿಲ್ಲುವಿಕೆ

ಸ್ತ್ರೀಗೆ ನಲವತ್ತರಿಂದ ನಲವತ್ತೈದು ವರ್ಷ ವಯಸ್ಸಾದಾಗ, ಋತುಸ್ರಾವ ನಿಲ್ಲುತ್ತದೆ. ಅಂದರೆ ಆಕೆ ಇನ್ನು ಸಂತಾನೋತ್ಪತ್ತಿ ಮಾಡಲಾರಳು. ಈ ಅವಧಿ ಯಲ್ಲಿ ಸ್ತ್ರೀ ಸಾಕಷ್ಟು ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಾಳೆ. 'ನನಗಿನ್ನು ವಯಸ್ಸಾಯಿತು. ಗಂಡನಿಗೆ. ಮಕ್ಕಳಿಗೆ ನಾನು ಬೇಡವಾಗಬಹುದು' ಎಂಬ ಭಾವನೆ ಬರಬಹುದು. ಬೆಳೆದ ಮಕ್ಕಳ ಜವಾಬ್ದಾರಿ ಆಕೆಯನ್ನು ಹಣ್ಣುಮಾಡುತ್ತದೆ.

ಇದರ ಜೊತೆಗೆ ಈ ಅವಧಿಯಲ್ಲಿ 'ಒಳಜನ್ಯ ಖಿನ್ನತೆ' ಕಾಣಿಸಿಕೊಳ್ಳುವ ಸಂಭವ ಹೆಚ್ಚಾಗುತ್ತದೆ. ಈ ವಯಸ್ಸಿನ ಹೆಂಗಸರು 'ಮೈ ಹುಶಾರಿಲ್ಲ, ನನ್ನ ಆರೋಗ್ಯ ಚೆನ್ನಿಲ್ಲ. ನೋವು, ಸುಸ್ತು' ಎಂದು ವೈದ್ಯರಲ್ಲಿಗೆ ಬರುತ್ತಾರೆ. ವಿಚಾರಿಸಿದಾಗ ಬೇಸರ, ದುಃಖ, ಅನಾಸಕ್ತಿ, ಸಾವಿನ ನಿರೀಕ್ಷೆ ಇತ್ಯಾದಿ ಖಿನ್ನತೆಯ ಲಕ್ಷಣಗಳು ಬಹಿರಂಗವಾಗುತ್ತವೆ, ಈ ಅವಧಿಯಲ್ಲಿ ಆಕೆಗೆ ಸೂಕ್ತ ಖಿನ್ನತೆ ನಿವಾರಕ ಔಷಧಿ, ಗಂಡ ಮಕ್ಕಳ ಆಸರೆ, ಪ್ರೋತ್ಸಾಹ ಸಿಗುವುದರಿಂದ, ಆಕೆಯ ತೊಂದರೆ ಕಡಿಮೆಯಾಗುತ್ತದೆ.

ಲೈಂಗಿಕ ಕ್ರಿಯೆ

ಲೈಂಗಿಕ ಕ್ರಿಯೆ ಒಂದು ಜೈವಿಕ ಕ್ರಿಯೆ. 'ಕೆಲವು ನಿಮಿಷಗಳಲ್ಲಿ ಮುಗಿದು ಹೋಗುವಂತಹದು. ಅದರ ಬಗ್ಗೆ ತಿಳಿದುಕೊಳ್ಳುವುದೇನಿದೆ. ಅದು ಪ್ರಕೃತಿದತ್ತವಾಗಿ ಪ್ರತಿಯೊಂದು ಜೀವಿಗೂ ಬರುತ್ತದೆ' ಎಂದು ಕೆಲವರು ಹೇಳುತ್ತಾರೆ. ಇದು ಕೆಳವರ್ಗದ ಪ್ರಾಣಿಗಳಲ್ಲಿ ನಿಜವಿರಬಹುದಾದರೂ. ವಿಕಾಸದ ಮೇಲಿನ ಹಂತದಲ್ಲಿರುವ ಮಂಗಗಳು ಹಾಗೂ ಮಾನವರಲ್ಲಿ ಇದು ಸರಳ ಕ್ರಿಯೆಯಾಗಿ ಉಳಿದಿಲ್ಲ. ಲೈಂಗಿಕ ಕ್ರಿಯೆ ನಡೆಸಲು ಕಲಿಯಬೇಕಾಗುತ್ತದೆ. ಸಾಮೂಹಿಕ ಜೀವನ ಮಾಡುವ ಕಪಿಗಳಲ್ಲಿ, ಮರಿಕಪಿಗಳು ಗುಂಪಿನ ಇತರ ಕಪಿಗಳು ಲೈಂಗಿಕ ಕ್ರಿಯೆ ನಡೆಸುವುದನ್ನು ನೋಡಿ ಕಲಿಯುತ್ತವೆ. ಪ್ರಾಯೋಗಿಕವಾಗಿ ಮರಿಕಪಿಗಳನ್ನು ಗುಂಪಿನಿಂದ ಬೇರ್ಪಡಿಸಿ, ಒಂಟಿಯಾಗಿ ಬೆಳೆಸಿ, ಬೆದೆಗೆ ಬಂದ ಮೇಲೆ ಒಟ್ಟಿಗೆ ಸೇರಿದಾಗ, ಅವು ಲೈಂಗಿಕ ಆಸಕ್ತಿಯನ್ನು ತೋರಿಸಿದರೂ, ಹೇಗೆ ಲೈಂಗಿಕ ಕ್ರಿಯೆ ನಡೆಸಬೇಕೆನ್ನುವದು ಗೊತ್ತಿಲ್ಲದೆ ಗೊಂದಲಕ್ಕೀಡಾದುವು. ಮನುಷ್ಯನಲ್ಲಿ ಲೈಂಗಿಕಕ್ರಿಯೆ ಒಂದು ಸಂಕೀರ್ಣ ಕ್ರಿಯೆಯಾಗಿ ಮಾರ್ಪಟ್ಟಿದೆ. ಗಂಡು–ಹೆಣ್ಣು ಪರಸ್ಪರ ಸ್ನೇಹಮಾಡಿ, ಬಾಂಧವ್ಯ ಬೆಳೆದು, ಅನ್ಯೋನ್ಯತೆಯನ್ನು ಸಾಧಿಸಿ ಹೊಂದಾಣಿಕೆಯಿಂದ ಲೈಂಗಿಕಕ್ರಿಯೆ ನಡೆಸಿದಾಗ ಮಾತ್ರ, ಅದರಿಂದ ಸುಖ, ತೃಪ್ತಿಯನ್ನು ಪಡೆಯಲು ಸಾಧ್ಯ. ಇಲ್ಲವಾದರೆ ಲೈಂಗಿಕಕ್ರಿಯೆ ಆತಂಕವನ್ನುಂಟುಮಾಡುವ, ಹೇಗೋ ಮಾಡಿ ಮುಗಿಸಬೇಕಾದ ಅನಿವಾರ್ಯ ಅನಿಷ್ಟವಾಗಿಬಿಡುತ್ತದೆ. ಲೈಂಗಿಕ ಚಟುವಟಿಕೆ ಸಂತೋಷ ತರುವ ಬದಲು, ಸಂಕಟವನ್ನು ತರುತ್ತದೆ.

ಲೈಂಗಿಕಕ್ರಿಯೆ ಒಂದು ಕೌಶಲಪೂರ್ಣ ಕಲೆ ಎಂಬುದನ್ನು ನಾವು ಗಮನಿಸಬೇಕು. ಇದರಲ್ಲಿ ಪರಿಣತಿ ಸಾಧಿಸಲು, ಗಂಡಹೆಂಡತಿ ಇಬ್ಬರೂ ನಿರ್ದಿಷ್ಟ ಮನೋಭಾವ, ಪರಸ್ಪರ ಸಹಕಾರ, ಹೊಂದಾಣಿಕೆ ಹಾಗೂ ಸಹನೆಯ ಪ್ರಯತ್ನವನ್ನು ಪ್ರದರ್ಶಿಸಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಕಾಲವೂ ಹಿಡಿಯುತ್ತದೆ. ಆತುರ

ಪಟ್ಟರೆ ಪ್ರಯೋಜನವಿಲ್ಲ. ಮದುವೆಯಾದ ದಂಪತಿಗಳು ಮೊದಲರಾತ್ರಿಯೇ ಯಶಸ್ವೀ ಲೈಂಗಿಕಕ್ರಿಯೆ ನಡೆಸಬೇಕೆಂದರೆ ಸಾಧ್ಯವಾಗದಿರಬಹುದು, ಅತಿರಂಜಿತ ನಿರೀಕ್ಷೆ ಇಟ್ಟುಕೊಂಡು, ಪ್ರಾರಂಭದಲ್ಲಿ ವಿಫಲರಾದಾಗ, ದಂಪತಿಗಳು ನಿರಾಶೆಯ ಪಾತಾಳಕ್ಕೆ ಇಳಿಯುತ್ತಾರೆ.

ಲೈಂಗಿಕಕ್ರಿಯೆ ನಮ್ಮ ಮಿದುಳಿನ ಸ್ವಾಯತ್ತ ನರಮಂಡಲದ ಹತೋಟಿಯಲ್ಲಿರುತ್ತದೆ. ಅಂದರೆ ಅದು ನೇರವಾಗಿ ನಮ್ಮ ಹತೋಟಿಯಲ್ಲಿಲ್ಲ. ನಮಗೆ ಬೇಕೆಂದಾಗ, ಬೇಕಾದಲ್ಲಿ ನಮ್ಮ ಸ್ವಇಚ್ಛೆಯಂತೆ ಲೈಂಗಿಕಕ್ರಿಯೆ ನಡೆಸಲು ಸಾಧ್ಯವಿಲ್ಲ. ನಮ್ಮ ಪಂಚೇಂದ್ರಿಯಗಳಿಗೆ ಲೈಂಗಿಕ ಪ್ರಚೋದನೆ ಸಿಕ್ಕಿ, ಪರಿಸರ ಲೈಂಗಿಕಕ್ರಿಯೆಗೆ ಅನುಕೂಲವಾಗಿದೆ ಎಂದಾಗ ಸ್ವಾಯತ್ತ ನರಮಂಡಲ ಲೈಂಗಿಕಕ್ರಿಯೆಗೆ ಸಜ್ಜಾಗಲು ಹಸಿರು ದೀಪ ತೋರಿಸುತ್ತದೆ. ಆಗ ಜನನಾಂಗಗಳು ಉದ್ರೇಕಗೊಂಡು ಲೈಂಗಿಕ ಕ್ರಿಯೆ ನಡೆಯುತ್ತದೆ. ಅಂದರೆ ಪಂಚೇಂದ್ರಿಯಗಳಿಗೆ ಸರಿಯಾದ ಲೈಂಗಿಕ ಪ್ರಚೋದನೆ ಸಿಗುವಂತೆ ಮಾಡುವದು ನಮ್ಮ ಹತೋಟಿಯಲ್ಲಿದೆ. ಆನಂತರದ ಕ್ರಿಯೆ ಸ್ವಯಂಚಾಲಿತ ಹಾಗೂ ನಿರ್ದೇಶರ ಎನ್ನಬಹುದು.

ಗಂಡಿನಲ್ಲಾಗಲೀ ಹೆಣ್ಣಿನಲ್ಲಾಗಲೀ ಲೈಂಗಿಕಕ್ರಿಯೆ ನಾಲ್ಕು ಹಂತಗಳಲ್ಲಿ ನಡೆಯುತ್ತದೆ. ಮೊದಲ ಹಂತ ಪೀಠಿಕೆ, ಎರಡನೆಯ ಹಂತ ಪ್ರೀತಿಯ ಆಟ, ಮೂರು : ಸಂಭೋಗ ಮತ್ತು ಕೊನೆಯ ಹಂತ ಸಂಭೋಗಾನಂತರ ಸ್ಥಿತಿ, ಪೀಠಿಕೆಯಲ್ಲಿ ಸಮಯ ಸ್ಥಳ ಅನುಕೂಲವಾಗಿದ್ದು, ಸಂಭೋಗ ಮಾಡಬೇಕೆಂಬ ಆಸೆ ಗಂಡ, ಹೆಂಡತಿಯಲ್ಲಿ ಮೂಡುತ್ತಿದ್ದಂತೆ, ಬೇಕಾದ ಪೂರ್ವಸಿದ್ಧತೆ ನಡೆಸುತ್ತಾರೆ. ಪೀಠಿಕೆ ಪ್ರೀತಿಯ ಆಟವಾಗಿ ಮುಂದುವರೆಯುತ್ತದೆ. ದೇಹದ ಉದ್ರೇಕಕಾರಿ ಭಾಗಗಳ ನೋಟ, ಪ್ರೀತಿಯ ಮಾತು, ಪ್ರಚೋದಕ ಸಂಗೀತ, ಹೂವು, ಸುಗಂಧದ ವಾಸನೆ, ಅಪ್ಪುಗೆ, ಚುಂಬನ, ಸ್ಪರ್ಶ—ಹೀಗೆ ಪ್ರೀತಿಯ ಆಟದಿಂದ ಪಂಚೇಂದ್ರಿಯಗಳು ಪ್ರಚೋದನೆಗೊಂಡು ಲೈಂಗಿಕ ಉದ್ರೇಕಕ್ಕೆ ದಾರಿಮಾಡಿಕೊಡುತ್ತವೆ. ನಿಮಿರಿ ನಿಂತ ಶಿಶ್ನ, ಗಂಡು ಲೈಂಗಿಕವಾಗಿ ಉದ್ರೇಕಗೊಂಡಿದ್ದಾನೆ ಎನ್ನುವದಕ್ಕೆ ಸೂಚನೆಯಾದರೆ, ಒದ್ದೆಯಾದ ಯೋನಿ ಹೆಣ್ಣು ಲೈಂಗಿಕವಾಗಿ ಉದ್ರೇಕಗೊಂಡಿದ್ದಾಳೆ ಎನ್ನುವದನ್ನು ಸೂಚಿಸುತ್ತದೆ. ವ್ಯಕ್ತಿ ಪೀಠಿಕೆಯ ಹಂತದಲ್ಲೇ ಉದ್ರೇಕಗೊಳ್ಳಬಹುದು. ಉದ್ರೇಕಗೊಳ್ಳದಿದ್ದರೆ ಚಿಂತಿಸಬೇಕಿಲ್ಲ. ಮುಂದಿನ ಹಂತ ಪ್ರೀತಿಯ ಆಟದಿಂದ ಉದ್ರೇಕ ಸಾಧ್ಯವಾಗುತ್ತದೆ. ನೋಟದಿಂದ, ಧ್ವನಿಯಿಂದ, ವಾಸನೆಯಿಂದ, ಸ್ಪರ್ಶದಿಂದ ಸಂಗಾತಿಯನ್ನು ಪ್ರಚೋದಿಸಲು ಪ್ರಯತ್ನಿಸಬೇಕು. ಸ್ಪರ್ಶ ಸಂವೇದನೆಯ ಮಹತ್ವವನ್ನು ದಂಪತಿಗಳು ಅರಿಯಬೇಕು. ದೇಹದ ಸೂಕ್ಷ್ಮ ಸಂವೇದನೆಯುಳ್ಳ

ಪ್ರಚೋದಕ ಭಾಗಗಳನ್ನು ಗುರುತಿಸಬೇಕು. ಪ್ರೀತಿಯ ಆಟದ ಹಂತದಲ್ಲಿ ಆ ಭಾಗಗಳನ್ನು ಪರಸ್ಪರ ಪ್ರಚೋದಿಸಬೇಕು. ಇಬ್ಬರೂ ಈ ರೀತಿ ಉದ್ರೇಕಾವಸ್ಥೆಯನ್ನು ಮುಟ್ಟಿದ ನಂತರವೇ ಸಂಭೋಗ ಮಾಡಬೇಕು. ಆಗ ಅದು ಸುಲಲಿತವಾಗಿ ನಡೆದು ಸುಖ ನೀಡುತ್ತದೆ. ಯೋನಿಯೊಳಗೆ ವೀರ್ಯಸ್ಖಲನವಾಗುತ್ತಿದ್ದಂತೆ, ಗಂಡಿನ ಉದ್ರೇಕ ಇಳಿದುಹೋಗುತ್ತದೆ. ಆದರೆ ಹೆಣ್ಣಿನ ಉದ್ರೇಕ ಇಳಿಯಲು ಸ್ವಲ್ಪ ಹೊತ್ತಾಗುತ್ತದೆ. ಆದ್ದರಿಂದ ಸಂಭೋಗಾನಂತರದ ಅವಧಿಯಲ್ಲಿ ಗಂಡ ಹೆಂಡತಿ ದೂರವಾಗದೇ, ಸಾಮೀಪ್ಯದ ಸೊಗಸನ್ನು ಅನುಭವಿಸುವುದು ಮುಖ್ಯವಾಗುತ್ತದೆ. ಎಷ್ಟು ಅವಧಿಗೊಂದಾವರ್ತಿ ಲೈಂಗಿಕಕ್ರಿಯೆ ನಡೆಸಬೇಕೆಂಬುದನ್ನು ದಂಪತಿಗಳೇ ಪರಸ್ಪರ ಚರ್ಚಿಸಿ ನಿರ್ಧರಿಸಿಕೊಳ್ಳಬೇಕು. ಇಷ್ಟೇ ಸರಿ, ಇದು ಕಮ್ಮಿ ಇದು ಜಾಸ್ತಿ ಎನ್ನುವ ಪ್ರಶ್ನೆಯೇ ಇರುವುದಿಲ್ಲ.

ಲೈಂಗಿಕ ಅನಾಸಕ್ತಿ ಮತ್ತು ದೌರ್ಬಲ್ಯ

ಕೆಲವರು ಲೈಂಗಿಕ ಅನಾಸಕ್ತಿ, ದೌರ್ಬಲ್ಯದಿಂದ ಬಳಲುತ್ತಾರೆ. ಅದನ್ನು ಯಾರೊಂದಿಗೂ ಹೇಳಿಕೊಳ್ಳಲಾಗದೇ ಮೌನವಾಗಿ ನರಳುತ್ತಾರೆ. ಫ್ಯಾಮಿಲಿ ಡಾಕ್ಟರನ್ನು ಕಂಡು ಸಲಹೆ ಪಡೆಯಲೂ ಸಂಕೋಚಪಟ್ಟುಕೊಳ್ಳುತ್ತಾರೆ. ಕದ್ದು ಮುಚ್ಚಿ ಜಾಹೀರಾತಿನ ಢೋಂಗೀ ವೈದ್ಯರ ಕೆಲಸಕ್ಕೆ ಬಾರದ ಔಷಧಿ ತಿಂದು ಹಣ ಹಾಳುಮಾಡಿಕೊಳ್ಳುತ್ತಾರೆ.

ಬಹುಪಾಲು ಪ್ರಕರಣಗಳಲ್ಲಿ ಲೈಂಗಿಕ ಅನಾಸಕ್ತಿ, ದೌರ್ಬಲ್ಯ ಮಾನಸಿಕ ಜನ್ಯ. ಹಲವು ಹನ್ನೊಂದು ಕಾರಣಗಳಿಂದ ಮಾನಸಿಕ ನೆಮ್ಮದಿ ಇಲ್ಲದೆ, ಮನಸ್ಸು ಉದ್ವೇಗ ಅಥವಾ ಖಿನ್ನತೆಯಿಂದ ಆವೃತವಾದಾಗ ಲೈಂಗಿಕಕ್ರಿಯೆ ಸಾಧ್ಯವಾಗು ವುದಿಲ್ಲ. ಲೈಂಗಿಕಕ್ರಿಯೆ ವಿಫಲವಾದಾಗ ಉದ್ವೇಗ, ಖಿನ್ನತೆ ಹೆಚ್ಚುತ್ತದೆ. ಅದರಿಂದ ಮತ್ತೆ ವೈಫಲ್ಯ. ಹೀಗೆ ಇದೊಂದು ವಿಷಚಕ್ರವಾಗಿ ಬಿಡುತ್ತದೆ.

ಲೈಂಗಿಕ ಅನಾಸಕ್ತಿ ದೌರ್ಬಲ್ಯಕ್ಕೆ ಸಾಮಾನ್ಯ ಕಾರಣಗಳು :

1. ಹಸ್ತಮೈಥುನ ಮತ್ತು ವೀರ್ಯಸ್ಖಲನದ ಬಗ್ಗೆ ತಪ್ಪು ನಂಬಿಕೆಯಿಂದುಂಟಾದ ಭಯ, ಅನುಮಾನ, ತಪ್ಪಿತಸ್ಥ ಭಾವನೆ.
2. ಲೈಂಗಿಕಕ್ರಿಯೆ ಬಗ್ಗೆ ಅಜ್ಞಾನದಿಂದ ಬರುವ ಆತಂಕ.
3. ಲೈಂಗಿಕಕ್ರಿಯೆ, ಸಾಮರ್ಥ್ಯದ ಬಗ್ಗೆ ಅತಿರಂಜಿತ, ಉತ್ಪ್ರೇಕ್ಷಿತ ಕಲ್ಪನೆ, ನಿರೀಕ್ಷೆ, ಆ ಮಟ್ಟಕ್ಕೆ ತಾನು ಏರಬಲ್ಲೆನೆ ಎನ್ನುವ ಸಂಶಯ.
4. ತನ್ನ ನಿರ್ವಹಣೆ ಬಗ್ಗೆ ಭರವಸೆ ಇಲ್ಲದಿರುವುದು.
5. ಹಿಂದಿನ ಅಹಿತ ಅನುಭವಗಳು, ಹಿಂದಿನ ವೈಫಲ್ಯ.
6. ಸಂಗಾತಿಯನ್ನು ಕಂಡರೆ ಇಷ್ಟವಿಲ್ಲದಿರುವುದು.
7. ವಾತಾವರಣದಲ್ಲಿ ಆತಂಕವನ್ನುಂಟುಮಾಡುವ ಅಂಶಗಳು. (ಹೊಸ ಜಾಗ, ಏಕಾಂತತೆಗೆ ಭಂಗ, ಗದ್ದಲ ಇತ್ಯಾದಿ)

8. ಮನಸ್ಸಿನ ನೆಮ್ಮದಿಯನ್ನು ಕೆಡಿಸುವ ಕೌಟುಂಬಿಕ, ಆರ್ಥಿಕ, ಔದ್ಯೋಗಿಕ, ವೈಯಕ್ತಿಕ ಸಮಸ್ಯೆಗಳು.
9. ಗರ್ಭಧಾರಣೆಯ ಭಯ.
10. ಲೈಂಗಿಕ ವ್ಯಾಧಿಗಳು ಅಥವಾ ಈ ವ್ಯಾಧಿ ಅಂಟಿರುವ ಭಯ.
11. ದೈಹಿಕವಾಗಿ, ಮಾನಸಿಕವಾಗಿ ಶ್ರಮವಾಗುವಂತಹ ಕೆಲಸ ಮಾಡಿ, ವಿಶ್ರಾಂತಿ ಪಡೆಯದೆ ಆಯಾಸವಾಗಿರುವುದು.
12. ದೇಹದ ಶಕ್ತಿ, ಚುರುಕುತನವನ್ನು ಕಡಿಮೆ ಮಾಡುವ ದೈಹಿಕ ಖಾಯಿಲೆಗಳು. ಉದಾ : ಜ್ವರ, ನೀರ್ಗಳಿತ ಸ್ಥಿತಿ, ಸಕ್ಕರೆ ಖಾಯಿಲೆ, ಕೀಲುಗಳ ನೋವು ಇತ್ಯಾದಿ
13. ಇಚ್ಛಿತ್ತ ವಿಕಲತೆ, ಒಳಜನ್ಯ ಖಿನ್ನತೆ ಇತ್ಯಾದಿ ಮಾನಸಿಕ ಖಾಯಿಲೆಗಳು.
14. ಜನನಾಂಗಗಳಿಗೆ ನರತಂತುಗಳನ್ನು ಕಳುಹಿಸುವ ಮಿದುಳ ಒಳ್ಳಿಯ ಭಾಗಕ್ಕೆ ಪೆಟ್ಟು ಅಥವಾ ಖಾಯಿಲೆಯಿಂದ ಹಾನಿ.
15. ನಿರ್ನಾಳ ಗ್ರಂಥಿಗಳ ವಿಫಲತೆ, ಲೈಂಗಿಕ ಚೋದನಿಕೆಗಳ ಕೊರತೆ.

ಆದ್ದರಿಂದ ಲೈಂಗಿಕ ನಿರಾಸಕ್ತಿ, ದೌರ್ಬಲ್ಯ ಇರುವ ವ್ಯಕ್ತಿ ಈ ತೊಂದರೆಗೆ ಮಾನಸಿಕ ಜನ್ಯ ಕಾರಣವಿದೆಯೇ ಎಂದು ಯೋಚಿಸಿ, ಅದರ ನಿವಾರಣೆಗೆ ತಾನೇ ಪ್ರಯತ್ನಿಸಬಹುದು. ಉದ್ವೇಗ, ಖಿನ್ನತೆ ಲೈಂಗಿಕಕ್ರಿಯೆಯ ದೊಡ್ಡ ಶತ್ರುಗಳು. ಉದ್ವೇಗ, ಖಿನ್ನತೆಯ ಕಾರಣಗಳನ್ನು ಪತ್ತೆಹಚ್ಚಿ ಪರಿಹರಿಸಿಕೊಳ್ಳಬೇಕು. ಅವಶ್ಯಕತೆ ಬಿದ್ದರೆ, ತಜ್ಞ ವೈದ್ಯರನ್ನು ಕಂಡು ಸಲಹೆ ಪಡೆಯಬೇಕು. ಖೋಟಾ ವೈದ್ಯರ, ಜಾಹೀರಾತಿನ ಮೋಡಿಗೆ ಬಲಿಪಶುವಾಗಬಾರದು.

ಶೀಘ್ರ ವೀರ್ಯಸ್ಖಲನ

ಇದೊಂದು ಸಾಮಾನ್ಯವಾಗಿ ಕಂಡುಬರುವ ತೊಂದರೆ. ಸಂಭೋಗ ಶುರು ಮಾಡುವ ಮೊದಲೇ ಅಥವಾ ಶುರುಮಾಡುತ್ತಿದ್ದಂತೆಯೇ ವೀರ್ಯ ಸ್ಖಲನವಾಗಿ ಪುರುಷರ ಉದ್ರೇಕ ಇಳಿದುಹೋಗುತ್ತದೆ. ಆದರಿಂದ ಸ್ತ್ರೀ-ಪುರುಷರಿಬ್ಬರಿಗೂ ನಿರಾಶೆಯಾಗಿ ಲೈಂಗಿಕ ಅತೃಪ್ತಿ ಮನೆಮಾಡುತ್ತದೆ. ಪುರುಷನ ಪಾಲಿಗೆ ಇದೊಂದು ಸಹಿಸಲಾಗದ ವೈಫಲ್ಯ. ವೀರ್ಯಸ್ಖಲನವನ್ನು ಮುಂದೂಡಲು ವಿಫಲ ಪ್ರಯತ್ನ ಮಾಡುತ್ತಾ, ಹಲವು ಬಗೆಯ ಚಿಕಿತ್ಸೆ ನಡೆಸುತ್ತಾ ಅಸಹಾಯಕನಾಗುತ್ತಾನೆ. ಶೀಘ್ರ ವೀರ್ಯಸ್ಖಲನಕ್ಕೆ ಕಾರಣ, ಬಹುಕೇತ ಎಲ್ಲ ಪ್ರಕರಣಗಳಲ್ಲಿ ಯಾವುದೇ ಕಾರಣದಿಂದ ಉಂಟಾದ ಮಾನಸಿಕ ಉದ್ವೇಗ ಎಂದು ತಿಳಿದುಬರುತ್ತದೆ. ಉದ್ವೇಗದಿಂದಾಗಿ

ವೀರ್ಯಸ್ಖಲನವನ್ನು ನಿಯಂತ್ರಿಸುವ ನರ ಪ್ರಚೋದನೆಗೊಂಡು, ಸ್ಖಲನವಾಗಿಬಿಡುತ್ತದೆ. ಹೀಗೆ ಆತಂಕವನ್ನುಂಟುಮಾಡುವ ಸನ್ನಿವೇಶ ಅಥವಾ ಮನೋಸ್ಥಿತಿಯಲ್ಲಿ ಒಮ್ಮೆ ಶೀಘ್ರ ವೀರ್ಯಸ್ಖಲನವಾದರೆ, ಮುಂದಿನ ಸಲ ಲೈಂಗಿಕಕ್ರಿಯೆ ನಡೆಸುವಾಗ, ಆ ಬಾರಿಯೂ ಬೇಗ ಆದರೆ ಏನು ಗತಿ ಎಂಬ ಉದ್ವೇಗ ಮನಸ್ಸನ್ನು ಕಾಡುತ್ತದೆ. ತನ್ನ ನಿರ್ವಹಣಾ ಸಾಮರ್ಥ್ಯದ ಅಂಜಿಕೆ ಶುರುವಾಗುತ್ತದೆ. ಇದರಿಂದಾಗಿ ಮತ್ತೊಮ್ಮೆ ಶೀಘ್ರ ವೀರ್ಯಸ್ಖಲನವಾಗುತ್ತದೆ. ಇದು ಪುನರಾವರ್ತನೆಗೊಳ್ಳ ತೊಡಗುತ್ತದೆ.

ಇದಕ್ಕೆ ಚಿಕಿತ್ಸೆ ಎಂದರೆ, ಮನಸ್ಸಿನ ಉದ್ವೇಗವನ್ನು ಹತೋಟಿಯಲ್ಲಿಡುವುದು. ದೇಹಕ್ಕೆ ಉದ್ವೇಗಗೊಳ್ಳದಂತೆ ತರಬೇತಿ ನೀಡುವುದು. ಬೇರಾವ ಔಷಧಿಯ ಅಗತ್ಯವಿಲ್ಲ. ಲೈಂಗಿಕ ಚಟುವಟಿಕೆಗೆ ತೊಡಗುವ ಮುನ್ನ ಮನಸ್ಸಿಗೆ ಹಿತವಾದ ಚಟುವಟಿಕೆ ಮಾಡಿ. ಅದನ್ನು ಶಾಂತವಾಗಿರುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ: ಹಿತವಾದ ಸಂಗೀತ ಕೇಳುವುದು, ಹೆಂಡತಿ ಮತ್ತಿತರರೊಂದಿಗೆ ವಿಶ್ವಾಸದಿಂದ ಮಾತುಕತೆ ನಡೆಸುವುದು, ಒಳ್ಳೆಯ ಸಾಹಿತ್ಯವನ್ನು ಓದುವುದು, ಕೇರಂ ಇತ್ಯಾದಿ ಆಟ ಆಡುವದು, ಯೋಗಾಸನಗಳನ್ನು ಹಾಕುವುದು ಇತ್ಯಾದಿ. ನಂತರ ಲೈಂಗಿಕ ಕ್ರಿಯೆ ನಡೆಸುವಾಗ ನಿರ್ವಹಣೆ ಬಗ್ಗೆ ಚಿಂತಿಸಬಾರದು. ಸಂಗಾತಿಯಾದವಳು 'ನಿಮಗೆ ಆದಷ್ಟು ಮಾಡಿ. ನನಗೆ ಬೇಸರವಿಲ್ಲ' ಎಂದು ಹೇಳಿ ಆತನ ಮೇಲಿನ ಮಾನಸಿಕ ಒತ್ತಡವನ್ನು ಕಡಿಮೆ ಮಾಡಬಹುದು. ಸ್ಖಲನವಾಗುತ್ತದೆ ಎನಿಸಿದ ಕ್ಷಣ, ಲೈಂಗಿಕಕ್ರಿಯೆ ನಡೆಸುವುದನ್ನು ಎರಡು ಮೂರು ನಿಮಿಷ ನಿಲ್ಲಿಸಿ, ಮತ್ತೆ ಮುಂದುವರೆಸುವುದರಿಂದ ಸ್ಖಲನವನ್ನು ಮುಂದೂಡಬಹುದು. ತಜ್ಞರ ಪ್ರಕಾರ ಸ್ವಲ್ಪ ಹೊತ್ತು ಲೈಂಗಿಕ ಚಟುವಟಿಕೆ ನಡೆಸುವದು. ನಿಲ್ಲಿಸುವುದು. ಈ ಅವಧಿಯಲ್ಲಿ ಬೇರೆ ವಿಚಾರ ಮಾತಾಡುತ್ತಾ ಪ್ರಚೋದನೆಯನ್ನು ಕಡಿಮೆ ಮಾಡಿಕೊಳ್ಳುವುದು. ನಂತರ ಮತ್ತೆ ಲೈಂಗಿಕ ಚಟುವಟಿಕೆ ನಡೆಸುವುದು ; ಹೀಗೆ ನಿಲ್ಲಿಸಿ ಮತ್ತು ಪ್ರಾರಂಭಿಸುವ ವಿಧಾನದಿಂದ ಶೀಘ್ರ ವೀರ್ಯಸ್ಖಲನದ ತೊಂದರೆ ಮಾಯವಾಗುತ್ತದೆ. ಅವಶ್ಯಕತೆ ಬಿದ್ದರೆ, ಮನೋವೈದ್ಯರ ಸಲಹೆ ಪಡೆಯುವುದು ಉಚಿತ.

ಸ್ವಲಿಂಗರತಿ

ಗಂಡು ಗಂಡಿನೊಂದಿಗೇ ಲೈಂಗಿಕ ಚಟುವಟಿಕೆ ನಡೆಸುವದನ್ನು, ಹೆಣ್ಣು ಹೆಣ್ಣಿನೊಂದಿಗೆ ಲೈಂಗಿಕ ಚಟುವಟಿಕೆಯನ್ನು ನಡೆಸುವದನ್ನು ಸ್ವಲಿಂಗರತಿ (ಹೋಮೋಸೆಕ್ಸುಯಾಲಿಟಿ) ಎಂದು ಕರೆಯಲಾಗುತ್ತದೆ. ಪ್ರಪಂಚದ ಬಹುತೇಕ ಸಮಾಜಗಳು ಇದನ್ನು ಅಸಹಜ, ಅಸಾಮಾನ್ಯ ಎಂದು ವಿರೋಧಿಸುತ್ತವೆ. ಶಿಕ್ಷಾರ್ಹ ಅಪರಾಧ

ವೆಂದು ಪರಿಗಣಿಸಿವೆ. ಆದರೆ ಈ 'ಅಸಹಜ ಲೈಂಗಿಕ ನಡೆವಳಿಕೆ' ಪ್ರಪಂಚದಾದ್ಯಂತ ಕಂಡುಬರುತ್ತದೆ. ಸಾಮಾಜಿಕ ನಿಷೇಧವಿರುವುದರಿಂದ ಇದು ಭೂಗತ ಚಟುವಟಿಕೆಯಂತೆ, ತೆರೆಮರೆಯಲ್ಲಿ ನಡೆಯುತ್ತಿರುತ್ತದೆ. ಹೀಗಾಗಿ ಅನೇಕ ಬಗೆಯ ಅಪರಾಧಗಳಿಗೆ ಎಡೆಮಾಡಿಕೊಡುತ್ತಿದೆ. ಅಮಾಯಕರನ್ನು, ಎಳೆಯರನ್ನು, ಅಸಹಾಯಕರನ್ನು ಈ ಚಟುವಟಿಕೆಗೆ ಬಳಸಿಕೊಳ್ಳಲಾಗುತ್ತಿದ್ದು ಸ್ವಲಿಂಗರತಿ ಸಾಮಾಜಿಕ ಅನಿಷ್ಟವಾಗಿದೆ. ಇದನ್ನು ತಡೆಗಟ್ಟಲು ಅಮೇರಿಕದಂತಹ ಸಮಾಜಗಳಲ್ಲಿ ಇದು ಅಸಹಜವಾದರೂ, ಒಂದು ಕಡೆ ಇದ್ದುಕೊಳ್ಳಲಿ ಎಂದು ಹಿಂದಿನ ಕಾನೂನುಗಳನ್ನು ಸಡಿಲಗೊಳಿಸಲಾಗಿದೆ. ಅಲ್ಲಿ ಕಾನೂನಿನ ಪ್ರಕಾರವೇ ಇಬ್ಬರು ಗಂಡಸರು ಅಥವಾ ಇಬ್ಬರು ಹೆಂಗಸರು 'ದಂಪತಿ'ಗಳಾಗಬಹುದು. ಮನೋ ವೈಜ್ಞಾನಿಕ ಅಧ್ಯಯನಗಳಿಂದ ಇದಕ್ಕೆ ಕಾರಣಗಳು ತಿಳಿದುಬಂದು, ಜನರ ಜಿಗಿ ನಿಲುವು ಆ ದೇಶದಲ್ಲಿ ಕಡಿಮೆಯಾಗುತ್ತಿದೆ. ಮನೋ ವೈಜ್ಞಾನಿಕ ದೃಷ್ಟಿಯಿಂದ ಸ್ವಲಿಂಗರತಿಗೆ ಇಷ್ಟಪಡುವವರನ್ನು ಮೂರು ಗುಂಪುಗಳಾಗಿ ವಿಂಗಡಿಸುತ್ತಾರೆ.

1. ನಿಜವಾದ 'ಸ್ವಲಿಂಗರತಿ' ನಡೆವಳಿಕೆಯುಳ್ಳವರು ; ಇವರು ಶಾಶ್ವತವಾಗಿ ಸ್ವಲಿಂಗರತಿಯೇ ಬೇಕೆನ್ನುವವರು. ಸ್ವಲಿಂಗರತಿಯಿಂದ ಮಾತ್ರ ಲೈಂಗಿಕ ಸುಖ-ತೃಪ್ತಿಯನ್ನು ಪಡೆಯುವವರು. ಮಾಮೂಲಿನ ಲೈಂಗಿಕ ಚಟುವಟಿಕೆ ಸ್ವಲ್ಪವೂ ಇಷ್ಟಪಡುವುದಿಲ್ಲ. ಎಷ್ಟೇ ಅಡ್ಡಿ, ಆತಂಕ, ವಿರೋಧ ಕಂಡುಬಂದರೂ ತಮ್ಮ ಈ ಬಯಕೆ, ನಡೆವಳಿಕೆಯನ್ನು ಬಿಡಲು ಒಪ್ಪುವುದಿಲ್ಲ. ಇವರನ್ನು ಬದಲಾಯಿಸುವುದೂ ಕಷ್ಟ.
2. ಎರಡೂ ಬಗೆಯ ಲೈಂಗಿಕ ಚಟುವಟಿಕೆಯುಳ್ಳವರು : ಇವರು ಮಾಮೂಲು ಲೈಂಗಿಕ ಕ್ರಿಯೆಯ ಜೊತೆಗೆ ಸ್ವಲಿಂಗರತಿಯನ್ನೂ ನಡೆಸುತ್ತಾರೆ. ಎರಡರಿಂದಲೂ ಸುಖ, ತೃಪ್ತಿ ಪಡೆಯುತ್ತಾರೆ. ಮದುವೆಯಾಗಿ ಮಕ್ಕಳನ್ನೂ ಹೊಂದುತ್ತಾರೆ. ಸ್ವಲಿಂಗರತಿಯಿಂದ ಸಮಸ್ಯೆಗೆ ಸಿಲುಕಿದಾಗ, ಅದನ್ನು ಬಿಡಲು ಒಪ್ಪುತ್ತಾರೆ.
3. ಆಕಸ್ಮಿಕವಾಗಿ, ಬೇರೆ ದಾರಿ ಇಲ್ಲದೆ ಸ್ವಲಿಂಗರತಿಯಲ್ಲಿ ತೊಡಗುವವರು : ಮಾಮೂಲಿನ ಲೈಂಗಿಕ ಚಟುವಟಿಕೆಗೆ ಸಂಗಾತಿ ದೊರೆಯದಿದ್ದಾಗ, ಲೈಂಗಿಕ ಬಯಕೆಯ ಒತ್ತಡ ಕಡಿಮೆ ಮಾಡಿಕೊಳ್ಳಲು ಅಥವಾ ಒತ್ತಾಯ, ಸನ್ನಿವೇಶಕ್ಕೆ ಕಟ್ಟುಬಿದ್ದು ಸ್ವಲಿಂಗರತಿಯಲ್ಲಿ ತೊಡಗುತ್ತಾರೆ. ಮಾಮೂಲು ಲೈಂಗಿಕ ಚಟುವಟಿಕೆಗೆ ಅವಕಾಶ ಸಿಕ್ಕರೆ, ಸ್ವಲಿಂಗರತಿಯನ್ನು ಬಿಡಲು ತಯಾರಿರುತ್ತಾರೆ. ಸಾಧಾರಣವಾಗಿ ಹಾಸ್ಟೆಲ್‌ಗಳಲ್ಲಿ ವಾಸಿಸುವವರು, ಜೈಲ್‌ಗಳಲ್ಲಿರುವವರು, ತಮ್ಮ ಜೀವನ ಸಂಗಾತಿಯಿಂದ ದೂರವಿರುವವರು, ಯಾವುದೋ

ಕಾರಣದಿಂದ ಹೆಣ್ಣಿನೊಂದಿಗೆ ಲೈಂಗಿಕ ಸಂಪರ್ಕಕ್ಕೆ ಹಿಂಜರಿಯುವವರು, ಸೈನಿಕರಲ್ಲಿ, ಮನೆಯಿಂದ ದೂರವಿದ್ದು, ಲೈಂಗಿಕ ಕ್ರಿಯೆಗೆ ಸಂಗಾತಿ ಇಲ್ಲದವರು ಈ ಗುಂಪಿಗೆ ಸೇರುತ್ತಾರೆ. ಒಮ್ಮೆ ಶುರುಮಾಡಿದ ಮೇಲೆ, ಅದರಲ್ಲಿ ಆಕರ್ಷಣೆ ಕಂಡು ಮುಂದುವರೆಸಿರುತ್ತಾರೆ ವಿರೋಧ ಕಂಡು ಬಂದ ತಕ್ಷಣ, ಸ್ವಲಿಂಗರತಿಯನ್ನು ಬಿಟ್ಟುಬಿಡಲು ತಯಾರಿರುತ್ತಾರೆ.

ಚಿಕಿತ್ಸೆ

ಸ್ವಲಿಂಗರತಿಯನ್ನು ಅಭ್ಯಾಸ ಮಾಡಿಕೊಂಡು, ಅದನ್ನು ಬಿಡಲು ಇಚ್ಛಿಸುವವರಿಗೆ ಮನೋವೈದ್ಯರು, ಮನಶಾಸ್ತ್ರಜ್ಞರು ನೆರವಾಗಬಲ್ಲರು. ನಡೆವಳಿಕೆ ಚಿಕಿತ್ಸೆ ಮೂಲಕ, ವ್ಯಕ್ತಿಯ ಮನಸ್ಸು ಈ ಅ ಸ ಹ ಜ ಆಸೆಯನ್ನು ಬಿಡಲು ಹಾಗೂ ಮಾಮೂಲು ಲೈಂಗಿಕಕ್ರಿಯೆ ಬಗ್ಗೆ ಆಕರ್ಷಣೆ ಬೆಳೆಸಿಕೊಳ್ಳಲು ತರಪೇತಿ ನೀಡಲಾಗುತ್ತದೆ. ಇದರಿಂದ ವ್ಯಕ್ತಿ ಸಹಜ ಸ್ಥಿತಿಗೆ ಮರಳಲು ಸಾಧ್ಯವಾಗುತ್ತದೆ.

ತಪ್ಪು ನಂಬಿಕೆಗಳು

ಈ ಕೆಳಕಾಣುವ ತಪ್ಪು ನಂಬಿಕೆಗಳು ಪ್ರಚಲಿತವಿದ್ದು, ಅವನ್ನು ನಮ್ಮ ಮನಸ್ಸಿನಿಂದ ದೂರ ಮಾಡಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ನಮ್ಮ ಲೈಂಗಿಕ ಜೀವನ ಅತೃಪ್ತಿಯ ಆಗರವಾಗುತ್ತದೆ. ಮಾನಸಿಕ ಅಸ್ವಸ್ಥತೆ ಕಾಲಿಡುವ ಸಂಭವ ಇರುತ್ತದೆ. ತಪ್ಪು ನಂಬಿಕೆ ದೂರ ಮಾಡುವುದರಿಂದ ಲೈಂಗಿಕ ತೃಪ್ತಿ ಹೆಚ್ಚಿ ಮಾನಸಿಕ ಆರೋಗ್ಯವೂ ವೃದ್ಧಿಸುತ್ತದೆ.

* 'ಹಸ್ತಮೈಥುನ ಒಂದು ಕೆಟ್ಟ ಚಟ. ಅದು ಅನಾರೋಗ್ಯಕಾರಿ. ಅದರಿಂದ ಷಂಡತನ ಬರುತ್ತದೆ.'

ಖಂಡಿತ ಇದು ಸರಿ ಅಲ್ಲ. ಹಸ್ತಮೈಥುನ ಒಂದು ಸಹಜ, ಸ್ವಾಭಾವಿಕ ಕ್ರಿಯೆ. ಲೈಂಗಿಕ ಬೆಳವಣಿಗೆಯಲ್ಲಿ ಇದೊಂದು ಹಂತ. ಇದರಿಂದ ಯಾವ ಬಗೆಯ ತೊಂದರೆಯೂ ಇಲ್ಲ.

* 'ವೀರ್ಯ ಅತ್ಯಮೂಲ್ಯ. ವೀರ್ಯಸ್ಖಲನದಿಂದ ಶಕ್ತಿ ಸೋರಿಹೋಗುತ್ತದೆ. ವೀರ್ಯಸ್ಖಲನವನ್ನು ತಡೆಗಟ್ಟಬೇಕು.'

ಹೊರಬರಲೆಂದೇ ವೀರ್ಯ ಉತ್ಪತ್ತಿಯಾಗುತ್ತದೆ. ಅವಧಿಗೊಂದಾವರ್ತಿ ವೀರಸ್ಖಲನವಾಗುವುದು ಸಹಜ. ಇದನ್ನು ತಡೆಗಟ್ಟಬೇಕಾದಿಲ್ಲ.

* 'ಋತುಸ್ರಾವದ ಅವಧಿಯಲ್ಲಿ ಸ್ತ್ರೀ ಅಶುದ್ಧಳು. ಹೊರಗಡೆ ಇದ್ದು ಮೂರು ದಿನಗಳ ನಂತರ ಸ್ನಾನಮಾಡಿ ಶುದ್ಧಳಾಗಬೇಕು.'

ಋತುಸ್ರಾವ ಸ್ವಾಭಾವಿಕ ಕ್ರಿಯೆ. ಆಕೆ ಹೊರಗಡೆ ಇರಬೇಕಾಗಿಲ್ಲ. ಎಂದಿನಂತೆ ಎಲ್ಲ ಚಟುವಟಿಕೆಯಲ್ಲಿ ನಿರತಳಾಗಲು ಯಾವ ಅಡ್ಡಿಯೂ ಇಲ್ಲ.

* 'ಲೈಂಗಿಕ ಆಸೆ, ಬಯಕೆ, ಚಟುವಟಿಕೆ ಬಗ್ಗೆ ಮಾತಾಡುವುದು, ಪ್ರಶ್ನೆ ಕೇಳುವುದು ಕೆಟ್ಟ ಅಭಿರುಚಿ, ಪೋಲಿತನ.'

ಖಂಡಿತ ಅಲ್ಲ. ಅದರ ಬಗ್ಗೆ ಮಾತಾಡುವುದರಿಂದ, ಪ್ರಶ್ನೆ ಕೇಳುವುದರಿಂದ, ಚರ್ಚೆ ಮಾಡುವುದರಿಂದ ಅಜ್ಞಾನ, ತಪ್ಪು ನಂಬಿಕೆಗಳು ಮಾಯವಾಗಿ ಸರಿಯಾದ ತಿಳುವಳಿಕೆ ಮೂಡುತ್ತದೆ. ಇದರಿಂದ ಮಾನಸಿಕ ನೆಮ್ಮದಿ ಸಿಗುತ್ತದೆ.

* 'ಲೈಂಗಿಕ ಕ್ರಿಯೆ ಪ್ರಕೃತಿದತ್ತವಾದ ಕೌಶಲ. ಅದರಲ್ಲಿ ಕಲಿಯುವುದೇನಿದೆ?' ಲೈಂಗಿಕ ಕ್ರಿಯೆ ಮನುಷ್ಯನಲ್ಲಿ ಒಂದು ಸಂಕೀರ್ಣ ಕೌಶಲ, ಕಲೆಯಾಗಿದೆ.

ಅದನ್ನು ಹೇಗೆ ಮಾಡಿದರೆ ಹೆಚ್ಚು ಸುಖ, ತೃಪ್ತಿ ಸಿಗುತ್ತದೆ ಎಂಬುದನ್ನು ಅಭ್ಯಾಸದಿಂದ ಹಾಗೂ (ಗಂಡ–ಹೆಂಡತಿ) ಪರಸ್ಪರ ಅನ್ಯೋನ್ಯತೆಯಿಂದ ಕಲಿಯಬೇಕು.

* 'ನಮ್ಮನ್ನು ಲೈಂಗಿಕ ಕ್ರಿಯೆಗೆ ಸಿದ್ಧಪಡಿಸಿಕೊಳ್ಳುವುದು ನಮ್ಮ ಇಚ್ಛಾಶಕ್ತಿಯ ಹತೋಟಿಯಲ್ಲಿದೆ. ಬೇಕೆಂದಾಗ. ಬೇಕಾದ ಸ್ಥಳದಲ್ಲಿ ನಾವು ಲೈಂಗಿಕಕ್ರಿಯೆಗೆ ಸಿದ್ಧರಾಗಬೇಕು. ಇಲ್ಲವಾದಲ್ಲಿ ಅದು ದೌರ್ಬಲ್ಯದ ಸಂಕೇತ.'

ದೇಹವನ್ನು ಲೈಂಗಿಕಕ್ರಿಯೆಗೆ ಸಿದ್ಧಗೊಳಿಸುವುದು ನಮ್ಮ ಇಚ್ಛೆಯ ಹತೋಟಿಯಲ್ಲಿಲ್ಲ. ಸಮಯ, ಸನ್ನಿವೇಶ, ಪ್ರಚೋದನೆ ಸರಿಯಾಗಿದ್ದರೆ ನಮ್ಮ ಸ್ವಾಯತ್ತ ನರಮಂಡಲ (ಇದು ನಮ್ಮ ಹತೋಟಿಯಲ್ಲಿಲ್ಲ) ಲೈಂಗಿಕ ಚೋದನಿಕೆಗಳ ನೆರವಿನಿಂದ, ಸ್ವಯಂಚಾಲಿತವಾಗಿ ದೇಹವನ್ನು ಸಿದ್ಧಗೊಳಿಸುತ್ತದೆ. ಆದ್ದರಿಂದ ಸಮಯ, ಸನ್ನಿವೇಶವನ್ನು ಹೊಂದಿಸಿಕೊಳ್ಳುವುದು ಹಾಗೂ ಪಂಚೇಂದ್ರಿಯಗಳಿಗೆ ಸರಿಯಾದ ಪ್ರಚೋದನೆ ಸಿಗುವಂತೆ ಮಾಡುವುದಷ್ಟೇ ನಮ್ಮ ಹತೋಟಿಯಲ್ಲಿರುವುದು.

* 'ಶಿಶ್ನದ ಆಕಾರ, ಗಾತ್ರಕ್ಕೂ, ಲೈಂಗಿಕ ಸಾಮರ್ಥ್ಯಕ್ಕೂ ನೇರ ಸಂಬಂಧವಿದೆ. ಶಿಶ್ನ ಚಿಕ್ಕದಿದ್ದರೆ ಅದು ದೌರ್ಬಲ್ಯದ ಸಂಕೇತ. ಆಗ ಸಂಗಾತಿಗೆ ತೃಪ್ತಿ ಸಿಗುವುದಿಲ್ಲ.'

'ಶಿಶ್ನದ ಆಕಾರ, ಗಾತ್ರಕ್ಕೂ, ಲೈಂಗಿಕ ಸಾಮರ್ಥ್ಯ, ತೃಪ್ತಿಗೂ ಯಾವ

ಸಂಬಂಧವೂ ಇಲ್ಲ. ಲೈಂಗಿಕ ತೃಪ್ತಿಗೆ, ಲೈಂಗಿಕ ಕ್ರಿಯೆಯನ್ನು ಮಾಡುವ ರೀತಿ, ಮನೋಭಾವ, ಪರಸ್ಪರ ಪ್ರೀತಿ, ಹೊಂದಾಣಿಕೆಯೇ ಮುಖ್ಯ.

* 'ಶೀಘ್ರ ವೀರ್ಯಸ್ಖಲನ ಲೈಂಗಿಕ ದೌರ್ಬಲ್ಯದ ಸಂಕೇತ, ಲಕ್ಷಣ.'

ಅಲ್ಲ. ಯಾವುದೇ ಕಾರಣದಿಂದ ಮನಸ್ಸಿಗೆ ಉದ್ವೇಗ ಉಂಟಾದಾಗ ಶೀಘ್ರ ವೀರ್ಯಸ್ಖಲನವಾಗುತ್ತದೆ. ಉದ್ವೇಗ ಶಮನದಿಂದ ಇದು ಮಾಯವಾಗುತ್ತದೆ.

* 'ಲೈಂಗಿಕ ಸಾಮರ್ಥ್ಯವನ್ನು ಹೆಚ್ಚಿಸುವ ಔಷಧಿಗಳಿವೆ.'

ಲೈಂಗಿಕ ಸಾಮರ್ಥ್ಯ, ಶಕ್ತಿಯನ್ನು ಹೆಚ್ಚಿಸಬಲ್ಲ ಮಾತ್ರೆ, ಔಷಧ, ಸೂಜಿ ಮದ್ದು ಯಾವುದೂ ಸದ್ಯಕ್ಕೆ ಲಭ್ಯವಿಲ್ಲ. ಮಾರುಕಟ್ಟೆಯಲ್ಲಿ ಮಾರಾಟವಾಗುವ ಈ ಬಗೆಯ ಔಷಧಿಗಳಿಂದ ಹಣ ಪೋಲಾಗುತ್ತದೆಯೇ ವಿನಃ ಯಾವ ಪ್ರಯೋಜನವೂ ಇಲ್ಲ. ಕೆಲವು ಆಹಾರ ಪದಾರ್ಥಗಳು, ಪ್ರಾಣಿಗಳ ವೃಷಣಗಳನ್ನು ತಿಂದರೆ ಲೈಂಗಿಕ ಶಕ್ತಿ ವೃದ್ಧಿಸುತ್ತದೆ ಎಂಬುದಕ್ಕೆ ವೈಜ್ಞಾನಿಕ ಆಧಾರವಿಲ್ಲ.

* 'ಲೈಂಗಿಕ ಪ್ರಚೋದಕ ಸಾಹಿತ್ಯವನ್ನು ಓದಬಾರದು.'

ದಂಪತಿಗಳು ಖಂಡಿತ ಪ್ರಚೋದಕ ಸಾಹಿತ್ಯವನ್ನು ಓದಬೇಕು. ಅದರಿಂದ ಏಕತಾನತೆ ಇಲ್ಲವಾಗಿ ಲೈಂಗಿಕ ಆಸಕ್ತಿಯನ್ನು ಕಾಯ್ದುಕೊಳ್ಳಲು ಹಾಗೂ ವೈವಿಧ್ಯತೆಯನ್ನು ಪಡೆಯಲು ಸಾಧ್ಯವಾಗುತ್ತದೆ.

* 'ಲೈಂಗಿಕ ಕ್ರಿಯೆಯನ್ನು ಸಂತಾನೋತ್ಪತ್ತಿಗೆ ಮಾತ್ರ ಮಾಡಬೇಕು. ಅದನ್ನು ಮನರಂಜನೆಗಾಗಿ ಬಳಸುವುದು ತಪ್ಪು, ಪಾಪದ ಕೆಲಸ.'

ಈ ನಿಯಮ ಖಂಡಿತ ಸರಿ ಅಲ್ಲ. ಮನುಷ್ಯನಲ್ಲಿ ಲೈಂಗಿಕಕ್ರಿಯೆಗೆ ಮೂರು ಉದ್ದೇಶಗಳಿವೆ. ಸಂತಾನೋತ್ಪತ್ತಿ, ಬಾಂಧವ್ಯದ ಸ್ಥಾಪನೆ ಹಾಗೂ ಮನರಂಜನೆ. ಸಂತಾನೋತ್ಪತ್ತಿಗೆ ತಡೆಹಾಕಿದಮೇಲೆ, ದಂಪತಿಗಳು ಬಾಂಧವ್ಯ ವೃದ್ಧಿಗಾಗಿ ಹಾಗೂ ಮನೋರಂಜನೆಗಾಗಿ ಲೈಂಗಿಕ ಕ್ರಿಯೆ ನಡೆಸುವುದರಲ್ಲಿ ಯಾವ ತಪ್ಪೂ ಇಲ್ಲ. ಪರಸ್ಪರ ಹೊಂದಾಣಿಕೆಯಿಂದ ನಡೆಸಿದ ಲೈಂಗಿಕಕ್ರಿಯೆಯಿಂದ ಮನದ ಬೇಸರ, ಆಯಾಸ ಕಳೆದು, ಉತ್ಸಾಹ, ಲವಲವಿಕೆ ಮೂಡುತ್ತದೆ.

* ನೆನಪಿಡಿ : ಮಾನಸಿಕ ಆರೋಗ್ಯದಿಂದ ಸುಖಮಯ ದಾಂಪತ್ಯಜೀವನ; ಸುಖಮಯ ದಾಂಪತ್ಯ ಜೀವನದಿಂದ ಮಾನಸಿಕ ಆರೋಗ್ಯವೃದ್ಧಿ. ಆತಂಕ, ಬೇಸರ ಇತ್ಯಾದಿ ಮನೋಕ್ಲೇಶದ ನಿವಾರಣೆಯಿಂದ, ಲೈಂಗಿಕ ದುರ್ಬಲತೆ ಇಲ್ಲವಾಗುತ್ತದೆ.

ಹೆಚ್ಚಿನ ಲೈಂಗಿಕ ಸುಖ, ತೃಪ್ತಿ ಪಡೆಯುವುದು ಹೇಗೆ ?

"ಲೈಂಗಿಕ ಬಯಕೆ" ಮನುಷ್ಯನ ಹುಟ್ಟಾಸೆಗಳಲ್ಲಿ ಪ್ರಮುಖವಾದುದು ಎಂದಿದ್ದಾನೆ ಮನಶ್ಶಾಸ್ತ್ರದ ಪಿತಾಮಹ ಸಿಗ್ಮಂಡ್ ಫ್ರಾಯ್ಡ್. ಲೈಂಗಿಕಕ್ರಿಯೆ ನೀಡುವ ಸುಖದ ಅನುಭವಕ್ಕಾಗಿ ಪ್ರತಿಯೊಬ್ಬನೂ ಹಾತೊರೆಯುತ್ತಾನೆ. ಆದಕ್ಕಾಗಿ ಎಂತಹ ಸಾಹಸವನ್ನು ಮಾಡಲೂ ಸಿದ್ಧನಾಗುತ್ತಾನೆ. ಉಳಿದ ಕೆಲಸ ಕರ್ತವ್ಯಗಳನ್ನು ಬದಿಗೊತ್ತಿ ಅದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡುತ್ತಾನೆ. ಲೈಂಗಿಕ ಆವೇಶಕ್ಕೊಳಗಾದ ವ್ಯಕ್ತಿ ಸಾಮಾಜಿಕ, ನೈತಿಕ, ಧಾರ್ಮಿಕ ನೀತಿ ನಿಯಮಗಳನ್ನು ಗಾಳಿಗೆ ತೂರಿ, ನಿರ್ಲಜ್ಜನಾಗಿ ನಡೆದು ಕೊಳ್ಳುತ್ತಾನೆ ಎಂಬ ಹೇಳಿಕೆ ಇದೆ. ಲೈಂಗಿಕತೆ ಒಂದು ಮಹಾಪೂರ. ಅವರಲ್ಲಿ ಎಂತೆಂಥವರೋ ಕೊಚ್ಚಿಹೋಗಿದ್ದಾರೆ. ಅದರ ವಿರುದ್ಧ ಈಜುವುದು, ದಡ ಸೇರುವುದು ಬಹಳ ಪ್ರಯಾಸದ ಕೆಲಸ ಎಂದು ಅನುಭವಸ್ಥರು ನುಡಿಯುತ್ತಾರೆ. ಲೈಂಗಿಕತೆಯ ಪರಮೋದ್ದೇಶ ಸಂತಾನೋತ್ಪತ್ತಿಯಾದರೂ ಅದಕ್ಕೆ ಮತ್ತೂ ಎರಡು ಪ್ರಮುಖ ಉದ್ದೇಶಗಳಿವೆ. ಒಂದು ಬಾಂಧವ್ಯದ ವಿಕಾಸ, ಇನ್ನೊಂದು ಮನರಂಜನೆ. ಒಂದೆರಡು ಮಕ್ಕಳಿಗಿಂತ ಹೆಚ್ಚು ಬೇಡ ಎನ್ನುವ ಸ್ಥಿತಿ ಮುಟ್ಟಿರುವ ಮನುಷ್ಯನಲ್ಲಿ ಕ್ರಮೇಣ ಲೈಂಗಿಕತೆ ಮನಸ್ಸಿಗೆ ಆನಂದ, ಸುಖವನ್ನೀಯುವ ಕ್ರಿಯೆಯಾಗಿ ಬಳಸಲ್ಪಡುತ್ತಿದೆ. ಲೈಂಗಿಕ ಕ್ರಿಯೆಯಿಂದ ಹೆಚ್ಚು ಹೆಚ್ಚು ಆನಂದವನ್ನು ಪಡೆಯಲು, ಸುಖದ ಅನುಭವ ಹೊಂದಲು ನಾವು ಇಚ್ಛಿಸುತ್ತಿದ್ದೇವೆ. ಅನೇಕ ವಿಧಾನಗಳನ್ನು, ಸಾಧನಗಳನ್ನು, ಇದಕ್ಕಾಗಿ ಆವಿಷ್ಕರಿಸಿ ಬಳಸುತ್ತಿದ್ದೇವೆ. ಹೊಸ ಹೊಸ ಸಾಧನಗಳಿಗಾಗಿ ಹುಡುಕಾಟ, ಪ್ರಯೋಗಗಳನ್ನು ನಡೆಸುತ್ತಿದ್ದೇವೆ.

ಲೈಂಗಿಕ ಸಾಮರ್ಥ್ಯದ ಮೇಲೆ, ಪುರುಷ ತನ್ನ ಪುರುಷತ್ವವನ್ನು ಅಳೆಯುತ್ತಾನೆ. ಲೈಂಗಿಕಕ್ರಿಯೆಯಲ್ಲಿ ಆತನದೇ ಪ್ರಧಾನ ಹಾಗೂ ಸಕ್ರಿಯ ಪಾತ್ರ ; ಸ್ತ್ರೀಯದು ಕೇವಲ ಸ್ವೀಕರಿಸುವ, ಸಕ್ರಿಯವಲ್ಲದ ಪಾತ್ರ ಎಂಬ ನಂಬಿಕೆ, ಆಚರಣೆ ರೂಢಿಯಲ್ಲಿರುವುದರಿಂದ, ಪುರುಷನ ಲೈಂಗಿಕ ಕ್ರಿಯಾ ಸಾಮರ್ಥ್ಯಕ್ಕೆ ಪುರುಷ-ಸ್ತ್ರೀಯರಿಬ್ಬರೂ ಬಲು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಹೀಗಾಗಿ ಮಾದರಿ ಪುರುಷನೆಂದರೆ, ಲೈಂಗಿಕನಾಗಿ ಅಮಿತ ಸಾಮರ್ಥ್ಯವುಳ್ಳವನು. ದಣಿವರಿ

ಯದ ಚಟುವಟಿಕೆಯುಳ್ಳವನು ಎಂಬ ಅತಿರಂಜಿತ ಕಲ್ಪನೆಯನ್ನು ನಮ್ಮ ಸಾಹಿತ್ಯದಲ್ಲಿ, ಜನಪದ ನಂಬಿಕೆಗಳಲ್ಲಿ ಕಾಣಬಹುದು. ವೀರ್ಯವಂತ ಪುರುಷನ, ವರ್ಣರಂಜಿತ ಚಿತ್ರವನ್ನು ಕಾಣಬಹುದು. ದುರ್ಬಲನಾದ, ನಿರ್ವೀರ್ಯ ಪುರುಷನಿಗೆ ಸ್ಥಾನ ಮಾನವಿಲ್ಲ. ಆತನನ್ನು ಯಾವ ಸ್ತ್ರೀಯೂ ಬಯಸುವುದಿಲ್ಲ. ಆತನನ್ನು ಷಂಡ ಎಂದು ಕರೆದು ಅವಮಾನಗೊಳಿಸಲಾಗುತ್ತದೆ, ಹಾಸ್ಯ ಮಾಡಲಾಗುತ್ತದೆ. ಆತ ಬದುಕಿದ್ದರೂ ಸತ್ತಂತೆಯೇ.

ಹೀಗಾಗಿ ಪ್ರತಿಯೊಬ್ಬ ಪುರುಷನೂ, ಜನಪದ ನಂಬಿಕೆಯ ಅತಿರಂಜಿತ ವೀರ್ಯವಂತ ಪುರುಷನಂತಾಗಲೂ ಬಯಸುತ್ತಾನೆ. ತನ್ನ ಲೈಂಗಿಕ ಸಾಮರ್ಥ್ಯದ ಬಗ್ಗೆ ವಿಪರೀತ ಕಲ್ಪನೆ ಮಾಡಿಕೊಳ್ಳುತ್ತಾನೆ. ಲೈಂಗಿಕ ಸುಖದ ಬಗ್ಗೆ ಮೇರೆ ಇಲ್ಲದ ಊಹಾಪೋಹಗಳನ್ನು ಮಾಡುತ್ತಾನೆ. ಅವನ ಆಸೆ, ನಿರೀಕ್ಷೆಗಳು ಸಹಜವಾಗಿ ಅವಾಸ್ತವಿಕವಾದ್ದರಿಂದ, ನೆರವೇರುವುದಿಲ್ಲ. ನಿರಾಶೆ ಕಟ್ಟಿಟ್ಟ ಬುತ್ತಿಯಾಗುತ್ತದೆ. ಅಸಹಾಯಕತೆಯಿಂದ ಆತ ಚಡಪಡಿಸುತ್ತಾನೆ. ತನ್ನ ಕಲ್ಪನೆಯ ಮಟ್ಟ ಮುಟ್ಟಲು ಆತ ಏನು ಮಾಡಲೂ ಸಿದ್ಧನಾಗುತ್ತಾನೆ. ಯಾವುದಾದರೂ ಔಷಧ, ಚಿಕಿತ್ಸೆ ವಿಧಿವಿಧಾನಗಳಿವೆಯೇ ; ಅವುಗಳ ನೆರವು ಪಡೆದು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು, ಅಧಿಕ ಸುಖ ಪಡೆಯಲು ಸಾಧ್ಯವೇ ಎಂದು ಆಲೋಚಿಸಿ, ಅದಕ್ಕಾಗಿ ಎಲ್ಲೆಡೆ ಅರಸುತ್ತಾನೆ. ವೈದ್ಯರ, ಹಕೀಮರ. ಇತರ ಚಿಕಿತ್ಸಕರ ಮೊರೆ ಹೋಗುತ್ತಾನೆ. ಮಾರುಕಟ್ಟೆಯಲ್ಲಿ ಅಬ್ಬರದ ಪ್ರಚಾರದೊಂದಿಗೆ ಮಾರಾಟವಾಗುವ ಔಷಧ, ಮುಲಾಮು, ಮಾಂತ್ರಿಕ ಬಳೆ, ಉಂಗುರ, ತಾಯಿತಗಳನ್ನು ಕೊಂಡುಕೊಂಡು ಸಾಕಷ್ಟು ಹಣ ವೆಚ್ಚ ಮಾಡುತ್ತಾನೆ. ಲೈಂಗಿಕ ಸಾಮರ್ಥ್ಯ ಹೆಚ್ಚಿಸಬಲ್ಲವು ಎನ್ನುವ ವಿಧಿವಿಧಾನಗಳ ಸರ್ಕಸ್ ಮಾಡುತ್ತಾನೆ. ಇವುಗಳಿಂದ ಉಪಯೋಗ ಕಾಣದಿದ್ದರೆ ವಿಷಣ್ಣನಾಗುತ್ತಾನೆ. ಸೋಲು, ನಿರಾಶೆಗಳ ರಣಹದ್ದುಗಳು ಅವನನ್ನು ಕಿತ್ತು ತಿನ್ನುತ್ತವೆ. ಕೊರಗಿ, ಸೊರಗಿ 'ರೋಗಿಯಾಗಿ'ನರಳುತ್ತಾನೆ. ಯಾರೊಂದಿಗೂ ಹೇಳಿಕೊಳ್ಳಲಾಗದ ನೋವು, ಸಂಕಟದಿಂದ ಬಳಲಿ ಬಸವಳಿಯುತ್ತಾನೆ.

ಇದಕ್ಕೆ ಪರಿಹಾರವಿಲ್ಲವೇ ? ಲೈಂಗಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು, ಅದರಿಂದ ಹೆಚ್ಚಿನ ಸುಖ, ಆನಂದವನ್ನು ಪಡೆಯಲು ಸಾಧ್ಯವೇ ? ಖಂಡಿತ ಸಾಧ್ಯವಿದೆ. ಇದಕ್ಕಾಗಿ ಮಾತ್ರೆ, ಸೂಜಿಮದ್ದು, ಮುಲಾಮು. ಮಾಂತ್ರಿಕ ಉಂಗುರ, ಬಳೆ, ತಾಯಿತಗಳ ಅವಶ್ಯಕತೆ ಇಲ್ಲ. ಏಕೆಂದರೆ ಅವುಗಳಿಂದ ಎಳ್ಳಷ್ಟೂ ಪ್ರಯೋಜನವಿಲ್ಲ. ಲೈಂಗಿಕ ಕ್ರಿಯೆ ಬಗ್ಗೆ, ನಿಮ್ಮ ಸಂಗಾತಿಯ ಬಗ್ಗೆ, ನಿಮ್ಮ ಜವಾಬ್ದಾರಿಯ ಬಗ್ಗೆ ಸರಿಯಾದ ತಿಳುವಳಿಕೆ, ಧೋರಣೆ ಮತ್ತು ಆಚರಣೆಯಿಂದ, ನಿಮ್ಮ ಲೈಂಗಿಕ ಕ್ರಿಯೆಯಿಂದ ನೀವು ಹೆಚ್ಚಿನ ಆನಂದ, ಸುಖವನ್ನು ಅನುಭವಿಸುವಿರಲ್ಲದೆ,

ಆ ಆನಂದ, ಸುಖವನ್ನು ನಿಮ್ಮ ಸಂಗಾತಿಗೂ ಕೊಡಬಲ್ಲಿರಿ. ಈ ಮುಂದೆ ಕೊಡ ಲಾಗುವ ಮಾಹಿತಿ ಮತ್ತು ಸಲಹೆಗಳನ್ನು ಮನಸ್ಸಿಟ್ಟು ಗಮನಿಸಿ. ಅದನ್ನು ಅರ್ಥ ಮಾಡಿಕೊಂಡು, ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಪಾಲಿಸಲು ಪ್ರಾಮಾಣಿಕ ವಾಗಿ ಪ್ರಯತ್ನಿಸಿ.

1 ಪೂರ್ವ ಷರತ್ತಿಲ್ಲದೆ ಪ್ರೀತಿಸಿ

ಲೈಂಗಿಕ ಕ್ರಿಯೆಯಲ್ಲಿ ಪುರುಷ ಮತ್ತು ಸ್ತ್ರೀ ಇಬ್ಬರೂ ಸಮಾನ ಭಾಗಿಗಳು. "ಇದರಲ್ಲಿ ಪುರುಷನದೇ ಪ್ರಧಾನ ಪಾತ್ರ. ಅವನು ಬಯಸಿದಂತೆ ಮಾಡಲು ಅವನು ಸ್ವತಂತ್ರ. ಇದರಲ್ಲಿ ಸ್ತ್ರೀಯ ಪಾತ್ರ ತುಂಬಾ ಗೌಣ" ಎಂಬ ನಂಬಿಕೆ ತಪ್ಪು. ಇಷ್ಟ ವಿಲ್ಲದೆ, ಅನಿವಾರ್ಯವಾಗಿ ಒಬ್ಬ ವ್ಯಕ್ತಿಯೊಂದಿಗೆ ಸಂಭೋಗ ಮಾಡುವಿರಾದರೆ, ಅದ ರಿಂದ ಯಾವ ಸುಖವಾಗಲೀ ಸಿಗುವುದಿಲ್ಲ. ನೀವು ಪ್ರೀತಿಸದ ಸಂಗಾತಿಯೊಂದಿಗೆ ಲೈಂಗಿಕಕ್ರಿಯೆ ನಡೆಸಲು ಹೋದರೆ, ಸುಖ ದೊರೆಯುವುದಿರಲಿ, ಲೈಂಗಿಕ ಕ್ರಿಯೆ ಯನ್ನು ನಡೆಸಲೂ ಸಾಧ್ಯವಾಗದೇ ಹೋಗಬಹುದು. ನಿಮ್ಮ ಜನನಾಂಗ ಉದ್ರೇಕ ಗೊಳ್ಳದೇ, ನೀವು ವಿಫಲರಾಗಬಹುದು. ಆಗ ನಿಮಗೆ ಗಾಬರಿಯಾಗಿ, ನಿಮ್ಮ ಲೈಂಗಿಕ ಸಾಮರ್ಥ್ಯದ ಬಗ್ಗೆ ಅನುಮಾನದ ಭೂತ ನಿಮ್ಮ ಮನಸ್ಸನ್ನು ಹೊಕ್ಕು, ಹಾವಳಿ ಪ್ರಾರಂಭಿಸುತ್ತದೆ. ಅನುಮಾನ, ಆತಂಕ, ಭಯಗಳು ಲೈಂಗಿಕ ಸಾಮ ರ್ಥ್ಯದ ಮಹಾ ಶತ್ರುಗಳು. ಅವುಗಳಿಂದ, ಮುಂದಿನ ಸಲವೂ ವಿಫಲವಾಗಿ, 'ನಾನು ಷಂಡನಾದೆ' ಎಂಬ ಅನಿಸಿಕೆಯಿಂದ ನೀವು ಜರ್ಝರಿತರಾಗುತ್ತೀರಿ. ಇದು ರಾಜೀ ವನ ಕಥೆಯಿಂದ ಮತ್ತಷ್ಟು ಸ್ಪಷ್ಟವಾಗುತ್ತದೆ.

ಒಂದು ದಿನ ಒಬ್ಬ ಯುವಕ ಹಿಂಜರಿಯುತ್ತಾ, ನಮ್ಮ ಆಸ್ಪತ್ರೆಯ ಹೊರ ರೋಗಿ ವಿಭಾಗಕ್ಕೆ ಬಂದು ತನಗೆ ನರದೌರ್ಬಲ್ಯವಿದೆ. ಒಳ್ಳೆಯ ಚಿಕಿತ್ಸೆಗಾಗಿ ಬಂದಿ ದ್ದೇನೆ ಎಂದ. 'ನರದೌರ್ಬಲ್ಯವೆಂದರೇನು, ನಿನಗೇನು ತೊಂದರೆಯಾಗುತ್ತದೆ ಹೇಳು' ಎಂದೆ. ಆತ ತಲೆತಗ್ಗಿಸಿ ಕಣ್ಣೀರು ಹಾಕಿದ. "ಸಾರ್, ನಾನು ಷಂಡ ನಾಗಿಬಿಟ್ಟಿದ್ದೇನೆ. ನನ್ನ ಹೆಂಡತಿಯೊಂದಿಗೆ ಸಂಭೋಗ ಮಾಡಲು ಆಗುತ್ತಿಲ್ಲ. ಇನ್ನು ನನ್ನಂಥವನು ಬದುಕಿದ್ದೇನು ಪ್ರಯೋಜನ" ಎಂದ. ಅವನಿಗೆ ಸಮಾಧಾನ ಮಾಡಿ, ತೊಂದರೆಯ ವಿವರಗಳನ್ನು ಕಲೆಹಾಕಿದೆ. ಒಂದು ವರ್ಷದ ಹಿಂದೆ ಆತ ತನ್ನ ಅಕ್ಕನ ಮಗಳನ್ನು ಮದುವೆಯಾಗಿದ್ದ. ಇದು ಅವನಿಗೆ ಬೇಡದ ಮದುವೆ. ಹುಡುಗಿ ಕಪ್ಪು. ನೋಡಲು ಸುಂದರಿಯಲ್ಲ. ತೆಳ್ಳಗೆ, ಬೆಳ್ಳಗೆ, ಲಕ್ಷಣವಾದ ಹುಡುಗಿಯನ್ನು ಮದುವೆಯಾಗುವ ಆಸೆ ಅವನಿಗಿತ್ತು. ಆದರೆ ಹಿರಿಯರ ಒತ್ತಾಯ, ಆಮಿಷಗಳಿಗೆ ಕಟ್ಟುಬಿದ್ದು ಮದುವೆಗೆ ಹೂಂ ಎಂದಿದ್ದ. "ಸರ್ ಅವಳನ್ನು

ನೋಡಲು, ಮಾತನಾಡಲು ಅವಳೊಂದಿಗೆ ಬದುಕು ಮಾಡಲು ನನಗಿಷ್ಟವಿಲ್ಲ. ಅವಳ ಪಕ್ಕದಲ್ಲಿ ಮಲಗುವುದೆಂದರೆ, ಮೈಮೇಲೆ ಮುಳ್ಳುಗಳೇಳುತ್ತವೆ." ಈ ಒಂದು ವರ್ಷದಲ್ಲಿ ನಾಲ್ಕೈದು ಬಾರಿ ದೈಹಿಕ ಸಂಪರ್ಕ ಮಾಡಲು ಯತ್ನಿಸಿದ್ದ. ಆದರೆ ಜನನಾಂಗ ಉದ್ರೇಕಗೊಳ್ಳಲೇ ಇಲ್ಲ. ಆದರೆ ಎರಡು ಬಾರಿ, ಬೇರೆ ಸ್ತ್ರೀಯೊಬ್ಬಳೊಂದಿಗೆ ಯಶಸ್ವಿಯಾಗಿ ಲೈಂಗಿಕ ಕ್ರಿಯೆ ಮಾಡಿದ್ದ !

"ನಿನ್ನ ಹೆಂಡತಿಯನ್ನು ನೀನು ಇಷ್ಟಪಡದಿರುವುದು, ಆಕೆ ನೋಡಲು ಸುಂದರಿ ಅಲ್ಲ ಎಂಬುದು ಒಂದೇ ಕಾರಣವೇ ? ಅಥವಾ ಇನ್ನೇನಾದರೂ ಬೇರೆ ಕಾರಣಗಳಿದ್ದಾವೆಯೋ" ಎಂದು ವಿಚಾರಿಸಿದೆ.

"ಬೇರೆ ಇನ್ಯಾವ ಕಾರಣವೂ ಇಲ್ಲ. ಅವಳ ಗುಣ ಅಪರಂಜಿ. ನನ್ನನ್ನು ಆಕೆ ತುಂಬಾ ಪ್ರೀತಿಸುತ್ತಾಳೆ. ನನ್ನ ಎಲ್ಲ ಬೇಕು ಬೇಡಗಳನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಾಳೆ. ಅಚ್ಚುಕಟ್ಟಾಗಿ ಅಡುಗೆ, ಮನೆ ಕೆಲಸ ಮಾಡುತ್ತಾಳೆ. ಮನೆಯಲ್ಲಿ ಎಲ್ಲರೂ ಅವಳನ್ನು ಮೆಚ್ಚುತ್ತಾರೆ. ನೋಡಲು ಸುಂದರವಾಗಿಲ್ಲ ಎಂಬುದು ಒಂದೇ ಕೊರತೆ. ಅವಳನ್ನು ನೋಡುತ್ತಿದ್ದಂತೆ, ಇಂಥಹ ಸಾಧಾರಣ ರೂಪಿನವಳನ್ನು ಕಟ್ಟಿಕೊಂಡೆನಲ್ಲ. ಇವಳಿಂದ ನನಗೇನು ಸುಖ ಸಿಕ್ಕೀತು ಎನಿಸುತ್ತದೆ" ಎಂದ.

ಈ ರೀತಿ ಬಹುಪಾಲು ಪುರುಷರು ಯೋಚಿಸುತ್ತಾರೆ. ತಮಗೆ ಲೈಂಗಿಕ ಉದ್ರೇಕ ಬರಲು, ಲೈಂಗಿಕ ಸುಖ ಸಿಗಲು ವಿಶ್ವ ಸುಂದರಿಯ ಮೈಮಾಟವುಳ್ಳ, ಸಿನೇಮಾ ತಾರೆಯಂತೆ ಆಕರ್ಷಕ ರೂಪವುಳ್ಳ ಸ್ತ್ರೀಯೇ ಬೇಕು ಎಂದು ನಂಬುತ್ತಾರೆ. ನಿಜ ಹೇಳಬೇಕೆಂದರೆ, ಮೈಮಾಟಕ್ಕೂ, ರೂಪಕ್ಕೂ, ಲೈಂಗಿಕ ಸುಖಕ್ಕೂ ಸಂಬಂಧವಿಲ್ಲ ! ಅತ್ಯಂತ ಆಕರ್ಷಕ ಮೈಮಾಟವಿರುವ ಸ್ತ್ರೀ ಲೈಂಗಿಕ ಚಟುವಟಿಕೆಯಲ್ಲಿ ನಿಷ್ಕ್ರಿಯಳಾಗಿ, ಗಂಡಿಗೆ ಸುಖ ಕೊಡದಿರಬಹುದು. ನೋಡಲು ಅಷ್ಟೇನೂ ಆಕರ್ಷಕವಲ್ಲದ, ಸಾಧಾರಣ ರೂಪಿನ ಸ್ತ್ರೀ ಲೈಂಗಿಕ ಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪುರುಷನಿಗೆ ಆನಂದವನ್ನು ಕೊಡಬಲ್ಲಳು. ಲೈಂಗಿಕ ಕ್ರಿಯೆಯ ವಿವಿಧ ಹಂತಗಳು, ಅವುಗಳಲ್ಲಿ ಗಂಡು ಹೆಣ್ಣಿನ ಜವಾಬ್ದಾರಿ ಪಾತ್ರವನ್ನು ಅರಿತ ದಂಪತಿಗಳು ಹೆಚ್ಚಿನ ಸುಖ ಸಂತೋಷಪಡುತ್ತಾರೆ ಎಂಬುದು ಅಧ್ಯಯನಗಳಿಂದ ವ್ಯಕ್ತವಾಗಿದೆ.

ರಾಜೀವನಿಗೆ ಈ ವಿಚಾರ ತಿಳಿಸಿ, ಆತ ತನ್ನ ಹೆಂಡತಿಯನ್ನು ಯಾವ ಪೂರ್ವ ಷರತ್ತಿಲ್ಲದೆ ಒಪ್ಪಿಕೊಂಡು ಪ್ರೀತಿಸಲು ಸೂಚಿಸಲಾಯಿತು. ಆಕೆಯ ಒಳ್ಳೆಯ ಗುಣ ನಡವಳಿಕೆಗಳನ್ನು, ಆಕೆ ಆತನಲ್ಲಿಟ್ಟಿರುವ ಪ್ರೀತಿಯನ್ನು ಗುರುತಿಸಿ, ಮೆಚ್ಚಲು ಪ್ರಾರಂಭಿಸಲು ಸಲಹೆ ನೀಡಲಾಯಿತು. ಇನ್ನೊಬ್ಬ ಹೆಂಗಸಿನೊಂದಿಗೆ ಆತ

ಯಶಸ್ವಿಯಾಗಿ ಸಂಭೋಗ ನಡೆಸಲು ಆಗಿರುವಾಗ, ಆತ ಷಂಡನೆನ್ನಲು ಪುರಾವೆ ಇಲ್ಲ. ವೃಥಾ ಗಾಬರಿಗೊಳ್ಳದಿರಲು, ಅಪಮಾನ ಪಡದಿರಲು ಪ್ರೋತ್ಸಾಹಿಸಲಾಯಿತು. ಕ್ರಮೇಣ, ತನ್ನ ನಿಲುವನ್ನು ಬದಲಿಸಿಕೊಳ್ಳಲು ರಾಜೀವ ಶಕ್ತನಾದ. ಈಗ ದಾಂಪತ್ಯ ಜೀವನದಲ್ಲಿ ಸುಖ ಕಾಣುತ್ತಿದ್ದಾನೆ.

ನೆನಪಿಡಿ : ನೀವು ನಿಮ್ಮ ಬಾಳಸಂಗಾತಿಯನ್ನು ಮನಃಪೂರ್ವಕವಾಗಿ ಪ್ರೀತಿಸಿ ಆಕೆಯ ಒಳ್ಳೆಯ ಅಂಶಗಳನ್ನು ಮೆಚ್ಚಿಕೊಳ್ಳಿ. ಪ್ರೀತಿಸುವ ಸಂಗಾತಿ ಲೈಂಗಿಕ ಬಯಕೆಯನ್ನು ಹೆಚ್ಚಿಸುತ್ತಾಳೆ. ಆಕೆಯೊಂದಿಗೆ ನೀವು ನಡೆಸುವ ಲೈಂಗಿಕಕ್ರಿಯೆಯಿಂದ ಅಧಿಕ ಸುಖ, ಆನಂದ ನಿಮಗೆ ಸಿಗುತ್ತದೆ. ಆಕೆಗೂ ಸಿಗುತ್ತದೆ.

2. ಅವೈಜ್ಞಾನಿಕ ಧೋರಣೆ ಬಿಡಿ

ಲೈಂಗಿಕ ಕ್ರಿಯೆ ಬಗ್ಗೆ ಎಲ್ಲರಿಗೂ ಹಿಂಗದ ಆಸೆ, ಆಸಕ್ತಿ. ಅದು ನೀಡುವ ಸುಖ, ಆನಂದಕ್ಕಾಗಿ ಆತುರ, ಕಾತುರ. ಆದರೆ ಅದರ ಬಗ್ಗೆ ಸದ್ಭಾವನೆ ಇಲ್ಲ. "ಲೈಂಗಿಕ ಕ್ರಿಯೆ ಕತ್ತಲಲ್ಲಿ ಮಾಡಿ ಮುಗಿಸಬೇಕಾದ ಅನಿಷ್ಟ. ಅದೊಂದು ಕೊಳಕು ಕೆಲಸ, ಪೋಲಿ ಚಟುವಟಿಕೆ" ಎಂಬ ಧೋರಣೆ ಎಲ್ಲೆಡೆ ಕಂಡುಬರುತ್ತದೆ. ಅದರ ಬಗ್ಗೆ ಮಾತನಾಡುವಂತಿಲ್ಲ. "ಮಾತಾಡುವವರು ನಾಚಿಕೆ, ಮಾನ ಮರ್ಯಾದೆ ಇಲ್ಲದವರು. ದುರ್ಬಲರು" ಎಂಬ ಭಾವನೆ ಇದೆ. ಲೈಂಗಿಕ ಕ್ರಿಯೆ ಬಗ್ಗೆ ಕುಚೋದ್ಯದ, ವ್ಯಂಗ್ಯದ ಮಾತುಗಳನ್ನಾಡಲಾಗುತ್ತದೆ. ಈ ಬಗೆಯ ಧೋರಣೆಯಿಂದಾಗಿ ಲೈಂಗಿಕ ಕ್ರಿಯೆ ಹೊಸಬರ ಪಾಲಿಗೆ ಒಂದು ರಹಸ್ಯ. ಅದರ ಬಗ್ಗೆ ಅತಿರಂಜಿತ ಊಹಾಪೋಹ ಮಾಡುತ್ತಾರೆ. ಅವಾಸ್ತವಿಕ ನಿಲುವು ನಿರೀಕ್ಷೆಗಳನ್ನಿಟ್ಟುಕೊಳ್ಳುತ್ತಾರೆ. ಯಾವಾಗ ನಿಜಸ್ಥಿತಿ ಗೊತ್ತಿಲ್ಲವೋ, ವಾಸ್ತವಿಕ ಅಂಶಗಳ ತಿಳುವಳಿಕೆ ಇಲ್ಲವೋ ಅಸಂಖ್ಯಾತ ತಪ್ಪು ಕಲ್ಪನೆ, ಅವೈಜ್ಞಾನಿಕ ನಂಬಿಕೆಗಳನ್ನು ಎಲ್ಲೆಡೆ ಕಾಣುತ್ತೇವೆ. ಅಪಾಯಕಾರಿ ಆಚರಣೆಗಳನ್ನು ನೋಡುತ್ತೇವೆ. ಲೈಂಗಿಕಕ್ರಿಯೆ ಒಂದು ವಿಚಿತ್ರ ಮಾಯಾಲೋಕವಾಗಿ, ಅದ್ಭುತ ಅನುಭವಗಳಿಗಾಗಿ, ಜನ ಅಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಡೆಯುತ್ತಾ, ಪ್ರತಿ ಕ್ಷಣ ಎಡವುತ್ತಾ, ಮುಗ್ಗರಿಸುತ್ತಾ ಬೀಳುತ್ತಾ ನೋವು ಪಡುವುದನ್ನು ಕಾಣುತ್ತೇವೆ. ಲೈಂಗಿಕಕ್ರಿಯೆ ಬಗ್ಗೆ ವಿಪರೀತ ಕಲ್ಪನೆ, ಅತಿಯಾದ ನಿರೀಕ್ಷೆ ಇಟ್ಟುಕೊಂಡು, ವಾಸ್ತವದಲ್ಲಿ ಅದೊಂದೂ ಆಗದೆ, ನಿರಾಶೆಯ ಪಾತಾಳದಲ್ಲಿ ಬಿದ್ದು, ಭ್ರಮನಿರಸನ ಮಾಡಿಕೊಂಡು, ಲೈಂಗಿಕಕ್ರಿಯೆಯಿಂದ ಸುಖ, ಸಂತೋಷ ಪಡೆಯದವರ ಸಂಖ್ಯೆಯೇ ಹೆಚ್ಚು. ಲೈಂಗಿಕ ದುಸ್ಸಾಹಸಗಳನ್ನು ಮಾಡಿ, ತಾವೇ ಸೃಷ್ಟಿ ಮಾಡಿದ ಸಮಸ್ಯೆ–ಸಂಕಟಗಳ ಗೋಜಲಿನಲ್ಲಿ ಸಿಲುಕಿಕೊಂಡು ಒದ್ದಾಡುವವರಿಗೆ ಲೆಕ್ಕವಿಲ್ಲ. ತಪ್ಪು ನಂಬಿಕೆಯ ಕೆಲವು ಉದಾಹರಣೆಗಳು :

ನನಾಂಗದ ಬಗ್ಗೆ ಅತಿಕಲ್ಪನೆ

ಇಪ್ಪತ್ತೆರಡು ವರ್ಷದ ಸ್ಫುರದ್ರೂಪಿ ಸದಾನಂದ ಒಳ್ಳೆಯ ನೌಕರಿಯಲ್ಲಿ ದ್ದಾನೆ. ಆತನಿಗೆ ಮದುವೆ ಮಾಡಿ, ಮನೆಗೆ ಸೊಸೆಯನ್ನು ತರಲು ಆತನ ತಂದೆ ಯಿಗಳು ಇಷ್ಟಪಟ್ಟಿದ್ದಾರೆ. ಒಳ್ಳೆಯ ಮನೆತನ, ಲಕ್ಷಣವಾದ ಹುಡುಗ, ಹೆಣ್ಣು ಡಲು ಆಸೆ ಪಡುವವರಿಗೆ ಕೊರತೆ ಇಲ್ಲ. ಆದರೆ ಸದಾನಂದ ನನಗೆ ಮದುವೆ ಡ ಎನ್ನುತ್ತಾನೆ. ಯಾವ ಕಾರಣವನ್ನೂ ಕೊಡುವುದಿಲ್ಲ. ಅವನ ತಂದೆ ತಾಯಿ ಮನಸ್ಸಿಗೆ ಒಬ್ಬ ಹುಡುಗಿ ಬಂದಿದ್ದಾಳೆ. ಒಳ್ಳೆಯ ಗುಣ, ಸುಂದರ ರೂಪ. ದಾನಂದ ಮಾತ್ರ ಮದುವೆಯೇ ಬೇಡ ಎನ್ನುತ್ತಾನೆ. ಹಲವರು ಹೇಳಿಯಾಯಿತು. ಲವಾರು ಬಲವಂತ ಮಾಡಿಯಾಯಿತು. ಏನೂ ಪ್ರಯೋಜನವಾಗಲಿಲ್ಲ. ಡಾಕ್ಟರೇ ನೀವಾದರೂ ಸ್ವಲ್ಪ ವಿಚಾರಿಸಿ. ನಮ್ಮೊಂದಿಗೆ ಅವನು ಯಾವ ಕಾರಣ ನ್ನೂ ಹೇಳುತ್ತಿಲ್ಲ. ಸುಮ್ಮನೆ ಮದುವೆ ಬೇಡ ಎನ್ನುತ್ತಾನೆ. ನೀವು ಬುದ್ಧಿ ಳಿ" ಎಂದರು ಅವನ ತಂದೆ. ಸದಾನಂದ ಸಂಕೋಚ ಪ್ರವೃತ್ತಿಯ ಹುಡುಗ. ತ್ಯೇಕವಾಗಿ ಆತನೊಂದಿಗೆ ಕುಳಿತು ಆತನ ಅಭಿಪ್ರಾಯ ಕೇಳಿದೆ. ಸ್ವಲ್ಪಹೊತ್ತು ಲೆ ತಗ್ಗಿಸಿಕೊಂಡು ಕುಳಿತ ಆತ "ಡಾಕ್ಟರೇ ನನ್ನಂಥವನು ಮದುವೆಯಾಗಲು ಧ್ಯವಿಲ್ಲ" ಎಂದ. "ಏನು ಹಾಗೆಂದರೆ, ಏನು ಕೊರತೆ ಇದೆ ನಿನ್ನಲ್ಲಿ ?" ಎಂದೆ. ಲ್ಪ ಹಿಂಜರಿದು "ನನ್ನ ಜನನಾಂಗ ಚಿಕ್ಕದು. ಮದುವೆಯಾದರೆ ದಾಂಪತ್ಯ ವನ ನಡೆಸಲಾರೆ. ಗೊತ್ತಿದ್ದೂ ಏಕೆ ಒಂದು ಹುಡುಗಿಯ ಜೀವನ ಹಾಳುಮಾಡ ಕು" ಎಂದ. ಮತ್ತಷ್ಟು ವಿವರಗಳನ್ನು ಕಲೆ ಹಾಕಿದಾಗ, ತನ್ನ ಇಬ್ಬರು, ೂವರು ಸ್ನೇಹಿತರಿಗೆ ಹೋಲಿಕೆ ಮಾಡಿದರೆ, ತನ್ನ ಶಿಶ್ನ ಚಿಕ್ಕದು. ತಾನು ಗಿಕವಾಗಿ ದುರ್ಬಲ ಎಂಬ ನಂಬಿಕೆಯಿಂದ ಕಂಗಾಲಾಗಿದ್ದ.

ಸದಾನಂದನಂತೆ ತಮ್ಮ ಜನನಾಂಗದ ಗಾತ್ರದ ಬಗ್ಗೆ ಚಿಂತಿಸಿ, ಬಳಲುವವರು ನೇಕರಿದ್ದಾರೆ. ದೊಡ್ಡ ಶಿಶ್ನ ಹೆಚ್ಚಿನ ಲೈಂಗಿಕ ಸಾಮರ್ಥ್ಯದ ಸಾಧನ ಎಂದು ಪ್ಪಾಗಿ ನಂಬಿ, ತಮ್ಮದು ಚಿಕ್ಕದು, ತಮ್ಮ ಲೈಂಗಿಕ ಶಕ್ತಿ ಕಡಿಮೆ ಎಂದು ಅವರು ರಗುತ್ತಾರೆ. ವೈಜ್ಞಾನಿಕವಾಗಿ ಹೇಳುವುದಾದರೆ ಶಿಶ್ನದ ಗಾತ್ರಕ್ಕೂ, ಲೈಂಗಿಕ ಮರ್ಥ್ಯಕ್ಕೂ ಯಾವ ಸಂಬಂಧವೂ ಇಲ್ಲ. ವಿವಿಧ ಆಕಾರ, ಗಾತ್ರದ ಜನರಿರು ತೆ, ಜನನಾಂಗದ ಗಾತ್ರವೂ ಒಬ್ಬರಿಂದೊಬ್ಬರಿಗೆ ಬದಲಾಗುತ್ತದೆ. ಇನ್ನೊಬ್ಬರ ನನಾಂಗದ ಗಾತ್ರದೊಂದಿಗೆ ಹೋಲಿಸಿಕೊಂಡು ತಮ್ಮದು ಚಿಕ್ಕದು ಎಂದು ಕೊರಗು ದು ಅನಗತ್ಯ. ಶಿಶ್ನದ ಗಾತ್ರಕ್ಕೆ ಹೊಂದಿಕೊಂಡು, ಸ್ಪರ್ಶಸುಖ ನೀಡುವ ಮರ್ಥ್ಯ ಯೋನಿಗಿದೆ ಎಂಬುದನ್ನು ಮರೆಯಬಾರದು.

ಹಸ್ತಮೈಥುನದ ಬಗ್ಗೆ ಭಯ

"ಹಸ್ತಮೈಥುನ ಮಾಡಿಕೊಳ್ಳುವುದು ತಪ್ಪು. ಅದರಿಂದ ಶಿಶ್ನ ಸಣ್ಣಗಾಗಿ ಬಿಡುತ್ತದೆ, ನಂತರ ಅದರ ಶಕ್ತಿ ಕುಂದಿ, ಸರಿಯಾಗಿ ನಿಮಿರುವುದಿಲ್ಲ" ಎಂಬ ಅವೈಜ್ಞಾನಿಕ ನಂಬಿಕೆ ಎಲ್ಲೆಡೆ ಕಂಡುಬರುತ್ತದೆ. ವೀರ್ಯದ ಬಗ್ಗೆ ಇರುವ ಅತಿರಂಜಿತ ಹೇಳಿಕೆಗಳಿಗೆ ಕೊನೆ ಮೊದಲಿಲ್ಲ. "ವೀರ್ಯದ ಒಂದೊಂದು ತೊಟ್ಟೂ ಅತ್ಯಮೂಲ್ಯ. ಅದನ್ನು ಹೊರಹಾಕಲು ಬಿಡಬಾರದು. ಬ್ರಹ್ಮಚರ್ಯೆ ಮಾಡಿ ವೀರ್ಯವನ್ನು ಹಿಡಿದಿಟ್ಟರೆ, ದೇಹದ ಶಕ್ತಿ ವೃದ್ಧಿಸುತ್ತದೆ. ವೀರ್ಯಸ್ಖಲನವಾಗುತ್ತಿದ್ದರೆ, ಅದರಿಂದ ಲೈಂಗಿಕ ದುರ್ಬಲತೆ ಬರುತ್ತತೆ. ಶರೀರ ಕುಂದುತ್ತದೆ. ಕಳಾಹೀನವಾಗುತ್ತದೆ, ಕೊನೆಗೆ ಷಂಡತನ ಬರುತ್ತದೆ" ಎಂಬ ಸುಳ್ಳು ವಿಚಾರಗಳು ಪ್ರಚಲಿತವಿವೆ. ಹದಿಹರೆಯದ ವಯಸ್ಸಿನಲ್ಲಿ ಹಸ್ತಮೈಥುನ ಮಾಡಿಕೊಂಡು, ವೀರ್ಯಸ್ಖಲನ ಮಾಡಿಕೊಂಡ ವ್ಯಕ್ತಿ ಪರಿತಪಿಸುತ್ತಾನೆ. ತಾನು ಮಾಡಬಾರದ ಕಾರ್ಯವನ್ನು ಮಾಡುತ್ತಿದ್ದೇನೆ, ವೀರ್ಯದ ರೂಪದಲ್ಲಿ ತನ್ನ ಶಕ್ತಿ, ಸಾಮರ್ಥ್ಯ, ಪುರುಷತನ ಹರಿದುಹೋಗುತ್ತಿದೆ, ತಾನು ದುರ್ಬಲ, ಸ್ತ್ರೀಯನ್ನು ತೃಪ್ತಿಪಡಿಸಲಾಗದ ಷಂಡ ಎಂದು ಭಯವಿಹ್ವಲನಾಗುತ್ತಾನೆ. ಈ ಆತಂಕ, ಭಯದಿಂದ ಆತ ಲೈಂಗಿಕ ಚಟುವಟಿಕೆಯಲ್ಲಿ ವಿಫಲನಾಗುತ್ತಾನೆ. ಆಗ ಆತನ ಭಯ ಆತಂಕ ಮತ್ತಷ್ಟು ಹೆಚ್ಚುತ್ತದೆ. ವಿಫಲತೆ ಪುನರಾವರ್ತನೆಯಾಗುತ್ತದೆ. ಇದೊಂದು ವಿಷವರ್ತುಲವಾಗಿ, ಆತ ಕಾರ್ಯತಃ ದುರ್ಬಲನಾಗುತ್ತಾನೆ.

ವೈಜ್ಞಾನಿಕ ಅಧ್ಯಯನ ಮತ್ತು ಪ್ರಯೋಗಗಳಿಂದ ಹಸ್ತಮೈಥುನ, ವೀರ್ಯಸ್ಖಲನಗಳು ಅನಾರೋಗ್ಯಕಾರಿ ಅಲ್ಲ ಎಂದು ಸ್ಪಷ್ಟವಾಗಿದೆ. ಮನೋವಿಜ್ಞಾನಿಗಳು ಮತ್ತು ಲೈಂಗಿಕ ತಜ್ಞರ ಪ್ರಕಾರ ಹಸ್ತಮೈಥುನ ವ್ಯಕ್ತಿಯ ಲೈಂಗಿಕ ಬೆಳವಣಿಗೆಯಲ್ಲಿ ಒಂದು ಸಹಜ ಹಂತ. ಹೆಚ್ಚೂ ಕಡಿಮೆ ಎಲ್ಲರೂ, ಹದಿಹರೆಯದ ಅವಧಿಯಲ್ಲಿ ಹಸ್ತಮೈಥುನ ಮಾಡಿಕೊಳ್ಳುತ್ತಾರೆ. ಮದುವೆಯಾಗಿ ಲೈಂಗಿಕಕ್ರಿಯೆಗೆ ಸಂಗಾತಿ ದೊರೆಯುತ್ತಿದ್ದಂತೆ, ಅದು ಕಡಿಮೆಯಾಗುತ್ತದೆ. ಹಾಗೆಯೇ ವ್ಯಕ್ತಿಯ ವೃಷಣಗಳು ಮತ್ತು ಅದಕ್ಕೆ ಸಂಬಂಧಿಸಿದ ಅಂಗಾಂಗಗಳಲ್ಲಿ ವೀರ್ಯೋತ್ಪತ್ತಿ ಸದಾ ನಡೆದಿದ್ದು, ಅವಧಿಗೊಂದಾವರ್ತಿ ವೀರ್ಯ ಹೊರಹೋಗಿಬಿಡುತ್ತದೆ. ವೀರ್ಯ ಹಿಡಿದಿಡುವುದರಿಂದ ದೇಹದ ಶಕ್ತಿ ಹೆಚ್ಚುತ್ತದೆ ಎಂಬುದಕ್ಕೆ ವೈಜ್ಞಾನಿಕ ಆಧಾರವಿಲ್ಲ.

ಶೀಘ್ರ ವೀರ್ಯಸ್ಖಲನ, ಶಿಶ್ನ ಸರಿಯಾಗಿ ನಿಮಿರದಿರುವುದು, ಸಂಭೋಗ ಮಾಡಲಾಗದಿರುವುದು, ಅತೃಪ್ತಿ ಇತ್ಯಾದಿ ಲೈಂಗಿಕ ದುರ್ಬಲತೆಯ ಬಹುಪಾಲು ಪ್ರಕರಣಗಳಲ್ಲಿ, ಅವಕ್ಕೆ ಕಾರಣ-ಹಸ್ತಮೈಥುನ ಮತ್ತು ವೀರ್ಯಸ್ಖಲನಕ್ಕೆ ಸಂಬಂಧಿಸಿದ

ಭಯ, ಹೆದರಿಕೆಗಳು ಎಂಬುದು ಗಮನಾರ್ಹ. ಇದರ ಬಗ್ಗೆ ಸಲ್ಲದ ಭೀತಿಯನ್ನು ಬಿಡಿ.

ಆಸೆ–ಆತಂಕ

ಪೂರ್ವ ಷರತ್ತಿಲ್ಲದ, ಕಟ್ಟುಪಾಡಿಲ್ಲದ, ಮುಕ್ತ ಲೈಂಗಿಕ ಚಟುವಟಿಕೆ ದಂಪತಿಗಳಿಗೆ ಅತೀವ ಸಂತೋಷವನ್ನು ತರಬಲ್ಲದು. ಆದರೆ ಹೆಚ್ಚಿನ ಸ್ತ್ರೀಪುರುಷರು ಸಂಭೋಗವನ್ನು ಹೀಗೇ ಮಾಡಬೇಕು. ಪ್ರತಿಬಾರಿಯೂ ಅತ್ಯುತ್ತಮವಾಗಿ ನಿರ್ವಹಿಸಬೇಕು ಎಂದು ನಿರೀಕ್ಷೆ ಇಟ್ಟುಕೊಂಡು ಆ ಮಟ್ಟ ಮುಟ್ಟಲು ಆಶಿಸುತ್ತಾರೆ. ತತ್ಪರಿಣಾಮವಾಗಿ, ಅಂತಹ ಮಟ್ಟ ಅಥವಾ ಯಶಸ್ಸನ್ನು ತಲುಪುತ್ತೇವೋ ಇಲ್ಲವೋ, ತಲುಪದಿದ್ದರೆ ತನ್ನ ಸಂಗಾತಿ ತನ್ನನ್ನು ದೂರಬಹುದು ಎಂಬ ಆತಂಕಕ್ಕೆ ಈಡಾಗುತ್ತಾರೆ. ಚೆನ್ನಾಗಿ ಓದಿದ್ದರೂ, ಬುದ್ಧಿವಂತನಾಗಿದ್ದರೂ, ವಿ ಪ ರೀ ತ ಆತಂಕದಿಂದ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದು, ಫೇಲಾಗುವ ವಿದ್ಯಾರ್ಥಿಯಂತೆ, ಲೈಂಗಿಕ ಸಾಮರ್ಥ್ಯ ಚೆನ್ನಾಗಿದ್ದರೂ, ಲೈಂಗಿಕ ಕ್ರಿಯೆಯಲ್ಲಿ ವಿಫಲರಾಗುತ್ತಾರೆ. ಇದು ಪುರುಷರಿಗೆ ಹೆಚ್ಚು ಅನ್ವಯವಾಗುತ್ತದೆ. ಸಾಮಾನ್ಯವಾಗಿ ಎಲ್ಲ ಪುರುಷರೂ ತಮ್ಮ ಹೆಂಡತಿಯ ಮುಂದೆ, ತಮ್ಮ ಲೈಂಗಿಕ ಸಾಮರ್ಥ್ಯವನ್ನು ಪ್ರದರ್ಶಿಸಿ, ಭಲೆ ಎನಿಸಿಕೊಳ್ಳಲು ಇಷ್ಟಪಡುತ್ತಾರೆ. ಪ್ರತಿಬಾರಿಯೂ, ಪೂರ್ಣವಾಗಿ ಯಶಸ್ವಿಯಾಗಬೇಕು. ತನ್ನ ಬಲವನ್ನು ಪ್ರದರ್ಶಿಸಿ, ಪುರುಷತ್ವವನ್ನು ನಿರೂಪಿಸಬೇಕು ಎಂದು ಹಠಕ್ಕೆ ತೊಡಗುತ್ತಾರೆ.

ಆದರೆ ಜೊತೆ ಜೊತೆಯಲ್ಲೇ—ಇದಾಗದಿದ್ದರೆ ಏನು ಗತಿ, ಆಕೆ ನನ್ನನ್ನು ದುರ್ಬಲನೆಂದುಕೊಂಡುಬಿಡುತ್ತಾಳೆ. ನನ್ನ ಮಾನ ಹೋಗುತ್ತದೆ ಎಂದು ಅಳುಕುತ್ತಾರೆ. ಹೀಗೆ ಪ್ರತಿಬಾರಿಯೂ ತಮ್ಮ ಪುರುಷತ್ವವನ್ನೇ ಪಣವಾಗಿಡುವುದರಿಂದ, ಮಾನಸಿಕವಾಗಿ, ದೈಹಿಕವಾಗಿ ದಣಿಯುತ್ತಾರೆ. ಪ್ರತಿಬಾರಿಯೂ ಅತ್ಯುನ್ನತ ಮಟ್ಟವನ್ನು ಮುಟ್ಟಲು ಸಾಧ್ಯವಿಲ್ಲ. ಎಷ್ಟೇ ತರಪೇತಿ ಹೊಂದಿದ್ದರೂ, ಎಷ್ಟೇ ಸಮರ್ಥನಾಗಿದ್ದರೂ ಒಬ್ಬ ಕ್ರೀಡಾಪಟು ಪ್ರತಿ ಪಂದ್ಯದಲ್ಲೂ ತನ್ನ ಅತ್ಯುನ್ನತ ಮಟ್ಟವನ್ನು ತೋರಿಸಲಾರ. ಹಾಗೆಯೇ ಇದೂ ಕೂಡ. ಯಾವುದೋ ಚಿಂತೆ, ಮನೋಕ್ಲೇಶ, ದಿನದ ಕೆಲಸದ ಶ್ರಮ, ವಾತಾವರಣದ ಗದ್ದಲ, ಹವೆಯ ಬ ದ ಲಾ ವ ಣೆ ಇತ್ಯಾದಿ ಯಾವುದೇ ಕಾರಣದಿಂದ ಒಮ್ಮೆ ವಿಫಲನಾಗಿಬಿಟ್ಟರೆ, ಅಪಮಾನದ ಕೀಟ ಅವರ ಮನಸ್ಸನ್ನು ಕೊರೆಯತೊಡಗುತ್ತದೆ. ಮುಂದಿನ ಸಲ ಮಾಡಲು ಹೊರಟಾಗ, ಇಂದೂ ವಿಫಲನಾಗುತ್ತೇನೇನೋ ಎಂಬ

ಅನುಮಾನ ಉಡದಂತೆ ಹಿಡಿಯುತ್ತದೆ. ಈ ಆತಂಕ, ಅನುಮಾನದಿಂದ ಮತ್ತೆ ವಿಫಲರಾಗುತ್ತಾರೆ. ಆದ್ದರಿಂದ ತಾನು ಹೇಗೆ ನಿರ್ವಹಿಸುತ್ತೇನೆ, ಉನ್ನತ ಮಟ್ಟದ ಸಾಮರ್ಥ್ಯ ತೋರಿಸುತ್ತೇನೆಯೋ ಎಂಬ ನಿರೀಕ್ಷೆ ಇಟ್ಟುಕೊಳ್ಳದೆ ಯಾವುದೇ ನಿರ್ಬಂಧ, ಒತ್ತಡವಿಲ್ಲದೆ, ನಿರಾಳವಾಗಿ ಸಂಭೋಗ ಕ್ರಿಯೆಯಲ್ಲಿ ತೊಡಗುವುದೇ ಅಪೇಕ್ಷಣೀಯ. ನಿರಾಳವಾದ ಮನೋಸ್ಥಿತಿಯು, ಕಟ್ಟುಪಾಡಿಲ್ಲದೆ ಫ್ರೀಯಾಗಿ ಸಂಭೋಗ ಮಾಡುವುದರಿಂದ ಹೆಚ್ಚು ಆನಂದ, ಸುಖ, ತೃಪ್ತಿ ಸಿಗುತ್ತದೆ,

3. ಪಂಚೇಂದ್ರಿಯಗಳ ಸದುಪಯೋಗ

ಸಂಭೋಗದಿಂದ ಪೂರ್ಣ ಪ್ರಮಾಣದ ಸುಖ, ಸಂತೋಷಗಳನ್ನು ಪಡೆಯಬೇಕಾದರೆ, ಈ ಕ್ರಿಯೆ ನಡೆಯುವ ಅವಧಿಯಲ್ಲಿ ನಿಮ್ಮ ಪಂಚೇಂದ್ರಿಯಗಳ ಸದುಪಯೋಗದ ಬಗ್ಗೆ ನಿಮಗೆ ಚೆನ್ನಾಗಿ ತಿಳಿದಿರಬೇಕು. ಯಾವ ದಂಪತಿಗಳು ಲೈಂಗಿಕ ಚಟುವಟಿಕೆಯಲ್ಲಿ ತಮ್ಮ ಪಂಚೇಂದ್ರಿಯಗಳನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಾರೋ ಅವುಗಳಿಗೆ ಸೂಕ್ತ ಪ್ರಚೋದನೆ ನೀಡುತ್ತಾರೋ, ಅವರು ಉನ್ನತ ಆನಂದ ಮತ್ತು, ಸುಖಾನುಭವ ಶಿಖರಗಳನ್ನು ತಲುಪುತ್ತಾರೆ.

ಲೈಂಗಿಕಕ್ರಿಯೆ ಮಾಡಬೇಕೆಂಬ ಆಸೆ ನಿಮಗೆ ಬರುತ್ತದೆ. ಆದರೆ ಆ ಕ್ರಿಯೆಗೆ ನಿಮ್ಮ ಶರೀರವನ್ನು ಸಜ್ಜುಗೊಳಿಸುವುದು ನಿಮ್ಮ ಇಚ್ಛಾಶಕ್ತಿಯ ಹತೋಟಿಯಲ್ಲಿಲ್ಲ ಎಂದರೆ ನಿವ ಗೆ ಆಶ್ಚರ್ಯವಾಗಬಹುದು. ನಮ್ಮ ದೇಹದಲ್ಲಿ ಎರಡು ಬಗೆಯ ನರವ್ಯವಸ್ಥೆ ಇದೆ. ಒಂದು ಕೇಂದ್ರ ನರಮಂಡಲ ವ್ಯವಸ್ಥೆ. ಇದು ಹೊರಗಿನಿಂದ ನಮ್ಮ ಪಂಚೇಂದ್ರಿಯಗಳ ಮೂಲಕ ಬರುವ ಎಲ್ಲಾ ಸಂವೇದನೆಗಳನ್ನು ಸ್ವೀಕರಿಸಿ. ವಿಶ್ಲೇಷಿಸಿ. ಸೂಕ್ತ ಕ್ರಿಯೆ ಪ್ರತಿಕ್ರಿಯೆಗಳಿಗೆ ವ್ಯವಸ್ಥೆ ಮಾಡುತ್ತದೆ. ನಮ್ಮ ಹೊರ ಅಂಗಾಂಗಗಳ ಚಲನೆ ಇದರ ಹತೋಟಿಯಲ್ಲಿದೆ. ಇನ್ನೊಂದು ಸ್ವನಿಯಂತ್ರಿತ ನರ ವ್ಯವಸ್ಥೆ. ಇದು ನಮ್ಮ ಒಳ ಅಂಗಾಂಗಗಳು ಉದಾ : ಹೃದಯ. ಶ್ವಾಸಕೋಶ, ಮೂತ್ರಜನಕಾಂಗ, ಜನನಾಂಗಗಳನ್ನು ನಿಯಂತ್ರಿಸಿ ನಿರ್ದೇಶಿಸುತ್ತದೆ. ನಮ್ಮ ಸ್ವಇಚ್ಛೆಯಿಂದ ಹೃದಯ ಬಡಿತ ಅಥವಾ ಮೂತ್ರಜನಕಾಂಗದ ಕೆಲಸವನ್ನು ಏರುಪೇರು ಮಾಡಲು ಸಾಧ್ಯವಿಲ್ಲ. ಅಂತೆಯೇ ನಮ್ಮ ಇಷ್ಟದಂತೆ ಜನನಾಂಗವನ್ನು ಉದ್ರೇಕಿಸುವುದು ಸಾಧ್ಯವಿಲ್ಲ ಎಂಬುದನ್ನು ನೀವು ನೆನಪಿಡಬೇಕು. ಅಂದರೆ ಶಿಶ್ನ ನಿಮಿರುವುದು, ಯೋನಿ ಒದ್ದೆಯಾಗಿರುವುದು (ಇವೆರಡೂ ಲೈಂಗಿಕ ಉದ್ರೇಕದ ಲಕ್ಷಣಗಳು) ನಮ್ಮ ಹತೋಟಿಯಲ್ಲಿಲ್ಲ. ಇವನ್ನು ತಿಳಿಯದೆ, ಈಗ ಶಿಶ್ನ ನಿಮಿರಲಿ ಎಂದು ಆಜ್ಞೆ ಮಾಡಿದರೆ. ಅದು ನಡೆಯುವುದಿಲ್ಲ. ಆಗ ನೀವು ಖಿನ್ನರಾಗುತ್ತೀರಿ, ಗಾಬರಿಗೊಳ್ಳುತ್ತೀರಿ. ಹಾಗಾದರೆ ಏನು ಮಾಡಬೇಕು ?

ಸ್ವನಿಯಂತ್ರಿತ ಕೇಂದ್ರ ನರ ಮಂಡಲದ ಆಡಳಿತ ವ್ಯಾಪ್ತಿಯಲ್ಲಿರುವ ಜನನಾಂಗವನ್ನು ನೇರವಾಗಿ ಪ್ರಚೋದಿಸಲು ಸಾಧ್ಯವಿಲ್ಲ. ಆದರೆ ಕೇಂದ್ರ ನರಮಂಡಲದ ಮೂಲಕ, ಒತ್ತಡ ತಂದು, ಪ್ರಚೋದಿಸಬಹುದು. ಕೇಂದ್ರ ನರಮಂಡಲವನ್ನು ಸಂಪರ್ಕಿಸುವುದು ಹೇಗೆ? ಇದಕ್ಕೆ ರಾಜಮಾರ್ಗ ನಮ್ಮ ಪಂಚೇಂದ್ರಿಯಗಳು. ಕಣ್ಣು, ಕಿವಿ, ಚರ್ಮ, ಮೂಗು ಮತ್ತು ನಾಲಗೆ ಮೂಲಕ ಇದು ಸಾಧ್ಯ. ಇದನ್ನು ವಿವರವಾಗಿ ನೋಡೋಣ.

ಅ) ಕಣ್ಣುಗಳು—ನೋಟ :

ನೋಡಲು ಆಕರ್ಷಕ ಮೈಮಾಟವುಳ್ಳ ಸ್ತ್ರೀಯನ್ನು ನೋಡಿದಾಗ ಪುರುಷ ಲೈಂಗಿಕವಾಗಿ ಉದ್ರೇಕಗೊಳ್ಳುತ್ತಾನೆ. ಆಕೆಯ ಮಾದಕ ತುಟಿ, ಉಬ್ಬಿದ ವಕ್ಷಸ್ಥಳ, ನೀಳವಾದ ಕಾಲುಗಳು ಆತನ ಮನಸ್ಸಿನಲ್ಲಿ ಬಯಕೆಯ ಕಿಚ್ಚನ್ನು ಹಚ್ಚುತ್ತವೆ. ಇದು ಎಲ್ಲರ ಅನುಭವ. ಹಾಗೆಯೇ ದೃಢಕಾಯನಾದ ವಿಶಾಲ ಎದೆಯ ಪುರುಷನನ್ನು ಕಂಡಾಗ ಸ್ತ್ರೀ ಪ್ರಚೋದಿತಳಾಗುತ್ತಾಳೆ. ಈ ಸಂಗತಿಯನ್ನು ನೀವು ಹೆಚ್ಚಾಗಿ ಉಪಯೋಗಿಸಿಕೊಳ್ಳಬೇಕು.

ಕೆಲವರು ಸಂಭೋಗ ಮಾಡಲು ದೀಪವಾರಿಸುತ್ತಾರೆ. ಕತ್ತಲಲ್ಲಿ ಈ ಕ್ರಿಯೆಯನ್ನು ಮಾಡುತ್ತಾರೆ. ಅವರು ಅಮೂಲ್ಯವಾದ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ನಸು ಬೆಳಕಿನಲ್ಲಿ ಸಂಗಾತಿಯನ್ನು ನೋಡುತ್ತಾ ಆಕೆಯ ಶರೀರದ ವಿವಿಧ ಭಾಗಗಳ ರೂಪ ಆಕರ್ಷಣೆಯನ್ನು ನೋಡಿ ಅನುಭವಿಸುವುದರಿಂದ ಪುರುಷ ಹೆಚ್ಚು ಪ್ರಚೋದಿತನಾಗುತ್ತಾನೆ. ಹಾಗೆಯೇ ಸ್ತ್ರೀ ಪುರುಷನ ದೇಹದ ಭಾಗಗಳನ್ನು ನೋಡಿ ಉತ್ತೇಜಿತಳಾಗುತ್ತಾಳೆ. ಆದ್ದರಿಂದ ದಂಪತಿಗಳು ಮಲಗುವ ಕೋಣೆಯಲ್ಲಿ ಮಂದವಾದ ದೀಪದ ವ್ಯವಸ್ಥೆ ಮಾಡಿಕೊಳ್ಳಬೇಕು. ಎಣ್ಣೆಯ ದೀಪ ಅಥವಾ ಮೇಣದ ಬತ್ತಿಯಾದರೆ ಸಾಕು. ಹಂತ ಹಂತವಾಗಿ ದೇಹದ ಅನಾವರಣ ಹೆಚ್ಚು ಪ್ರಚೋದನಕಾರಿ ಎಂದು ತಿಳಿದುಬರುತ್ತದೆ.

ಆ) ಕಿವಿಗಳು : ಧ್ವನಿ

ಸಂಗಾತಿಯ ಸವಿಮಾತು, ಪ್ರಿಯತಮೆಯ ಪಿಸು ಮಾತು, ಪ್ರೀತಿಯ ಅನುರಾಗ ತುಂಬಿದ ಮಧುರ ಸಂಭಾಷಣೆ, ಲೈಂಗಿಕ ಆಸೆ, ಬಯಕೆಯನ್ನು ಹೆಚ್ಚಿಸಲು ನೆರವಾಗುತ್ತದೆ. ಮಾತಾಡದೆ ಮೌನವಾಗಿ ಸಂಭೋಗ ಮಾಡುವುದರಿಂದ ಸುಖ ಕಡಿಮೆ. ತಮ್ಮ ಇಷ್ಟಾನಿಷ್ಟಗಳನ್ನು ಪರಸ್ಪರ ಹೇಳಿಕೊಳ್ಳುವುದು. ಯಾವುದು ಚೆಂದ ಯಾವುದು ಅಂದ ಎಂದು ತಿಳಿಸುವುದು. ಪ್ರೀತಿಯ ಮಾತನಾಡುವುದು ಈ

ಅವಧಿಯಲ್ಲಿ ಬಹಳ ಉತ್ತೇಜನಕಾರಿ. 'ನೀವೆಷ್ಟು ಒಳ್ಳೆಯವರು' ಎಂಬ ಹೆಣ್ಣಿನ ನುಡಿ, 'ನೀನೆಷ್ಟು ಚೆನ್ನಾಗಿದ್ದೀಯಾ' ಎಂಬ ಗಂಡಿನ ನುಡಿ, ಜನನಾಂಗಗಳು ಹೂವಿನಂತೆ ಅರಳಲು ಸಹಾಯವಾಗುತ್ತದೆ. ಜೊತೆಗೆ ಮನಸ್ಸಿಗೆ ಉಲ್ಲಾಸವಾಗುವ ಹಾಡು ಅಥವಾ ಸಂಗೀತವನ್ನು ಹಿನ್ನೆಲೆಯಲ್ಲಿ ಹಾಕಿದರೆ ಇನ್ನೂ ಸೊಗಸು.

ಇ) ಮೂಗು : ವಾಸನೆ

ಪ್ರಾಣಿಗಳು ವಾಸನೆಯಿಂದಲೇ ಪ್ರಚೋದಿತಗೊಳ್ಳುತ್ತವೆ. ಆದರೆ ಮನುಷ್ಯನಲ್ಲಿ ಇದರ ಪಾತ್ರ ಕಡಿಮೆ. ಆದರೆ ಕೆಟ್ಟ, ಅಹಿತಕರ ವಾಸನೆ ಲೈಂಗಿಕ ಆಸೆಯನ್ನು ಕಮರಿಸಿ, ದೇಹ ಕ್ರಿಯೆಗೆ ಸಜ್ಜುಗೊಳ್ಳದಂತೆ ಮಾಡಿಬಿಡಬಹುದು. ದಿನವಿಡೀ ಕೆಲಸ ಮಾಡಿ, ಬೆವರು ಇಳಿದು ಶರೀರ ದುರ್ಗಂಧಮಯವಾಗುತ್ತದೆ. ಬಾಯಿ, ಕಂಕಳು, ಜನನಾಂಗದ ಸುತ್ತ ಮುತ್ತಲಿನ ಭಾಗ ದುರ್ವಾಸನೆ ಬೀರಬಹುದು. ಆದ್ದರಿಂದ ಲೈಂಗಿಕ ಚಟುವಟಿಕೆಯ ಮೊದಲು ಸ್ನಾನ ಮಾಡಿ, ಸ್ವಚ್ಛರಾಗುವುದು ಇಬ್ಬರಿಗೂ ಅಗತ್ಯ. ಜೊತೆಗೆ ಅಭಿರುಚಿಗೆ ತಕ್ಕಂತೆ ಸುವಾಸನೆ ಬೀರುವ ಸುಗಂಧ ವಸ್ತುಗಳನ್ನು (ಸೋಪು, ಸ್ನೋ. ಪೌಡರ್, ಸೆಂಟು ಇತ್ಯಾದಿ) ಬಳಸಬಹುದು. ಮಲಗುವ ಕೋಣೆಯಲ್ಲಿ ಗಂಧದ ಕಡ್ಡಿ, ಮಲ್ಲಿಗೆ ಇತ್ಯಾದಿ ವಾಸನಾಭರಿತ ಹೂವುಗಳನ್ನು ಇಡಬಹುದು. ಇದೆಲ್ಲಾ ಲೈಂಗಿಕವಾಗಿ ಉತ್ತೇಜನಕಾರಿ.

ಈ) ಸ್ಪರ್ಶ ಮತ್ತು ರುಚಿ
(ಚರ್ಮ–ನಾಲಗೆ)

ಲೈಂಗಿಕ ಪ್ರಚೋದನೆಯಲ್ಲಿ ಉಳಿದೆಲ್ಲ ಇಂದ್ರಿಯಗಳಿಗಿಂತ, ಚರ್ಮದ ಪಾತ್ರ ಅದ್ವಿತೀಯ. ಸ್ಪರ್ಶ ಸಂವೇದನೆ, ಪುರುಷನಲ್ಲಿ, ಸ್ತ್ರೀಯಲ್ಲಿ ಲೈಂಗಿಕ ಬಯಕೆಯನ್ನು ಪ್ರಚೋದಿಸಿ, ಅವರ ದೇಹಗಳನ್ನು ಸಂಭೋಗಕ್ಕೆ ಅಣಿಮಾಡುವುದರಲ್ಲಿ ಮಂತ್ರದಂಡದಂತೆ ಕೆಲಸ ಮಾಡುತ್ತದೆ. ಸ್ಪರ್ಶ ಸಂವೇದನೆಯ ತೀವ್ರತೆ ದೇಹದ ಒಂದೊಂದು ಭಾಗದಲ್ಲಿ ಒಂದೊಂದು ತೆರನಾಗಿರುತ್ತದೆ. ಕೆಲವು ಭಾಗಗಳು ಅತ್ಯುನ್ನತ ಮಟ್ಟದ ಸಂವೇದನಾ ಸುಖವನ್ನು ಕೊಟ್ಟರೆ, ಕೆಲವು ಭಾಗಗಳು ಕಡಿಮೆ ಆದರೆ ವಿಭಿನ್ನವಾದ ಸುಖವನ್ನು ನೀಡುತ್ತವೆ. ಒಬ್ಬೊಬ್ಬರಲ್ಲಿ ಒಂದೊಂದು ಭಾಗ. ಹೆಚ್ಚು ಪ್ರಚೋದಕ ಎಂಬುದನ್ನು ಗಮನದಲ್ಲಿಡಬೇಕು. ಯಾರಲ್ಲಿ ಯಾವ ಭಾಗ ತೀವ್ರ ಪ್ರಚೋದಕ ಎಂಬುದನ್ನು ಮುಟ್ಟಿ ಪರೀಕ್ಷಿಸಿ ನಿರ್ಧರಿಸಬೇಕಾಗುತ್ತದೆ. ಇದನ್ನು ದಂಪತಿಗಳು ತಾವೇ ಪರಸ್ಪರ ಇಡೀ ಶರೀರವನ್ನು ಸ್ಪರ್ಶಿಸಿ, ಗುರುತಿಸಿಕೊಳ್ಳಬೇಕು. ಪರಸ್ಪರ ಹೇಳಿಕೊಳ್ಳಬೇಕು. ಸಾಮಾನ್ಯವಾಗಿ ಸ್ತ್ರೀಯ ಕಣ್ಣು

ರೆಪ್ಪೆಗಳು, ಕಿವಿ ಅಂಚು, ತುಟಿಗಳು, ಕತ್ತಿನ ಪಾರ್ಶ್ವ ಭಾಗ, ವಕ್ಷಸ್ಥಳ, ತೊಡೆಯ ಮೇಲ್ಭಾಗ ಹೆಚ್ಚು ಪ್ರಚೋದಕ ಭಾಗಗಳು. ಪುರುಷನಲ್ಲಿ ಕೂಡ ತುಟಿಗಳು, ಕತ್ತಿನ ಪಾರ್ಶ್ವಭಾಗ, ಕಂಕಳು, ತೊಡೆಯ ಮೇಲ್ಭಾಗದ ಸ್ಪರ್ಶ ಉತ್ತೇಜನಕಾರಿ. ಇಬ್ಬರಲ್ಲೂ ಜನನಾಂಗಗಳು ಮತ್ತು ಅವುಗಳ ಸುತ್ತಲಿನ ಭಾಗದ ಸ್ಪರ್ಶ ಹೆಚ್ಚು ಉದ್ರೇಕಕಾರಿ. ಆದ್ದರಿಂದ ಸಂಭೋಗಕ್ಕೆ ಮೊದಲು, ದಂಪತಿಗಳು ನಿಧಾನವಾಗಿ ದೇಹದ ವಿವಿಧ ಪ್ರಚೋದಕ ಭಾಗಗಳನ್ನು ಕೈ ಬೆರಳುಗಳು ಮತ್ತು ತುಟಿಗಳಿಂದ ಸ್ಪರ್ಶಿಸಿ, ಸಂಗಾತಿಯನ್ನು ಉತ್ತೇಜಿಸಬೇಕು. ಇದು ಎಷ್ಟು ದೀರ್ಘಕಾಲ ಮಾಡಿದರೆ ಅಷ್ಟು ಹೆಚ್ಚು ಸುಖದಾಯಕ.

ಸಂಭೋಗ ಪೂರ್ವದ ಈ ಪ್ರೇಮದಾಟ ಲೈಂಗಿಕ ಸಾಮರ್ಥ್ಯವನ್ನು ವೃದ್ಧಿಸುವ ಟಾನಿಕ್. ಸ್ವನಿಯಂತ್ರಿತ ನರಮಂಡಲವನ್ನು ಪ್ರಚೋದಿಸಿ, ಜನನಾಂಗಗಳು ಪರಿಪೂರ್ಣವಾಗಿ ಸ್ಪಂದಿಸಲು ಇದು ಅನುವು ಮಾಡಿಕೊಡುತ್ತದೆ. ಸ್ಪರ್ಶ ಸಂವೇದನೆಯ ಜೊತೆಗೆ, ದಂಪತಿಗಳು ತುಟಿಗೆ ತುಟಿ ಸೇರಿಸಿ ಚುಂಬಿಸಿದಾಗ, ನಾಲಗೆಗೆ ನಾಲಗೆಯನ್ನು ಬೆಸೆದಾಗ ರುಚಿಯ ಸಂವೇದನೆಯೂ ಸೇರಿಕೊಳ್ಳುತ್ತದೆ. ಒರಟುತನ ಮಾಡದೆ, ಮೃದುವಾಗಿ, ನವಿರಾಗಿ ಶರೀರದ ವಿವಿಧ ಭಾಗಗಳ ಸ್ಪರ್ಶದಿಂದ ಎರಡೂ ದೇಹಗಳೂ ಒಂದೇ ರೀತಿಯಲ್ಲಿ ಮಿಡಿಯತೊಡಗುತ್ತವೆ. ಶಿಶ್ನ ಪೂರ್ಣವಾಗಿ ನಿಮಿರಿ ನಿಲ್ಲುತ್ತದೆ. ಯೋನಿ ಪೂರ್ಣವಾಗಿ ಒದ್ದೆಯಾಗುತ್ತದೆ. ಸುಲಲಿತವಾಗಿ ಈ ಹಂತದಲ್ಲಿ ಸಂಭೋಗ ಸಾಧ್ಯವಾಗಿ ಇಬ್ಬರಿಗೂ ಸುಖಾನುಭವವಾಗುತ್ತದೆ. ತೃಪ್ತಿಯ ಶಿಖರ ತಲುಪುತ್ತಾರೆ.

ಸಂಭೋಗಾನಂತರ ಚಟುವಟಿಕೆ

ಸಂಭೋಗ ಮಾಡಿ, ವೀರ್ಯ ಸ್ಖಲನವಾಗುತ್ತಿದ್ದಂತೆ ಪುರುಷನ ಲೈಂಗಿಕ ಆಸಕ್ತಿ ಇಳಿದುಹೋಗುತ್ತದೆ. ಆದರೆ ಸ್ತ್ರೀಯ ಆಸಕ್ತಿ ನಿಧಾನವಾಗಿ ಇಳಿಯುತ್ತದೆ. ಪುರುಷ ತಕ್ಷಣ ಪಕ್ಕಕ್ಕೆ ತಿರುಗಿ ಮಲಗಿಬಿಟ್ಟರೆ, ಎದ್ದು ಹೊರ ಹೋದರೆ, ಸ್ತ್ರೀ ಅತೃಪ್ತಳಾಗುತ್ತಾಳೆ. ಆಕೆಗೆ ಹಿಂಸೆಯಾಗುತ್ತದೆ. ಈ ಅವಧಿ ಲೈಂಗಿಕ ಅನ್ಯೋನ್ಯತೆ ಸಾಧಿಸಲು ಬಹಳ ಮುಖ್ಯ. ವೀರ್ಯ ಸ್ಖಲನದ ನಂತರವೂ ಒಟ್ಟಿಗೆ ಅಪ್ಪಿಕೊಂಡು ಮಲಗಿ, ಪ್ರೀತಿಯ ಮಾತುಗಳನ್ನಾಡಬೇಕು. ಸುಖಾನುಭವವನ್ನು ಹಂಚಿಕೊಳ್ಳಬೇಕು. ಯಾವುದು ಎಷ್ಟು ಇಷ್ಟವಾಯಿತು ಎಂದು ಹೇಳಿಕೊಳ್ಳಬೇಕು. ಆಗ ಮಾತ್ರ ಗಂಡ ಹೆಂಡತಿ ಪರಸ್ಪರ ಅರ್ಥಮಾಡಿಕೊಳ್ಳಲು, ಸುಖ ಪಡೆದು ಕೊಡಲು ಮಧುರ ಬಾಂಧವ್ಯ ಬೆಳೆಸಿಕೊಳ್ಳಲು ಶಕ್ತರಾಗುತ್ತಾರೆ. ಸಂಭೋಗ ಆನಂದ ತೃಪ್ತಿ

ಯನ್ನು ಕೊಡುವ ಸಾಧನವಾಗಿ, ಪ್ರತಿ ಬಾರಿ ಅದಕ್ಕಾಗಿ ಎದುರು ನೋಡುವಂತಾಗುತ್ತದೆ. ಆನಂದದಾಯಕವಾಗುತ್ತದೆ.

ಹೀಗೆ ಗಂಡ–ಹೆಂಡತಿ ಯಾವ ಔಷಧ, ಚಿಕಿತ್ಸೆಯ ನೆರವಿಲ್ಲದೆ ಯಶಸ್ವಿಯಾಗಿ, ಸುಲಲಿತವಾಗಿ ಸಂಭೋಗ ಮಾಡಿ, ಅದರಿಂದ ಹೆಚ್ಚು ಸಂತೋಷ ತೃಪ್ತಿಯನ್ನು ಪಡೆಯಬಹುದು. ತಪ್ಪು ನಂಬಿಕೆ, ಆಚರಣೆ ಬಿಟ್ಟು ಆರೋಗ್ಯಕರ ನಿಲುವು ಮತ್ತು ಭಾವನೆಯನ್ನು ಬೆಳೆಸಿಕೊಂಡರೆ ಲೈಂಗಿಕ ಸಾಮರ್ಥ್ಯ ವೃದ್ಧಿಸುತ್ತದೆ. ದುರ್ಬಲತೆ/ಕೊರತೆಗೆ ಎಡೆ ಇರುವುದಿಲ್ಲ. ಲೈಂಗಿಕ ಚಟುವಟಿಕೆ ಆನಂದ, ಉತ್ಸಾಹಗಳ ಚಿಲುಮೆಯಾಗುತ್ತದೆ.

ಲೈಂಗಿಕ ಆರೋಗ್ಯ ಶಿಕ್ಷಣ

ಪ್ರತಿಯೊಬ್ಬರಿಗೂ ಲೈಂಗಿಕ ಆರೋಗ್ಯ ಶಿಕ್ಷಣದ ಅವಶ್ಯಕತೆ ಎನ್ನುವುದನ್ನು ತಡವಾಗಿಯಾದರೂ, ಜನ ಅರಿತುಕೊಳ್ಳುತ್ತಿದ್ದಾರೆ. ಆದರೆ ಲೈಂಗಿಕ ಶಿಕ್ಷಣ ಎಂದರೇನು ? ಈ ಶಿಕ್ಷಣವನ್ನು ಯಾರು ಮಾಡಬೇಕು ? ಹೇಗೆ ಮಾಡಬೇಕು ? ವ್ಯಕ್ತಿಗೆ ಯಾವ ವಯಸ್ಸಿನಲ್ಲಿ ಈ ಶಿಕ್ಷಣವನ್ನು ಕೊಡಬೇಕು ? ಇತ್ಯಾದಿ ವಿಷಯಗಳ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಸಂಬಂಧಪಟ್ಟವರಲ್ಲಿ ಒಮ್ಮತವಿಲ್ಲ. ಲೈಂಗಿಕ ವಿಚಾರಗಳ ಬಗ್ಗೆ ತಪ್ಪು ಕಲ್ಪನೆ, ಅವೈಜ್ಞಾನಿಕ ನಂಬಿಕೆಗಳಿರುವಂತೆ, ಲೈಂಗಿಕ ಶಿಕ್ಷಣದ ಬಗ್ಗೆಯೂ ಸಾಕಷ್ಟು ವಿಚಿತ್ರವಾದ ಹಾಗೂ ಸರಿಯಿಲ್ಲದ ಅಭಿಪ್ರಾಯಗಳು ಪ್ರಚಲಿತವಿವೆ. ಲೈಂಗಿಕ ಶಿಕ್ಷಣದ ಅವಶ್ಯಕತೆ ಏನಿದೆ ? ಲೈಂಗಿಕ ಶಿಕ್ಷಣ ಕೊಡುವುದರಿಂದ ಎಳೆ ವಯಸ್ಸಿನವರು ಕೆಟ್ಟು ಹೋಗುತ್ತಾರೆ. ಲೈಂಗಿಕ ಸ್ವೇಚ್ಛಾಚಾರಕ್ಕೆ ಇಳಿಯುತ್ತಾರೆ. ಇದರಿಂದ ಅಪಾಯವಿದೆ ಎಂದು ಕೆಲವರು ತಪ್ಪಾಗಿ ವಾದ ಮಾಡುವುದನ್ನು ನೋಡುತ್ತೇವೆ. ಲೈಂಗಿಕ ಶಿಕ್ಷಣದ ಬಗ್ಗೆ ಸರಿಯಾದ ಮಾಹಿತಿ ಪಡೆದು ಅದರ ಪ್ರಚಾರವಾಗಿ ಆರೋಗ್ಯಕರ ನಿಲುವನ್ನು ಬೆಳೆಸಿಕೊಳ್ಳುವುದು ಅತಿ ಮುಖ್ಯ.

ಲೈಂಗಿಕ ಶಿಕ್ಷಣದ ಉದ್ದೇಶವೇನು ?

ಲೈಂಗಿಕ ಆರೋಗ್ಯ ಶಿಕ್ಷಣದ ಮುಖ್ಯ ಉದ್ದೇಶ, ಲೈಂಗಿಕ ಚಟುವಟಿಕೆಯ ಬಗ್ಗೆ ಜನರಲ್ಲಿ ಇರುವ ತಪ್ಪು ಹಾಗೂ ಅವೈಜ್ಞಾನಿಕ ನಂಬಿಕೆ ನಿಲುವುಗಳನ್ನು ಬದಲಾಯಿಸುವುದು ; ಲೈಂಗಿಕ ಭಾವನೆ, ಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಸಾಮಾಜಿಕ, ನೈತಿಕ ಮತ್ತು ಕಾನೂನಿನ ಚೌಕಟ್ಟಿನೊಳಗೆ ಹೊಂದಾಣಿಕೆಯಿಂದ ಅವನ್ನು ಪ್ರಕಟಿಸುವುದನ್ನು ಕಲಿಯುವುದು ; ಅಲ್ಲದೆ ಲೈಂಗಿಕ ದುರ್ಬಲತೆ ಮತ್ತು ಲೈಂಗಿಕ ಖಾಯಿಲೆಗಳು ಬರಲು ಕಾರಣ ಮತ್ತು ಅವುಗಳ ಪರಿಹಾರದ ಬಗ್ಗೆ ತಿಳುವಳಿಕೆ ಹಾಗೂ ಅವನ್ನು ತಡೆಗಟ್ಟುವ ಮಾರ್ಗವನ್ನು ಅರಿತುಕೊಳ್ಳುವುದು

ಲೈಂಗಿಕ ಶಿಕ್ಷಣ ಅಗತ್ಯವೇ ?

ಲೈಂಗಿಕ ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಗೆ ಅತ್ಯಗತ್ಯ. ನೀರು ಆಹಾರಗಳಂತೆ,

ಲೈಂಗಿಕ ಕ್ರಿಯೆಯೂ ಮನುಷ್ಯನ ಮೂಲ ಅವಶ್ಯಕತೆಗಳಲ್ಲಿ ಒಂದು. ಲೈಂಗಿಕ ಕ್ರಿಯೆ ಅವನ ಜೀವನವನ್ನು ನಿರ್ದೇಶಿಸುವಲ್ಲಿ ಮತ್ತು ಅವನ ಸಂತತಿ ಉಳಿದು ಮುಂದುವರೆಯಲು ನೆರವಾಗುತ್ತದೆ. ಪ್ರತಿಯೊಬ್ಬನಿಗೂ ಲೈಂಗಿಕ ಕ್ರಿಯೆ ಬಗ್ಗೆ ಸರಿಯಾದ ತಿಳುವಳಿಕೆ ಹಾಗೂ ಒಳ್ಳೆಯ ಧೋರಣೆ ಇರಬೇಕು. ಇಲ್ಲದಿದ್ದರೆ ವ್ಯಕ್ತಿ ಈ ಕ್ರಿಯೆ ಬಗ್ಗೆ ಹಲವಾರು ತಪ್ಪು ಹಾಗೂ ಅಪಾಯಕಾರಿ ನಂಬಿಕೆಗಳನ್ನು, ಅಭ್ಯಾಸಗಳನ್ನು ಬೆಳೆಸಿಕೊಂಡು ತಾನು ಕಷ್ಟ ಪಡುವುದಲ್ಲದೆ, ಇತರರನ್ನೂ ತೊಂದರೆಗೀಡು ಮಾಡಬಹುದು. ಸೂಕ್ತ ರೀತಿಯಲ್ಲಿ ದೊರೆತ ಲೈಂಗಿಕ ಶಿಕ್ಷಣದಿಂದ, ವ್ಯಕ್ತಿ ಲೈಂಗಿಕವಾಗಿ ಆರೋಗ್ಯವಾಗಿರುತ್ತಾನೆ.

ಲೈಂಗಿಕ ಆರೋಗ್ಯವೆಂದರೇನು ?

* ಲೈಂಗಿಕ ಮತ್ತು ಸಂತಾನೋತ್ಪತ್ತಿ ನಡೆವಳಿಕೆಯನ್ನು ಹತೋಟಿಯಲ್ಲಿಟ್ಟುಕೊಂಡು ಸಾಮಾಜಿಕ, ನೈತಿಕ, ಮತ್ತು ಕಾನೂನಿನ ಇತಿಮಿತಿಯೊಳಗೇ ಅದನ್ನು ನಡೆಸಿ, ಸಂತೋಷ, ತೃಪ್ತಿಯನ್ನು ಪಡುವ ಸಾಮರ್ಥ್ಯ.
* ಲೈಂಗಿಕ ಭಾವನೆ, ಕ್ರಿಯೆ ಬಗ್ಗೆ ಭಯ, ನಾಚಿಕೆ, ತಪ್ಪಿತಸ್ಥ ಮನೋಭಾವನೆ, ತಪ್ಪು ನಂಬಿಕೆಗಳು ಮತ್ತು ಲೈಂಗಿಕ ಚಟುವಟಿಕೆ ಅಥವಾ ಸಂಬಂಧಕ್ಕೆ ಅಡ್ಡಿ ಬರುವಂತಹ ಮಾನಸಿಕ ನಿಲುವು ಇಲ್ಲದಿರುವುದು.
* ಲೈಂಗಿಕ ದುರ್ಬಲತೆ, ಲೈಂಗಿಕ ಖಾಯಿಲೆಗಳು ಅಥವಾ ಲೈಂಗಿಕ ಸಾಮರ್ಥ್ಯಕ್ಕೆ ಧಕ್ಕೆ ತರುವ ಯಾವುದೇ ಖಾಯಿಲೆಯಿಂದ ಮುಕ್ತವಾಗಿರುವುದು.

ಲೈಂಗಿಕ ಆರೋಗ್ಯವಂತರ ಲಕ್ಷಣ

* ವ್ಯಕ್ತಿ ಗಂಡಸಾಗಿದ್ದರೆ, ಗಂಡಸುತನದ ವೈಶಿಷ್ಟ್ಯಗಳನ್ನು, ಹೆಂಗಸಾಗಿದ್ದರೆ ಹೆಣ್ಣುತನದ ವಿಶೇಷಗಳನ್ನೂ ಒಪ್ಪಿಕೊಂಡು. ಅವುಗಳ ಬಗ್ಗೆ ನಿಖರವಾದ ಹಾಗೂ ವಾಸ್ತವಿಕ ನಿಲುವನ್ನು ಹೊಂದಿ ಹೆಮ್ಮೆ ಪಡುತ್ತಾನೆ/ಳೆ.
* ಗಂಡಸಾಗಿ ಅಥವಾ ಹೆಂಗಸಾಗಿ ಏನು ಮಾಡಬೇಕು. ಹೇಗೆ ನಡೆದುಕೊಳ್ಳಬೇಕು ಎಂದು ಸಮಾಜ ಅಥವಾ ಸಂಸ್ಕೃತಿ ಬಯಸುತ್ತದೋ, ಅದನ್ನು ಸಂತೋಷದಿಂದ ಪಾಲಿಸುತ್ತಾನೆ/ಳೆ.
* ಲೈಂಗಿಕ ಭಾವನೆ ಮತ್ತು ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ, ಹೆಚ್ಚು ಜವಾಬ್ದಾರಿಯುತವಾಗಿ ಪ್ರಕಟಿಸುವುದಲ್ಲದೆ, ತಾನು ಮತ್ತು ತನ್ನ ಸಂಗಾತಿ ಅದರಿಂದ ಸಂತೋಷ, ತೃಪ್ತಿಯನ್ನು ಪಡೆಯುವಂತೆ ನೋಡಿಕೊಳ್ಳುತ್ತಾನೆ/ಳೆ.

ಆದ್ದರಿಂದ ಲೈಂಗಿಕ ಶಿಕ್ಷಣ ಕಾರ್ಯಕ್ರಮದಲ್ಲಿ ಈ ಮೇಲಿನ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಮತ್ತು ತಿಳುವಳಿಕೆಗಳು ವ್ಯಕ್ತಿಗೆ ದೊರೆಯುವಂತೆ ಮಾಡಬೇಕಾಗುತ್ತದೆ. ಪ್ರತಿಯೊಂದು ವಿಭಾಗದಲ್ಲಿ ಬರಬಹುದಾದ ತೊಂದರೆ, ಸಮಸ್ಯೆಗಳು ಹಾಗೂ ಅವುಗಳ ಪರಿಹಾರದ ಬಗ್ಗೆ ಮಾಹಿತಿಯನ್ನು ಅಳವಡಿಸಬೇಕು.

ಲೈಂಗಿಕ ಶಿಕ್ಷಣಕ್ಕೆ ವಯೋಮಿತಿ ?

ಮನೋ ವಿಜ್ಞಾನಿಗಳು ಮತ್ತು ಲೈಂಗಿಕ ತಜ್ಞರ ಪ್ರಕಾರ, ಸಣ್ಣ ವಯಸ್ಸಿನಿಂದಲೇ ಮಗುವಿಗೆ, ವಿವಿಧ ಹಂತಗಳಲ್ಲಿ, ಸ್ವಲ್ಪವಾಗಿ ಲೈಂಗಿಕ ಶಿಕ್ಷಣ ಕೊಡುವುದು ಅಪೇಕ್ಷಣೀಯ. ಮಗು ತಪ್ಪು ಮಾಹಿತಿ ಮತ್ತು ಅವೈಜ್ಞಾನಿಕ ನಂಬಿಕೆಗಳನ್ನು ಬೆಳೆಸಿಕೊಳ್ಳಲು ಬಿಟ್ಟು, ನಂತರ ಹದಿವಯಸ್ಸಿನಲ್ಲೋ, ಪ್ರೌಢ ವಯಸ್ಸಿನಲ್ಲೋ ಲೈಂಗಿಕ ಶಿಕ್ಷಣ ಕೊಟ್ಟು, ತಪ್ಪನ್ನು ಸರಿಪಡಿಸಲು ಯತ್ನಿಸುವುದು ಅರ್ಥಹೀನ ಹಾಗೂ ಕಷ್ಟಕರ. ಜೀವನದ ಇತರ ಎಲ್ಲಾ ಕೌಶಲಗಳನ್ನು ಕಲಿಸುವುದರ ಜೊತೆಗೇ, ಲೈಂಗಿಕ ವಿಚಾರದ ಬಗ್ಗೆಯೂ ಕಲಿಸುವುದು ಹೆಚ್ಚು ಸಮಂಜಸ ಮತ್ತು ಪರಿಣಾಮಕಾರಿ ಎನ್ನಲಾಗಿದೆ.

ಯಾವ ವಯಸ್ಸಿನಲ್ಲಿ ಎಷ್ಟು ?

ಮಕ್ಕಳ ವಯಸ್ಸು, ಅವರ ಅರ್ಥ ಮಾಡಿಕೊಳ್ಳುವ ಶಕ್ತಿ ಅವರ ವಯಸ್ಸಿನ ಬೆಳವಣಿಗೆಯ ಹಂತಗಳನ್ನು ಗಮನದಲ್ಲಿಟ್ಟುಕೊಂಡು, ಲೈಂಗಿಕ ವಿಚಾರದ ಬಗ್ಗೆ ಮಾಹಿತಿ ಕೊಡಬೇಕಾಗುತ್ತದೆ. ಈ ಕೆಳಕಾಣುವ ಕಾರ್ಯಕ್ರಮವನ್ನು ಅಳವಡಿಸಬಹುದು.

5 ರಿಂದ 9 ವರ್ಷ :

ಪ್ರಾಣಿಗಳನ್ನು ಮಾದರಿಯಾಗಿಟ್ಟುಕೊಂಡು, ಸಂತಾನೋತ್ಪತ್ತಿ ಕ್ರಿಯೆಯ ವಿವರಣೆ. ಮನುಷ್ಯನ ಜನನಾಂಗಗಳ ರಚನೆ ಮತ್ತು ಕಾರ್ಯದ ಬಗ್ಗೆ ಮಾಹಿತಿ. ಗಂಡು ಹೆಣ್ಣಿನ ವೈಶಿಷ್ಟ್ಯಗಳು.

10 ರಿಂದ 12 ವರ್ಷ :

ಹರೆಯ ಎಂದರೇನು ? ಹರೆಯದಲ್ಲಿ ಕಾಣಿಸಿಕೊಳ್ಳುವ ಲೈಂಗಿಕ ಲಕ್ಷಣಗಳು, ಋತುಸ್ರಾವ, ವೀರ್ಯಸ್ಖಲನ, ಹಸ್ತ ಮೈಥುನಗಳ ಬಗ್ಗೆ ವಿವರಣೆ, ಲೈಂಗಿಕ ವಿಚಾರದ ಮಾನಸಿಕ, ಸಾಮಾಜಿಕ, ನೈತಿಕ ನೀತಿ ನಿಯಮಗಳ ಬಗ್ಗೆ ಮಾಹಿತಿ.

13 ರಿಂದ 15 ವರ್ಷ :

ಹರೆಯದ ವಿಚಾರಗಳ ಬಗ್ಗೆ ಪುನರಾವರ್ತನೆ ಮತ್ತು ಇನ್ನಷ್ಟು ಮಾಹಿತಿ.

ಗರ್ಭಧಾರಣೆ, ಮಕ್ಕಳಾಗುವಿಕೆ, ಲೈಂಗಿಕ ಅಪರಾಧಗಳು, ಲೈಂಗಿಕ ಖಾಯಿಲೆಗಳ ಬಗ್ಗೆ ಮಾಹಿತಿ. ಸಾಮಾಜಿಕ ಕಟ್ಟು ಪಾಡುಗಳ ವಿಚಾರವಾಗಿ ಮತ್ತಷ್ಟು ತಿಳುವಳಿಕೆ.

16 ರಿಂದ 18 ವರ್ಷ :

ಮದುವೆ, ಮಕ್ಕಳಾಗುವಿಕೆ, ತಂದೆ ಅಥವಾ ತಾಯ್ತನದ ಜವಾಬ್ದಾರಿಗಳು, ಸಂತಾನ ನಿಯಂತ್ರಣ, ಗರ್ಭಪಾತ, ನಗ್ನ ಸಾಹಿತ್ಯ, ವಿಕೃತ ಲೈಂಗಿಕ ಚಟುವಟಿಕೆಗಳು ಅವುಗಳ ದುಷ್ಪರಿಣಾಮಗಳು, ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಗಳು, ಲೈಂಗಿಕ ಅಪರಾಧಗಳು–ಈ ಎಲ್ಲಾ ವಿಚಾರಗಳ ಬಗ್ಗೆ ತಿಳುವಳಿಕೆ.

19 ರಿಂದ 25 ವರ್ಷ :

ಪುನರಾವರ್ತನೆ.

ಲೈಂಗಿಕ ಶಿಕ್ಷಣ ಶಿಕ್ಷಕರಾರು ?

ಲೈಂಗಿಕ ಶಿಕ್ಷಣವನ್ನು ತಂದೆ ತಾಯಿಗಳು ಮಾಡಬೇಕೆ ? ಉಪಾಧ್ಯಾಯರು ಮಾಡಬೇಕೆ ? ವೈದ್ಯರು ಅಥವಾ ತಜ್ಞರು ಮಾಡಬೇಕೆ ?

ಮಗುವಿಗೆ ಮನೆಯೇ ಮೊದಲ ಪಾಠಶಾಲೆ. ತಂದೆ ತಾಯಿಗಳೇ ಗುರುಗಳು. ಆದ್ದರಿಂದ ತಂದೆ ತಾಯಿಗಳೇ ಮಗುವಿಗೆ ಲೈಂಗಿಕ ಶಿಕ್ಷಣವನ್ನು ಪ್ರಾರಂಭಿಸಬೇಕು. ನಂತರ ಶಾಲೆಯಲ್ಲಿ ಉಪಾಧ್ಯಾಯರು ಮತ್ತು ಅವಶ್ಯಕತೆ ಬಿದ್ದರೆ ವೈದ್ಯರು ಅದನ್ನು ಮುಂದುವರೆಸುವುದು ಅಪೇಕ್ಷಣೀಯ. ಲೈಂಗಿಕ ಶಿಕ್ಷಣವನ್ನು ಯಾರೇ ಕೊಡಲಿ, ಅವರು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅರ್ಹತೆಯನ್ನು ಪಡೆದುಕೊಳ್ಳಬೇಕು.

1) ಸರಿಯಾದ ಮನೋಭಾವ : ಸಂಕೋಚವಿಲ್ಲದೆ, ಮುಜುಗರವಿಲ್ಲದೆ ನಿಖರವಾಗಿ, ಗಂಭೀರವಾಗಿ, ಸ್ಪಷ್ಟವಾದ ಮಾತುಗಳಲ್ಲಿ ಲೈಂಗಿಕ ವಿಚಾರಗಳನ್ನು ತಿಳಿಸುವ ಮನೋಭಾವ ಬಹಳ ಮುಖ್ಯ. ಲೈಂಗಿಕ ಶಿಕ್ಷಕನಿಗೆ ಲೈಂಗಿಕ ವಿಚಾರಗಳ ಬಗ್ಗೆ ಆರೋಗ್ಯಕರ ನಿಲುವು ಇರಬೇಕು.

2) ಜ್ಞಾನ : ಲೈಂಗಿಕ ಕ್ರಿಯೆ ಮನುಷ್ಯರಲ್ಲಿ ಸರಳವಾಗಿ ಉಳಿದಿಲ್ಲ. ಈ ಕ್ರಿಯೆ ಎರಡು ಜೀವಿಗಳ ನಡುವೆ ಮಧುರ ಬಾಂಧವ್ಯವನ್ನು ಬೆಳೆಸುವ, ಅನಿರ್ವಚನೀಯ ಆನಂದ ತೃಪ್ತಿಯನ್ನು ಕೊಡುವ ಚಟುವಟಿಕೆ. ಇದರ ಬಗ್ಗೆ ಸಂಪೂರ್ಣ ತಿಳುವಳಿಕೆ ಶಿಕ್ಷಕನಿಗಿರಬೇಕು :

* ಜನನಾಂಗಗಳ ವಿವರ, ಕಾರ್ಯ ವೈಖರಿ,
* ಲೈಂಗಿಕ ಕ್ರಿಯೆಯ ಶಾರೀರಕ, ಮಾನಸಿಕ ಹಾಗೂ ಸಾಮಾಜಿಕ ಬೆಳವಣಿಗೆ, ವಿಕಾಸ.

* ಲೈಂಗಿಕ ಭಾವನೆ, ಚಟುವಟಿಕೆಗಳ ಪ್ರಕಟಣೆಯ ವೈವಿಧ್ಯತೆ.
* ಲೈಂಗಿಕತೆ ಬಗ್ಗೆ ಸಮಾಜದ ಸಂಸ್ಕೃತಿಯ ನಿರೀಕ್ಷೆಗಳು. ನಿಯಮಗಳು.
* ಮದುವೆ, ಗರ್ಭಧಾರಣೆ. ತಂದೆ ತಾಯಿಯಾಗಿ ಜವಾಬ್ದಾರಿ, ಕುಟುಂಬ ವ್ಯವಸ್ಥೆ.
* ಲೈಂಗಿಕ ದುರ್ಬಲತೆ, ಕಾರಣ ಮತ್ತು ಪರಿಹಾರ.
* ಲೈಂಗಿಕ ಖಾಯಿಲೆಗಳ ಲಕ್ಷಣ, ಬರುವ ರೀತಿ, ಚಿಕಿತ್ಸೆ ಮತ್ತು ನಿವಾರಣೆ.

ಇವೆಲ್ಲವುಗಳ ಬಗ್ಗೆ ಜ್ಞಾನವಿರಬೇಕು.

3) ಕೌಶಲ : ಜ್ಞಾನದ ಜೊತೆಗೆ, ಸರಳವಾಗಿ, ಆಕರ್ಷಣೀಯವಾಗಿ ಹೇಳುವ ಕಲೆ ಇರಬೇಕು.

4) ಮೌಲ್ಯಗಳು : ಲೈಂಗಿಕ ವಿಚಾರದ ಬಗ್ಗೆ ಧಾರ್ಮಿಕ, ಸಾಂಸ್ಕೃತಿಕ ಮೌಲ್ಯಗಳ ಅರಿವಿರಬೇಕು. ಸಾಮಾಜಿಕ ಕಾನೂನುಗಳ ಅರಿವಿರಬೇಕು.

ತಂದೆ ತಾಯಿಗಳ ಪಾತ್ರ :

ಲೈಂಗಿಕ ಆರೋಗ್ಯ ಶಿಕ್ಷಣದಲ್ಲಿ ಮತ್ತು ವ್ಯಕ್ತಿಯ ಲೈಂಗಿಕ ಬೆಳವಣಿಗೆಯಲ್ಲಿ ತಂದೆ ತಾಯಿಗಳ ಪಾತ್ರ ಅದ್ವಿತೀಯ. ಲೈಂಗಿಕತೆ ಬಗ್ಗೆ ಅವರ ನಿಲುವು, ಧೋರಣೆ, ನಂಬಿಕೆಗಳು ಮತ್ತು ವರ್ತನೆ ಮಗುವಿನ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತದೆ. ಆದ್ದರಿಂದ ಮಗು ತನ್ನ ಶರೀರದ ಬಗ್ಗೆ, ಜನನಾಂಗಗಳ ಬಗ್ಗೆ ಆಸಕ್ತಿಯಿಂದ ಪ್ರಶ್ನೆ ಕೇಳಿದಾಗ, ಸರಿಯಾದ ಮಾಹಿತಿ ಕೊಡಬೇಕು. "ಜನನಾಂಗಗಳು ಕೊಳಕು. ಅಸಹ್ಯ. ಅವುಗಳ ಬಗ್ಗೆ ಪ್ರಶ್ನೆ ಕೇಳಬಾರದು, ಎಂಬ ಭಾವನೆಯನ್ನು ಮೂಡಿಸಬಾರದು. ಲೈಂಗಿಕ ಭಾವನೆ, ವಿಚಾರ ಸಹಜವಾದದ್ದು, ಗುಟ್ಟು ಮಾಡತಕ್ಕಂತಹುದಲ್ಲ, ಅನಿಷ್ಟ ವಲ್ಲ ಎಂದು ಹದಿವಯಸ್ಸಿನ ಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕು.

ನೆನಪಿನಲ್ಲಿಡಿ : ಲೈಂಗಿಕ ಶಿಕ್ಷಣ ಒಂದು ನಿರ್ಬಂಧಿತ ಕಾರ್ಯಕ್ರಮವಾಗಬಾರದು. ಅದೊಂದು ಪ್ರಕ್ರಿಯೆ. ಜೀವನವಿಡೀ ನಡೆಯುವಂತಹುದು. ಹಲವರಿಂದ ಹಲವು ಮೂಲಗಳಿಂದ ವಿಷಯ ಸಂಗ್ರಹಿಸಿ, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳು ವಂತಹುದು. ಎಲ್ಲರೂ ಈ ವಿಚಾರದಲ್ಲಿ ತೆರೆದ ಮನಸ್ಸಿನಿಂದ, ಪ್ರಾಮಾಣಿಕವಾಗಿ, ಸದುದ್ದೇಶದಿಂದ ಸರಿಯಾದ ಮಾಹಿತಿಯನ್ನು ಮಕ್ಕಳಿಗೆ ನೀಡಬೇಕು. ಮೂಢ ನಂಬಿಕೆ, ಅವೈಜ್ಞಾನಿಕ ವಿಚಾರಗಳನ್ನು, ವಿಕೃತ ಕಾಮವನ್ನು ಪ್ರಚೋದಿಸುವ ಸಾಹಿತ್ಯ ಪ್ರಸರಣವನ್ನು ತಡೆಯಬೇಕು. ವೈಜ್ಞಾನಿಕ ದೃಷ್ಟಿಕೋನವನ್ನು ಮೂಡಿಸ ಬೇಕು. ಅವರಲ್ಲಿ ಸಂತೋಷದಾಯಕ, ತೃಪ್ತಿದಾಯಕವಾದ ಲೈಂಗಿಕ ವಿಚಾರ–ಚಟುವಟಿಕೆ ರೂಪುಗೊಳ್ಳುವಂತೆ ಪ್ರೋತ್ಸಾಹಿಸಬೇಕು.

ಕಾಮ
ಮನುಷ್ಯನ ಹುಟ್ಟಾಸೆಗಳಲ್ಲಿ ಒಂದು
ನಮ್ಮ ಹುಟ್ಟಿನೊಂದಿಗೇ ಹುಟ್ಟಿ
ಹರೆಯದಲ್ಲಿ ವಿಕಸಿತಗೊಂಡು
ಪ್ರೌಢತೆಯಲ್ಲಿ ಉತ್ತುಂಗಕ್ಕೇರಿ
ಇಳಿವಯಸ್ಸಿನಲ್ಲೂ ಹಿಂಬಾಲಿಸಿ
ಸದಾ ಸಂಗಾತಿಯಾಗಿರುತ್ತದೆ.

ಸಂತಾನೋತ್ಪತ್ತಿ, ಸುಮಧುರ ಬಾಂಧವ್ಯ
ಸುಖಾನುಭವದ ಆನಂದ ಸಾಗರ.
ಹಿತವಾತಾವರಣ ಮಾನಸಿಕ ಸಮತೋಲನ
ಪೂರ್ವಸಿದ್ಧತೆ, ಪ್ರೀತಿ ಅನುರಾಗ
ಸಂಗಾತಿಯ ನೋಟ, ನುಡಿ, ಸ್ಪರ್ಶ
ಪ್ರೇಮ ಸಲ್ಲಾಪ ಉತ್ತೇಜಕಗಳಾದರೆ,
ಆತಂಕ, ಅನುಮಾನ, ಖಿನ್ನತೆ, ಕೀಳರಿಮೆ
ಲೈಂಗಿಕ ದುರ್ಬಲತೆ, ಅತೃಪ್ತಿಗೆ ದಾರಿ.

ದುರ್ಬಲತೆಗೆ ಪರಿಹಾರ ? ಈ ಪುಸ್ತಕದಲ್ಲಿರುವ ಕಥೆಗಳನ್ನು ಓದಿ.

*

ಡಾ॥ ಸಿ. ಆರ್. ಚಂದ್ರಶೇಖರ್, ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಲ್ಲಿ ತಜ್ಞ ಮನೋವೈದ್ಯರಾಗಿದ್ದಾರೆ. ಜನಸಾಮಾನ್ಯರಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ವೈಜ್ಞಾನಿಕ ತಿಳಿವಳಿಕೆ ಮೂಡಿಸುವ ಸಲುವಾಗಿ ನಾಡಿನ ಅನೇಕ ಪತ್ರಿಕೆಗಳಲ್ಲಿ 250ಕ್ಕೂ ಹೆಚ್ಚಿನ ಲೇಖನಗಳನ್ನೂ, 35 ಪುಸ್ತಕಗಳನ್ನೂ ಬರೆದಿದ್ದಾರೆ. 'ಮಗು ಮನಸ್ಸು ಮತ್ತು ಆರೋಗ್ಯ' (ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ), 'ಬುದ್ಧಿ ಮಾಂದ್ಯತೆ' (ಡಾ॥ ಜಯರಾಂ ಪ್ರಶಸ್ತಿ), 'ಬಾನಾಮತಿ' (ಡಾ॥ ಎಚ್. ನರಸಿಂಹಯ್ಯ ಪ್ರಶಸ್ತಿ) ಪುರಸ್ಕೃತ ಕೃತಿಗಳು.

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009